ಬುಧವಾರ, ಅಕ್ಟೋಬರ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 294 | ಪುಟ 18

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ತುರ್ತು ಭೂ ಸ್ಪರ್ಶದ ಸಂದರ್ಭದಲ್ಲಿ ಇಂಧನ ಹೊರ ಚೆಲ್ಲುವುದೇಕೆ?

ಆಳ-ಅಗಲ
ಬ್ರಿಕ್ಸ್ ಶೃಂಗಸಭೆ ಕದನ ಕುತೂಹಲ

ಬಿಜೆಪಿ ಟಿಕೆಟ್: 'ಸೈನಿಕ'ನ ಆಸೆ ಇನ್ನೂ ಜೀವಂತ! 8

ವಿಶ್ವಾಸ ಮರುಸ್ಥಾಪಿಸುವ ಯತ್ನ ಆರಂಭ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,220	24,472	₹82,040 (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	84.08

ಪರಿಶ್ರಮ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್(ರಿ)
ಪರಿಶ್ರಮ ಪಿಯು ಕಾಲೇಜು
ಇಂಟಿಗ್ರೇಟೆಡ್ NEET, JEE MAIN & KCET ತರಬೇತಿ
UNDER THE GUIDANCE OF PRADEEP ESHWAR
1st PUC (PCMB & PCMCs) 2025-26 ನೋಂದಣಿ ಪ್ರಾರಂಭವಾಗಿವೆ
Why Parishrama?
• Unparalleled teaching methodology
• Exhaustive practice & assessment
• Holistic development focus
• Secure, healthy & focused environment
• Own centralised kitchen
• Expert support & care
• Solve over 1 Lakh MCQs
• Strict study hours monitoring
• Personalized attention & feedback
Join Parishrama Today!
• Special Batch for AIIMS & JIPMER Training • Special Batch for IIT Training
Parishrama's PU Integrated program offers an unparalleled preparatory experience, featuring over 100,000 questions through diverse assessment tools, including: Acharya Abhyasa & Vidyarthi Abhyasa, well planned effective Test series
ರೆಸಿಡೆನ್ಶಿಯಲ್ ಮತ್ತು ಡೇ ಸ್ಕಾಲರ್ ತರಗತಿಗಳು
080 24413400, 74838 30545 www.parishramaneetacademy.com

ರಾಜ್ಯದಲ್ಲಿ ಇಬ್ಬರ ಜೀವಹಾನಿ • ದೋಣಿ ಬಳಸಿ ಸಂತ್ರಸ್ತರ ರಕ್ಷಣೆ • ಬುಡಮೇಲಾದ ಬೃಹತ್ ಕಟ್ಟಡ

ಮಹಾ ಮಳೆ: ಬೆಂಗಳೂರು ಹೊಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಬೆಂಗಳೂರು ಸೇರಿ ಹಲವು ಜಿಲ್ಲೆಗಳಲ್ಲಿ ಜನವಸತಿ ಪ್ರದೇಶಗಳು ಜಲಾವೃತವಾಗಿವೆ. ಕೆಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದ್ದು, ಮಹಾ ಮಳೆಗೆ ಬೆಳೆಗಳು ಕೊಚ್ಚಿಹೋಗಿವೆ.

ಬೆಂಗಳೂರಿನಲ್ಲಿ ಮಳೆಯಿಂದಾಗಿ ನಿರ್ಮಾಣ ಹಂತದ ಕಟ್ಟಡ ಕುಸಿದು ಒಬ್ಬರು ಮೃತಪಟ್ಟಿದ್ದರೆ, ಚಿತ್ರದುರ್ಗದಲ್ಲಿ ವೃದ್ಧರೊಬ್ಬರು ಹಳ್ಳದಲ್ಲಿ ಕೊಚ್ಚಿಹೋಗಿ ಸಾವಿಗೀಡಾಗಿದ್ದಾರೆ.

ಬೆಂಗಳೂರಿನ ಬಾಬುಸಾ ಪಾಳ್ಯದಲ್ಲಿ ನಿರ್ಮಾಣ ಹಂತದಲ್ಲಿದ್ದ ಬೃಹತ್ ಕಟ್ಟಡವೊಂದು ಮಂಗಳವಾರ ಮಧ್ಯಾಹ್ನ ಬುಡಮೇಲಾಗಿ ಧರೆಗುರುಳಿದೆ. ಕಟ್ಟಡದ ನಿರ್ಮಾಣದಲ್ಲಿ ತೊಡಗಿದ್ದ 20 ಮಂದಿಯಲ್ಲಿ ಒಬ್ಬರು ಮೃತಪಟ್ಟಿದ್ದು, ಏಳು ಮಂದಿ ನಾಪತ್ತೆಯಾಗಿದ್ದಾರೆ. 12 ಮಂದಿಯನ್ನು ರಕ್ಷಣೆ ಮಾಡಲಾಗಿದೆ. ಉಳಿದವರ ರಕ್ಷಣೆಗೆ ಕಾರ್ಯಾಚರಣೆ ಮುಂದುವರಿದಿದೆ.

ಭಾರಿ ಮಳೆಯಿಂದ ರಾಜಧಾನಿಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಒಂದು ಸಾವಿರಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿದೆ. ಸೋಮವಾರ ರಾತ್ರಿ ಧಾರಾಕಾರ ಮಳೆ ಸುರಿದಿದ್ದು, ಯಲಹಂಕ ಹಾಗೂ ದಾಸರಹಳ್ಳಿ ಭಾಗದಲ್ಲಿ ಹಲವು ಬಡಾವಣೆಗಳು ಜಲಾವೃತಗೊಂಡಿವೆ.

ಮಂಗಳವಾರವೂ ಮಳೆ ಮುಂದುವರಿದಿದ್ದು, ಹಲವು ಬಡಾವಣೆಗಳಲ್ಲಿನ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಜಲಾವೃತ ಬಡಾವಣೆಗಳಲ್ಲಿರುವ ಮನೆಗಳಲ್ಲಿನ ನಿವಾಸಿಗಳಿಗೆ ತಿಂಡಿ, ಊಟ ಹಾಗೂ ಕುಡಿಯುವ ನೀರನ್ನು ಬಿಬಿಎಂಪಿ ಸಿಬ್ಬಂದಿ ಒದಗಿಸಿದರು. ನಿವಾಸಿಗಳನ್ನು ವಿಪತ್ತು ನಿರ್ವಹಣೆ ತಂಡದ ಸಿಬ್ಬಂದಿ ದೋಣಿ ಹಾಗೂ ಟ್ರ್ಯಾಕ್ಟರ್‌ಗಳ ಮೂಲಕ ರಕ್ಷಿಸಿದರು.

ಅಕ್ಟೋಬರ್ 1ರಿಂದ 22ರವರೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ 24.1 ಸೆಂ.ಮೀ. ಮಳೆಯಾಗಿದೆ. ಇದು 124 ವರ್ಷಗಳಲ್ಲಿ ಸುರಿದ ಅತಿ ಹೆಚ್ಚು ಮಳೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳು ಜಲಾವೃತಗೊಂಡು ತಾಸುಗಟ್ಟಲೆ ವಾಹನ ದಟ್ಟಣೆ ಉಂಟಾಯಿತು.

ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಸಮೀಪದ ರಾಮಘಟ್ಟ ಗ್ರಾಮದ ನಿವಾಸಿ ಕಾಲ್ಕೆರೆ ರಾಜಪ್ಪ (75) ಎಂಬುವವರು ದನ ಮೇಯಿಸಲು ಹೋಗಿದ್ದಾಗ ಸೋಮವಾರ ಸಂಜೆ ಹಿರೇಹಳ್ಳದಲ್ಲಿ ಕೊಚ್ಚಿಹೋಗಿದ್ದರು. ಅವರ ಮೃತದೇಹ ಮಂಗಳವಾರ ಪತ್ತೆಯಾಗಿದೆ.

ನಗರದಲ್ಲಿ ಪ್ರವಾಹ ಪೀಡಿತ, ಜಲಾವೃತ ಪ್ರದೇಶಗಳನ್ನು ಮೇಲ್ವಿಚಾರಣೆ ಮಾಡಲು ಬಿಬಿಎಂಪಿ ವಲಯವಾರು ವಿಪತ್ತು ನಿರ್ವಹಣೆ ತಂಡಗಳನ್ನು ನಿಯೋಜಿಸಿದೆ.

ಮಳೆ ಅನಾಹುತ ವರದಿ ತರಿಸಿಕೊಂಡಿದ್ದು, ಪರಿಹಾರಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅನಾಹುತಗಳ ಕುರಿತು ನಿಗಾ ವಹಿಸಿದ್ದು, ಸ್ಥಳ ಸಮೀಕ್ಷೆ ನಡೆಯುತ್ತಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಶಾಲೆಗಳಿಗೆ ಇಂದು ರಜೆ ಘೋಷಣೆ

ನಗರದಲ್ಲಿ ಮೂರು ದಿನ ಹೆಚ್ಚಿನ ಮಳೆಯಾಗುವ 'ಆರೆಂಜ್ ಅಲರ್ಟ್' ಇರುವುದರಿಂದ ಜಿಲ್ಲಾಧಿಕಾರಿ ಜಗದೀಶ್ ಅವರು, ಶಾಲೆಗಳಿಗೆ ಅ. 23ರಂದು ರಜೆ ಘೋಷಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 4

ಕೊಚ್ಚಿಹೋದ ಕಾರು, ಟ್ರ್ಯಾಕ್ಟರ್ ಪಲ್ಟಿ

ಚಿತ್ರದುರ್ಗ/ಹಾಸನ/ರಾಮನಗರ: ಸೋಮವಾರ ರಾತ್ರಿ ಧಾರಾಕಾರ ಸುರಿದ ಮಳೆಗೆ ವಿವಿಧೆಡೆ ರಸ್ತೆಗಳು, ಮನೆಗಳು ಜಲಾವೃತವಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ 120 ಮನೆಗಳಿಗೆ ಹಾನಿಯಾಗಿದೆ.

ಗಜ್ಜುಗಾನಹಳ್ಳಿ ಬಳಿ ನೀರಿನ ರಭಸಕ್ಕೆ ಕಲ್ಲು ತುಂಬಿದ್ದ ಟ್ರ್ಯಾಕ್ಟರ್ ಪಲ್ಟಿಯಾಗಿದ್ದು, ಪಕ್ಕಕ್ಕೆ ಹೋಗಿ ಬಿದ್ದಿದೆ. ಬೋಸೆದೇವರಹಟ್ಟಿ ಬಳಿ ತುಂಬಿ ಹರಿಯುತ್ತಿದ್ದ ಹಳ್ಳದಲ್ಲಿ ಕಾರು ಹಾಗೂ ಮನಮೈನಹಟ್ಟಿ ಬಳಿ ಆಟೊಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ಒಳಗಿದ್ದವರು ಕೆಳಗಿಳಿದು ಪಾರಾಗಿದ್ದಾರೆ.

ಚಿಕ್ಕಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ 44ರ ಕೆಳ ಸೇತುವೆಯಲ್ಲಿ ಸಂಗ್ರಹವಾಗಿರುವ ಮಳೆ ನೀರಿನಲ್ಲಿ ಎರಡು ಕಾರು ಮುಳುಗಿದ್ದವು. ಕಾರಿನಲ್ಲಿದ್ದ ಆರು ಮಂದಿಯನ್ನು ರಕ್ಷಿಸಲಾಗಿದೆ. ಸಬ್ಬೇನಹಳ್ಳಿ ಮಂಚನಬಲೆ ಗ್ರಾಮದ ನಡುವೆ ಕೇಳ ಸೇತುವೆಯಲ್ಲಿಯೂ ಹಲವು ವಾಹನಗಳು ಮಳೆ ನೀರಿನಲ್ಲಿ ಸಿಲುಕಿದ್ದವು.

ಸೇತುವೆ ಮುಳುಗಡೆ: ಹಾಸನ ಜಿಲ್ಲೆಯ ಹಾಸನ, ಬೇಲೂರು ತಾಲ್ಲೂಕಿನಲ್ಲಿ ಸೋಮವಾರ ರಾತ್ರಿ ಧಾರಾಕಾರ ಮಳೆಯಾಗಿದ್ದು ಕೆರೆಗಳು ತುಂಬಿ ಕೋಡಿ ಹರಿದಿವೆ. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ಹೆಚ್ಚುವರಿ ನೀರು ಹೊರ ಬಿಟ್ಟಿರುವುದರಿಂದ ಅರ್ಕಾವತಿ ನದಿ ಮೈದುಂಬಿ ಹರಿಯುತ್ತಿದೆ.

ಸಣ್ಣ ಸೇತುವೆ ಹಾಗೂ ಒಡ್ಡು ಮುಳುಗಡೆಯಾಗಿವೆ. ತೆಂಗು, ಅಡಕೆ, ರೇಷ್ಮೆ ತೋಟ ಹಾಗೂ ಜಮೀನುಗಳಿಗೆ ನದಿ ನೀರು ನುಗ್ಗಿದೆ. ನದಿ ಅಂಚಿನ ಮನೆಯಂಗಳಕ್ಕೆ ನೀರು ಹರಿದು ಬಂದಿದೆ. ಕೂನಗಲ್ ಮತ್ತು ಕೆ.ಪಿ. ದೊಡ್ಡಿ ಬ್ರಿಡ್ಜ್ ಕಂ ಬ್ಯಾರೇಜ್ ಮುಳುಗಡೆಯಾಗಿದ್ದು ಸಂಪರ್ಕ ಕಡಿತಗೊಂಡಿದೆ.

ಬಾಗೇಪಲ್ಲಿ ತಾಲ್ಲೂಕಿನ ಚಿತ್ರಾವತಿ ಜಲಾಶಯ ತುಂಬಿ ಹರಿಯುತ್ತಿದ್ದು, ಹೊಲ, ತೋಟಗಳಿಗೆ ನೀರು ನುಗ್ಗಿದೆ. ಚಿಂತಾಮಣಿಯ ರೇಷ್ಮೆಗೂಡು ಮಾರುಕಟ್ಟೆ ಜಲಾವೃತವಾಗಿದೆ. ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಹೋಬಳಿ ವೆಂಕಟಗಿರಿಕೋಟೆ, ದೊಡ್ಡಸಾಗರ ಹಳ್ಳಿಯಲ್ಲಿ ಮನೆ, ಹೊಲ, ತೋಟಗಳಿಗೆ ನೀರು ನುಗ್ಗಿದೆ.

ನಗರದಲ್ಲಿ ಸೋಮವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಜಲಾವೃತಗೊಂಡ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

12 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ರಾಜ್ಯದ ವಿವಿಧೆಡೆ ಬುಧವಾರವೂ ಭಾರಿ ಮಳೆ ಸುರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 12 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಧಾರವಾಡ, ಹಾವೇರಿ, ಉತ್ತರ ಕನ್ನಡ, ಉಡುಪಿ, ಚಿತ್ರದುರ್ಗ, ತುಮಕೂರು, ಹಾಸನ, ಕೊಡಗು, ರಾಮನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ದಕ್ಷಿಣ ಒಳನಾಡು, ಕರಾವಳಿಯ ಉಳಿದ ಜಿಲ್ಲೆಗಳ ಹಲವೆಡೆ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಕೆಲ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಳ್ಳಿ ದರ ಕೆ.ಜಿಗೆ ₹1 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಲಕ್ಷ ದಾಟಿದೆ.

10 ಗ್ರಾಂ ಚಿನ್ನದ ದರವು ₹350 ಏರಿಕೆಯಾಗಿ, ₹81 ಸಾವಿರದಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,500 ಹೆಚ್ಚಳವಾಗಿ ₹1.01 ಲಕ್ಷಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಎಲೆಕ್ಟ್ರಾನಿಕ್ಸ್, ಸರ್ಕಿಟ್ ಬೋರ್ಡ್, ಸೌರ ಫಲಕ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಹಾಗಾಗಿ, ಬೆಳ್ಳಿಗೆ ಕೈಗಾರಿಕಾ ವಲಯದಿಂದ ಬೇಡಿಕೆ ಹೆಚ್ಚಳವಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಸಂಘರ್ಷ ಶಮನಕ್ಕೆ ಸಹಕಾರ'

ಕಜಾನ್ (ರಷ್ಯಾ) (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವನ್ನು ಶಾಂತಿಯುತವಾಗಿ ಪರಿಹರಿಸಬೇಕಿದೆ, ಇದಕ್ಕಾಗಿ ಸಾಧ್ಯವಿರುವ ಎಲ್ಲ ಬಗೆಯ ಸಹಕಾರ ನೀಡಲು ಭಾರತವು ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಜೊತೆಗಿನ ಮಾತುಕತೆ ಸಂದರ್ಭದಲ್ಲಿ ಹೇಳಿದರು.

ಬ್ರಿಕ್ಸ್ ಸಂಘಟನೆಯ 16ನೆಯ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮೋದಿ ಅವರು ಇಲ್ಲಿಗೆ ಬಂದಿದ್ದಾರೆ. ಅವರು ಅಧ್ಯಕ್ಷ ಪುಟಿನ್ ಜೊತೆ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಮಾತುಕತೆಯ ಆರಂಭದಲ್ಲಿ ಮೋದಿ ಅವರು, ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಆದಷ್ಟು ಬೇಗ ಮರಳುವಂತೆ ಆಗುವುದನ್ನು ಭಾರತವು ಬೆಂಬಲಿಸುತ್ತದೆ ಎಂದು ಹೇಳಿದರು.

ಮೂರು ತಿಂಗಳ ಅವಧಿಯಲ್ಲಿ ತಾವು ರಷ್ಯಾಕ್ಕೆ ಎರಡನೆಯ ಬಾರಿಗೆ ಭೇಟಿ ನೀಡುತ್ತಿರುವುದು, ರಷ್ಯಾ ಮತ್ತು ಭಾರತದ ನಡುವಿನ ನಿಕಟ ಸಹಕಾರ ಹಾಗೂ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಮೋದಿ ಹೇಳಿದರು.

'ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದ ವಿಚಾರವಾಗಿ ನಾವು ನಿರಂತರ ಸಂಪರ್ಕದಲ್ಲಿದ್ದೇವೆ. ನಾನು ಮೊದಲೇ ಹೇಳಿರುವಂತೆ, ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಮುಂದಿನ ದಿನಗಳಲ್ಲಿ ಸಾಧ್ಯವಿರುವ ಎಲ್ಲ ಬಗೆಯ ಸಹಕಾರ ನೀಡಲು ಭಾರತ ಸಿದ್ಧವಿದೆ' ಎಂದು ಮೋದಿ ಅವರು ಭರವಸೆ ನೀಡಿದರು.

ಭಾರತ ಮೂಲದವರಿಂದ ಸ್ವಾಗತ



ಮೋದಿ, ಪುಟಿನ್ ಆಲಿಂಗನ — ಎಎಫ್‌ಪಿ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರು ಕಜಾನ್‌ಗೆ ಮಂಗಳವಾರ ಬಂದಾಗ, ಸಂಸ್ಕೃತ ಗೀತೆ, ರಷ್ಯನ್ ನೃತ್ಯ ಹಾಗೂ ಇಸ್ಕಾನ್ ಬೆಂಬಲಿಗರ ಕೃಷ್ಣ ಭಜನೆಯ ಮೂಲಕ ಸ್ವಾಗತ ನೀಡಲಾಯಿತು.

ಮೋದಿ ಅವರಿಗೆ ಇಲ್ಲಿನ ಹೋಟೆಲ್‌ನಲ್ಲಿ ಭಾರತೀಯ ಮೂಲದವರು ತ್ರಿವರ್ಣ ಧ್ವಜ ಹಿಡಿದು, ಘೋಷಣೆಗಳನ್ನು ಕೂಗುತ್ತ ಸ್ವಾಗತ ನೀಡಿದರು. ರಷ್ಯಾದ ಕಲಾವಿದರು ಭಾರತದ ಸಾಂಪ್ರದಾಯಿಕ ಉಡುಗೆ ಧರಿಸಿ, ರಷ್ಯಾದ ನೃತ್ಯವೊಂದನ್ನು ಪ್ರದರ್ಶಿಸಿದರು. ಮೋದಿ ಅವರು ಇದನ್ನು ಆಸಕ್ತಿಯಿಂದ ವೀಕ್ಷಿಸಿದರು.

ನಾಲ್ಕು ಮದುವೆಗೆ ಮುಸ್ಲಿಮರಿಗೆ ಅವಕಾಶ

ಮುಂಬೈ (ಪಿಟಿಐ): ಮುಸ್ಲಿಂ ಪುರುಷರು ಒಂದಕ್ಕಿಂತ ಹೆಚ್ಚು ಮದುವೆಯಾಗಿ ವಿವಾಹ ನೋಂದಣಿ ಮಾಡಿಸಿಕೊಳ್ಳಬಹುದು, ಮುಸ್ಲಿಮರ ವೈಯಕ್ತಿಕ ಕಾನೂನುಗಳು ಅದಕ್ಕೆ ಅವಕಾಶ ಮಾಡಿಕೊಡುತ್ತವೆ ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ಮೂರನೆಯ ವಿವಾಹವನ್ನು ನೋಂದಣಿ ಮಾಡಿಸಲು ಬಯಸಿದ್ದ ಪುರುಷನೊಬ್ಬನ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಾಬಾವಾಲಾ ಮತ್ತು ಸೋಮಶೇಖರ್ ಸುಂದರೇಶನ್ ಅವರು ಇದ್ದ ವಿಭಾಗೀಯ ಪೀಠವು ಅಕ್ಟೋಬರ್ 15ರಂದು ಈ ಮಾತು ಹೇಳಿದೆ.

ಈ ವ್ಯಕ್ತಿಯು ಅಲ್ಜೀರಿಯಾದ ಮಹಿಳೆಯೊಬ್ಬಳನ್ನು ಮದುವೆ ಆಗಿದ್ದು, ಅದರ ನೋಂದಣಿ ಕೋರಿ ಕಳೆದ ವರ್ಷದ ಫೆಬ್ರುವರಿಯಲ್ಲಿ ಸಲ್ಲಿಸಿರುವ ಅರ್ಜಿಯ ಕುರಿತಾಗಿ ಠಾಣೆ ಮಹಾನಗರ ಪಾಲಿಕೆಯ ಉಪ ವಿವಾಹ ನೋಂದಣಿ ಅಧಿಕಾರಿಗೆ ತೀರ್ಮಾನ ಕೈಗೊಳ್ಳುವಂತೆ ಪೀಠವು ಸೂಚಿಸಿದೆ.

13ನೇ ಪುಟ ನೋಡಿ

ವೀರಶೈವ-ಲಿಂಗಾಯತ ಮಹಾಸಭೆ ನಿರ್ಣಯಕ್ಕೆ 'ಕೈ' ಶಾಸಕರ ಸಮ್ಮತಿ

ಜಾತಿಗಣತಿ ವಿರೋಧಕ್ಕೆ ಸಚಿವರ 'ಸಹಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆಯುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಯತ್ನದ ವಿರುದ್ಧ ಲಿಂಗಾಯತ ಮಹಾಸಭಾ ಕೈಗೊಂಡಿರುವ ನಿರ್ಣಯಕ್ಕೆ ರಾಜ್ಯದ ನಾಲ್ವರು ಸಚಿವರೂ ಸೇರಿದಂತೆ ಕಾಂಗ್ರೆಸ್‌ನ ಹಲವು ಶಾಸಕರು, ಸಂಸದರು ಬೆಂಬಲ ಸೂಚಿಸಿದ್ದಾರೆ.

ಜಾತಿವಾರು ಜನಗಣತಿ ವರದಿ ಅಂಗೀಕಾರ ವಿರೋಧಿಸಿ ಅಖಿಲ ಭಾರತ ವೀರಶೈವ/ಲಿಂಗಾಯತ ಮಹಾಸಭಾ ನೇತೃತ್ವದಲ್ಲಿ ಸಮುದಾಯದ ರಾಜಕೀಯ ಮುಖಂಡರು ಮತ್ತು ವಿವಿಧ ಸಂಘಟನೆಗಳ ಪ್ರಮುಖರ ಸಭೆ ನಗರದಲ್ಲಿ ನಡೆಯಿತು. ಜಾತಿವಾರು ಜನಗಣತಿ ವರದಿ ಸ್ವೀಕರಿಸದಂತೆ ಆಗ್ರಹಿಸುವುದೂ ಸೇರಿದಂತೆ ಐದು ನಿರ್ಣಯಗಳನ್ನು ಈ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಮಹಾಸಭಾ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸದಸ್ಯರಾಗಿರುವ ಎಂ.ಬಿ. ಪಾಟೀಲ, ಈಶ್ವರ ಖಂಡ್ರೆ, ಶರಣಬಸಪ್ಪ ದರ್ಶನಾಪುರ, ಶಿವಾನಂದ ಪಾಟೀಲ, ಮುಖ್ಯಮಂತ್ರಿಯವರ ಸಲಹೆಗಾರ ಬಿ.ಆರ್. ಪಾಟೀಲ ಪಾಲ್ಗೊಂಡಿದ್ದರು.

13ನೇ ಪುಟ ನೋಡಿ

ಮಹಾಸಭಾ ನಿರ್ಣಯಗಳೇನು?

- ಹತ್ತು ವರ್ಷಗಳ ಹಿಂದೆ ನಡೆಸಲಾದ ಸಮೀಕ್ಷೆಯ ವರದಿಯು ಹಲವು ವೈರುಧ್ಯ ಮತ್ತು ಲೋಪಗಳಿಂದ ಕೂಡಿದೆ. ಹೀಗಾಗಿ, ಹೊಸದಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು
- ಕಾಂತರಾಜ ನೇತೃತ್ವದ ಆಯೋಗವು ನಡೆಸಿದ ಸಮೀಕ್ಷೆಯ ವರದಿಯನ್ನು ಆಧರಿಸಿ ಈಗ ಹಿಂದುಳಿದ ವರ್ಗಗಳ ಆಯೋಗವು ಶಿಫಾರಸುಗಳನ್ನು ಸಲ್ಲಿಸಿದೆ. ಇದು ಅವೈಜ್ಞಾನಿಕ ಮತ್ತು ಅಸಾಂವಿಧಾನಿಕ ವರದಿಯಾಗಿದ್ದು, ಸ್ವೀಕಾರಾರ್ಹವಲ್ಲ. ಆದ್ದರಿಂದ ವರದಿಗೆ ಸಂಬಂಧಿಸಿದಂತೆ ಉದ್ದೇಶಿತ ಪ್ರಕ್ರಿಯೆಯನ್ನು ಮುಖ್ಯಮಂತ್ರಿ ಕೈಬಿಡಬೇಕು
- ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಲಿಂಗಾಯತ ಉಪ ಜಾತಿಗಳ ಹೆಸರನ್ನು ಮಾತ್ರ ನಮೂದಿಸಲಾಗುತ್ತದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಆಧಾರದಲ್ಲಿ ಎಲ್ಲ ಲಿಂಗಾಯತ ಉಪ ಪಂಗಡಗಳನ್ನು 'ಲಿಂಗಾಯತ' ಎಂದು ನಮೂದಿಸಲು ಅವಕಾಶ ನೀಡಬೇಕು. ಈಗ ವಿವಿಧ ಪ್ರವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳನ್ನು ಬದಲಾಯಿಸದೇ ಜಾತಿ ಹೆಸರನ್ನು ನಮೂದಿಸಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಬೇಕು

13ನೇ ಪುಟ ನೋಡಿ

POLYCAB
"VERIFY BEFORE YOU BUY"
"At Polycab, your safety is our top priority. We urge you to always buy from authorized channel partners and verify the authenticity before making your purchase"
Scan to Verify
Scan the unique 2D matrix code on the pack BY PRODUCTSECURE app and instantly verify authenticity.
or
SMS Authentication
SMS the unique ALPHANUMERIC code on the pack to 9901000025 and instantly receive authenticity SMS.

Download the PRODUCTSECURE app from Google Play App Store

ಸುಧಾ, ಮಯೂರ ಓದಿರಿ

ಬಿಟಿಎಂ ಬಡಾವಣೆಯಲ್ಲಿ ಬಿಡಿಎ ಆಸ್ತಿ ಮರು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬಿಟಿಎಂ ಬಡಾವಣೆಯಲ್ಲಿ ₹5 ಕೋಟಿ ಮೌಲ್ಯದ ಆಸ್ತಿಯನ್ನು ಮರು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ತಾವರೆಕೆರೆ ಗ್ರಾಮದ ಸರ್ವೆ ನಂಬರ್ 50ರ ನಿವೇಶನ ಸಂಖ್ಯೆ 109 ಮತ್ತು 110ರಲ್ಲಿ 2,430 ಚದರ ಅಡಿಯ ಪ್ರದೇಶದಲ್ಲಿ (ಬಿ.ಟಿ.ಎಂ. 1ನೇ ಹಂತ, 1ನೇ ಫೇಸ್) ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಅನ್ನು ತೆರವುಗೊಳಿಸಲಾಗಿದೆ ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಕೆನರಾ बैंक ಕೆನರಾ ಬ್ಯಾಂಕ್
सिंडिकेट Syndicate

ಅನುಬಂಧ–25

ಲಾಕರ್‌ಗಳನ್ನು ಮುರಿದು ತೆಗೆಯುವ ಬಗ್ಗೆ ಸಾರ್ವಜನಿಕ ನೋಟೀಸು

ಈ ನೋಟೀಸಿನ ಅಡಿಯಲ್ಲಿ ಹೆಸರಿಸಲಾದ ವ್ಯಕ್ತಿ/ಗಳು ಕೆನರಾ ಬ್ಯಾಂಕಿನ ಈ ಕೆಳಗೆ ತಿಳಿಸಿದ ಶಾಖೆಗಳಲ್ಲಿ (ಇ ಸಿಂಡಿಕೇಟ್ ಬ್ಯಾಂಕಿನ ಶಾಖೆಗಳನ್ನು ಒಳಗೊಂಡಂತೆ) ಸುರಕ್ಷಿತ ಠೇವಣಿ ಲಾಕರ್‌ಗಳ ಸೌಲಭ್ಯವನ್ನು ಪಡೆದಿದ್ದಾರೆ ಎಂದು ಸಂಬಂಧಿಸಿದ ಎಲ್ಲಾ ವ್ಯಕ್ತಿಗಳಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಸಾರ್ವಜನಿಕ ಸೂಚನೆಯನ್ನು ನೀಡಲಾಗಿದೆ. ಲಾಕರ್ ಬಾಡಿಗೆಯ ಬಾಕಿಯನ್ನು ಪಾವತಿಸಲು ವಿನಂತಿಯೊಂದಿಗೆ ನಮ್ಮ ಬ್ಯಾಂಕ್ ದಾಖಲೆಗಳ ಪ್ರಕಾರ ಇತ್ತೀಚಿನ ಲಭ್ಯವಿರುವ ವಿಳಾಸದಲ್ಲಿ ಲಾಕರ್ ಬಾಡಿಗೆದಾರರು / LOA ಗೆ ಸ್ವೀಕೃತಿಯ ಬಾಕಿ (AD) ನೊಂದಿಗೆ ಆಯಾ ಶಾಖೆಗಳು ಈಗಾಗಲೇ ವೈಯಕ್ತಿಕ ಪತ್ರಗಳು/ನೋಟಿಸ್‌ಗಳನ್ನು ನೋಂದಾಯಿತ ಪೋಸ್ಟ್ ಮೂಲಕ ತಿಳಿಸಿವೆ. ಈ ಸೂಚನೆಗಳ ಹೊರತಾಗಿಯೂ, ಲಾಕರ್ ಬಾಡಿಗೆದಾರರು/LOA ಶಾಖೆಯನ್ನು ಸಂಪರ್ಕಿಸಿಲ್ಲ ಮತ್ತು ಲಾಕರ್ ಬಾಡಿಗೆ ಬಾಕಿಯನ್ನು ಪಾವತಿಸಿಲ್ಲ.

ಕೆಳಗಿನ ಹೆಸರಿನ ಲಾಕರ್ ಬಾಡಿಗೆದಾರರು ಮತ್ತು ಅವರ ಕಾನೂನು ಬದ್ಧ ವಾರಸುದಾರರು ಇದನ್ನು ಅಂತಿಮ ಸೂಚನೆ ಎಂದು ಪರಿಗಣಿಸಲು ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಶಾಖೆಯನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ಮತ್ತು ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 7 ದಿನಗಳೊಳಗೆ ಲಾಕರ್ ಬಾಡಿಗೆ ಬಾಕಿಯನ್ನು ಪಾವತಿಸಲು ವಿಫಲವಾದರೆ ಬ್ಯಾಂಕ್ ಯಾವುದೇ ಹೆಚ್ಚಿನ ಸೂಚನೆ ಅಥವಾ ಸೂಚನೆ ಇಲ್ಲದೆ ಲಾಕರ್‌ಗಳನ್ನು ತೆರೆಯುತ್ತದೆ. ಬಾಡಿಗೆದಾರರು ಅಥವಾ ಅವರ ಕಾನೂನುಬದ್ಧ ವಾರಸುದಾರರೇ ಸಂಪೂರ್ಣ ವೆಚ್ಚ ಮತ್ತು ಜವಾಬ್ದಾರಾಗಿರುತ್ತಾರೆ.

ಕ್ರ. ಸಂ.	ಶಾಖೆ ಹೆಸರು/ ಸಂಪರ್ಕಿಸುವ ಸಂ.	ಲಾಕರ್ ಸಂಖ್ಯೆ	ಲಾಕರ್ ಬಾಡಿಗೆ ಬಾಕಿ	ಲಾಕರ್ ಹೊಂದಿರುವವರ ಹೆಸರು ಮತ್ತು ವಿಳಾಸ
1	ವಿಲ್ಸನ್ ಗಾರ್ಡನ್ 8521113832	46 (ಹಂಚಿಕೆಯಾದ ಸಂ. 04196010000949)	ರೂ. 17464/-	ಸಯೀದಾ ಇಶ್ರತ್ ಜಹಾ – ಸಹಾಯಕ ಉಪಾಧ್ಯಾಯಿನಿ, ಮನೆ ನಂ–5, ಸೋಮೇಶ್ವರನಗರ ಟ್ಯಾಂಕ್ ಗಾರ್ಡನ್, 1ನೇ ಬ್ಲಾಕ್, ಜಯನಗರ, ಬೆಂಗಳೂರು– 560011
2	ಪುಟ್ಟಣಶೆಟ್ಟಿ ರಸ್ತೆ 8489257562	137 (ಹಂಚಿಕೆಯಾದ ಸಂ. 04216010002140)	ರೂ. 17464/-	ಜಗದೀಶ್ ಪಡಿವಾಲ್ –ಕೇರಾಫ್ ಮದರ್ ನೇಚರ್–ಎಸ್‌ಓ 46/1, ಜರಗನಹಳ್ಳಿ ಕೆ ಪಿ ಎಂ ರಸ್ತೆ ಬೆಂಗಳೂರು– 560018.
3	ಪುಟ್ಟಣಶೆಟ್ಟಿ ರಸ್ತೆ 8489257562	44 (ಹಂಚಿಕೆಯಾದ ಸಂ. 216010002246)	ರೂ. 17461/-	ವೇಣುಗೋಪಾಲ್ ರಾವ್– ಲೆಕ್ಕ ಪರಿಶೋಧಕರು – ತೆರಿಗೆ ಸಲಹೆಗಾರರು # 8, 2ನೇ ಮುಖ್ಯ ನಂಜಾಂಬ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು– 560018
4	ಪುಟ್ಟಣಶೆಟ್ಟಿ ರಸ್ತೆ 8489257562	229 (ಹಂಚಿಕೆಯಾದ ಸಂ. 04216010002304)	ರೂ. 17464/-	ಪರಸಿ ಬಾಯಿ –ಸಂಖ್ಯೆ 108 ಮೈಸೂರು ರಸ್ತೆ ಬೆಂಗಳೂರು– 560018
5	ಪುಟ್ಟಣಶೆಟ್ಟಿ ರಸ್ತೆ 8489257562	63 (ಹಂಚಿಕೆಯಾದ ಸಂ. 04216020000050)	ರೂ. 33,451.65	ಆರ್ ಲೋಕೇಶ್–ಸಂಖ್ಯೆ 32, ಬಿ ಅಡ್ಡರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು –560026.
6	ಇನ್‌ಫೆಂಟ್ರಿ ರಸ್ತೆ–II / 9483521927	36 (ಹಂಚಿಕೆಯಾದ ಸಂ. 04316010000187)	ರೂ. 17464/-	ಶಾಹಿದಾ ಬೇಗಂ 22, ಧನಕೋಟಿ ಲೇನ್ ಬೆಂಗಳೂರು– 560051
7	ಇನ್‌ಫೆಂಟ್ರಿ ರಸ್ತೆ–II 9483521927	317 (ಹಂಚಿಕೆಯಾದ ಸಂ. 123005896872)	ರೂ. 33,332.00	ಬನ್ನಿ ಎಂ 213, ಐ ಸಿ ಅಡ್ಡರಸ್ತೆ, ಹೆಚ್ ಬಿ ಆರ್ ಲೇಔಟ್, 3ನೇ ಬ್ಲಾಕ್ ಬೆಂಗಳೂರು– 560084
8	ಗಾಂಧಿನಗರ 9443114378	123 (ಹಂಚಿಕೆಯಾದ ಸಂ. 04006010001140)	ರೂ. 17,464.00	ವೀರಪ್ಪ ಸಣ್ಣ ತಮ್ಮ ಅಧ್ಯಕ್ಷರು; ರೈತರ ಸಹಕಾರ ಸ್ಪಿನ್ನಿಂಗ್ ಮಿಲ್; ರಾಣೆಬೆನ್ನೂರು ಬೆಂಗಳೂರು –560009
9	ಗಾಂಧಿನಗರ 9443114378	408 (ಹಂಚಿಕೆಯಾದ ಸಂ. 04006010001396)	ರೂ. 3,304.00	ನರೇಂದ್ರ ಕುಮಾರ್, ನಂ 164, 6ನೇ ಮಹಡಿ, ರಾಂಕಾ ನೆಸ್ಟ್ ಓಕಳಿಪುರಂ ಬೆಂಗಳೂರು–560021
10	ಶಾಂತಿ ನಗರ 8377058136	75 (ಹಂಚಿಕೆಯಾದ ಸಂ. 123001851627)	ರೂ. 16,410.00	ಯಾಸ್ಮೀನ್ ನಯಾಜ್, 39, ಬಸಪ್ಪ ರಸ್ತೆ, ಶಾಂತ ಬೆಂಗಳೂರು– 560027
11	ಶಾಂತಿ ನಗರ 8377058136	83 (ಹಂಚಿಕೆಯಾದ ಸಂ. (123001983557	ರೂ. 61,124.00	ಪ್ರೀತಿ ಗುರ್ಜರ್, 4ಎ ಗುಲ್‌ಮೋಹರ್ ಅಪಾರ್ಟ್‌ಮೆಂಟ್ಸ್, ನಂ.9, ಬೆಂಗಳೂರು– 560025
12	ಶಾಂತಿ ನಗರ 8377058136	147 (ಹಂಚಿಕೆಯಾದ ಸಂ. 123001984473)	ರೂ. 16,575.00	ಶಾಮಲಾಲ್ ಜಿ, 2, 1ನೇ ಅಡ್ಡರಸ್ತೆ, ಶ್ರೀನಿ ಡಬಲ್ ರೋಡ್, ಬೆಂಗಳೂರು– 560027
13	ನಂದಿದುರ್ಗ ರಸ್ತೆ 9483520793	110 (ಹಂಚಿಕೆಯಾದ ಸಂ. 123006861875)	ರೂ. 17,464.00	ಸಮೀವುಲ್ಲಾ.ಎಂ.ಎನ್ – ಮಲಿಕ್ 17/13ನೇ ಕ್ರಾಸ್, ಜಯಮಹಲ್ ಬಡಾವಣೆ, ಬೆಂಗಳೂರು– 560046
14	ನಂದಿದುರ್ಗ ರಸ್ತೆ 9483520793	229 (ಹಂಚಿಕೆಯಾದ ಸಂ. 123006872650)	ರೂ. 34,928.00	ರೇಖಾ ಎಂ ಎಂ, ನಂ 18, ಶ್ರೀ ಎಂ ವಿ ನಗರ, ಕಲ್ಕೆರೆ ಮುಖ್ಯ ರಸ್ತೆ, ರಾಮಮೂರ್ತಿನಗರ ಬೆಂಗಳೂರು– 560016
15	ಹೂಡಿ 9449860689	56 (ಹಂಚಿಕೆಯಾದ ಸಂ. 04186010000889)	ರೂ. 17,464.00	ಪ್ರಕಾಶ್ ಲಂಬಾ, ಬೆಂಗಳೂರು–560025
16	ಹೂಡಿ 9449860689	86 (ಹಂಚಿಕೆಯಾದ ಸಂ. 04186010001037)	ರೂ. 17,464.00	ದೇವಿ ಸಾಧನಾ ಎಸ್, ಆಡಳಿತಾಧಿಕಾರಿ, 146 ನಾರಾಯಣ ಪಿಳ್ಳೈ ಸ್ಟ್ರೀಟ್ ಬೆಂಗಳೂರು– 560001
17	ಹೂಡಿ 9449860689	119 (ಹಂಚಿಕೆಯಾದ ಸಂ. 04186010001094	ರೂ. 17,464.00	ಪದ್ಮಜಾ.ಎಸ್, ವ್ಯವಸ್ಥಾಪಕರು, ಎಸ್ ಐ ಡಿ ಬಿ ಐ ಸೆಂಚುರಿ ಬಿಲ್ಡಿಂಗ್ 28 ಆರನೇ ಮಹಡಿ, ಎಂ ಜಿ ರಸ್ತೆ, ಬೆಂಗಳೂರು– 560025
18	ಹೂಡಿ 9449860689	89 (ಹಂಚಿಕೆಯಾದ ಸಂ. 04186030000040)	ರೂ. 61,124.00	ಕೃಷ್ಣ ಕುಮಾರಿ ಎಂ, ನಂ. 79/19, 1ನೇ ಅಡ್ಡರಸ್ತೆ, ರಾಮಯ್ಯ ರೆಡ್ಡಿ ಲೇಔಟ್, ನಂದಿದುರ್ಗ ರಸ್ತೆ ಬೆಂಗಳೂರು– 560046

ದಿನಾಂಕ : 23.10.2024, ಸ್ಥಳ : ಬೆಂಗಳೂರು — ಸಹಿ/– ಶಾಖಾ ಪ್ರಬಂಧಕರು, ಕೆನರಾ ಬ್ಯಾಂಕ್

ಜಾಮೀನು ಕೂಡಲೇ ರದ್ದುಗೊಳಿಸಲು ಒತ್ತಾಯ • ತಪ್ಪು ಸಂದೇಶ ರವಾನೆ: ಕಳವಳ

ಗೌರಿ ಹತ್ಯೆ ಆರೋಪಿಗಳಿಗೆ ಸನ್ಮಾನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಹೋರಾಟಗಾರ್ತಿ, ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಹತ್ಯೆ ಮಾಡಿದ್ದ ಆರೋಪಿಗಳನ್ನು ಹಿಂದೂಪರ ಸಂಘಟನೆಗಳು ಸನ್ಮಾನಿಸಿರುವುದನ್ನು ಖಂಡಿಸಿ ಗೌರಿ ಸ್ಮಾರಕ ಟ್ರಸ್ಟ್ ಹಾಗೂ ಗೌರಿ ಬಳಗದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಆರೋಪಿಗಳನ್ನು ಸನ್ಮಾನಿಸುವ ಮೂಲಕ ಗೌರಿ ಲಂಕೇಶ್ ಅವರ ಹತ್ಯೆಯನ್ನು ಬೆಂಬಲಿಸಲಾಗಿದೆ. ಇದರಿಂದ, ಸಮಾಜಕ್ಕೆ ಕೆಟ್ಟ ಸಂದೇಶ ಹೋಗಲಿದೆ. ಗೌರಿ ಹತ್ಯೆ ಆರೋಪಿಗಳಿಗೆ ಮಂಜೂರು ಮಾಡಿರುವ ಜಾಮೀನನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಗೌರಿ ಹತ್ಯೆ ಪ್ರಕರಣದಲ್ಲಿ ಬಂಧಿಸಿದ್ದ ಆರೋಪಿಗಳಾದ ಪರಶುರಾಮ್ ವಾಘ್ಮೋರೆ, ಮನೋಹರ್ ಯಡವೆ ಜಾಮೀನು ಪಡೆದು ಹೊರಗಡೆ ಬಂದಿದ್ದಾರೆ. ಈ ಆರೋಪಿಗಳಿಗೆ ಹಿಂದೂಪರ ಸಂಘಟನೆಗಳು ವಿಜಯಪುರದಲ್ಲಿ ಸನ್ಮಾನಿಸಿವೆ. ಮತ್ತೊಬ್ಬ ಆರೋಪಿ ಶ್ರೀಕಾಂತ್ ಪಾಂಗಾರ್ಕರ್ ಮಹಾರಾಷ್ಟ್ರದಲ್ಲಿ ಶಿವಸೇನೆ (ಶಿಂದೆ ಬಣ) ಪಕ್ಷಕ್ಕೆ ಸೇರ್ಪಡೆಯಾಗಿದ್ದಾನೆ. ಇದು ಮತ್ತಷ್ಟು ಕೊಲೆಗಳಿಗೆ ಪ್ರಚೋದಿಸಿದಂತಾಗುತ್ತದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಗೌರಿ ಸ್ಮಾರಕ ಟ್ರಸ್ಟ್ ಹಾಗೂ ಗೌರಿ ಬಳಗದ ಸದಸ್ಯರು ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

‘ಗೌರಿ ಹಂತಕರಿಗೆ ಸನ್ಮಾನ ಮಾಡಿರುವ ವ್ಯಕ್ತಿಗಳ ಮೇಲೆ ಕೊಲೆಗೆ ಪ್ರಚೋದನೆ ನೀಡಿರುವ ಆರೋಪದ ಮೇಲೆ ಪ್ರಕರಣದ ದಾಖಲಿಸಬೇಕು. ಹಿಂಸೆ ಮತ್ತು ದ್ವೇಷಕ್ಕೆ ಪ್ರಚೋದನೆ ನೀಡುತ್ತಿರುವ ಕೋಮುವಾದಿ ಸಂಘಟನೆಗಳ ವಿರುದ್ಧ ಕ್ರಮ ಜರುಗಿಸಬೇಕು. ಗೌರಿ ಕೊಲೆ ಪ್ರಕರಣದ ವಿಚಾರಣೆಯನ್ನು ತ್ವರಿತಗೊಳಿಸಿ ಹಂತಕರಿಗೆ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಗೌರಿ ಟ್ರಸ್ಟ್‌ನ ಅಧ್ಯಕ್ಷ ವಿ.ಎಸ್. ಶ್ರೀಧರ್ ಮಾತನಾಡಿ, ‘ಗೌರಿ ಹತ್ಯೆ ಆರೋಪಿಗಳಿಗೆ ಜಾಮೀನು ಮಾತ್ರ ಸಿಕ್ಕಿದೆ. ಅವರು ಇನ್ನೂ ಆರೋಪ ಮುಕ್ತರಾಗಿಲ್ಲ. ಜಾಮೀನು ಸಿಕ್ಕ ಕಾರಣಕ್ಕೆ ಆರೋಪಿಗಳನ್ನು ಸನ್ಮಾನಿಸಿರುವುದು ದುರಂತ. ಸನ್ಮಾನದ ಮೂಲಕ ಗೌರಿ ಹತ್ಯೆಯ ಹಿಂದೆ ನಾವೇ ಇದ್ದೇವೆ ಎಂದು ಸಂಘ ಪರಿವಾರ ಒಪ್ಪಿಕೊಳ್ಳುತ್ತಿದೆ’ ಎಂದು ಆರೋಪಿಸಿದರು.

ಸಾಮಾಜಿಕ ಚಿಂತಕ ಶಿವಸುಂದರ್ ಮಾತನಾಡಿ, ‘ಆರೋಪಿಗಳಿಗೆ ಸನ್ಮಾನ ಮಾಡುವ ಮೂಲಕ ಗೌರಿ ಹತ್ಯೆ ಹಿಂದೆ ನಾವೇ ಇದ್ದೇವೆ ಎಂದು ಸಂಘ ಪರಿವಾರ ಬಹಿರಂಗವಾಗಿ ಒಪ್ಪಿಕೊಂಡಿದೆ. ಗೌರಿ ಹತ್ಯೆ ಪ್ರಕರಣದ ವಿಚಾರಣೆ ವಿಳಂಬವಾಗುತ್ತಿದೆ. ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದರೂ, ನ್ಯಾಯಾಲಯದ ಪ್ರಕ್ರಿಯೆಗಳು ವಿಳಂಬವಾಗಿವೆ. ಆದ್ದರಿಂದ, ಈ ಪ್ರಕರಣದ ತ್ವರಿತ ವಿಚಾರಣೆಗೆ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಕಾರ್ಮಿಕ ನಾಯಕಿ ಎಸ್. ವರಲಕ್ಷ್ಮಿ, ಶ್ರೀಪಾದ್ ಭಟ್, ಹನುಮೇಗೌಡ, ಪೂರ್ಣ, ಐಶ್ವರ್ಯ, ವಿನಯ್ ಶ್ರೀನಿವಾಸ್ ಉಪಸ್ಥಿತರಿದ್ದರು.

ಜೋಯಾಲುಕ್ಕಾಸ್‌ನಿಂದ ‘ಜಾಯ್‌ವಾಲಿ ದೀಪಾವಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಅಂಗವಾಗಿ ಜೋಯಾಲುಕ್ಕಾಸ್ ‘ಜಾಯ್‌ವಾಲಿ ದೀಪಾವಳಿ’ ಕೊಡುಗೆಯನ್ನು ಪ್ರಕಟಿಸಿದೆ.

ನವೆಂಬರ್ 3ರ ವರೆಗೆ ಈ ಕೊಡುಗೆ ಇರಲಿದೆ. ಈ ವೇಳೆ ಗ್ರಾಹಕರು ₹1 ಲಕ್ಷ ಮೌಲ್ಯದ ವಜ್ರ ಮತ್ತು ಕತ್ತರಿಸದ ವಜ್ರಾಭರಣಗಳ ಖರೀದಿಯೊಂದಿಗೆ 1 ಗ್ರಾಂ ಚಿನ್ನದ ನಾಣ್ಯವನ್ನು ಉಚಿತವಾಗಿ ಪಡೆಯಬಹುದು ಎಂದು ಜೋಯಾಲುಕ್ಕಾಸ್ ತಿಳಿಸಿದೆ.

₹50 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಚಿನ್ನ ಮತ್ತು ಅಮೂಲ್ಯ ಆಭರಣಗಳ ಖರೀದಿ ಮೇಲೆ ₹1 ಸಾವಿರ ಮೌಲ್ಯದ ಗಿಫ್ಟ್ ವೋಚರ್, ₹10 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಬೆಳ್ಳಿ ಆಭರಣಗಳ ಮೇಲೆ ₹500 ಮೌಲ್ಯದ ಗಿಫ್ಟ್ ವೋಚರ್ ಪಡೆಯಬಹುದು ಎಂದು ತಿಳಿಸಿದೆ. ಶೇ 10ರಷ್ಟು ಹಣ ಪಾವತಿಯೊಂದಿಗೆ ಪ್ರಸಕ್ತ ದರದಲ್ಲಿಯೇ ಮುಂಗಡ ಖರೀದಿ ನಿಗದಿ ಮಾಡಬಹುದಾಗಿದೆ. ಹಳೆಯ ಚಿನ್ನವನ್ನು ಶೇ 100ರಷ್ಟು ಎಚ್‌ಯುಐಡಿ 916 ಹಾಲ್‌ಮಾರ್ಕ್ ಆಭರಣಗಳೊಂದಿಗೆ ವಿನಿಮಯ ಮಾಡಿಕೊಳ್ಳಬಹುದು ಎಂದು ಹೇಳಿದೆ.

12 ಬಾಲಕಿಯರ ರಕ್ಷಣೆ: 31 ಮಂದಿ ಬಂಧನ

ಸಿಸಿಬಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಶ್ಯಾವಾಟಿಕೆಗೆ ದೂಡಲು ಬಾಲಕಿಯರನ್ನು ಕಳ್ಳ ಸಾಗಣೆ ಮಾಡುತ್ತಿದ್ದ ಜಾಲವನ್ನು ಪತ್ತೆ ಮಾಡಿರುವ ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ, 12 ಬಾಲಕಿಯರನ್ನು ರಕ್ಷಿಸಿದ್ದಾರೆ.

ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ 26 ಮಧ್ಯವರ್ತಿಗಳು ಹಾಗೂ 5 ಮಂದಿ ಗ್ರಾಹಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಾನವ ಕಳ್ಳ ಸಾಗಣೆ ನಿಯಂತ್ರಣ ಬಗ್ಗೆ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ವೇಶ್ಯಾವಾಟಿಕೆಗಾಗಿ ಬಾಲಕಿಯರನ್ನು ಕಳ್ಳ ಸಾಗಣೆ ಮಾಡಲಾಗುತ್ತಿದೆ ಎಂಬ ಮಾಹಿತಿ ಬಂದಿತ್ತು. ಅದನ್ನು ಆಧರಿಸಿ ಕೆಲವು ತಿಂಗಳಿಂದ ಕಾರ್ಯಾಚರಣೆ ನಡೆಸಲಾಗಿತ್ತು. ಸರ್ಕಾರೇತರ ಸಂಸ್ಥೆ-(ಎನ್‌ಜಿಒ) ನೀಡಿದ ಮಾಹಿತಿ ಆಧರಿಸಿ ಸಿಸಿಬಿಯ ಮಹಿಳಾ ಸಂರಕ್ಷಣಾ ದಳ ಹಾಗೂ ಸ್ಥಳೀಯ ಪೊಲೀಸರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ 14ರಿಂದ 17 ವರ್ಷದ 12 ಬಾಲಕಿಯರನ್ನು ರಕ್ಷಣೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಪ್ರಕರಣ ಸಂಬಂಧ ಬಂಧಿಸಿರುವ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಹೇಳಿದರು.

‘ದಾಳಿ ವೇಳೆ ರಕ್ಷಣೆ ಮಾಡಲಾದ ಬಾಲಕಿಯರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ. ಬಾಂಗ್ಲಾದೇಶದ ಮೂವರು ಬಾಲಕಿಯರು ಪತ್ತೆ ಆಗಿದ್ದರು. ಅವರನ್ನು ಆ ದೇಶಕ್ಕೆ ವಾಪಸ್ ಕಳುಹಿಸಲು ಪ್ರಯತ್ನಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಡ್ರಗ್ಸ್: ಮೂವರು ವಿದೇಶಿಯರ ಸೆರೆ

ಬೆಂಗಳೂರು: ಗ್ರಾಹಕರು ಹಾಗೂ ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಮೂವರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಸಿಬ್ಬಂದಿ ಬಂಧಿಸಿದೆ.

ಎಮೆಕಾ ಹೆನ್ರಿ ಅನುಸಿ (51), ಫ್ರೈಡೇ ಒಕೊರೊ ಜೋಸೆಫ್ (38) ಹಾಗೂ ಇಮಾನ್ಯುಯೆಲ್ ಕೋಪಿ (37)ಬಂಧಿತರು. ಬಂಧಿತ ಆರೋಪಿಗಳಿಂದ ₹9 ಲಕ್ಷ ಮೌಲ್ಯದ 82 ಗ್ರಾಂ ಎಂಡಿಎಂಎ, ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಕಾಡುಗೋಡಿ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಮೂವರು ವಿದೇಶಿ ಪ್ರಜೆಗಳು ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿದ್ದರು ಎಂಬ ಮಾಹಿತಿ ಬಂದಿತ್ತು. ಅವರನ್ನು ಬಂಧಿಸಲಾಗಿದೆ. ಮೂವರೂ ವೈದ್ಯಕೀಯ ಹಾಗೂ ಪ್ರವಾಸಿ ವೀಸಾದ ಮೇಲೆ ದೆಹಲಿಗೆ ಬಂದಿದ್ದರು. ನಂತರ, ಬೆಂಗಳೂರಿನಲ್ಲಿ ನೆಲೆಸಿದ್ದರು. ಬೆಂಗಳೂರಿನಲ್ಲಿದ್ದ ಆಫ್ರಿಕಾ ಮೂಲದವರಿಂದ ಡ್ರಗ್ಸ್ ಖರೀದಿಸಿ ಗ್ರಾಹಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಗೆ ಮಾರುತ್ತಿದ್ದರು. 1 ಗ್ರಾಂ ಕ್ರಿಸ್ಟಲ್‌ಗೆ ₹8 ಸಾವಿರದಿಂದ ₹10 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು’ ಎಂದು ಹೇಳಿದರು.

‘ಕೊತ್ತನೂರು ಹಾಗೂ ಕೆ.ಆರ್. ಪುರ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ದಾಖಲಾಗಿದ್ದ ಪ್ರಕರಣದಲ್ಲಿ ಈ ಪೈಕಿ ಇಬ್ಬರನ್ನು ಬಂಧಿಸಲಾಗಿತ್ತು. ಜಾಮೀನು ಪಡೆದು ಬಿಡುಗಡೆಯಾದ ನಂತರ ಡ್ರಗ್ಸ್ ಪೆಡ್ಲಿಂಗ್ ದಂಧೆಗೆ ಇಳಿದಿದ್ದರು’ ಎಂದರು. ಕಾಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ನವದೆಹಲಿಯ ರಜೌರಿ ಗಾರ್ಡನ್‌ನಲ್ಲಿ ನಟ ನೇಹಾ ಧುಪಿಯ ಅವರು ಕಾಣಿಸಿಕೊಂಡಿದ್ದು ಹೀಗೆ...

ಕೆಂಗೇರಿಯ ಹರ್ಷ ಲೇಔಟ್ ಬಳಿಯ ದುರ್ಘಟನೆ
ಮಕ್ಕಳು ಕೆರೆಯಲ್ಲಿ ಶವವಾಗಿ ಪತ್ತೆ 5

'ಮೊಬೈಲ್ ಸೇವಾ ಶುಲ್ಕ ಏರಿಸಲ್ಲ' 14

'ಧರ್ಮಬೋಧನೆ ಮುಸ್ಲಿಮರಿಗೆ ಸೀಮಿತವಲ್ಲ' 12

ಚನ್ನಪಟ್ಟಣ: ರಣ ಕಣ

ಮೈತ್ರಿ ಜಟಾಪಟಿ • ಕಾಯುವ ತಂತ್ರದಲ್ಲಿ ಯೋಗೇಶ್ವರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯು ಜೆಡಿಎಸ್-ಬಿಜೆಪಿ ಮಧ್ಯೆ ತೀವ್ರ ಪೈಪೋಟಿಗೆ ಕಾರಣವಾಗಿದ್ದು, ಅಭ್ಯರ್ಥಿ ಆಯ್ಕೆ ವಿಷಯ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಲೇ ಇದೆ.

ವಿಧಾನಪರಿಷತ್ತಿನ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡಿ, ಸ್ಪರ್ಧೆಗೆ ಅಣಿಯಾಗಿರುವ ಸಿ.ಪಿ.ಯೋಗೇಶ್ವರ್ ಅವರನ್ನು ಬಿಜೆಪಿಯಿಂದಲೇ ಕಣಕ್ಕೆ ಇಳಿಸಬೇಕು ಎಂದು ಬಿಜೆಪಿಯ ರಾಜ್ಯ ನಾಯಕರು ಪಟ್ಟು ಹಿಡಿದಿದ್ದಾರೆ. ಆರಂಭದಲ್ಲಿ ತಮ್ಮ ಪಕ್ಷದಿಂದ ಕಣಕ್ಕಿಳಿಸಲು ಜೆಡಿಎಸ್ ನಾಯಕರು ಒಲವು ತೋರಿದ್ದರು. ಆದರೆ ಯೋಗೇಶ್ವರ್ ಅವರು ಆಸಕ್ತಿ ತೋರಲಿಲ್ಲ. ಇದು ಜೆಡಿಎಸ್ ನಾಯಕರಿಗೆ ಮುಜುಗರ ಉಂಟು ಮಾಡಿತು.

ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ಮೈತ್ರಿ ಕೂಟದ ನಡುವೆ ಒಮ್ಮತ ಮೂಡದ ಕಾರಣ ಮಂಗಳವಾರವೂ ಪರಿಸ್ಥಿತಿ ಕಗ್ಗಂಟಾಗಿಯೇ ಉಳಿಯಿತು. ದೆಹಲಿಗೆ ತೆರಳದೇ ಬೆಂಗಳೂರಿನಲ್ಲಿಯೇ ಉಳಿದ ಜೆಡಿಎಸ್ ನಾಯಕ ಹಾಗೂ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡರ ಸಮ್ಮುಖದಲ್ಲಿ ಚನ್ನಪಟ್ಟಣ ಕ್ಷೇತ್ರದ ಪ್ರಮುಖರ ಸಭೆ ನಡೆಸಿದರು.

8ನೇ ಪುಟ ನೋಡಿ

ಸಂಡೂರಿನಿಂದ ಅನ್ನಪೂರ್ಣ ಕಣಕ್ಕೆ

ಅನ್ನಪೂರ್ಣ

ಉಪ ಚುನಾವಣೆ ನಡೆಯಲಿರುವ ಸಂಡೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಂಸದ ಇ. ತುಕಾರಾಮ್ ಅವರ ಪತ್ನಿ ಅನ್ನಪೂರ್ಣ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ನಿರ್ಧರಿಸಿದೆ. ಆದರೆ, ಚನ್ನಪಟ್ಟಣ ಮತ್ತು ಶಿಗ್ಗಾವಿ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಗೊಂದಲ ಮುಂದುವರಿಸಿದೆ.

ಅನ್ನಪೂರ್ಣ ಅವರ ಹೆಸರನ್ನು ಪ್ರಕಟಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಚನ್ನಪಟ್ಟಣದಲ್ಲಿ ಸೂಕ್ತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಚರ್ಚೆ ಆಗಿದೆ. ಒಂದೆರಡು ದಿನಗಳಲ್ಲಿ ಚನ್ನಪಟ್ಟಣ ಮತ್ತು ಶಿಗ್ಗಾವಿ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಎನ್ನುವುದು ಸ್ಪಷ್ಟವಾಗಲಿದೆ' ಎಂದಿದ್ದಾರೆ.

8ನೇ ಪುಟ ನೋಡಿ

'ಇನ್ನೂ ಎಲ್ಲಿಯವರೆಗೆ ಬಗ್ಗಲಿ'

ಕುಮಾರಸ್ವಾಮಿ

'ಮೈತ್ರಿ ಧರ್ಮ ಪಾಲನೆಗಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದೇನೆ. ಚನ್ನಪಟ್ಟಣ ಟಿಕೆಟ್ ವಿಷಯಕ್ಕೆ ನೆಲದವರೆಗೂ ಬಗ್ಗಿದ್ದೇನೆ. ಇನ್ನೂ ಬಗ್ಗಿ ಎಂದರೆ ಎಲ್ಲಿಗೆ ಬಗ್ಗಲಿ. ನನ್ನ ತಾಳ್ಮೆಗೂ ಮಿತಿ ಇದೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ರಾಜ್ಯ ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು.

ಚನ್ನಪಟ್ಟಣ ಕ್ಷೇತ್ರದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ನಾನು ಬಗ್ಗಿರುವುದು ಅಧಿಕಾರಕ್ಕಾಗಿ ಅಲ್ಲ, ಈ ದೇಶದಲ್ಲಿ ಕಾಂಗ್ರೆಸ್ ತೊಲಗಿಸಬೇಕು ಎನ್ನುವ ಪ್ರಧಾನಿ ಮೋದಿ ಅವರ ಸಂಕಲ್ಪಕ್ಕಾಗಿ. ಅವರು ದೇವೇಗೌಡರಿಗೆ ಕೊಡುವ ಗೌರವಕ್ಕಾಗಿ ಬಗ್ಗಿದ್ದೇನೆ. ಕೆಲವರ ಸ್ವಾರ್ಥಕ್ಕಾಗಿ ಗೃಹ ಸಚಿವ ಅಮಿತ್ ಶಾ, ಅಧ್ಯಕ್ಷ ಜೆ.ಪಿ. ನಡ್ಡಾ ಅವರಂತಹ ನಾಯಕರ ಜತೆ ಸಂಬಂಧ ಕಡಿದುಕೊಳ್ಳಬೇಕಾ' ಎಂದು ಪ್ರಶ್ನಿಸಿದರು.

8ನೇ ಪುಟ ನೋಡಿ

ನೆಲಕ್ಕುರುಳಿದ ಆರು ಅಂತಸ್ತಿನ ನಿರ್ಮಾಣ ಹಂತದ ಕಟ್ಟಡ

ಒಬ್ಬರ ಶವ ಪತ್ತೆ: 7 ಮಂದಿ ಕಾಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣದ ಹಂತದ ಆರು ಅಂತಸ್ತಿನ ಕಟ್ಟಡವೊಂದು ಮಂಗಳವಾರ ಮಧ್ಯಾಹ್ನ 3.40ರ ಸುಮಾರಿಗೆ ದಿಢೀರ್ ಆಗಿ ಬುಡಮೇಲಾಗಿ ನೆಲಕ್ಕುರುಳಿದ್ದು, ಕಟ್ಟಡದ ಒಳಗೆ ಸಿಲುಕಿ ಮೃತಪಟ್ಟ ಕಾರ್ಮಿಕರೊಬ್ಬರ ಮೃತದೇಹವನ್ನು ರಕ್ಷಣಾ ಸಿಬ್ಬಂದಿ ಹೊರಕ್ಕೆ ತೆಗೆದಿದ್ದಾರೆ.

ಬಿಹಾರದ ಅರ್ಮಾನ್ (26) ಮೃತಪಟ್ಟವರು. ಇನ್ನೂ ಏಳು ಕಾರ್ಮಿಕರು ಕಟ್ಟಡ ಗಳ ಅವಶೇಷಗಳ ಅಡಿ ಸಿಲುಕಿದ್ದಾರೆ. ಅವರಿಗಾಗಿ ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ.

'20 ಕಾರ್ಮಿಕರು ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು. ನೆಲ ಮಹಡಿಯಲ್ಲಿ ಮಹಿಳೆ ಸೇರಿದಂತೆ ಕೆಲವು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅವರೆಲ್ಲರೂ ನಾಪತ್ತೆ ಆಗಿದ್ದಾರೆ. ಕಟ್ಟಡದಡಿ ಸಿಲುಕಿದ್ದ 12 ಜನರನ್ನು ರಕ್ಷಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಬಿಹಾರದ ಜಿಸಾನ್, ಮಹ್ಮದ್ ಸಾಹಿಲ್, ರಶೀದ್, ಸಿತಾರೆ, ಇಲೀಫ್, ಸೋಹಿಲ್ ಹಾಗೂ ಚಿತ್ತೂರಿನ ಪ್ರದೀಪ್ ರೆಡ್ಡಿ ಅವರನ್ನು ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್ ಹಾಗೂ ಪೊಲೀಸರು ರಕ್ಷಿಸಿದ್ದಾರೆ. ಅವರೆಲ್ಲರೂ ಅಪಾಯದಿಂದ ಪಾರಾಗಿದ್ದಾರೆ.

9ನೇ ಪುಟ ನೋಡಿ

'ನಿಯಮ ಉಲ್ಲಂಘನೆ'

60 × 40 ನಿವೇಶನದಲ್ಲಿ ಐದು ಅಂತಸ್ತು ಕಟ್ಟಡ ನಿರ್ಮಿಸಲು ಮಾಲೀಕ ಅನುಮತಿ ಪಡೆದುಕೊಂಡಿದ್ದರು. ಆದರೆ, ಆರು ಅಂತಸ್ತು ಕಟ್ಟಡ ಕಟ್ಟಿ ನಿಯಮ ಉಲ್ಲಂಘಿಸಿದ್ದಾರೆ. ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಬಾಬು ಸಾ ಪಾಳ್ಯದಲ್ಲಿ ಮಂಗಳವಾರ ನಿರ್ಮಾಣ ಹಂತದ ಕಟ್ಟಡವೊಂದು ನೆಲಕ್ಕುರುಳಿದ್ದು, ಕಾರ್ಮಿಕರ ಕುಟುಂಬಸ್ಥರು ಆತಂಕದಲ್ಲೇ ಕಾರ್ಯಾಚರಣೆ ವೀಕ್ಷಿಸಿದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

48 ಲಕ್ಷ ಪಹಣಿಗಳು ಸತ್ತವರ ಹೆಸರಿನಲ್ಲಿ!

ಪ್ರಜಾವಾಣಿ ವಾರ್ತೆ

ಕೃಷ್ಣ ಬೈರೇಗೌಡ

ಮಂಡ್ಯ: 'ರಾಜ್ಯದಲ್ಲಿ 48 ಲಕ್ಷ ಪಹಣಿಗಳು ಸತ್ತವರ ಹೆಸರಿನಲ್ಲೇ ಇವೆ. ಕಂದಾಯ ದಾಖಲೆಗಳ ನಿರ್ವಹಣೆ ಅಂದ್ರೆ ಇದೇನಾ? ಪೌತಿ ಖಾತೆ ಮಾಡಲು ಅಧಿಕಾರಿಗಳು ಏಕೆ ವಿಳಂಬ ಮಾಡುತ್ತಿದ್ದೀರಿ? ಈ ಜಮೀನುಗಳಿಗೆ ವಾರಸುದಾರರು ಯಾರು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪ್ರಶ್ನಿಸಿದರು.

ಮಂಗಳವಾರ ಇಲ್ಲಿ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, 'ಸತ್ತವರನ್ನು ಜಮೀನಿನ ಮಾಲೀಕರೆಂದು ಪರಿಗಣಿಸಲು ಸಾಧ್ಯವೇ' ಎಂದು ಅವರು ಹೇಳಿದರು.

'ಜಿಲ್ಲೆಯಲ್ಲಿ 2.90 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲೇ ಇವೆ. ಕಂದಾಯ ನಿರೀಕ್ಷಕರು, ಶಿರಸ್ತೇದಾರ್, ತಹಶೀಲ್ದಾರ್ ಸ್ಥಳ ಮಹಜರು ನಡೆಸಿ, ವಂಶವೃಕ್ಷ ಆಧರಿಸಿ ಪೌತಿ ಖಾತೆ ಮಾಡಿಕೊಡಿ. ವಿವಾದವಿದ್ದರೆ ಜಂಟಿ ಖಾತೆಯನ್ನಾದರೂ ಮಾಡಿಕೊಡಿ. ಆಗ ವಾರಸುದಾರರು ಯಾರೆಂಬ ಲೆಕ್ಕ ಸಿಗುತ್ತದೆ' ಎಂದರು.

> **ಕೇಂದ್ರದಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ನಮಗೆ ಬರಬೇಕಾದ ಅನುದಾನ ಸಿಗುತ್ತಿಲ್ಲ. ಸರ್ಕಾರ ಉರುಳಿಸುವ ಮೊದಲು ಎಚ್‌.ಡಿ.ಕುಮಾರಸ್ವಾಮಿ ಅನ್ಯಾಯವನ್ನು ಸರಿಪಡಿಸಲಿ**
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710.. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890.

FCB INTERFACE/6878/OCT2024/KAN

ಐಐಎಂಬಿ ಸಂಸ್ಥಾಪನಾ ದಿನ 28ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರಿನ (ಐಐಎಂಬಿ) 51ನೇ ಸಂಸ್ಥಾಪನ ದಿನದ ಅಂಗವಾಗಿ ಅಕ್ಟೋಬರ್ 28ರಂದು 'ವಿಶೇಷ ಉಪನ್ಯಾಸ' ಕಾರ್ಯಕ್ರಮ ಐಐಎಂಬಿಯಲ್ಲಿ ನಡೆಯಲಿದೆ.

ಪ್ರಥಮ್ ಶಿಕ್ಷಣ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ರುಕ್ಮಿಣಿ ಬ್ಯಾನರ್ಜಿ ಅವರು 'ಇಂದಿನ ಭಾರತದಲ್ಲಿ ಶಿಕ್ಷಣದ ಅವಕಾಶಗಳು ಮತ್ತು ಸವಾಲುಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ. ಐಐಎಂಬಿಯ ನಿರ್ದೇಶಕ ರಿಷಿಕೇಶ್ ಟಿ. ಕೃಷ್ಣನ್ ಅವರು ಭಾಷಣ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ದಲಿತ ಸಂಘರ್ಷ ಸಮಿತಿ ಚಳವಳಿಗೆ 50 ವರ್ಷದ ಸಂಭ್ರಮಾಚರಣೆ ಮತ್ತು ಸಂವಿಧಾನದ ಸಂಪೂರ್ಣ ಅನುಷ್ಠಾನಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಆಗ್ರಹಿಸುವ ರಾಜ್ಯಮಟ್ಟದ ಕಾರ್ಯಕರ್ತರ ಸಮಾವೇಶ: ಬುದ್ಧ ವಂದನೆ: ಸುಗತ ಪಾಲ ಭಂತೇಜಿ, ಉದ್ಘಾಟನೆ: ಸತೀಶ ಜಾರಕಿಹೊಳಿ, ಅಧ್ಯಕ್ಷತೆ: ಎಂ. ಗೋವಿಂದರಾಜ್, ಅತಿಥಿಗಳು: ಶ್ರೀಧರ ಕಲಿವೀರ, ಸಿ.ಎಸ್. ದ್ವಾರಕನಾಥ್, ಕೋಟಿಗಾನಹಳ್ಳಿ ರಾಮಯ್ಯ, ವಿನಿತಾ ಬಿ., ಅರವಿಂದ್ ಬೌದ್ಧ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಉದ್ಘಾಟನೆ: ಸಿದ್ದರಾಮಯ್ಯ, ಸಾನಿಧ್ಯ: ಶಿವರುದ್ರ ಸ್ವಾಮೀಜಿ, ಜಯಬಸವ ಮೃತ್ಯುಂಜಯ ಸ್ವಾಮೀಜಿ, ಉಪಸ್ಥಿತಿ: ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆ ಹತ್ತಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕರ್ನಾಟಕದ ಹಿರಿಯ ಕಲಾವಿದರ ಕಲಾಕೃತಿಗಳ ಪ್ರದರ್ಶನ ಸಂಪುಟ-1ರ ಉದ್ಘಾಟನೆ: ಅತಿಥಿಗಳು: ಜೆ.ಎಸ್. ಖಂಡೇರಾವ್, ಎಂ.ಎಸ್. ಮೂರ್ತಿ, ಕೆ.ವಿ. ಸುಬ್ರಹ್ಮಣ್ಯ, ಬಿ.ಎಲ್. ಶಂಕರ್, ಎಸ್. ಎನ್. ಶಶಿಧರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಪದವಿ ದಿನ: ಅತಿಥಿಗಳು: ಬಿ.ಎಸ್. ರಾಗಿಣಿ ನಾರಾಯಣ್, ಸಿ.ಎಂ. ತ್ಯಾಗರಾಜ, ದೇಬದತ್ತ ಮಹಾರಾಣಾ, ದಯಾನಂದ ಪೈ, ಅವಿರಾಮ್ ಶರ್ಮ, ರವಿ ವೆಂಕಟೇಸಮ್, ಆಯೋಜನೆ: ಬಿ.ಎಂ.ಎಸ್. ಕಾಲೇಜ್ ಫಾರ್ ವುಮೆನ್, ಸ್ಥಳ: ಬಿ.ಎಂ.ಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಮಧ್ಯಾಹ್ನ 12.30

ಸುಶೀಲಾ ವಾಸುದೇವರಾವ್ ಹಳದೀಪುರ ವಾಸುದೇವರಾವ್ ದತ್ತಿ ಕಾರ್ಯಕ್ರಮ: 'ನವೋದಯ ಸಾಹಿತ್ಯ-ಒಂದು ಮರುನೋಟ' ಕುರಿತು ಉಪನ್ಯಾಸ: ಶತಾವಧಾನಿ ಆರ್. ಗಣೇಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ಪಾದುಕ ಪ್ರದಾನ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕೊಳಗಿ ಕೇಶವ ಹೆಗಡೆ, ಕಾರ್ತಿಕ್ ಧಾರೇಶ್ವರ, ಚಿನ್ಮಯ ಹೆಗಡೆ ಅಂಬಾರಗೋಡ್ಲು, ಮುಮ್ಮೇಳ: ಉಮಾಕಾಂತ ಭಟ್ ಕೆರೇಕೈ, ಉಜಿರೆ ಅಶೋಕ ಭಟ್, ಶಶಾಂಕ ಅರ್ನಾಡಿ, ಅಶ್ವಿನಿ ಆಚಾರ್ಯ, ಆಯೋಜನೆ: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಲಾಸ್ಯ ಅಕಾಡೆಮಿ ಆಫ್ ಡಾನ್ಸ್, ಅನುಗ್ರಹ ಕೇಂದ್ರ ಸಂಜಯ ನಗರ, ಸಂಜೆ 5

ಶಿವಾನಂದ ಕೋಟಗೆ 'ಕಾಳಿಂಗ ನಾವಡ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಶಿವಾನಂದ ಕೋಟ

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ನೀಡುವ 'ಕಾಳಿಂಗ ನಾವಡ ಪ್ರಶಸ್ತಿ'ಗೆ ಚಂಡೆ ವಾದಕರಾದ ಶಿವಾನಂದ ಕೋಟ ಆಯ್ಕೆಯಾಗಿದ್ದಾರೆ.

ಸಂಸ್ಥೆಯು ಪ್ರತಿ ವರ್ಷ ಯಕ್ಷಗಾನ ಸಾಧಕರೊಬ್ಬರಿಗೆ ಈ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಬೆಳ್ಳಿತಟ್ಟೆಯನ್ನು ಒಳಗೊಂಡಿದೆ.

ಇದೇ 27ರಂದು ಸಂಜೆ 4 ಗಂಟೆಗೆ ಬೆಂಗಳೂರಿನ ಗವಿಪುರದಲ್ಲಿರುವ ಉದಯಭಾನು ಕಲಾಸಂಘದ ಸಭಾ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿವಿಧ ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಬುಧವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಜಾಲಹಳ್ಳಿ: ವಿನಾಯಕ ನಗರ, ವಿಕಾಸ್ ನಗರ, ಶೋಭಾ ಅಪಾರ್ಟ್‌ಮೆಂಟ್, 8ನೇ ಮೈಲಿ ರಸ್ತೆ, ರಾಮಯ್ಯ ಲೇಔಟ್, ಹಾವನೂರು ಬಡಾವಣೆ, ನಾರಾಯಣ ಲೇಔಟ್, ವಿಡಿಯಾ ಸ್ಕೂಲ್, ಕುವೆಂಪು ನಗರ, ವಿಡಿಯಾ ಬಸ್‌ಸ್ಟಾಪ್, ರಿಲಯನ್ಸ್ ಫ್ರೆಶ್, ಮುನಿಕೊಂಡಪ್ಪ ಲೇಔಟ್, ಅಶೋಕ್‌ನಗರ, ವಿದ್ಯಾನಗರ, ಡಿಫೆನ್ಸ್ ಕಾಲೊನಿ, ಮಂಜುನಾಥ್ ನಗರ, ಮಹಾಲಕ್ಷ್ಮಿ ನಗರ, ಕಾಟರಾಯ ನಗರ, ಸೋಪ್ ಫ್ಯಾಕ್ಟರಿ ಲೇಔಟ್, ವಿಜಯಲಕ್ಷ್ಮಿ ಲೇಔಟ್, ಅಂದಾನಪ್ಪ ಲೇಔಟ್, ಬಿಟಿಎಸ್ ಲೇಔಟ್, ಸಿದ್ದೇಶ್ವರ ಲೇಔಟ್, ಸಾಸುವೆಘಟ್ಟ, ಸೋಲದೇವನಹಳ್ಳಿಯ ಭಾಗಶಃ, ತರಬನ ಹಳ್ಳಿ ಮುಖ್ಯ ರಸ್ತೆ, ಹೆಸರಘಟ್ಟ ಮುಖ್ಯ ರಸ್ತೆ, ಸಿಡೇದಹಳ್ಳಿ, ಭಾಗಶಃ ವಿಶ್ವೇಶರಯ್ಯ ಲೇಔಟ್, ರಾಯಲ್ ಎನ್‌ಕ್ಲೇವ್, ಭೈರವೇಶ್ವರ ವೃತ್ತ.

ರಾಜರಾಜೇಶ್ವರಿ ನಗರ: ಪಟ್ಟಣಗೆರೆ, ಕೃಷ್ಣ ಗಾರ್ಡನ್, ಕಾನ್‌ಕಾರ್ಡ್ ಲೇಔಟ್, ಬಿಎಚ್‌ಇಎಲ್, ಬಿಇಎಂಎಲ್ ಲೇಔಟ್, ಮೈಲಸಂದ್ರ, ಐಡಿಯಲ್ ಹೋಮ್ಸ್, ಉತ್ತರಹಳ್ಳಿ ಮುಖ್ಯರಸ್ತೆ, ಸಚ್ಚಿದಾನಂದ ನಗರ, ವಡ್ಡರಪಾಳ್ಯ, ಗಾಣಕಲ್ಲು, ಹೆಮ್ಮಿಗೆಪುರ.

ಚಾಮರಾಜಪೇಟೆ: ಅಜಾದ್ ನಗರ, ಸರ್ವೇಯರ್ ಸ್ಟ್ರೀಟ್, ಎಚ್.ಬಿ.ಸಮಾಜ, ಬುಲ್‌ಟೆಂಪಲ್ ರಸ್ತೆ, ಸಿರ್ಸಿ ರಸ್ತೆ, ಎನ್. ಟಿ.ಪೇಟೆ, ಸಜ್ಜನ್‌ರಾವ್ ಸರ್ಕಲ್, ಕಿಮ್ಸ್ ಆಸ್ಪತ್ರೆ, ಮಾರ್ಕೆಟ್ ರಸ್ತೆ, ವಿ.ವಿ.ಪುರ, ಮಿನರ್ವ ಸರ್ಕಲ್, ಕೆ.ಆರ್.ರಸ್ತೆ, ವಾಣಿವಿಲಾಸ ರಸ್ತೆ, ಹನುಮಂತನಗರ, ಕನಕಪುರ ರಸ್ತೆ, ಸೌತ್ ಎಂಡ್ ಸರ್ಕಲ್, ಬಸವನಗುಡಿ, ಶಂಕರಪುರ, ಕೆ.ಜಿ.ನಗರ, ಡಿ.ವಿ.ಜಿ. ರಸ್ತೆ, ಆರ್. ವಿ. ರಸ್ತೆ, ಜೈನ್ ಟೆಂಪಲ್ ರಸ್ತೆ, ಬಿ.ಪಿ.ವಾಡಿಯಾ ರಸ್ತೆ.

ನೆಲಮಂಗಲ: ಮಾಕಳಿ, ಅಡಕಮಾರನಹಳ್ಳಿ, ದೊಂಬರಹಳ್ಳಿ, ಹಾರೋಕ್ಯಾತನಹಳ್ಳಿ, ಹುಸ್ಕೂರು, ಗೆಜ್ಜಗದಹಳ್ಳಿ, ವಡೇರಹಳ್ಳಿ, ಎಪಿಎಂಸಿ, ನಗರೂರು.

ತೋಟದಗುಡ್ಡದಹಳ್ಳಿ, ನರಸಪ್ಪ ವೃತ್ತ, ಭೈರವೇಶ್ವರ ವೃತ್ತ, ಸಪ್ತಗಿರಿ ಬಾರ್ ರಸ್ತೆ, ಅಂಚೆಪಾಳ್ಯ, ಶ್ರೀಕಂಠಪುರ, ಚಿಕ್ಕಬಿದರಕಲ್ಲು, ಕೈಗಾರಿಕಾ ಪ್ರದೇಶ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/11/2024–25 ದಿನಾಂಕ: 22–10–2024

ಟೆಂಡರ್ ಪ್ರಕಟಣೆ

(Through GOK e-Procurement Portal www.kppp.karnataka.gov.in only)

2024–25ನೇ ಸಾಲಿನ ನಗರಸಭಾ ನಿಧಿ ಅನುದಾನ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಅನುಭವವುಳ್ಳ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಇಂಡೆಂಟ್	ಇ,ಎಂ.ಡಿ	ವರ್ಗ
1	DMA/2024-25/WS/WORK_INDENT30508 (Call-2)	50000/-	Others
2	DMA/2024-25/EL/WORK_INDENT31336	47500/-	Others
3	DMA/2024-25/WS/WORK_INDENT31335	40000/-	Others

ಟೆಂಡರ್ ಸಲ್ಲಿಸುವ ವಿವರಗಳು:– (1) ಕೆ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **07.11.2024 ಸಂಜೆ 5.00 ಗಂಟೆಯವರೆಗೆ.** (2) ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **08.11.2024 ಸಂಜೆ 5.30 ಗಂಟೆಗೆ.** (3) ಸಲ್ಲಿಸಿರುವ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ: **11.11.2024 ಬೆಳಗ್ಗೆ 11.00 ಗಂಟೆಗೆ.**

ಸಹಿ/–
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/2695/ಸ್ಪ್ಯಾನ್/2024–25

Office of The Chief Engineer M.P.P.W.D Bridge Construction Zone Bhopal (M.P.)

TENDER NOTICE

NIT No-15/C.E.(Bridge Zone) /2024-25 Date 16.10.2024

Online Tender for mentioned below are being invited. The Tender have been uploaded on the mptenders. system of Public Works Department on the Portal www.mptenders.gov.in Tender details are as below:-

Sl. No.	Tender No.	District	Nature of work	Name of work	Call No.	Cost of Project (PAC) (Rs. In lack)	(EMD Fee/Tender Fee) All Tender Document & Other Document Submission
1	2	3	4	5	6	7	8
1	2024_PWDRB _376943_1	Ratlam	Bridge Work	Construction of Four Lane Railway Over Bridge at LC no 190 Between Dhonswas Nityand Railway Station (Ratlam Chandiriya Rail Section) of Western Railway at Sejawta Banjali By Pass Road Including Electric Pole Shifitng. District Ratlam	Second	3430.24	Online Only
2	2024_PWDRB _376944_1	Ratlam	Bridge Work	Construction of Railway Over Bridge at LC No 79 on Morwani Ratlam Station at Location of 647/1-3 GDA- Ratlam of Western Railway Including Electrical Pole Shifting District Ratlam	Third	2166.48	Online Only
				Total		5596.72	

The document can only be purchased online from the above website after making online payment. The last date & time for purchase of Document on line is Dated 06/11/2024 up to (17:30) Detailed NIT and other details can be viewed on the above mentioned portal. Amendments to NIT, if any, would be published on website only, and not in newspaper.

Chief Engineer
PWD Bridge Construction Zone, Bhopal

G-17931/24

ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ

ಕೆ.ಜಿ.ರಸ್ತೆ, ಅಂಬೇಡ್ಕರ್ ವೀಧಿ, ಬೆಂಗಳೂರು–560009

ಸಾರ್ವಜನಿಕ ಪ್ರಕಟಣೆ

ಉಪಲೋಕಾಯುಕ್ತರಿಂದ ಸಾರ್ವಜನಿಕರ ಕುಂದು ಕೊರತೆ ಅಹವಾಲು ಸ್ವೀಕಾರ ಸಭೆ

ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯ ವತಿಯಿಂದ ಕರ್ನಾಟಕ ಉಪಲೋಕಾಯುಕ್ತರಾದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ ರವರು, ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಮತ್ತು ಬೆಂಗಳೂರು ಪೂರ್ವ ತಾಲ್ಲೂಕುಗಳಿಗೆ ಸಂಬಂಧಿಸಿದ ಸಾರ್ವಜನಿಕರ ಅಹವಾಲು, ಕುಂದು ಕೊರತೆ, ದೂರು ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಂಬಂಧ ದಿನಾಂಕ 24.10.2024 ಮತ್ತು 25.10.2024 ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಗೆ ಮತ್ತು ಅಪರಾಹ್ನ 2.30 ರಿಂದ ಸಂಜೆ 5.00 ಗಂಟೆಯ ವರೆಗೆ ಯಲಹಂಕ ಉಪನಗರದ ಎನ್.ಇ.ಎಸ್ ಆಫೀಸ್ ಬಸ್ ನಿಲ್ದಾಣ ಹತ್ತಿರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸಹಿ/– ಜಿಲ್ಲಾಧಿಕಾರಿ,
ಬೆಂಗಳೂರು ನಗರ ಜಿಲ್ಲೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

SRI LAL BAHADUR SHASTRY MEMORIAL HIGH SCHOOL
No.19/01, 1st Cross, Cholurpalya, Magadi Road Post, Bengaluru-560023.
WANTED
SCIENCE TEACHER (PCMB)
TO Teach Sixth to Tenth Standard.
Contact immediately between 09-00 a.m. 04-00 p.m.
Sd/- Secretary
Mobile Number : 9449976761

SIDDAGANGA SREE SHIVAKUMARA SWAMIJI VIDYAPEETHA TRUST #1.1st Stage,2nd Phase. Chandra Layout. Bengaluru-560072. 080-23397600, invites application for Siddaganga Public School, Chandra Layout & Vijayangara: Kannada Teacher-BA/M.A. B.Ed. English Teacher BA/MA, B.Ed. Sanskrit Teacher-BA/MA.B.Ed Receptionist-Any degree with computer knowledge Office Assistant-B.Com with Tally ERP 9, Kannada Typing with Computer knowledge Maintenance Asst.-ITI Candidates can`also apply. Diploma in Automobile or Mechanical Engineering preferred. SSK PU & Degree College: Physical Instructor- M.P.Ed. Computer Lab Assistant- Diploma in Computer Science Interview date will be intimated. Interested candidates may send their resume, service & salary certificates & Testimonials to the Mail:sskvptrust.2001@gmail.com/ personally submit the above details to Trust office on or before 4/11/2024 between 9am`to`4pm.

WANTED TEACHERS for KANNADA, SOCIAL SCIENCE, Walk-in ABDUL BARI'S HIGH SCHOOL Near Coles Park 9353111888

Drivers

WANTED DRIVER for a company in Rajarajeshwarinagar. Min 5 years exp. Attractive Package: 73378-44260

Engg/ Production Technical

WTP (RO, UF, DM), STP, ETP, Required for Bangalore Location. 2-5 years experience Operators: Diploma, ITI, PUC (Experience) Helpers: SSLC/ PUC/ or Experience. Contact:9611788677.

Hotel

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

Multiple Vacancy

JOB REQUIREMENT (Full time) Delivery Executives (Biker) Night Shift: Operation Executives Data Entry operator Helper's Part time Job Location Near Jakkur Aero Drum Contact: 8147394231/ 8296514619

Part-Time Jobs

BEST JOB Opportunity Looking for Retired, VRS, Homemakers, Age Minimum 40 Years Income 50K Monthly: 9886641282/ 6362220162

Wanted

WANTED
Qualified OT Technician.
Freshers can also apply
VITTALA INTERNATIONAL INSTITUTE OF OPHTHALMOLOGY
Contact: 080-26722214 / 15 / 19, 9035052325
Email: info@viio.org, prabhushankar@viio.org

Security & Detectives

WANTED EXPERIENCED SECURITY OFFICER for Larger Apartment Complex near Thanisandra & Electronic City (For Schools) Field Officer in Electronic City. CONTACT: 9880732605 9880732606

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

REAL ESTATE SELLING

Sites

Ejipura

FOR SALE at EJIPURA Circle (Bus stop) Measuring 33x33 (1089 sqft) near Srirama Temple. Contact: 9916804551, 9341080970

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

BUSINESS

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

PUBLIC NOTICE

PUBLIC NOTICE
My client Smt. Anusha M S R W/o Adarsh Ramappa , Aged about 37 years residing at No. 1359, 22nd Cross, 14th Main, A-Block, Sahakar Nagar, Bangalore – 560092, has lost original Allotment letter, Khatha endorsement and possession certificate on 16/10/2024 in respect of Flat No.301-L, B7 Suryanagar colony Housing Board, Suryanagar 1st Phase, Bangalore -560 099. General public are requested to return the original documents in case if the same found any where to my office.
Sd/- DILIP KUMAR I S
Advocate. No.3/2, 3RD Floor, Thimmaiah Towers, 1st Cross, Gandhinagar, Bangalore-560 009. 9945328138 dileep.advocate@gmail.com

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
*Conditions apply
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact: 9901641752 9845114560 9900428036 9731810277

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029, ದೂ: 080–41106532 e-mail: caokwb@gmail.com

No. KWB/CAO/AAO-1/AS-1/F No 20/366/2024-25 Dt: 19.10.2024

ತಿದ್ದುಪಡಿ

ವಿಷಯ: ಚಾರ್ಟರ್ಡ್ ಅಕೌಂಟೆಂಟ್‌ಗಳ ನಿಯೋಜನೆ ಕೆಲಸಕ್ಕಾಗಿ – ಕರ್ನಾಟಕ ಲೆಕ್ಕ ಪರಿಶೋಧಕರ ಸಂಸ್ಥೆಯಲ್ಲಿ ನೋಂದಾಯಿತರಾದ ಪ್ರತಿಷ್ಠಿತ ಲೆಕ್ಕ ಪರಿಶೋಧಕರಿಂದ ಮೂರು ವರ್ಷಗಳ ಅವಧಿಗಾಗಿ (2024–25 ರಿಂದ) ಟ್ಯಾಲಿ ಸಾಫ್ಟ್‌ವೇರ್ ಮೂಲಕ ಲೆಕ್ಕ ಪತ್ರಗಳ ನಿರ್ವಹಣೆಗಾಗಿ ಸೇವೆ ಒದಗಿಸುವುದು ಮತ್ತು ಇತರೆ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲು ಆಹ್ವಾನಿಸಿದ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿಚಾರಣೆಗಾಗಿ ನೀಡಿರುವ ಸ್ಪಷ್ಟೀಕರಣ.

ಉಲ್ಲೇಖ: ಟೆಂಡರ್ ಸಂಖ್ಯೆ. KUWSDB/2024-25/SE0044

ಕ್ಲಾಸ್ 2.2 ಸೆಕ್ಷನ್ 2 ರ ಅನುಸಾರ "ಇನ್‌ಫರ್ಮೇಶನ್ ಟು ಕಂಸಲ್ಟೆಂಟ್ಸ್" ಮೇಲಿನ ಟೆಂಡರ್‌ನ ಪರಿಷ್ಕೃತ ವೇಳಾ ಪಟ್ಟಿಯು ಈ ಕೆಳಕಂಡಂತಿದೆ:

ಬದಲಾದ ವೇಳಾ ಪಟ್ಟಿ	
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು/ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಸಮಯ	28.10.2024 ರಂದು 17:30 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ	30.10.2024 ರಂದು 11:00 ಗಂಟೆಯ ನಂತರ.

ಉಳಿದ ಷರತ್ತು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಮುಖ್ಯ ಲೆಕ್ಕಾಧಿಕಾರಿ
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/2688/ಆಕಾರ್/2024–25

ರಾಷ್ಟ್ರೀಯ ಗ್ರಾಹಕ ವಿವಾದಗಳ ಪರಿಹಾರ ಆಯೋಗ

ಗ್ರಾಹಕ ಸಂರಕ್ಷಣಾ ಕಾಯಿದೆ, 2019 ರ ಅಡಿಯಲ್ಲಿ
ಗ್ರಾಹಕರ ಪ್ರಕರಣ ಸಂಖ್ಯೆ 1613/2017
IA/14390/2024 & IA/14391/2024 ಜೊತೆಗೆ

KV ಹಾಲಪ್ಪ ಮತ್ತು ಅಜಿತ್ ಕುಮಾರ್
ಮತ್ತು 94 ಇತರರು — ಅರ್ಜಿದಾರರು/ಅಪೀಲುದಾರರು
ವಿರುದ್ಧ
ಡ್ರೀಮ್ಜ್ ಇನ್ಫ್ರಾ ಇಂಡಿಯಾ ಪ್ರೈ. ಲಿ. & ANR. — ವಿರೋಧ ಪಕ್ಷಗಳು

ಎದುರು ಪಕ್ಷದ ಹೆಸರು

1. **ಡ್ರೀಮ್ಜ್ ಇನ್ಫ್ರಾ ಇಂಡಿಯಾ ಪ್ರೈ. ಲಿಮಿಟೆಡ್.**
ಮೂಲಕ: ದಿಶಾ ಚೌಧರಿ, ವ್ಯವಸ್ಥಾಪಕ ನಿರ್ದೇಶಕಿ
ನೋಂದಾಯಿತ ವಿಳಾಸ: ನಂ. 577/ಬಿ, 2 ನೇ ಮಹಡಿ, ಹೊರ ವರ್ತುಲ ರಸ್ತೆ, ಶಿಕ್ಷಕರ ಕಾಲೋನಿ, ಕೋರಮಂಗಲ, ಸಿಲ್ಕ್ ರೋಡ್ ಹತ್ತಿರ, ಬೆಂಗಳೂರು - 560034
2. **ಶ್ರೀಮತಿ ಪದ್ಮಾವತಿ ರುದ್ರರಾಜು**
W/o ಪಾಂಡುರಂಗ ರಾಜು ರುದ್ರರಾಜು
ನಿವಾಸಿ: ಗಣಪವರಂ, ಪಶ್ಚಿಮ ಗೋದಾವರಿ ಜಿಲ್ಲೆ-534198
3. **ಶ್ರೀಮತಿ. ದಿಶಾ ಚೌಧರಿ**
D/o ವಸಂತ್ ಚೌಧರಿ ಆಫ್ ನಿರ್ದೇಶಕರು ಮತ್ತು ಅಧಿಕೃತ ಸಹಿದಾರರು ಡ್ರೀಮ್ಜ್ ಇನ್ಫ್ರಾ ಇಂಡಿಯಾ ಪ್ರೈ. ಲಿಮಿಟೆಡ್. R/o ಮನೆ ಸಂಖ್ಯೆ.38, 1ನೇ ಮಹಡಿ, ವೈಶಾಖ ಕಾವೇರಿ ಲೇಔಟ್, ಮರಿಯಣ್ಣ HA ಫಾರ್ಮ್ ಪೋಸ್ಟ್ ಬೆಂಗಳೂರು- 460024

3A. **ಶ್ರೀಮತಿ. ದಿಶಾ ಚೌಧರಿ**
D/o ವಸಂತ್ ಚೌಧರಿ, ನಿರ್ದೇಶಕರು ಮತ್ತು ಅಧಿಕೃತ ಸಹಿದಾರರು ಡ್ರೀಮ್ಜ್ ಇನ್ಫ್ರಾ ಇಂಡಿಯಾ ಪ್ರೈ. ಲಿಮಿಟೆಡ್. ನೋಂದಾಯಿತ ಕಛೇರಿ: ನಂ. 577/B, 2ನೇ ಮಹಡಿ, ಔಟರ್ ರಿಂಗ್ ರೋಡ್, ಟೀಚರ್ಸ್ ಕಾಲೋನಿ, ಕೋರಮಂಗಲ, ಸಿಲ್ಕ್ ರೋಡ್ ಹತ್ತಿರ, ಬೆಂಗಳೂರು - 560034

3B. **ಶ್ರೀಮತಿ. ದಿಶಾ ಚೌಧರಿ**
D/o ವಸಂತ್ ಚೌಧರಿ, ನಿರ್ದೇಶಕರು ಮತ್ತು ಅಧಿಕೃತ ಸಹಿದಾರರು ಡ್ರೀಮ್ಜ್ ಇನ್ಫ್ರಾ ಇಂಡಿಯಾ ಪ್ರೈ. ಲಿಮಿಟೆಡ್., ನಂ.2/ಸಿ, 74, 7ನೇ ಕಟ್ಟಡ, ವಿಂಡರ್‌ಮೇರ್ ಓಶಿವರ್ ಅಂಧೇರಿ ಪಶ್ಚಿಮ, ಮುಂಬೈ- 400053.

ಸೂಚನೆ

(ಸೂಚನೆಯ ಪ್ರಕಟಣೆಯ ಮೂಲಕ ಸೇವೆ)

1. ಮೇಲ್ಕಂಡ ಗ್ರಾಹಕ ದೂರನ್ನು, ದೂರುದಾರರು ಕೆ.ವಿ. ಹಾಲಪ್ಪ ಮತ್ತು ಅಜಿತ್ ಕುಮಾರ್ ಹಾಗು ಇತರರು, ಫ್ಲಾಟ್ ಸಂಖ್ಯೆ. 4b, ಡೇವೂ ಅರಮನೆ, 8, 3ನೇ ಕ್ರಾಸ್, ಅಮರಜ್ಯೋತಿಲೇಔಟ್, ಸಂಜಯನಗರ, ಬೆಂಗಳೂರು-5600094., ಇವರು ಶ್ರೀ ಚಂದ್ರಚೂರು ಭಟ್ಟಾಚಾರ್ಯ, ವಕೀಲರು, H-1559, ಚಿತ್ತರಂಜನ್ ಪಾರ್ಕ್, ನವದೆಹಲಿ-110019, ಇವರ ಮೂಲಕ ಗೌರವಾನ್ವಿತ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ನವದೆಹಲಿ ಇಲ್ಲಿ ಗ್ರಾಹಕರ ಪರವಾಗಿ ಮತ್ತು/ಅಥವಾ ಫ್ಲಾಟ್ ಅನ್ನು ಬುಕ್ ಮಾಡಿದ ಅಥವಾ ಹಂಚಿಕೆ ಮಾಡಿದ ಎಲ್ಲಾ ಗ್ರಾಹಕರ ಅನುಕೂಲಕ್ಕಾಗಿ "ಡ್ರೀಮ್ಜ್ ಸುಮಧುರ್" ಎಂಬ ಯೋಜನೆಯನ್ನು ಸಿಂಗಾಪುರ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು., ತಮ್ಮ ಸಾಮಾನ್ಯ ಕುಂದುಕೊರತೆಗಳ ಪರಿಹಾರಕ್ಕಾಗಿ ಮೇಲೆ ಹೆಸರಿಸಲಾದ ವಿರೋಧ ಪಕ್ಷದಿಂದ ಅಭಿವೃದ್ಧಿಪಡಿಸಲಾಗುತ್ತಿದೆ.
2. ಗ್ರಾಹಕರ ದೂರುಗಳು ಅನ್ಯಾಯದ ವ್ಯಾಪಾರದ ಅಭ್ಯಾಸಗಳು ಮತ್ತು ಪಕ್ಷಗಳ ನಡುವೆ ಪ್ರವೇಶಿಸಿದ ಮಾರಾಟದ ಒಪ್ಪಂದದ ಪ್ರಕಾರ ಕಾರ್ಯ ನಿರ್ವಹಿಸಲು/ಮಾಡಲು ವಿರೋಧಿ ಪಕ್ಷಗಳ ನಿರ್ಲಕ್ಷ್ಯದ ಕ್ರಿಯೆಗಳೊಂದಿಗೆ ಸೇರಿಕೊಂಡು ಸೇವೆಗಳಲ್ಲಿನ ಕೊರತೆಯ ಆರೋಪಗಳಿಗೆ ಸಂಬಂಧಿಸಿದೆ.
3. ಗೌರವಾನ್ವಿತ ರಾಷ್ಟ್ರೀಯ ಆಯೋಗವು ತನ್ನ ದಿನಾಂಕ 03.10.2024 ರ ಆದೇಶವನ್ನು ಪರಿಶೀಲಿಸಿ, ಪ್ರಕರಣವನ್ನು 12.11.2024 ರಂದು ಹೆಚ್ಚಿನ ವಿಚಾರಣೆಗೆ ಪೋಸ್ಟ್ ಮಾಡಲಾಗಿದೆ ಮತ್ತು 2024 ರ IA ನಂ. 14390 ರಲ್ಲಿ ಎದುರಾಳಿ ಪಕ್ಷಗಳಿಗೆ ನೋಟಿಸ್ ನೀಡಲು ನಿರ್ದೇಶಿಸಿದೆ. (ಒಪಿ ನಂ. 1 ಕಂಪನಿ - ಡ್ರೀಮ್ಜ್ ಇನ್‌ಫ್ರಾ ಇಂಡಿಯಾ ಪ್ರೈ. ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಕೂಡ ಆಗಿರುವ ದಿಶಾ ಚೌಧರಿ ಅವರ ವಿರುದ್ಧ ಕ್ರಮ ಕೈಗೊಳ್ಳಲು) ಮತ್ತು 2024 ರ IA ನಂ. 14391 (ಜಾನ್ಸನ್ ಸಿ. ಜೆ., ಶ್ರೀ ಸಿ.ಸಿ. ಜಾನ್ ಅವರ ಪುತ್ರ ಮತ್ತು ಆಶಾ ಜೋಶುವಾ, ಶ್ರೀ. ಜಾನ್ ಚೆರಿಯನ್ ಅವರ ಪುತ್ರಿ ಇಬ್ಬರು ದೂರುದಾರರ ವಿರುದ್ಧ ಕ್ರಮ ಕೈಗೊಳ್ಳಲು) ಇದನ್ನು ವಿರೋಧ ಪಕ್ಷಗಳ ಪ್ರದೇಶದಲ್ಲಿ ಪ್ರಸಾರವಾಗುವ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು ಇಂಗ್ಲಿಷಿಗೆ ಡೆಕ್ಕನ್ ಹೆರಾಲ್ಡ್ ಮತ್ತು ಕನ್ನಡಕ್ಕಾಗಿ ಪ್ರಜಾವಾಣಿ.
4. ಅಂತೆಯೇ, ಮೇಲೆ ತಿಳಿಸಲಾದ ವಿರೋಧ ಪಕ್ಷದವರಿಗೆ ಮೇಲೆ ತಿಳಿಸಲಾದ ಗ್ರಾಹಕ ದೂರಿನ ಅನ್ವಯ 12.11.2024 ರಂದು 10:30 ಘಂಟೆಗೆ ವೈಯಕ್ತಿಕವಾಗಿ ಅಥವಾ ಅಧಿಕೃತ ಪ್ರತಿನಿಧಿ / ವಕೀಲರ ಮೂಲಕ ವಿಚಾರಣೆಗೆ ಹಾಜರಾಗಲು ಈ ಮೂಲಕ ನಿರ್ದೇಶಿಸಲಾಗಿದೆ. ವಿಫಲವಾದರೆ, ಈ ಪ್ರಕರಣವನ್ನು ಗೌರವಾನ್ವಿತ ರಾಷ್ಟ್ರೀಯ ಆಯೋಗವು ವಿಚಾರಣೆ ನಡೆಸುತ್ತದೆ ಮತ್ತು ನಿರ್ಣಯಿಸುತ್ತದೆ.

ದಿನಾಂಕ : 17ನೇ ಅಕ್ಟೋಬರ್, 2024
ನವದೆಹಲಿ

(ರಾಜೇಶ್ ನಾಥ್)
ಸಹಾಯಕ ರಿಜಿಸ್ಟ್ರಾರ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ. ಬೆಂಅಪ್ರಾ/ಕಾಅ/ವಯೋವಿ-1/ಟೆಂಡರ್/ಟಿ-180/2024-25 ದಿನಾಂಕ: 22.10.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆಳಕಂಡ ಕಾಮಗಾರಿಗೆ ಅರ್ಹ ಬಿಡ್ಡುದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ:

ಕಾಮಗಾರಿಯ ಹೆಸರು: **ಬೆಂಗಳೂರು, ಕೋನದಾಸಪುರ, ಫೇಸ್-3ರ ಸರ್ವೆ ನಂ.19ರ ಭಾಗ ಮತ್ತು 20ರ ಭಾಗದಲ್ಲಿ ವಾಣಿಜ್ಯ ಕಟ್ಟಡದ ನಿರ್ಮಾಣ ಉದ್ದೇಶಕ್ಕಾಗಿ.**

ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ.4061.00ಲಕ್ಷಗಳು.** ಇಎಂಡಿ: **ರೂ.40.61 ಲಕ್ಷಗಳು.** ಟೆಂಡರ್ ಪ್ರಕ್ರಿಯೆ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡಿ. ಪೂರ್ಣಗೊಳಿಸಲು ಕಾಲಾವಧಿ: **ಮಳೆಗಾಲ ಸೇರಿ 18 ತಿಂಗಳು.** ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ **28.10.2024ರ** ನಂತರ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು. ಯಾವುದೇ ವಿಚಾರಣೆಗೆ, ದಯವಿಟ್ಟು ಸಂಪರ್ಕಿಸಿ: ಕಾರ್ಯಪಾಲಕ ಅಭಿಯಂತರರು, ವಸತಿ ಯೋಜನೆ ವಿಭಾಗ-1 ಮತ್ತು ಮೊಬೈಲ್:8861083656

ಸಹಿ/- ಕಾರ್ಯಪಾಲಕ ಅಭಿಯಂತರರು,
ವಸತಿ ಯೋಜನೆ ವಿಭಾಗ-1, ಬೆಂಅಪ್ರಾ, ಬೆಂಗಳೂರು

ಭಾರತ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಪ್ರಕಟಣೆ

ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ (ಎನ್‌ಸಿಪಿಸಿಆರ್), ನವದೆಹಲಿ ಇವರಲ್ಲಿ ಪ್ರಸ್ತುತ ಖಾಲಿ ಇರುವ ಕೆಳಕಂಡ ಕ್ಷೇತ್ರದಲ್ಲಿನ ನಾಲ್ಕು ಸದಸ್ಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ:

1) ಮಕ್ಕಳ ಶಿಕ್ಷಣ
2) ನಿರ್ಲಕ್ಷಿತ ಅಥವಾ ಸೌಲಭ್ಯವಂಚಿತ ಮಕ್ಕಳ / ಅಂಗವಿಕಲ ಮಕ್ಕಳ ಬಾಲ ನ್ಯಾಯ/ಆರೈಕೆ
3) ಬಾಲ ಕಾರ್ಮಿಕ ಅಥವಾ ಮಕ್ಕಳ ಸಂಕಷ್ಟ ನಿರ್ಮೂಲನೆ
4) ಮಕ್ಕಳ ಮನಶಾಸ್ತ್ರ ಅಥವಾ ಸಮಾಜಶಾಸ್ತ್ರ

ಅರ್ಹತಾ ಮಾನದಂಡ, ಪ್ರಾಯ, ವೇತನ ಮತ್ತು ಇನ್ನಿತರ ಭತ್ಯೆ ಮುಂತಾದವು ಹಾಗೂ ಇನ್ನಿತರ ವಿವರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ **https://wcd.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು. ಸದರಿ ಸದಸ್ಯ ಹುದ್ದೆಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಮತ್ತು ಸದರಿ ಹುದ್ದೆಗೆ ನೇಮಕಗೊಳ್ಳುವ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ವ್ಯಕ್ತಿಗಳು, ಈ ಜಾಹೀರಾತು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ದಿನಾಂಕದಿಂದ 28 ದಿನಗಳೊಳಗೆ **ncpcrvacancies.wcd.gov.in** ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಕೇಂದ್ರ/ರಾಜ್ಯ ಸರ್ಕಾರ ಅಥವಾ ಇನ್ನಿತರ ಯಾವುದೇ ಕೇಂದ್ರ/ರಾಜ್ಯ ಸರ್ಕಾರ ಅನುದಾನಿತ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು, ಕಡ್ಡಾಯವಾಗಿ ಸೂಕ್ತ ವಿಧಾನದ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

(ಟಿ. ಸೊಂಗ್ಜಾಲಿಯಾನ್)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

CBC 46101/11/0007/2425

ಭಾರತ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಪ್ರಕಟಣೆ

ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ (ಎನ್‌ಸಿಪಿಸಿಆರ್), ನವದೆಹಲಿ ಇವರಲ್ಲಿನ ಚೇರ್‌ಪರ್ಸನ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತಾ ಮಾನದಂಡ, ಪ್ರಾಯ, ವೇತನ ಮತ್ತು ಭತ್ಯೆ ಇತ್ಯಾದಿ ಹಾಗೂ ಇನ್ನಿತರ ವಿವರಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ **https://wcd.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು. ಸದರಿ ಚೇರ್‌ಪರ್ಸನ್ ಹುದ್ದೆಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಮತ್ತು ಸದರಿ ಹುದ್ದೆಗೆ ನೇಮಕಗೊಳ್ಳುವ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ವ್ಯಕ್ತಿಗಳು, ಈ ಜಾಹೀರಾತು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ದಿನಾಂಕದಿಂದ 28 ದಿನಗಳೊಳಗೆ **ncpcrvacancies.wcd.gov.in** ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಕೇಂದ್ರ/ರಾಜ್ಯ ಸರ್ಕಾರ ಅಥವಾ ಇನ್ನಿತರ ಯಾವುದೇ ಕೇಂದ್ರ / ರಾಜ್ಯ ಸರ್ಕಾರ ಅನುದಾನಿತ ಸಂಸ್ಥೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು, ಕಡ್ಡಾಯವಾಗಿ ಸೂಕ್ತ ವಿಧಾನದ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

(ಟಿ. ಸೊಂಗ್ಜಾಲಿಯಾನ್)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

CBC 46101/11/0005/2425

Reliance
Growth is Life
ಹಬ್ಬದ ತಯಾರಿ ಮಾಡಲು,
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
SMART BAZAAR
ದೀಪಾವಳಿ ರೆಡಿ ಸೇಲ್
ದೀಪಾವಳಿ ಎಲ್‌ಇಡಿ ಲೈಟ್ಸ್ / ದಿಯಾ ಮತ್ತು ಡೆಕೊರೇಶನ್ ರೇಂಜ್
ಸ್ಟಾರ್ಟ್ ಬೆಲೆ ₹49 ರಿಂದ
ಬ್ರ್ಯಾಂಡೆಡ್ ಕಾಟನ್ ಬೆಡ್‌ಶೀಟ್
BUY 1 GET 2 FREE
ಎಮ್‌ಆರ್‌ಪಿ ₹1199 ರಿಂದ
ನಿಮ್ಮ ಪ್ರೀತಿಪಾತ್ರರಿಗೆ ವಿಶೇಷ ಉಡುಗೊರೆಗಳು
ಡ್ರೈ ಫ್ರೂಟ್ ಗಿಫ್ಟ್ ಪ್ಯಾಕ್ ಅಸ್ಸೋರ್ಟೆಡ್ 225 g ರಿಂದ (ಆಯ್ದ ಪ್ರಕಾರಗಳು)
BUY 1 GET 1 FREE
ಎಮ್‌ಆರ್‌ಪಿ ₹449 ರಿಂದ
ಲಾಲ್ / ಜಿಆರ್ ಬಿ ಬಗೆಬಗೆಯ ಸಿಹಿತಿಂಡಿಗಳು (4 Line) / ಕಾಜು ಕಟ್ಲಿ 200 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಎಮ್‌ಆರ್‌ಪಿ ₹325
ಬಿಕಾಜಿ / ಜಿಆರ್ ಬಿ / ಲಾಲ್ / ಸ್ನಾಕ್ಸ್ (ಪೇಡಾ / ಗುಲಾಬ್ ಜಾಮೂನ್ / ರಸಗುಲ್ಲಾ / ಲಾಡೂ / ಸೋನ್ ಪಾಪ್ಡಿ) 200 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಎಮ್‌ಆರ್‌ಪಿ ₹130 ರಿಂದ
ಲಾಲ್ ಫೆಸ್ಟಿವ್ / ಸ್ನಾಕ್ಸ್ ಸೆಲೆಬ್ರೇಷನ್ಸ್ / ಬಿಕಾಜಿ ಅನೋಖಿ ರಿಶ್ತೆ ನಮ್ಕೀನ್ ಗಿಫ್ಟ್ ಪ್ಯಾಕ್ಸ್ 400 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಎಮ್‌ಆರ್‌ಪಿ ₹269 ರಿಂದ
ಕ್ಯಾಡ್ಬರಿ ಸೆಲೆಬ್ರೇಷನ್ಸ್ ಶ್ರೇಣಿ 144.1 g ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 25% ಕಡಿತ
ಸ್ಟಾರ್ಟ್ ಬೆಲೆ ₹109 ರಿಂದ
ಹಬ್ಬದ ತಿಂಡಿತಿನಿಸುಗಳನ್ನು ತಯಾರಿಸಿ
ಗುಡ್ ಲೈಫ್ ಬಾದಾಮ್ / ಕ್ಯಾಶು (W320) 500 g
ಸ್ಟಾರ್ಟ್ ಬೆಲೆ ₹359 / ₹479
ಉಳಿತಾಯ ₹261 / ₹246
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ಸ್ಟಾರ್ಟ್ ಬೆಲೆ ₹219
ಉಳಿತಾಯ ₹81
₹43.80 /kg
ಗುಡ್ ಲೈಫ್ ರಿಫೈನ್ಡ್ / ಫಿಯೋನಾ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 1 L
ಸ್ಟಾರ್ಟ್ ಬೆಲೆ ₹127 / ₹129
ಉಳಿತಾಯ ₹23 / ₹19
₹40 ಕಡಿತ
ಎಮ್‌ಆರ್‌ಪಿ ₹583
ನಂದಿನಿ ಶುದ್ಧ ತುಪ್ಪ 1 L
ಸ್ಟಾರ್ಟ್ ಬೆಲೆ ₹585
ಉಳಿತಾಯ ₹45
ಚಕ್ಕಿ 5 kg / ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ಸ್ಟಾರ್ಟ್ ಬೆಲೆ ₹199
ಉಳಿತಾಯ ₹71
ಗುಡ್ ಲೈಫ್ ಡೈಲಿ ರೈಸ್ 26 kg / ಗುಡ್ ಲೈಫ್ ವಡ ಕೊಲಮ್ ರೈಸ್ 30 kg
ಸ್ಟಾರ್ಟ್ ಬೆಲೆ ₹1339 / ₹2039
ಉಳಿತಾಯ ₹611 / ₹761
₹67.96 /kg
₹51.50 /kg
ಸ್ಪ್ರೈಟ್ / ಥಮ್ಸ್ ಅಪ್ / ಕೋಕ ಕೋಲಾ / ಮಾಜಾ 600 ml ರಿಂದ (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಎಮ್‌ಆರ್‌ಪಿ ₹42 ರಿಂದ / ಯುನಿಟ್
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 275 g ರಿಂದ / ಲೋಟ್ಟೆ ಚಾಕೋ ಪೈ 336 g (12 Pcs) (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹120 ರಿಂದ / ಯುನಿಟ್
cello LARAH
18 / 22 Pcs ಓಪಲ್‌ವೇರ್ ಡಿನ್ನರ್ ಸೆಟ್
ಸ್ಟಾರ್ಟ್ ಬೆಲೆ ₹999 ರಿಂದ
kamiliant WILDCRAFT
ಕ್ಯಾಬಿನ್ ಟ್ರಾಲಿ ಜೊತೆಗೆ ಗಿಫ್ಟ್ ಬಾಕ್ಸ್
ಸ್ಟಾರ್ಟ್ ಬೆಲೆ ₹1499 ರಿಂದ
ನಿಮ್ಮ ಶೈಲಿಯಲ್ಲಿ ಆಚರಿಸಿ
ಫ್ಯಾಷನ್ ₹199* ಕ್ಕೆ
ಎಂಗೇಜ್ / ವೈಲ್ಡ್ ಸ್ಟೋನ್ / ಫಾಗ್ ಪರ್ಫ್ಯೂಮ್ ಗಿಫ್ಟ್ ಪ್ಯಾಕ್ 80 ml ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಸ್ಟಾರ್ಟ್ ಬೆಲೆ ₹325 ರಿಂದ
SMART Price ₹29999 MRP ₹72000
SMART Price ₹13499 MRP ₹35000
SMART Price ₹7499 MRP ₹20000
ಆ್ಯಂಡ್ರಾಯ್ಡ್ ಸ್ಮಾರ್ಟ್ ಎಲ್ ಇಡಿ ಟಿವಿ (80 cm / 109 cm / 140 cm)
ವಿಐಪಿ / ಸ್ಕೈಬ್ಯಾಗ್ / ಲಾವಿ ಕ್ಯಾಬಿನ್ ಟ್ರಾಲಿ ವರ್ಥ್ ₹6950 ರಿಂದ
₹799
₹5000 ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಫ್ಯಾಶನ್ ಶಾಪಿಂಗ್ ಮೇಲೆ
₹2495 ಮೌಲ್ಯದ ಲಾಪಾಲಾ ಡಿನ್ನರ್ ಸೆಟ್ 18 ಪೀಸ್
₹499
₹3000-₹4999 ಮೌಲ್ಯದ ಫ್ಯಾಶನ್ ಶಾಪಿಂಗ್ ಮೇಲೆ
₹1195 ಮೌಲ್ಯದ ಮಿಲ್ಟನ್ ಕ್ಯಾಸರೋಲ್
₹149
₹2000-₹2999 ಮೌಲ್ಯದ ಫ್ಯಾಶನ್ ಶಾಪಿಂಗ್ ಮೇಲೆ
10% INSTANT DISCOUNT# SBI card
#Min. Trxn.: ₹3,000; Max. Discount: ₹500 Per Trxn; Valid only on one Trxn. per Credit Card; Validity: 23 Oct - 27 Oct 2024. T&C Apply.
ದೀಪಾವಳಿಯ ಬೃಹತ್ ಆರ್ಡರ್‌ಗಳಿಗಾಗಿ ಸ್ಟೋರ್ ಮ್ಯಾನೇಜರ್ ಅನ್ನು ಸಂಪರ್ಕಿಸಿ
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
JioMart
fresh Signature
SMART BAZAAR
ಈಗ ತೆರೆದಿದೆ
ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.

ನಿವಾಸಿಗಳ ಸ್ಥಳಾಂತರಕ್ಕೆ ಹರಸಾಹಸ; ಧಾರಾಕಾರ ಮಳೆಗೆ ರಸ್ತೆಗಳು ಜಲಾವೃತ; ತಾಸುಗಟ್ಟಲೆ ವಾಹನ ದಟ್ಟಣೆ

ನಗರದ ಸಾವಿರ ಮನೆಗಳಿಗೆ ಜಲದಿಗ್ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ತಡರಾತ್ರಿ ಹಾಗೂ ಮಂಗಳವಾರ ಮಧ್ಯಾಹ್ನದ ನಂತರ ಸುರಿದ ಧಾರಾಕಾರ ಮಳೆಯಿಂದ, 1,030 ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡಿದರು. ಬಹುತೇಕ ಪ್ರಮುಖ ರಸ್ತೆಗಳು ಜಲಾವೃತಗೊಂಡು ವಾಹನ ದಟ್ಟಣೆ ಅಧಿಕವಾಗಿತ್ತು.

ಯಲಹಂಕ ಹಾಗೂ ದಾಸರಹಳ್ಳಿ ವಲಯದಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆಗೆ ಹಲವು ಬಡಾವಣೆಗಳು ಜಲಾವೃತಗೊಂಡವು. ಮನೆಗಳಿಗೆ ನೀರು ನುಗ್ಗಿ, ರಾತ್ರಿಯಿಡೀ ನೀರನ್ನು ಹೊರಹಾಕಲು ನಿವಾಸಿಗಳು ಪ್ರಯತ್ನಪಟ್ಟರು. ಬಿಬಿಎಂಪಿ ಸಿಬ್ಬಂದಿ ಸೋಮವಾರ ರಾತ್ರಿಯಿಂದಲೂ ನೀರು ಹೊರಹಾಕುವ ಯತ್ನ ನಡೆಸುತ್ತಿದ್ದಾರೆ. ಮಂಗಳವಾರ ತಡರಾತ್ರಿಯವರೆಗೂ ಹಲವು ಬಡಾವಣೆಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿರಲಿಲ್ಲ.

ಮಳೆನೀರು ತುಂಬಿದ್ದ ಮನೆಗಳ ನಿವಾಸಿಗಳಿಗೆ ತಿಂಡಿ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದ ಬಿಬಿಎಂಪಿ ಸಿಬ್ಬಂದಿ, ಅವರನ್ನು ಅಲ್ಲಿಂದ ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲು ದೋಣಿ ಹಾಗೂ ಟ್ರ್ಯಾಕ್ಟರ್‌ಗಳನ್ನು ಉಪಯೋಗಿಸಿದರು. ಕೆಲವರು ಸಂಬಂಧಿಕರ ಮನೆಗೆ ತೆರಳಿದರೆ, ಹಲವರು ಪಾಲಿಕೆ ವ್ಯವಸ್ಥೆ ಮಾಡಿದ್ದ ಹೋಟೆಲ್‌ಗಳಲ್ಲಿ ಉಳಿದುಕೊಂಡಿದ್ದಾರೆ. ಇನ್ನೂ ಕೆಲವರು ಮನೆ ಬಿಟ್ಟು ಬಾರದೆ, ನೀರಿನ ಮಧ್ಯೆಯೇ ವಾಸಿಸುತ್ತಿದ್ದಾರೆ.

ಬಳ್ಳಾರಿ ರಸ್ತೆ, ಹೆಬ್ಬಾಳ ಜಂಕ್ಷನ್, ದೇವಸಂದ್ರ ಜಂಕ್ಷನ್, ಯಶವಂತಪುರ ಮೆಟ್ರೊ ನಿಲ್ದಾಣ, ಆಡುಗೋಡಿ ಜಂಕ್ಷನ್, ಆನೆಪಾಳ್ಯ ಜಂಕ್ಷನ್, ಎಂ.ಎಸ್. ಪಾಳ್ಯದಿಂದ ಯಲಹಂಕ, ದೊಡ್ಡಬೆಟ್ಟಹಳ್ಳಿ ಜಂಕ್ಷನ್, ಬಿಇಎಲ್ ವೃತ್ತ, ವಾಟಾಳ್ ನಾಗರಾಜ್ ರಸ್ತೆಯಿಂದ ಮೆಜೆಸ್ಟಿಕ್, ಸಾಗರ್ ಜಂಕ್ಷನ್‌ನಿಂದ ಡೇರಿ ವೃತ್ತ, ಮಂತ್ರಿ ಮಾಲ್‌ನಿಂದ ಮಲ್ಲೇಶ್ವರ, ಬಿ. ನಾರಾಯಣಪುರದಿಂದ ಟಿನ್ ಫ್ಯಾಕ್ಟರಿ, ಪ್ರಸನ್ನ ಜಂಕ್ಷನ್‌ನಿಂದ ಬಸವ ಮಂಟಪ, ಚಿಕ್ಕಪೇಟೆ ಮೆಟ್ರೊ ನಿಲ್ದಾಣದಿಂದ ಚಿಕ್ಕಪೇಟೆ, ನಾಯಂಡಹಳ್ಳಿ ಜಂಕ್ಷನ್ ಸೇರಿದಂತೆ ಹಲವು ರಸ್ತೆಗಳು ಜಲಾವೃತಗೊಂಡು ತಾಸುಗಟ್ಟಲೆ ವಾಹನ ದಟ್ಟಣೆ ಉಂಟಾಗಿತ್ತು.

ತುರ್ತು ಕ್ರಮಕ್ಕೆ ಸೂಚನೆ

ಯಲಹಂಕ ವಲಯ ವ್ಯಾಪ್ತಿಯಲ್ಲಿ ಜಲಾವೃತಗೊಂಡ ಪ್ರದೇಶಗಳಲ್ಲಿ ತುರ್ತು ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಚಿವ ಕೃಷ್ಣ ಬೈರೇಗೌಡ, ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಅವರೊಂದಿಗೆ ಜಲಾವೃತಗೊಂಡಿರುವ ಟಾಟಾ ನಗರಕ್ಕೆ ಅವರು ಭೇಟಿ ನೀಡಿ ಪರಿಶೀಲಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ ಭಾರೀ ಮಳೆಯಾಗಿರುವ ಕಾರಣ ಹೆಚ್ಚುವರಿಯಾಗಿ ಮೇಲ್ವಿಚಾರಣೆಗಾಗಿ ಪಾಲಿಕೆ ಇತರೆ ವಲಯಗಳ ಐಎಎಸ್, ಕೆಎಎಸ್ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ. ಒಬ್ಬೊಬ್ಬ ಅಧಿಕಾರಿಗಳಿಗೆ ಒಂದೊಂದು ಜವಾಬ್ದಾರಿಯನ್ನು ನೀಡಿ ಸ್ಥಳೀಯ ನಿವಾಸಿಗಳಿಗೆ ಕೂಡಲೆ ಸ್ಪಂದಿಸುವ ಕೆಲಸ ಮಾಡಬೇಕು. ಜೊತೆಗೆ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನಿಡಿದರು.

ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ವಲಯ ಆಯುಕ್ತ ಕರೀಗೌಡ, ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಉಪ ಆಯುಕ್ತೆ ಪಲ್ಲವಿ ಉಪಸ್ಥಿತರಿದ್ದರು.



ಮಳೆ ನೀರಿನಿಂದ ಆವೃತವಾದ ಕೋಗಿಲು ಕ್ರಾಸ್ ನೋಟ ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಮಲ್ಲೇಶ್ವರದ ಸಂಪಿಗೆ ರಸ್ತೆಯ ಮೂರನೇ ಅಡ್ಡರಸ್ತೆಯಲ್ಲಿ ಬೃಹತ್ ಮರವೊಂದು ಉರುಳಿ ಬಿದ್ದು ಆಟೊ ಜಖಂಗೊಂಡಿತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ವಾಡಿಕೆಗಿಂತ ಎರಡುಪಟ್ಟು ಹೆಚ್ಚು ಮಳೆ!

ಬೆಂಗಳೂರು ನಗರ ಜಿಲ್ಲೆಯಲ್ಲಿ ಅಕ್ಟೋಬರ್ 1ರಿಂದ 22ರವರೆಗೆ 24.1 ಸೆಂ.ಮೀಟರ್ ಮಳೆಯಾಗಿದೆ. ವಾಡಿಕೆಯಂತೆ 11.8 ಸೆಂ. ಮೀಟರ್ ಮಳೆಯಾಗುತ್ತಿತ್ತು.

1901ರಿಂದ 2024ರ ಅವಧಿಯಲ್ಲಿ ಅ.1ರಿಂದ 22ರವರೆಗೆ 2005ರಲ್ಲಿ 29.1 ಸೆಂ.ಮೀ ಮಳೆಯಾಗಿದ್ದು, ಈವರೆಗಿನ ದಾಖಲೆ. 1943ರಲ್ಲಿ 28.7 ಸೆಂ.ಮೀ, 1970ರಲ್ಲಿ 25.3 ಸೆಂ.ಮೀ ಮಳೆಯಾಗಿತ್ತು. ಇದರ ನಂತರ 2024ರಲ್ಲಿ ಅತಿಹೆಚ್ಚು ಮಳೆಯಾಗಿದ್ದು, ನಾಲ್ಕನೇ ಸ್ಥಾನದಲ್ಲಿದೆ.

ನಗರದಲ್ಲಿ ರಾತ್ರಿ ಸುರಿದ ಮಳೆಗೆ ಟಾಟಾ ನಗರದ ಹಲವು ಪ್ರದೇಶಗಳು ಜಲಾವೃತವಾಗಿದ್ದು, ಪ್ರದೇಶಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭೇಟಿ ನೀಡಿ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಎಲ್ಲಿ ಎಷ್ಟು ಮಳೆ?

ಸೆಂ.ಮೀನಲ್ಲಿ

ಮಂಗಳವಾರ ಬೆಳಿಗ್ಗೆ 8.30ರಿಂದ ರಾತ್ರಿ 10ರವರೆಗೆ

ಹಂಪಿನಗರ	6.3
ಮಾರುತಿ ಮಂದಿರ	5.7
ಕೆಂಗೇರಿ	5.2
ರಾಜರಾಜೇಶ್ವರಿನಗರ	5.1
ಹಗದೂರು	5.1
ಬಸವೇಶ್ವರನಗರ	4.1
ಕಾಡುಗೋಡಿ	4.0
ಬಾಣಸವಾಡಿ	3.7
ವಿಶ್ವನಾಥ ನಾಗೇನಹಳ್ಳಿ	3.7
ಬಾಗಲಗುಂಟೆ	3.6
ನಾಗಪುರ	3.4
ರಾಮಮೂರ್ತಿನಗರ	3.4
ರಾಜಾಜಿನಗರ	3.1
ಗರುಡಾಚಾರ್‌ಪಾಳ್ಯ	2.7
ಮನೋರಾಯನಪಾಳ್ಯ	2.7
ನಂದಿನಿ ಲೇಔಟ್	2.4
ಚೊಕ್ಕಸಂದ್ರ	2.2
ಹೆಮ್ಮಿಗೆಪುರ	2.1
ಹೂಡಿ	2.0
ಬಸವನಪುರ	2.0

ಎಲ್ಲೆಲ್ಲಿ ಎಷ್ಟು ಮನೆಗಳಿಗೆ ನೀರು?

ವಿದ್ಯಾರಣ್ಯಪುರ	
ವೆಂಕಟಸ್ವಾಮಪ್ಪ ಲೇಔಟ್, ವಿದ್ಯಾರಣ್ಯಪುರ	20
ಯರ್‍ರಪ್ಪ ಗಾರ್ಡನ್, ವಿದ್ಯಾರಣ್ಯಪರ	120
ಎಂ.ಎಸ್. ಪಾಳ್ಯ	25
ಸಪ್ತಗಿರಿ ಲೇಔಟ್	5
ಬಸವಸಮಿತಿ	150
ಬ್ಯಾಟರಾಯನಪುರ	
ಎಂಸಿಇಎಚ್‌ಎಸ್ ಲೇಔಟ್ 2ನೇ ಹಂತ	20
ಶಬರಿನಗರ, ಹೆಗ್ಗಡೆ ನಗರ	5
ದ್ವಾರಕಾನಗರ	4
ಕೊಡಿಗೇಹಳ್ಳಿ	
ಟಾಟಾ ನಗರ	125
ಭದ್ರಪ್ಪ ಲೇಔಟ್	135
ಬಾಲಾಜಿ ಲೇಔಟ್	120
ಯಲಹಂಕ	
ಕೂರ್ಲಪ್ಪ ಲೇಔಟ್	15
ಸುರಭಿ ಲೇಔಟ್	10
ಕೊಂಡಪ್ಪ ಗಾರ್ಡನ್	5
ಕೊಂಡಪ್ಪ ಲೇಔಟ್	5
ಯಲಹಂಕ ಉಪನಗರ	
ಚಿತ್ರಾ ಲೇಔಟ್	70
ಅಟ್ಟೂರು	5
ಚಿಕ್ಕಬೆಟ್ಟಹಳ್ಳಿ	3
ಸೋಮೇಶ್ವರ ನಗರ	25
ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ	10
ಟಾಟಾ ಇನ್‌ಸ್ಟಿಟ್ಯೂಟ್ ಸಮೀಪ	4
ಹೊಯ್ಸಳ ಗ್ರೌಂಡ್, ಶಾರದಾನಗರ	15
ಉದಯ ಲೇಔಟ್	4
ಎಲ್‌ಬಿಎಸ್ ನಗರ	10
ಶಾರದಾನಗರ ಆರ್ಚ್	20
ಅಂಬೇಡ್ಕರ್ ಕಾಲೊನಿ	25
ಅಗರ್‌ವಾಲ್ ಹಾಸ್ಪಿಟಲ್ ಹಿಂಭಾಗ	30
ನಂಜಪ್ಪ ಲೇಔಟ್, ಅಲ್ಲಾಳಸಂದ್ರ ಕೆರೆ ಹಿಂಭಾಗ	50

ಮಂಗಳವಾರ ಸಂಜೆ ಸುರಿದ ಮಳೆಯಿಂದ ಕೆಂಗೇರಿ ರೈಲು ನಿಲ್ದಾಣದಲ್ಲಿ ನೀರು ನಿಂತು ಅವಾಂತರ ಸೃಷ್ಟಿಯಾಯಿತು

ವಿಪತ್ತು ನಿರ್ವಹಣೆ ತಂಡ ನಿಯೋಜನೆ

ಬೆಂಗಳೂರು: ನಗರದಲ್ಲಿ ಪ್ರವಾಹ ಪೀಡಿತ, ಜಲಾವೃತ ಪ್ರದೇಶಗಳನ್ನು ಮೇಲ್ವಿಚಾರಣೆ ಮಾಡಲು ಬಿಬಿಎಂಪಿ ವಲಯವಾರು ವಿಪತ್ತು ನಿರ್ವಹಣೆ ತಂಡಗಳನ್ನು ನಿಯೋಜಿಸಿದೆ.

ಮೂರು-ನಾಲ್ಕು ದಿನಗಳಿಂದ ಹಲವಾರು ಪ್ರದೇಶಗಳಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ. ಇದರಿಂದ ಪ್ರವಾಹ ಪೀಡಿತ ಪ್ರದೇಶಗಳನ್ನು ಮೇಲ್ವಿಚಾರಣೆ ಮಾಡಲು, ನಿರ್ವಹಿಸಲು ಮತ್ತು ತುರ್ತು ಪರಿಸ್ಥಿತಿಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸಲು ಪಾಲಿಕೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾರ್ಯಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಕಾರ್ಯಪಡೆ (ಎಸ್‌ಡಿಆರ್‌ಎಫ್), ಅಗ್ನಿ ಶಾಮಕ ದಳದ ತಂಡಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿವೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಜಲಾವೃತ ಪ್ರದೇಶಗಳು: ನರಸಾಪುರ ಕೆರೆ ಮತ್ತು ದೊಡ್ಡಬೊಮ್ಮಸಂದ್ರ ಕೆರೆ ತುಂಬಿ ಕೋಡಿ ಮೂಲಕ ಬರುವ ನೀರು ನೀರುಗಾಲುವೆಗಳಲ್ಲಿ ಹರಿಯುತ್ತಿದೆ. ಈ ಪರಿಣಾಮ ಬ್ಯಾಟರಾಯನಪುರ ವ್ಯಾಪ್ತಿಯ ಭದ್ರಪ್ಪ ಲೇಔಟ್, ಬಾಲಾಜಿ ಲೇಔಟ್, ಸುರಭಿ ಲೇಔಟ್, ಸೋಮೇಶ್ವರ ಬಡಾವಣೆ, ಬಸವ ಸಮಿತಿ, ಟಾಟಾ ನಗರ, ಚಿಕ್ಕ ಬೊಮ್ಮಸಂದ್ರ, ಆಂಜನೇಯ ಲೇಔಟ್, ವಾಯುನಂದನ ಲೇಔಟ್ ಸಂಪೂರ್ಣ ಜಲಾವೃತವಾಗಿವೆ.

ಹಾಲು, ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ ನಿವಾಸಿಗಳ ಸ್ಥಳಾಂತರಕ್ಕಾಗಿ ಮೂರು ದೋಣಿಗಳನ್ನು ನಿಯೋಜಿಸಲಾಗಿದೆ.

ಮಹದೇವಪುರ ವಲಯ: ಮಹದೇವಪುರ ವಲಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇದ್ದು, ಯಲಹಂಕ ಪ್ರದೇಶದಲ್ಲಿ ಭಾರಿ ಮಳೆಯಾದ ಪರಿಣಾಮ ಸಾಯಿಬಾಬಾ ಲೇಔಟ್ ಮತ್ತು ಗೆದ್ದಲಹಳ್ಳಿ ಬಳಿಯ ವಡ್ಡರಪಾಳ್ಯದಲ್ಲಿ ಹೆಬ್ಬಾಳ ವ್ಯಾಲಿಯಿಂದ ನೀರು ಹಿಮ್ಮುಖವಾಗಿ ಚಲಿಸಿ ಜಲಾವೃತವಾಗಿದೆ. ನೀರು ನುಗ್ಗಿರುವ ಮನೆಗಳಲ್ಲಿ, ಪಂಪ್‌ಗಳ ಮೂಲಕ ನೀರು ಹೊರ ಹಾಕುವ ಕೆಲಸ ಮಾಡಲಾಗುತ್ತಿದೆ.

ದಾಸರಹಳ್ಳಿ ವಲಯ: ಅಬ್ಬಿಗೆರೆ ಕೆರೆ ಕೋಡಿಯಾಗಿದ್ದು, ಕೋಡಿ ನೀರು ರಸ್ತೆಗೆ ನುಗ್ಗಿ ಸಪ್ತಗಿರಿ ಮತ್ತು ನಿಸರ್ಗ ಲೇಔಟ್‌ಗಳಲ್ಲಿ ನೀರು ತುಂಬಿದೆ. ನಿಸರ್ಗ ಲೇಔಟ್, ಸಪ್ತಗಿರಿ ಲೇಔಟ್, ಪಾರ್ವತಿ ಲೇಔಟ್, ಮಿತ್ರ ಲೇಔಟ್, ಪೀಣ್ಯ ಕೈಗಾರಿಕಾ ಪ್ರದೇಶ ಮತ್ತು ಬೆಲ್ಮಾರ್ ಲೇಔಟ್‌ಗಳಲ್ಲಿ 25ರಿಂದ 30 ಮನೆಗಳು ಜಲಾವೃತಗೊಂಡಿವೆ.

1533ಕ್ಕೆ ಕರೆ ಮಾಡಿ

ಪಾಲಿಕೆಯ ಅಧಿಕಾರಿಗಳು ಸಮಸ್ಯೆಯಾಗಿರುವ ಸ್ಥಳಗಳಲ್ಲಿದ್ದು, ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ. ಮಳೆ ಸಂಬಂಧಿಸಿದ ದೂರುಗಳಿದ್ದರೆ ನಾಗರಿಕರು 1533ಕ್ಕೆ ಕರೆ ಮಾಡಬೇಕೆಂದು ಬಿಬಿಎಂಪಿ ಮನವಿ ಮಾಡಿಕೊಂಡಿದೆ.

ರಾತ್ರಿಯಿಡೀ ಸಂಕಷ್ಟದಲ್ಲಿ ಮುಳುಗಿದ ಜನ

ಯಲಹಂಕ: ಸೋಮವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಯಲಹಂಕ ಮತ್ತು ಬ್ಯಾಟರಾಯನಪುರ ವ್ಯಾಪ್ತಿಯ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ರಾಜಕಾಲುವೆಗಳು ತುಂಬಿಹರಿದು ಮನೆಗಳಿಗೆ ನೀರು ನುಗ್ಗಿತು. ಹಲವಾರು ರಸ್ತೆಗಳು ಜಲಾವೃತಗೊಂಡು ಸಾರ್ವಜನಿಕರು ತೀವ್ರತೊಂದರೆ ಅನುಭವಿಸಿದರು.

ಕೋಗಿಲು ವೃತ್ತ ಸಮೀಪದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನ ನೆಲ ಮಹಡಿ ಸಂಪೂರ್ಣವಾಗಿ ಜಲಾವೃತಗೊಂಡಿತ್ತು. ಪಾರ್ಕಿಂಗ್ ಪ್ರದೇಶದಲ್ಲಿ ಐದು ಅಡಿಗಳಷ್ಟು ನೀರು ಸಂಗ್ರಹವಾಗಿ ವಾಹನಗಳು ಬಹುತೇಕ ಮುಳುಗಡೆಯಾದವು. ವಿದ್ಯುತ್ ಕಡಿತಗೊಂಡ ಕಾರಣ, ಕುಡಿಯುವ ನೀರು, ಊಟ-ತಿಂಡಿಗೂ ಜನರು ಪರದಾಡಬೇಕಾಯಿತು.

ಸ್ಥಳಾಂತರಕ್ಕೆ ಸೂಚನೆ: ವಾರದ ಮಟ್ಟಿಗೆ ಅಪಾರ್ಟ್‌ಮೆಂಟ್ ನಿವಾಸಿಗಳು ಸ್ಥಳಾಂತರಗೊಳ್ಳಬೇಕೆಂದು ಬಿಬಿಎಂಪಿ ಸೂಚಿಸಿರುವ ಹಿನ್ನೆಲೆಯಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ ಸಿಲುಕಿದ್ದ ನಿವಾಸಿಗಳನ್ನು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ಪೊಲೀಸ್ ಸಿಬ್ಬಂದಿ ಸಹಾಯದೊಂದಿಗೆ, ಟ್ರ್ಯಾಕ್ಟರ್ ಮತ್ತು ಬೋಟ್‌ಗಳ ಮೂಲಕ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದರು. ಈ ವೇಳೆ ಮಕ್ಕಳು ಮತ್ತು ವೃದ್ಧರು ಪರದಾಡಿದರು. ಬಹುತೇಕಮಂದಿ ಸಂಬಂಧಿಕರು ಮತ್ತು ಸ್ನೇಹಿತರ ಮನೆಗಳಿಗೆ ಸ್ಥಳಾಂತರಗೊಂಡರು.

ಕೋಗಿಲು ಕ್ರಾಸ್ ಸುತ್ತಮುತ್ತಲ ಪ್ರದೇಶಗಳು ಜಲಾವೃತಗೊಂಡ ಪರಿಣಾಮ, ಯಲಹಂಕ-ಮಾರುತಿನಗರ ಮುಖ್ಯರಸ್ತೆಯಲ್ಲಿ ವಾಹನಗಳು ಚಲಿಸಲು ಸಾಧ್ಯವಾಗದೆ ಗಂಟೆಗಟ್ಟಲೆ ನಿಂತಲ್ಲೆ ನಿಲ್ಲಬೇಕಾಯಿತು. ಮಾರುತಿನಗರದಲ್ಲಿ ಮಳೆನೀರಿನ ಜೊತೆಗೆ ರಾಜಕಾಲುವೆನೀರು 20ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿತು. ಇದರಿಂದ ದಿನಸಿ ಪದಾರ್ಥಗಳೂ ಸೇರಿ ಮನೆಯಲ್ಲಿದ್ದ ವಸ್ತುಗಳೆಲ್ಲಾ ನೀರಿನಲ್ಲಿ ಮುಳುಗಡೆಯಾದವು. ನಿವಾಸಿಗಳು ರಾತ್ರಿಯಿಡೀ ನೀರನ್ನು ಹೊರಹಾಕುವುದಲ್ಲಿಯೇ ಕಾಲಕಳೆಯಬೇಕಾಯಿತು.

ಕುಸಿದುಬಿದ್ದ ಕಾಂಪೌಂಡ್: ಜಿಕೆವಿಕೆ ಮತ್ತು ಮದರ್ ಡೇರಿ ಕಡೆಯಿಂದ ಹರಿದುಬಂದ ನೀರಿನ ರಭಸಕ್ಕೆ ಕನಕನಗರದ ಬಳಿ ಜಿಕೆವಿಕೆ ಕಾಂಪೌಂಡ್ ಕುಸಿದುಬಿದ್ದಿತು. ಇದರಿಂದ ಸೋಮೇಶ್ವರನಗರದ 40, ಕನಕನಗರದ 150 ಹಾಗೂ ಚಿಕ್ಕಬೊಮ್ಮಸಂದ್ರ ಹಳೇಗ್ರಾಮ ಮತ್ತು ಕೆರೆಯ ಸುತ್ತಮುತ್ತಲ ಬಡಾವಣೆಗಳ 300 ಕ್ಕೂ ಹೆಚ್ಚು ಮನೆಗಳಿಗೆ ಮಳೆನೀರಿನ ಜೊತೆಗೆ ಒಳಚರಂಡಿ ನೀರು ಮಿಶ್ರಣವಾಗಿ ನುಗ್ಗಿತು. ಕನಕನಗರದಿಂದ 20ಕ್ಕೂ ಹೆಚ್ಚು ದ್ವಿಚಕ್ರವಾಹನಗಳು ನೀರಿನಲ್ಲಿ ಕೊಚ್ಚಿಕೊಂಡು ಬಂದು ಎಲ್ಲೆಂದರಲ್ಲಿ ಜಖಂಗೊಂಡು ಬಿದ್ದಿದ್ದವು.

ಮದರ್ ಡೇರಿ ಸಮೀಪದ ಶಾರದಾ ನಗರದ ಆರ್ಚ್ ಬಳಿ ಕಾಂಪೌಂಡ್ ಒಡೆದು, ನೀರಗಾಲುವೆಯಲ್ಲಿ ನೀರು ಹರಿಯಲು ಆಸ್ಪದವಿಲ್ಲದೆ ಯಲಹಂಕ ಉಪನಗರ 3ನೇ ಹಂತದ ಕಡೆಗೆ ಒಳಚರಂಡಿ ನೀರಿನ ಸಹಿತ 200ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಯಿತು. ಅಂಬೇಡ್ಕರ್ ನಗರದ 400 ಕ್ಕೂ ಹೆಚ್ಚು ಮನೆಗಳಿಗೆ ನೀರುನುಗ್ಗಿ ನಿವಾಸಿಗಳು ತೊಂದರೆ ಅನುಭವಿಸಿದರು. ಬಿಬಿಎಂಪಿ ಸಿಬ್ಬಂದಿ ಮತ್ತು ಸ್ಥಳೀಯರ ನೆರವಿನಿಂದ ನೀರನ್ನು ಹೊರಹಾಕಲಾಯಿತು.

ಮುಖ್ಯರಸ್ತೆ ಜಲಾವೃತ: ಜಕ್ಕೂರು ಕೆರೆಗೆ ಹರಿಯಬೇಕಾಗಿದ್ದ ಯಲಹಂಕ ಕೆರೆಯ ನೀರು ತಗ್ಗುಪ್ರದೇಶಗಳಿಗೆ ನುಗ್ಗಿದ ಪರಿಣಾಮ, ಯಲಹಂಕ-ಜಕ್ಕೂರು ಮುಖ್ಯರಸ್ತೆಯ ಸುರಭಿ ಲೇಔಟ್ ಸಂಪೂರ್ಣ ಜಲಾವೃತಗೊಂಡಿತು. ಮನೆಗಳಲ್ಲಿ ಎರಡು ಅಡಿ ಮತ್ತು ರಸ್ತೆಗಳಲ್ಲಿ ಮೂರು ಅಡಿಗಳಷ್ಟು ನೀರು ಸಂಗ್ರಹವಾಗಿತ್ತು. ಜಕ್ಕೂರು ಕೆರೆಯಲ್ಲಿರುವ ಶುದ್ಧನೀರು ಸಂಸ್ಕರಣಾ ಘಟಕದ ರಸ್ತೆಯು ಅರ್ಧ ಕಿಲೋಮೀಟರ್ ದೂರದವರೆಗೆ ಜಲಾವೃತಗೊಂಡಿತ್ತು. ಅಲ್ಲದೆ ಜಕ್ಕೂರು ರಸ್ತೆಯ ಸೆಂಚುರಿ ಅಪಾರ್ಟ್‌ಮೆಂಟ್ ಬಳಿ ರಾಜಕಾಲುವೆ ಉಕ್ಕಿಹರಿದು ಈ ಭಾಗದ ರಸ್ತೆಗಳು ನೀರಿನಲ್ಲಿ ಮುಳುಗಿದ್ದವು.

ಜಕ್ಕೂರು ರೈಲ್ವೆ ಅಂಡರ್‌ಪಾಸ್‌ನಲ್ಲಿ ನೀರು ತುಂಬಿದ ಪರಿಣಾಮ, ಯಲಹಂಕ-ಜಕ್ಕೂರು ಮುಖ್ಯರಸ್ತೆಯಲ್ಲಿ ಸಂಚಾರ ಸ್ಥಗಿತಗೊಂಡು ವಾಹನ ಸವಾರರು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕಾಯಿತು. ಜಕ್ಕೂರು- ಶ್ರೀರಾಮಪುರ ರೈಲ್ವೆ ಸಮಾನಾಂತರ ರಸ್ತೆಯು ಜಲಾವೃತಗೊಂಡಿತ್ತು.

ಯಲಹಂಕದ ಮಾರುತಿನಗರ, ಪಾಪಣ್ಣ ಲೇಔಟ್, ಸುರಭಿ ಲೇಔಟ್, ಪುಟ್ಟೇನಹಳ್ಳಿ, ರಮಣಶ್ರೀ ಅಪಾರ್ಟ್‌ಮೆಂಟ್, ಸೋಮೇಶ್ವರ ನಗರ, ಚಿಕ್ಕಬೊಮ್ಮಸಂದ್ರ ಸೇರಿ ಇನ್ನಿತರೆ ತಗ್ಗುಪ್ರದೇಶಗಳಲ್ಲಿ ಕೆಲವೆಡೆ ಮನೆಗಳಿಗೆ ನೀರುನುಗ್ಗಿತು. ಶಾಸಕ ಎಸ್.ಆರ್.ವಿಶ್ವನಾಥ್ ಬಿಬಿಎಂಪಿ ಅಧಿಕಾರಿಗಳೊಂದಿಗೆ ಜಲಾವೃತ ಪ್ರದೇಶಗಳಿಗೆ ಭೇಟಿನೀಡಿ ಪರಿಶೀಲಿಸಿದರು.

ಮುಖ್ಯಾಂಶಗಳು

- ಅಪಾರ್ಟ್‌ಮೆಂಟ್ ನಿವಾಸಿಗಳ ಸ್ಥಳಾಂತರಕ್ಕೆ ಸೂಚನೆ
- ಮುಖ್ಯರಸ್ತೆ, ಅಂಡರ್‌ಪಾಸ್‌ಗಳು ಜಲಾವೃತ
- ಕಾಂಪೌಂಡ್ ಕುಸಿತ, ನೂರಾರು ಮನೆಗಳಿಗೆ ಹಾನಿ

‘ವೆನಿಸ್ ಮಾಡಿದ್ದಾರೆ’

ಕಾಂಗ್ರೆಸ್ ಸರ್ಕಾರ ಬೆಂಗಳೂರನ್ನು ಇಟಲಿಯ ವೆನಿಸ್ ನಗರವನ್ನಾಗಿ ಮಾಡಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಕುಮಾರಸ್ವಾಮಿ

‘ಪ್ರವಾಹದ ಕಾರಣ ಅಲ್ಲಿನ ಜನರು ದೋಣಿಗಳಲ್ಲಿಯೇ ಸಂಚಾರ ಮಾಡುತ್ತಿದ್ದಾರೆ. ಇಲ್ಲಿಯೂ ಅದೇ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿ ಮಾಡಿದೆ. ನಗರದಲ್ಲಿ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ಜನರು ಹೋಟೆಲ್‌ಗಳಲ್ಲಿ ಜೀವನ ಮಾಡುತ್ತಿದ್ದಾರೆ’ ಎಂದಿದ್ದಾರೆ.

‘ಹಿಂದೆ ಸಿಂಗಪುರ ಮಾಡಿದ್ದನ್ನು ನೋಡಿದ್ದೆವು. ಈಗ ಬ್ರ್ಯಾಂಡ್ ಬೆಂಗಳೂರನ್ನು ವೆನಿಸ್ ಮಾಡಿದ್ದಾರೆ. ಸರ್ಕಾರಕ್ಕೆ ರಾಜಕೀಯದ ಚಿಂತೆಯಾದರೆ, ಜನರು ನರಕ ನೋಡುತ್ತಿದ್ದಾರೆ’ ಎಂದು ದೂರಿದ್ದಾರೆ.

ನಗರದಲ್ಲಿ ಸೋಮವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಜಲಾವೃತಗೊಂಡ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್

‘ತುರ್ತು ಕ್ರಮಕ್ಕೆ ಸೂಚನೆ’

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಜಲಾವೃತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘17 ವರ್ಷಗಳ ನಂತರ ದೊಡ್ಡಬೊಮ್ಮಸಂದ್ರ ಕೆರೆ ಕೋಡಿ ಹರಿದಿದೆ. ಇದರಿಂದ ಕೊಡಿಗೇಹಳ್ಳಿ ಸುತ್ತಮುತ್ತಲ ತಗ್ಗುಪ್ರದೇಶಗಳಿಗೆ ನೀರುನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಕಾಲುವೆಗಳಿದ್ದರೂ ಹೆಚ್ಚಿನಪ್ರಮಾಣದಲ್ಲಿ ನೀರು ಹರಿದುಬರುತ್ತಿರುವುದರಿಂದ ಸಮಸ್ಯೆ ಉಂಟಾಗಿದ್ದು, ಕೋಡಿ ನೀರಿನ ರಭಸ ಕಡಿಮೆಯಾದರೆ ಸಮಸ್ಯೆ ನಿವಾರಣೆಯಾಗಲಿದೆ’ ಎಂದು ತಿಳಿಸಿದರು.

ಅಪಾರ್ಟ್‌ಮೆಂಟ್‌ಗಳ ನೆಲಮಹಡಿಯಲ್ಲಿ ಸಂಗ್ರಹವಾಗಿರುವ ನೀರನ್ನು ಹೊರಹಾಕಲು ಮೋಟಾರ್ ಪಂಪ್‌ಗಳ ಅವಶ್ಯಕತೆಯಿದ್ದು, ಅಧಿಕಾರಿಗಳಿಗೆ ಪಂಪ್‌ಗಳನ್ನು ಒದಗಿಸಬೇಕೆಂದು ಮನವಿ ಮಾಡಲಾಗಿದೆ. ಅಗ್ನಿಶಾಮಕದಳ ಮತ್ತು ಬಿಬಿಎಂಪಿ ಸಿಬ್ಬಂದಿ ಮೂಲಕ ನೀರನ್ನು ಹೊರಹಾಕಲಾಗುವುದು. ಅಗತ್ಯ ತುರ್ತುಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದರು.

ಜಲಾವೃತಗೊಂಡಿರುವ ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್

ಯಲಹಂಕದ ಕೋಗಿಲು ಕ್ರಾಸ್‌ನಲ್ಲಿ ತುಂಬಿಕೊಂಡಿದ್ದ ಮಳೆನೀರಿನಲ್ಲಿ ಕಾರು ಸಿಲುಕಿಕೊಂಡಿದ್ದು, ಹಸುಗಳು ನೀರಿನಲ್ಲೇ ಸಾಗಿದವು

ಯಲಹಂಕದ ಅಲ್ಲಾಳಸಂದ್ರದಲ್ಲಿ ಬಿಎಂಟಿಸಿ ಬಸ್‌ಗಳು ಮಳೆನೀರಿನಲ್ಲಿ ಸಿಲುಕಿಕೊಂಡಿದ್ದವು

ಟಾಟಾ ಬಡಾವಣೆ ಜಲಾವೃತಗೊಂಡು ಮನೆಯಲ್ಲಿ ಸಿಲುಕಿದ್ದ ನಿವಾಸಿಗಳಿಗೆ ಟ್ರ್ಯಾಕ್ಟರ್ ಮೂಲಕ ಆಹಾರ ಪೊಟ್ಟಣಗಳನ್ನು ತಲುಪಿಸುತ್ತಿರುವ ಬಿಬಿಎಂಪಿ ಸಿಬ್ಬಂದಿ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಿಂದ ವೃದ್ಧ ಮಹಿಳೆಯನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದರು

ಕೆಂಗೇರಿಯ ಹರ್ಷ ಲೇಔಟ್ ಬಳಿಯ ದುರ್ಘಟನೆ

ಮಕ್ಕಳು ಕೆರೆಯಲ್ಲಿ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಮಕ್ಕಳಿಗಾಗಿ ರೋದಿಸುತ್ತಿರುವ ತಾಯಿ ಜಯಮ್ಮ

ಮೃತ ಜಾನ್ಸನ್(ಶ್ರೀನಿವಾಸ್) ಹಾಗೂ ಸಹೋದರಿ ಮಹಾಲಕ್ಷ್ಮಿ

ಕೆಂಗೇರಿ: ಇಲ್ಲಿನ ಕೆರೆಯಂಗಳದಲ್ಲಿ ಸೋಮವಾರ ನಾಪತ್ತೆಯಾಗಿದ್ದ ಇಬ್ಬರು ಮಕ್ಕಳು ಮಂಗಳವಾರ ಶವವಾಗಿ ಪತ್ತೆಯಾಗಿದ್ದಾರೆ.

ಕೆಂಗೇರಿ ಬಳಿಯ ಹರ್ಷ ಲೇಔಟ್ ನಿವಾಸಿ ಜಯಮ್ಮ ಅವರ ಮಕ್ಕಳಾದ ಜಾನ್ಸನ್ ಅಲಿಯಾಸ್ ಶ್ರೀನಿವಾಸ್(13) ಹಾಗೂ ಮಹಾಲಕ್ಷ್ಮಿ(11) ಎಂಬುವರು ಮೃತರು. ಕೆಲ ವರ್ಷಗಳ ಕಾಲ ಸನ್ ಸಿಟಿ ಬಡಾವಣೆಯಲ್ಲಿ ವಾಸವಾಗಿದ್ದ ತಮಿಳುನಾಡು ಮೂಲದ ಜಯಮ್ಮ ಹದಿನೈದು ದಿನಗಳ ಹಿಂದೆಯಷ್ಟೇ ಹರ್ಷ ಲೇಔಟ್‌ನಲ್ಲಿ ಬಾಡಿಗೆ ಮನೆಗೆ ಬಂದಿದ್ದರು. ಇವರಿಗೆ ಮೂವರು ಮಕ್ಕಳು.

ಪೌರಕಾರ್ಮಿಕರಾಗಿದ್ದ ಜಯಮ್ಮ ಎಂದಿನಂತೆ ಸೋಮವಾರ ಮುಂಜಾನೆ ಕೆಲಸಕ್ಕೆ ತೆರಳಿದ್ದರು. ಈ ವೇಳೆ ಮನೆಯಲ್ಲಿದ್ದ ಮಕ್ಕಳು ಕೊಳಾಯಿ ನೀರಿನಲ್ಲಿ ಆಟವಾಡುತ್ತಿದ್ದರು. ನೀರು ಪೋಲು ಮಾಡದಂತೆ ನೆರೆ ಮನೆಯವರು ಸೂಚಿಸಿದ್ದಾರೆ. ಹೀಗಾಗಿ ಮಹಾಲಕ್ಷ್ಮಿ ಹಾಗೂ ಶ್ರೀನಿವಾಸ್ ನೀರು ತರಲೆಂದು ಬಿಂದಿಗೆ ಹಿಡಿದು ಕೂಗಳತೆಯ ದೂರದಲ್ಲಿರುವ ಕೆರೆಗೆ ಹೋಗಿದ್ದಾರೆ. ಈ ವೇಳೆ ಮಹಾಲಕ್ಷ್ಮಿ ಕಾಲು ಜಾರಿ ಕೆರೆಗೆ ಬಿದ್ದಿದ್ದಾಳೆ. ತಂಗಿಯನ್ನು ಕಾಪಾಡಲು ಹೋದ ಅಣ್ಣನೂ ಕೆರೆಗೆ ಬಿದ್ದು ಸಾವನ್ನಪ್ಪಿದ್ದಾನೆ ಎಂದು ತಿಳಿದು ಬಂದಿದೆ.

ಸ್ಥಳೀಯ ನಿವಾಸಿಗಳ ದೂರಿನ ಮೇರೆಗೆ ಸೋಮವಾರ ಸಂಜೆ ಸ್ಥಳಕ್ಕೆ ಬಂದ ಪೊಲೀಸ್ ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಮಕ್ಕಳ ಪತ್ತೆಗಾಗಿ ಕಾರ್ಯಾಚರಣೆ ನಡೆಸಿದರು. ಆದರೂ ಅವರು ಪತ್ತೆಯಾಗಿರಲಿಲ್ಲ. ಜೋರು ಮಳೆಯ ಕಾರಣ ರಾತ್ರಿಯ ವೇಳಗೆ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು.

ಮಂಗಳವಾರ ಮುಂಜಾನೆಯಿಂದಲೇ ಮತ್ತೆ ಕಾರ್ಯಾಚರಣೆ ಆರಂಭಿಸಿದ ಸಿಬ್ಬಂದಿ, ಬೋರ್‌ವೆಲ್ ಕ್ಯಾಮೆರಾ ನೆರವು ಪಡೆದರು. ಬೆಳಿಗ್ಗೆ 11ರ ಹೊತ್ತಿಗೆ ಜಾನ್ಸನ್ ಶವ ಪತ್ತೆಯಾಯಿತು. ಕಾರ್ಯಾಚರಣೆ ಮುಂದುವರಿಯಿತು. ಸಂಜೆ 4ರ ವೇಳೆಗೆ ಸಹೋದರಿ ಮಹಾಲಕ್ಷ್ಮಿ ಶವ ಕೂಡ ಕೆರೆಯ ಮತ್ತೊಂದು ಅಂಚಿನಲ್ಲಿ ಪತ್ತೆಯಾಯಿತು.

ಕಟ್ಟೆಯೊಡೆದ ದುಃಖ: ಅವಘಡದ ಸುದ್ದಿ ಅರಿತ ನೂರಾರು ಸ್ಥಳೀಯ ನಿವಾಸಿಗಳು ಕೆರೆ ಬಳಿ ಜಮಾಯಿಸಿದ್ದರು. ಬಾಲಕ, ಬಾಲಕಿಯರ ಶವ ಕಂಡು ಮರುಗಿದರು. ಸೋಮವಾರದಿಂದಲೂ ಮಕ್ಕಳಿಗಾಗಿ ರೋದಿಸುತ್ತಿದ್ದ ಜಯಮ್ಮ, ಮಗನ ಶವ ನೋಡಿ ಗದ್ಗದಿತರಾದರು. ಸಂಸಾರದ ನೊಗ ಹೊರಬೇಕಿದ್ದ ಮಗ ಬಾಲ್ಯದಲ್ಲೇ ಅಸುನೀಗಿದ್ದನ್ನು ಕಂಡು ಕಣ್ಣೀರಾದರು. ಅಗ್ನಿಶಾಮಕ ದಳದ ಅಧಿಕಾರಿ ಸಿದ್ದರಾಜು, ಕೆಂಗೇರಿ ಸಿಪಿಐ ಸಂಜೀವ್ ಗೌಡ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು.

ಮುಖ್ಯಾಂಶಗಳು

- ತಂಗಿ ರಕ್ಷಣೆಗಿಳಿದ ಅಣ್ಣನೂ ನೀರು ಪಾಲು
- ಮಕ್ಕಳ ಪತ್ತೆಗಾಗಿ ಎರಡು ದಿನ ಕಾರ್ಯಾಚರಣೆ
- ಮಕ್ಕಳ ಶವ ಕಂಡು ರೋದಿಸಿದ ತಾಯಿ

ಕೆರೆಗಿಲ್ಲ ತಡೆಗೋಡೆ

ಕೆರೆಗೆ ಮುಂಭಾಗದಲ್ಲಿ ಬಾಗಿಲು ಅಳವಡಿಸಲಾಗಿದೆ. ಆದರೆ, ಕೆರೆಯ ಸುತ್ತ ಬೇಲಿಯ ವ್ಯವಸ್ಥೆಯಿಲ್ಲ. ಕೆರೆಯನ್ನು ಪ್ರವೇಶಿಸಲು ಅನೇಕ ದಾರಿಗಳಿವೆ. ಕೆರೆ ಕಾವಲಿಗಾಗಿ ನೇಮಕ ಮಾಡಲಾಗಿರುವ ಮಹಿಳಾ ಸಿಬ್ಬಂದಿಗೆ ಸಂಪೂರ್ಣ ನಿಗಾ ಇಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಂಥ ಅವಘಡ ಸಂಭವಿಸುತ್ತಿದೆ. ಕೆಲ ತಿಂಗಳ ಹಿಂದೆಯೂ ವ್ಯಕ್ತಿಯೊಬ್ಬ ಕೆರೆಯ ಅಂಗಳದಲ್ಲಿನ ಮರಕ್ಕೆ ನೇಣು ಹಾಕಿಕೊಂಡ ಘಟನೆ ನಡೆದಿತ್ತು ಎಂದು ಸ್ಥಳೀಯರೊಬ್ಬರು ದೂರಿದರು.

ಈ ಸಂಬಂಧ ಪ್ರತಿಕ್ರಿಯೆಗಾಗಿ ಕೆರೆ ನಿರ್ವಹಣಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಗೀತಾ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದ್ದು, ಅವರು ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

‘ಜಾತಿಗಣತಿ: ಬಹಿರಂಗ ಮಾಡದಿದ್ದರೆ ಆಪಾದನೆ’

ಬೆಂಗಳೂರು: ‘ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿಗಣತಿ) ವರದಿಯಲ್ಲಿ ಏನಿದೆ ಎನ್ನುವುದು ಬಹಿರಂಗ ಆಗಬೇಕು. ಈ ಬಗ್ಗೆ ಚರ್ಚೆ ಆಗದಿದ್ದರೆ ವರದಿಯನ್ನು ಮುಚ್ಚಿಹಾಕಿದರು ಎಂಬ ಆಪಾದನೆ ಸರ್ಕಾರದ ಮೇಲೆ ಬರಲಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಈ ವರದಿ ತಯಾರಿಸಲು ಸರ್ಕಾರ ₹160 ಕೋಟಿ ಖರ್ಚು ಮಾಡಿದೆ. ವರದಿಯನ್ನು ಜನ ಸಮುದಾಯದ ಮುಂದೆ ಇಡದಿದ್ದರೆ ಹಣ ಖರ್ಚು ಮಾಡಿರುವುದು ಪ್ರಯೋಜನ ಆಗುವುದಿಲ್ಲ’ ಎಂದರು.

ಪಂಚಮಸಾಲಿ ಬೇಡಿಕೆ, ಒಳ ಮೀಸಲಾತಿ ಮತ್ತು ಜಾತಿಗಣತಿ ವರದಿ ಕುರಿತು ಪ್ರತಿಕ್ರಿಯಿಸಿದ ಅವರು, ‘ಎಲ್ಲವನ್ನೂ ನಿಭಾಯಿಸುವ ಸಾಮರ್ಥ್ಯ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮತ್ತು ಸಿಎಂ ಸಿದ್ದರಾಮಯ್ಯ ಅವರಿಗಿದೆ’ ಎಂದರು.

‘ನೌಕರರು ಆರೆಸ್ಸೆಸ್‌ನಲ್ಲಿ ಭಾಗಿ ಸರಿಯೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದೊಂದಿಗೆ ನೇರವಾಗಿ ಸಂಘರ್ಷಕ್ಕೆ ಇಳಿದಿರುವ ಆರ್‌ಎಸ್‌ಎಸ್‌ನ ಚಟುವಟಿಕೆಯಲ್ಲಿ ಭಾಗ ವಹಿಸಲು ಸರ್ಕಾರಿ ನೌಕರರಿಗೆ ಅವಕಾಶ ನೀಡಿರುವುದು ಸರಿಯೆ’ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ಬಿ. ಕೆ. ಚಂದ್ರಶೇಖರ್

ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಸರ್ಕಾರಿ ನೌಕರರು ಸೇವೆ ಆರಂಭಿಸುವ ಮೊದಲು ‘ನಾನು ಭಾರತದ ಸಂವಿಧಾನಕ್ಕೆ ಬದ್ಧನಾಗಿರುತ್ತೇನೆ. ನಿಜವಾದ ನಿಷ್ಠೆಯನ್ನು ಹೊಂದಿದ್ದೇನೆ. ನನ್ನ ಕಚೇರಿಯ ಕರ್ತವ್ಯಗಳನ್ನು ನಿಷ್ಠೆಯಿಂದ, ಪ್ರಾಮಾಣಿಕವಾಗಿ, ನಿಷ್ಪಕ್ಷಪಾತವಾಗಿ ನಿರ್ವಹಿಸುತ್ತೇನೆ’ ಎಂದು ಪ್ರತಿಜ್ಞೆ ಸ್ವೀಕರಿಸುತ್ತಾರೆ. ಅಂದರೆ, ಯಾವುದೇ ಧರ್ಮ, ಜಾತಿ, ಜನಾಂಗದ ಆಧಾರದಲ್ಲಿ ತಾರತಮ್ಯ ಮಾಡಬಾರದು ಎಂಬುದನ್ನು ಪ್ರಮಾಣವಚನ ತಿಳಿ ಸುತ್ತದೆ. ಆದರೆ, ಆರ್‌ಎಸ್‌ಎಸ್ ಹಿಂದೂ ರಾಷ್ಟ್ರ ನಿರ್ಮಾಣದ ಗುರಿಯನ್ನು ಇಟ್ಟುಕೊಂಡಿದೆ. ಇದು ಸಂವಿಧಾನದ ನಿಷ್ಠೆಯನ್ನು ಹೇಗೆ ಖಾತ್ರಿಪಡಿಸುತ್ತದೆ’ ಎಂದು ಕೇಳಿದ್ದಾರೆ.

ದೇಣಿಗೆ ಮಾಹಿತಿ ಗೋಪ್ಯ: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳಿಗೆ ಬರುತ್ತಿರುವ ವಿದೇಶಿ ನಿಧಿ ಬಗ್ಗೆ ಆರ್‌ಎಸ್‌ಎಸ್ ಮಾಹಿತಿ ನೀಡುತ್ತಿಲ್ಲ. ಆರ್‌ಎಸ್‌ಎಸ್‌ಗೆ ಧನ ಸಹಾಯ ಎಲ್ಲಿಂದ ಬರುತ್ತದೆ ಎಂದು 2002ರಲ್ಲಿಯೇ ದೇಶದ ಪ್ರಮುಖ ಪತ್ರಿಕೆಗಳು ಆರ್‌ಎಸ್‌ಎಸ್ ನಾಯಕ ರಾಮ್ ಮಾಧವ್ ಅವರನ್ನು ಪ್ರಶ್ನಿಸಿದ್ದವು. ಅವರು ಸ್ಪಷ್ಟ ಉತ್ತರವನ್ನು ನೀಡಿರಲಿಲ್ಲ. ವಿದೇಶಿ ದೇಣಿಗೆ ಪಡೆಯುವಾಗ ದೇಶದ ಎಲ್ಲ ಕಾನೂನುಗಳನ್ನು ಅನುಸರಿಸಿದೆಯೇ? ಹಿಂದೆ ಪಡೆದಿರುವ ದೇಣಿಗೆ ಬಗ್ಗೆ ಭಾರತ ಸರ್ಕಾರಕ್ಕೆ ಮಾಹಿತಿ ನೀಡಿದೆಯೇ’ ಎಂದು ಪ್ರಶ್ನಿಸಿದ್ದಾರೆ.

‘ಸಾಂಸ್ಕೃತಿಕ ಸಂಘಟನೆ ಎಂದು ಬಿಂಬಿಸಿಕೊಂಡಿರುವ ಆರ್‌ಎಸ್‌ಎಸ್ ಡಾಲರ್ ಲೆಕ್ಕದಲ್ಲಿ ಅಮೆರಿಕದಿಂದ ಉದಾರ ದೇಣಿಗೆ ಪಡೆದಿರುವ ಬಗ್ಗೆ ಭಾರತೀಯ ಸಂಶೋಧಕರು ಮತ್ತು ಅಮೆರಿಕದ ಶಿಕ್ಷಣ ತಜ್ಞರು ದಾಖಲಿಸಿದ್ದಾರೆ. ಅಮೆರಿಕದಲ್ಲಿರುವ ಹಿಂದೂ ಬಲಪಂಥೀಯ ಗುಂಪುಗಳು ಕೋವಿಡ್ ವೇಳೆ 8.33 ಲಕ್ಷ ಡಾಲರ್ ಸಂಗ್ರಹಿಸಿ ನೀಡಿದ್ದವು‘ ಎಂದು ಅಂಕಿ ಅಂಶ ನೀಡಿದ್ದಾರೆ.

ಇಂಥ ಸಮಯದಲ್ಲಿ ಮಧ್ಯ ಪ್ರದೇಶದ ಹೈಕೋರ್ಟ್ ‘ಆರ್‌ಎಸ್‌ಎಸ್‌ನಂಥ ಅಂತರ ರಾಷ್ಟ್ರೀಯ ಖ್ಯಾತಿಯ ಸಂಘಟನೆಯನ್ನು ದೇಶದ ನಿಷೇಧಿತ ಸಂಘಟನೆಗಳ ಪಟ್ಟಿಯಲ್ಲಿ ಇರಿಸಿದ್ದ ತಪ್ಪನ್ನು ಕೇಂದ್ರ ಸರ್ಕಾರ ಸರಿಪಡಿಸಿಕೊಂಡಿರುವುದು ಸರಿಯಾದ ಕ್ರಮ’ ಎಂದಿದೆ. ಹೀಗಾದರೆ ಸರ್ಕಾರಿ ನೌಕರರು ಸಂವಿಧಾನಕ್ಕೆ ಬದ್ಧರಾಗಿರುತ್ತಾರೆಯೇ? ಒಂದು ಸಂಘಟನೆಯಾಗಿ ಆರ್‌ಎಸ್‌ಎಸ್ ಯಾರಿಗೂ ಜವಾಬ್ದಾರಿಯಲ್ಲ. ಆದರೆ, ಸಂಸದೀಯ ಪ್ರಜಾಪ್ರಭುತ್ವ ಎಲ್ಲದಕ್ಕೂ ಜವಾಬ್ದಾರಿ ಎಂದು ಬಿಕೆಸಿ ಹೇಳಿದ್ದಾರೆ.


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ದಿನಾಂಕ: 23.10.2024, ಬುಧವಾರ
ಸಮಯ: ಬೆಳಗ್ಗೆ 11.00 ಗಂಟೆಗೆ
ಸ್ಥಳ: ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಹತ್ತಿರ ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಬೆಂಗಳೂರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿವ್ಯ ಸಾನಿಧ್ಯ
ಶ್ರೀ ಶ್ರೀ ಶ್ರೀ ಶಿವರುದ್ರ ಮಹಾಸ್ವಾಮಿಗಳು, ಶ್ರೀ ಬೇಲಿ ಮಠ, ಬೆಂಗಳೂರು
ಜಗದ್ಗುರು ಶ್ರೀ ಶ್ರೀ ಶ್ರೀ ಜಯಬಸವ ಮೃತ್ಯುಂಜಯ ಮಹಾಸ್ವಾಮಿಗಳು, ಲಿಂಗಾಯತ ಪಂಚಮಸಾಲಿ ಮಹಾಪೀಠ, ಕೂಡಲಸಂಗಮ, ಬಾಗಲಕೋಟೆ ಜಿಲ್ಲೆ

ಘನ ಉಪಸ್ಥಿತಿ
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಕೇಂದ್ರ ಹಣಕಾಸು, ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಕುಮಾರಿ ಶೋಭಾ ಕರಂದ್ಲಾಜೆ, ಮಾನ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ವಿ. ಸೋಮಣ್ಣ, ಮಾನ್ಯ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ಶಿವರಾಜ ಎಸ್. ತಂಗಡಗಿ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಉದಯ್ ಬಿ. ಗರುಡಾಚಾರ್, ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೆ.ಜೆ. ಜಾರ್ಜ್, ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೃಷ್ಣ ಭೈರೇಗೌಡ, ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಸುರೇಶ್ ಬಿ.ಎಸ್., ಮಾನ್ಯ ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್
ಶ್ರೀ ಆರ್. ಅಶೋಕ, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ
ಶ್ರೀ ಸಲೀಂ ಅಹ್ಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್
ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ದೊಡ್ಡನಗೌಡ ಎಚ್. ಪಾಟೀಲ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ನಸೀರ್ ಅಹ್ಮದ್, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಡಾ. ಕೆ. ಗೋವಿಂದರಾಜ್, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಶ್ರೀ ಎನ್.ಎ. ಹ್ಯಾರಿಸ್, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಶ್ರೀ ಬಿ. ಶಿವಣ್ಣ, ಮಾನ್ಯ ಅಧ್ಯಕ್ಷರು, ಬೆಂಮಸಾಸಂಸ್ಥೆ ಹಾಗೂ ಶಾಸಕರು, ಆನೇಕಲ್ ವಿಧಾನಸಭಾ ಕ್ಷೇತ್ರ
ಶ್ರೀ ವಿಜಯಾನಂದ ಕಾಶಪ್ಪನವರ, ಮಾನ್ಯ ಅಧ್ಯಕ್ಷರು, ವೀರಶೈವ – ಲಿಂಗಾಯತ ಅಭಿವೃದ್ಧಿ ನಿಗಮ ಹಾಗೂ ಮಾನ್ಯ ಶಾಸಕರು, ಹುನಗುಂದ ವಿಧಾನಸಭಾ ಕ್ಷೇತ್ರ
ಡಾ. ಪುರುಷೋತ್ತಮ ಬಿಳಿಮಲೆ, ಮಾನ್ಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ಅವರು ಸಮಾರಂಭದಲ್ಲಿ ಭಾಗವಹಿಸಿರುವುದು.

ಅತಿಥಿಗಳು: ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು / ರಾಜ್ಯಸಭಾ ಸದಸ್ಯರು / ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು / ಚುನಾಯಿತ ಜನಪ್ರತಿನಿಧಿಗಳು ಹಾಗೂ ಗಣ್ಯರು

ಸರ್ವರಿಗೂ ಆದರದ ಸುಸ್ವಾಗತ
ಡಾ॥ ಎಂ.ಎನ್ ಅಜಯ್ ನಾಗಭೂಷಣ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಡಾ. ಧರಣೀದೇವಿ ಮಾಲಗತ್ತಿ, ಭಾ.ಪೊ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

HONDA

Shine 100

5% ಕ್ಯಾಶ್‌ಬ್ಯಾಕ್ ₹5000# ವರೆಗೆ

ಕಡಿಮೆ ಡೌನ್ ಪೇಮೆಂಟ್ ₹1100*

Special offer
10 Years Warranty^
Valid till 31st Oct. '24

₹66600
ಎಕ್ಸ್–ಶೋರೂಂ ಬೆಲೆ
(ಕರ್ನಾಟಕ)

ವಿಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ

IDFC FIRST Bank — Bank*/Credit Card# | HDFC BANK — Credit Card# | TATA CAPITAL Two Wheeler Loans* | Chola Enter a better life*

BOOK ONLINE NOW! www.honda2wheelersindia.com
CLICK BOOK RELAX

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

#Cashback Offer available on all Honda two-wheeler models for EMI transactions made using HDFC Bank credit cards & IDFC First Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. ^3 years of standard and 7 years of free extended warranty only on Shine 100. ^This scheme is offered by Authorised Main Dealers and Associate Dealers. ^Offer valid until 31st October 2024. Product shown in the picture may vary from actual product available in the market. Accessories shown in the picture are not part of standard equipment. CBR [Click, Book, Relax] facility available at selected Dealerships only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ತಂತ್ರಜ್ಞಾನ





ಲಡಾಖ್‌ನಲ್ಲಿ ಬಾನಿಗೆ ಕಣ್ಣಿಟ್ಟ ದೇಶಿ ದೂರದರ್ಶಕ

ಇ.ಎಸ್. ಸುಧೀಂದ್ರ ಪ್ರಸಾದ್

ಚಂದ್ರಯಾನ-3ರ ನಂತರ ಇಡೀ ಜಗತ್ತನ್ನೇ ತನ್ನತ್ತ ನೋಡುವಂತೆ ಮಾಡಿದ ಭಾರತ, ಈ ಬಾರಿಯೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲನ್ನು ಸೃಷ್ಟಿಸಿದೆ. ಈ ಬಾರಿ ಚಂದ್ರನಲ್ಲ, ಬದಲಿಗೆ ನಕ್ಷತ್ರ, ಬಾಹ್ಯಾಕಾಶದ ಕಿರಣಗಳ ಮೇಲೆ ಕಣ್ಣು ನೆಟ್ಟಿದೆ. ಪ್ರಮುಖ ವಾತಾವರಣದ ಚೆರೆಂಕೋವ್ ಪ್ರಯೋಗದ ದೂರದರ್ಶಕವನ್ನು (MACE) ಸಮುದ್ರ ಮಟ್ಟದಿಂದ 4,300 ಮೀಟರ್ ಎತ್ತರದ ಲಡಾಕ್‌ನ ಹಾನ್ಲೆನಲ್ಲಿ ಸ್ಥಾಪಿಸಲಾಗಿದೆ. ಇದು ಯಾವುದೇ ಮಾಧ್ಯಮಗಳಲ್ಲಿ ಬೆಳಕಿಗಿಂತ ವೇಗವಾಗಿ ಚಲಿಸುವ ಕಣಗಳ ಮೂಲಕ ಹೊರಸೂಸುವ ವಿದ್ಯುತ್ಕಾಂತೀಯ ವಿಕಿರಣವಾದ ಚೆರೆಂಕೋವ್ ಹೊಂದಿದೆ.

> ಗಾಮಾಕಿರಣಗಳ ಮೇಲೆ ನಿಗಾ ಇಡಲು ಲಡಾಖ್‌ನಲ್ಲಿ ಸಂಪೂರ್ಣ ಸ್ವದೇಶಿ ದೂರದರ್ಶಕವನ್ನು ಸ್ಥಾಪಿಸಲಾಗಿದೆ. ವಾಯು ಮಾಲಿನ್ಯ, ಗಾಳಿ ಮಾಲಿನ್ಯವಿಲ್ಲದ ಈ ಪರಿಸರದಲ್ಲಿ ಬಾನಿನೆಡೆಗೆ ದೃಷ್ಟಿ ನೆಡಲು ಇನ್ನೂ ಅವಕಾಶಗಳಿವೆ ಎಂದು ಬಾಹ್ಯಾಕಾಶ ಸಂಸ್ಥೆ ಹೇಳಿದೆ.

ದೂರದರ್ಶಕ

ಆದರೆ, ಇದು ಸುದ್ದಿಯಲ್ಲಿರುವುದು ಈ ದೂರದರ್ಶಕವು ಜಗತ್ತಿನ ಅತ್ಯುನ್ನತ ಇಮೇಜಿಂಗ್ ಗಾಮಾ-ರೇ ದೂರದರ್ಶಕ ಎಂಬ ಸಂಗತಿಯಿಂದಾಗಿದೆ. ಇಲ್ಲಿರುವ ಮತ್ತೊಂದು ಹೆಮ್ಮೆ ಪಡುವ ಸಂಗತಿ ಎಂದರೆ, ಈ ಬೃಹತ್ ದೂರದರ್ಶಕವನ್ನು ಭಾರತದಲ್ಲೇ ನಿರ್ಮಿಸಲಾಗಿದ್ದು, ಭಾಭಾ ಪರಮಾಣು ಸಂಶೋಧನಕೇಂದ್ರವು ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದ ಸಹಯೋಗದಲ್ಲಿ ಅಭಿವೃದ್ಧಿಪಡಿಸಿ, ಭಾರತದ ಅತ್ಯಂತ ಎತ್ತರದ ಪ್ರದೇಶದಲ್ಲಿ ಸ್ಥಾಪಿಸಿದೆ.

ಗಾಮಾ ಕಿರಣ ಇಡೀ ವಿಶ್ವದಲ್ಲಿರುವ ಅತ್ಯಂತ ಶಕ್ತಿಯುತವಾದ ವಸ್ತು. ಅದನ್ನು ಸೆರೆ ಹಿಡಿಯುವುದು ಸುಲಭದ ಮಾತಲ್ಲ. ಅದರಲ್ಲೂ ಹಾನ್ಲೆಯ ಡಾರ್ಕ್ ಸ್ಕೈ ರಿಸರ್ವ್‌ನ ಶುಭ್ರ ಆಕಾಶದಲ್ಲಿ ಈ ದೂರದರ್ಶಕವು ಕನಿಷ್ಠ ಅಡಚಣೆಯೊಂದಿಗೆ ಆಗಸವನ್ನು ಬಿಟ್ಟ ಕಣ್ಣು ಬಿಟ್ಟಂತೆಯೇ ವೀಕ್ಷಿಸುತ್ತಿದೆ. ಬ್ರಹ್ಮಾಂಡದಲ್ಲಿನ ಸೂಪರ್‌ನೊವಾ, ಕಪ್ಪು ಕುಳಿ ಹಾಗೂ ಗಾಮಾ ರೇ ಸ್ಫೋಟವನ್ನು ವೀಕ್ಷಿಸುವ ಪ್ರಯತ್ನ ನಡೆಸಿದೆ.

ಹೇಗಿದೆ ಈ ಬೃಹತ್ ದೂರದರ್ಶಕ..?

ಈ ದೂರದರ್ಶಕವು ತಂತ್ರಜ್ಞಾನ ಆಧಾರಿತವಾಗಿ ಮಾತ್ರವಲ್ಲ, ತನ್ನ ಗಾತ್ರದಿಂದಲೂ ಜಗತ್ತಿನ ಗಮನ ಸೆಳೆದಿದೆ. ಇದರ ಎತ್ತರ 43 ಮೀಟರ್. ತೂಕ 175 ಟನ್. ಅತಿನೇರಳೆಯಲ್ಲಿನ ಬೆಳಕನ್ನು ಗುರುತಿಸುವ ಸಾಮರ್ಥ್ಯವಿರುವ 1,008 ಫೋಟೊಮಲ್ಟಿಪ್ಲಯರ್ ಟ್ಯೂಬ್‌ಗಳನ್ನು 21 ಮೀಟರ್ ವ್ಯಾಸದ ಕನ್ನಡಿಗೆ ಅಳವಡಿಸಲಾಗಿದೆ. ಭೂಮಿಯ ವಾತಾವರಣಕ್ಕೆ ಅತ್ಯಧಿಕ ಶಕ್ತಿಯುಳ್ಳ ಗಾಮಾ ಕಿರಣಗಳು ಡಿಕ್ಕಿ ಹೊಡೆದಾಗ ಉಂಟಾಗುವ ಚೆರೆಂಕೋವ್ ವಿಕಿರಣವನ್ನು ಇದು ಕೆಲವೇ ಕ್ಷಣಗಳಲ್ಲಿ ಸೆರೆ ಹಿಡಿಯುವ ಸಾಮರ್ಥ್ಯ ಹೊಂದಿದೆ. ಆ ಮೂಲಕ ಬ್ರಹ್ಮಾಂಡದಲ್ಲಿನ ಇಂಥ ಅತ್ಯಂತ ಅಪರೂಪದ ಸನ್ನಿವೇಶಗಳನ್ನು ಇದು ಸೆರೆಹಿಡಿದು, ಗ್ರಹಿಸಿ ಮಾಹಿತಿ ನೀಡುವ ಸಾಮರ್ಥ್ಯ ಹೊಂದಿದೆ.

356 ಚದರ ಮೀಟರ್‌ನಷ್ಟು ಬೃಹತ್ ಪ್ರತಿಫಲಕವನ್ನು ಇದು ಹೊಂದಿದೆ. ಇದಕ್ಕಾಗಿಯೇ 1,424 ವಜ್ರದಂತೆ ಕತ್ತರಿಸಿದ ಲೋಹದ ಗಾಜುಗಳನ್ನು ಅಳವಡಿಸಲಾಗಿದೆ. 712 ಆಕ್ಚುಯೇಟರ್‌ಗಳು, 68 ಕ್ಯಾಮೆರಾ ಮಾಡ್ಯೂಲ್‌ಗಳನ್ನು ಇದು ಹೊಂದಿದೆ. ಇಷ್ಟೆಲ್ಲಾ ಸಾಮರ್ಥ್ಯವಿರುವ ಈ ನೂತನ ದೂರದರ್ಶಕವು ಸುಮಾರು 200 ದಶಲಕ್ಷ ಜ್ಯೋತಿರ್ವರ್ಷ ದೂರದ ಗಾಮಾ ಕಿರಣಗಳನ್ನು ಪತ್ತೆ ಮಾಡಿದೆ.

ಗಾಮಾ ಕಿರಣಗಳು ಭೂಮಿ ಪ್ರವೇಶಿಸುವುದನ್ನು ಇಲ್ಲಿನ ವಾತಾವರಣ ತಡೆಯುತ್ತದೆ. ಆದರೆ, ಈ ಸಂಧಿಸುವ ಕ್ರಿಯೆಯು ಅತಿ ಶಕ್ತಿಯುತವಾದ ಕಣಗಳನ್ನು ಸೃಷ್ಟಿಸುತ್ತದೆ. ಇವು ಅತಿ ವೇಗದಲ್ಲಿ ಸಾಗುವ ಸಾಮರ್ಥ್ಯವಿದ್ದು, ಚೆರೆಂಕೋವ್ ವಿಕಿರಣವನ್ನು ಹೊರಸೂಸುತ್ತದೆ. ಒಂದರ್ಥದಲ್ಲಿ ಇದನ್ನು ಸೋನಿಕ್ ಬಾಂಬ್ ಎಂದೂ ಕರೆಯಲಾಗುತ್ತದೆ. ಈ ಘಟನೆಯನ್ನು ದೂರದರ್ಶಕದಲ್ಲಿರುವ ಕ್ಯಾಮೆರಾ ಹಾಗೂ ಪ್ರತಿಫಲಕಗಳು ಸೆರೆ ಹಿಡಿದು, ಅದರ ಮೂಲವನ್ನು ಶೋಧಿಸುತ್ತವೆ.

ಕಾಸ್ಮಿಕ್ ರೇ ಸಂಶೋಧನೆಯಲ್ಲಿ ತೊಡಗಿರುವ ಜಗತ್ತಿನ ಇತರ ರಾಷ್ಟ್ರಗಳ ವಿಜ್ಞಾನಿಗಳಿಗೂ ಭಾರತದ ಈ ವಿಶೇಷ ದೂರದರ್ಶಕ ನೆರವಾಗಬಲ್ಲದು. ಗಾಮಾ ಕಿರಣ ಹಾಗೂ ಗುರುತ್ವಾಕರ್ಷಣ ತರಂಗಾಂತರಗಳನ್ನು ಆಧರಿಸಿ ಖಗೋಳ ಅಧ್ಯಯನ ನಡೆಸುವವರೊಂದಿಗೆ ಈ ನೂತನ ದೂರದರ್ಶಕದ ಮಾಹಿತಿಯನ್ನು ಒಪ್ಪಂದದ ಆಧಾರದಲ್ಲಿ ಹಂಚಿಕೊಳ್ಳುವ ಸೂಚನೆಯನ್ನು ಪರಮಾಣು ಇಂಧನ ಇಲಾಖೆಯ ಕಾರ್ಯದರ್ಶಿ ಡಾ. ಅಜಿತ್ ಕುಮಾರ್ ಮೊಹಂತಿ ನೀಡಿದ್ದಾರೆ.

ಅಷ್ಟಕ್ಕೂ ಈ ಬೃಹತ್ ದೂರದರ್ಶಕವನ್ನು ವೈಜ್ಞಾನಿಕ ಲೆಕ್ಕಾಚಾರದ ಆಧಾರದಲ್ಲೇ ಹಾನ್ಲೆಯಲ್ಲಿ ಅಳವಡಿಸಲಾಗಿದೆ. ಗಾಮಾ ಕಿರಣಗಳನ್ನು ಸೆರೆಹಿಡಿಯಲು ಭೂಮಿ ಮೇಲೆ ಅತಿ ಕಡಿಮೆ ಬೆಳಕಿನ ಮಾಲಿನ್ಯ ಅಗತ್ಯ. ಕಡಿಮೆ ತೇವಾಂಶ, ಕತ್ತಲ ಆಕಾಶ, ಮಾಲಿನ್ಯ ಮುಕ್ತ ಆಗಸ ಈ ಎಲ್ಲಾ ಕಾರಣಗಳಿಂದಾಗಿ ಎಂಎಸಿಇ ಅನ್ನು ಲಡಾಕ್‌ನ ಈ ಪ್ರದೇಶದಲ್ಲಿ ಅಳವಡಿಸಲಾಗಿದೆ. ಇಲ್ಲಿ ಇನ್ನಷ್ಟು ದೂರದರ್ಶಕ ಅಳವಡಿಸಲು ಅವಕಾಶ ಇದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ❖

ಇಂಧನ ಚೆಲ್ಲುವುದರ ಹಿಂದಿದೆ ವಿಜ್ಞಾನ

ಸೂರ್ಯನಾರಾಯಣ ವಿ.

ಘಟನೆ 1: **ಅಕ್ಟೋಬರ್ 14ರಂದು** ಏರ್ ಇಂಡಿಯಾದ ಬೋಯಿಂಗ್ 777 ವಿಮಾನ ಮುಂಬೈನಿಂದ ಅಮೆರಿಕದ ನ್ಯೂಯಾರ್ಕ್‌ಗೆ ಹೊರಟಿತ್ತು. 16 ಗಂಟೆಗಳ ಸುದೀರ್ಘ ಪ್ರಯಾಣಕ್ಕಾಗಿ ಬೇಕಾದಷ್ಟು (130 ಟನ್) ಇಂಧನವನ್ನು ತುಂಬಿಕೊಂಡು ಪ್ರಯಾಣ ಆರಂಭಿಸಿತ್ತು. ಟೇಕ್‌ಆಫ್ ಆದ ಸ್ವಲ್ಪ ಹೊತ್ತಿನಲ್ಲಿ ವಿಮಾನದಲ್ಲಿ ಬಾಂಬ್ ಇದೆ ಎಂಬ ಕರೆ ಬರುತ್ತದೆ. ವಿಮಾನದಲ್ಲಿದ್ದ 200 ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆಗಾಗಿ ವಿಮಾನವನ್ನು ತುರ್ತಾಗಿ ಇಳಿಸುವುದು ಅನಿವಾರ್ಯವಾಗುತ್ತದೆ. ಪ್ರಯಾಣದ ಮಾರ್ಗವನ್ನು ದೆಹಲಿಯತ್ತ ತಿರುಗಿಸಿದ ವಿಮಾನ, ಅಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡುವುದಕ್ಕೂ ಮುನ್ನ ಆಗಸದಲ್ಲಿಯೇ 100 ಟನ್‌ಗಳಷ್ಟು ಇಂಧನವನ್ನು ಹೊರಚೆಲ್ಲಿತು.

ಘಟನೆ 2: ಅಕ್ಟೋಬರ್ 11ರಂದು ತಮಿಳುನಾಡಿನ ತಿರುಚಿನಾಪಳ್ಳಿಯಿಂದ ಶಾರ್ಜಾಕ್ಕೆ ಹೊರಟಿದ್ದ 141 ಪ್ರಯಾಣಿಕರಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಟೇಕ್‌ಆಫ್ ಆಗುತ್ತಿದ್ದಂತೆಯೇ ವಿಮಾನದ ಲ್ಯಾಂಡಿಂಗ್ ಗೇರ್‌ನ (ಭೂಸ್ಪರ್ಶ ಮಾಡುವಾಗ ಚಕ್ರಗಳು ಹೊರಬರುವ ವ್ಯವಸ್ಥೆ) ಹೈಡ್ರೋಲಿಕ್ ವ್ಯವಸ್ಥೆಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತು. ತಿರುಚಿನಾಪಳ್ಳಿ ವಿಮಾನ ನಿಲ್ದಾಣದಲ್ಲಿಯೇ ತುರ್ತು ಭೂಸ್ಪರ್ಶ ಮಾಡುವುದಕ್ಕೂ ಮೊದಲು, ವಿಮಾನದಲ್ಲಿದ್ದ ಇಂಧನವನ್ನು ಖಾಲಿ ಮಾಡುವುದಕ್ಕಾಗಿ ವಿಮಾನ ಎರಡೂವರೆ ಗಂಟೆಗೂ ಹೆಚ್ಚು ಕಾಲ ಆಗಸದಲ್ಲಿ ಹಾರಾಡಿತು.

ಎರಡೂ ಘಟನೆಗಳಲ್ಲಿ ವಿಮಾನದ ಇಂಧನ ವ್ಯರ್ಥವಾಯಿತಲ್ಲಾ? ಇಂಧನ ದುಬಾರಿಯಾಗಿರುವ ಈ ಕಾಲದಲ್ಲಿ ಪೈಲಟ್‌ಗಳು ಮನಸ್ಸು ಮಾಡಿದ್ದರೆ ಟನ್‌ಗಟ್ಟಲೆ ಇಂಧನ ಉಳಿಸಬಹುದಿತ್ತಲ್ಲಾ ಎಂಬ ಯೋಚನೆ ಬರುವುದು ಸಹಜ. ಆದರೆ, ಇಂಧನ ಚೆಲ್ಲಿರುವುದು ಮತ್ತು ವಿಮಾನ ಸುಮ್ಮನೆ ಹಾರಾಡುತ್ತಾ ಇಂಧನ ವ್ಯಯಿಸಿರುವುದರ ಹಿಂದೆ ವಿಜ್ಞಾನ ಇದೆ. ಪ್ರಯಾಣಿಕರು ಮತ್ತು ವಿಮಾನ ಸಿಬ್ಬಂದಿಯ ಸುರಕ್ಷತೆಯ ಕಾಳಜಿಯೂ ಇದೆ.

ವಿಮಾನ ಹಾರಾಡುತ್ತಿರುವಾಗಲೇ ಇಂಧನ ಹೊರ ಚೆಲ್ಲುವುದು ಏಕೆ? ಉತ್ತರ ತುಂಬಾ ಸರಳ. ವಿಮಾನದ ತೂಕ ಇಳಿಸುವುದಕ್ಕಾಗಿ! ಕೆಲವು ವಿಮಾನಗಳ ವಿನ್ಯಾಸ ಹೇಗಿರುತ್ತದೆ ಎಂದರೆ, ಅವುಗಳು ಟೇಕ್ ಆಫ್ ಆಗುವಾಗ ಹೆಚ್ಚು ತೂಕ ಇದ್ದರೂ ತೊಂದರೆ ಇಲ್ಲ. ಆದರೆ, ಇಳಿಯುವಾಗ ಕಡಿಮೆ ತೂಕ ಇರಬೇಕು. ಟೇಕ್ ಆಫ್ ಆಗುವಾಗ ಇದ್ದ ವಿಮಾನದ ಭಾರಕ್ಕೆ ಹೋಲಿಸಿದರೆ, ಲ್ಯಾಂಡಿಂಗ್ ಆಗುವಾಗ ಅದರ ಭಾರ 90,909 ಕೆಜಿಯಷ್ಟು ಕಡಿಮೆ ಇರಬೇಕು. ವಿಮಾನ ಹಗುರ ಇದ್ದಷ್ಟೂ ವಿಮಾನದ ಇಳಿಯುವಿಕೆ ಸುರಕ್ಷಿತವಾಗಿರುತ್ತದೆ ಎಂಬುದು ಇದರ ಹಿಂದಿರುವ ವೈಜ್ಞಾನಿಕ ತರ್ಕ. ಹೆಚ್ಚು ತೂಕ ಇದ್ದರೆ ನೆಲ ಸ್ಪರ್ಶಿಸುವಾಗ ವಿಮಾನದ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಇದರಿಂದ ವಿಮಾನಕ್ಕೆ ಹಾನಿಯೂ ಆಗಬಹುದು, ಪ್ರಯಾಣಿಕರ ಸುರಕ್ಷತೆಗೂ ಧಕ್ಕೆಯಾಗಬಹುದು.

ತುರ್ತು ಭೂಸ್ಪರ್ಶಕ್ಕಾಗಿ ವಿಮಾನದ ರೆಕ್ಕೆಯಿಂದ ಇಂಧನ ಹೊರ ಬಿಡುತ್ತಿರುವುದು

ತುರ್ತು ಸಂದರ್ಭಕ್ಕಷ್ಟೇ ಸೀಮಿತ

ತುರ್ತು ಸಂದರ್ಭಗಳಲ್ಲಿ ಮಾತ್ರ ವಿಮಾನ ಹಾರಾಡುತ್ತಿರುವಾಗಲೇ ಇಂಧನ ಹೊರ ಚೆಲ್ಲಲಾಗುತ್ತದೆ ಅಥವಾ ಇಂಧನ ಖಾಲಿ ಮಾಡಲು ಆಗಸದಲ್ಲಿ ವಿಮಾನವನ್ನು ಹಾರಾಡಿಸಲಾಗುತ್ತದೆ. ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ವಿಮಾನ ಹೆಚ್ಚು ತೂಕ ಇದ್ದರೂ ಇಳಿಸಲಾಗುತ್ತದೆ. ಆಗಸದಲ್ಲಿ ಇಂಧನ ಚೆಲ್ಲುವುದರಿಂದ ಭೂಮಿಗೆ ಯಾವುದೇ ಅಪಾಯ ಇಲ್ಲ. ಸಾಮಾನ್ಯವಾಗಿ 5,000 ಅಡಿಗೂ ಹೆಚ್ಚು ಎತ್ತರದಲ್ಲಿ ಇಂಧನವನ್ನು ಹೊರ ಚೆಲ್ಲಲಾಗುತ್ತದೆ. ಅದು ಭೂಮಿಗೆ ತಲುಪುವುದಕ್ಕೆ ಮೊದಲೇ ಆವಿಯಾಗಿ ಹೋಗುತ್ತದೆ.

ಒಂದನೇ ಘಟನೆಯಲ್ಲಿ ಪ್ರಸ್ತಾಪಿಸಿರುವ ಏರ್ ಇಂಡಿಯಾ ವಿಮಾನ 16 ಗಂಟೆಗಳ ದೀರ್ಘ ಪ್ರಯಾಣಕ್ಕಾಗಿ 130 ಟನ್‌ಗಳಷ್ಟು ಇಂಧನವನ್ನು ಹೊಂದಿತ್ತು. ವಿಮಾನದ ತೂಕ, ಪ್ರಯಾಣಿಕರು, ಸರಕುಗಳು ಮತ್ತು ಇಂಧನ ಸೇರಿದಂತೆ ವಿಮಾನದ ಒಟ್ಟು ತೂಕ ಟೇಕ್ ಆಫ್ ಹೊತ್ತಿನಲ್ಲಿ 350 ಟನ್‌ಗಳಿಷ್ಟಿತ್ತು (3.50 ಲಕ್ಷ ಕೆಜಿ). ನ್ಯೂಯಾರ್ಕ್ ತಲುಪುವ ಹೊತ್ತಿಗೆ ಇಂಧನ ಖರ್ಚಾಗಿ, ವಿಮಾನದ ತೂಕ ಸುರಕ್ಷಿತವಾಗಿ ಇಳಿಯಲು ಬೇಕಾದ ಹಂತಕ್ಕೆ ಬರುತ್ತದೆ ಎಂಬುದು ಲೆಕ್ಕಾಚಾರ. ಮೊನ್ನೆ ಟೇಕ್ ಆಫ್ ಆದ ತಕ್ಷಣವೇ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ ತುರ್ತಾಗಿ ವಿಮಾನವನ್ನು ಇಳಿಸಬೇಕಾಗಿತ್ತು. ಇದಕ್ಕೆ ಅದರ ಒಟ್ಟಾರೆ ತೂಕ 90,999 ಕೆಜಿಯಷ್ಟು ತೂಕ ಕಡಿಮೆ ಇರಬೇಕಿತ್ತು. ಅದಕ್ಕಾಗಿ ಆಗಸದಲ್ಲಿಯೇ 100 ಟನ್‌ಗಳಷ್ಟು (ಒಂದು ಲಕ್ಷ ಕೆಜಿ) ಇಂಧನವನ್ನು ಹೊರ ಚೆಲ್ಲುವ ನಿರ್ಧಾರವನ್ನು ಪೈಲಟ್ ಕೈಗೊಂಡರು.

ಎರಡನೇ ಘಟನೆಯಲ್ಲಿ ವಿಮಾನ ಎರಡೂವರೆ ಗಂಟೆಗೂ ಹೆಚ್ಚು ಹೊತ್ತು ಆಗಸದಲ್ಲಿ ಹಾರಾಡಿದ್ದು ಕೂಡ ತೂಕ ಕಡಿಮೆಮಾಡುವುದಕ್ಕಾಗಿಯೇ. ತಿರುಚಿನಾಪಳ್ಳಿಯ ರನ್‌ವೇ ಕೂಡ ಚಿಕ್ಕದು. ಲ್ಯಾಂಡಿಂಗ್ ಗೇರ್ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇದ್ದುದರಿಂದ, ವಿಮಾನದ ಭಾರ ಹೆಚ್ಚಿದ್ದರೆ ತುರ್ತು ಭೂಸ್ಪರ್ಶದ ಸಂದರ್ಭದಲ್ಲಿ ಸಮಸ್ಯೆಯಾಗಬಹುದು ಎಂಬ ಕಾರಣಕ್ಕೆ ವಿಮಾನವನ್ನು ಆಗಸದಲ್ಲಿ ಸುತ್ತಾಡಿಸುತ್ತಾ ಇಂಧನ ಖಾಲಿ ಮಾಡುವ ತೀರ್ಮಾನವನ್ನು ಪೈಲಟ್ ತೆಗೆದುಕೊಂಡರು. ಅದೃಷ್ಟವಶಾತ್ ರಾತ್ರಿ 8.15ರ ಹೊತ್ತಿಗೆ ತುರ್ತು ಭೂಸ್ಪರ್ಶ ಮಾಡುವಾಗ ಲ್ಯಾಂಡಿಂಗ್ ಗೇರ್ ಸಮರ್ಪಕವಾಗಿ ಕೆಲಸ ಮಾಡಿದ್ದರಿಂದ ಎಲ್ಲ ಆತಂಕ ದೂರವಾಯಿತು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

11) ವಿದ್ಯುತ್ ಮಂಡಲಗಳಲ್ಲಿ ಮತ್ತು ಉಪಕರಣಗಳಲ್ಲಿ ಸಾಮಾನ್ಯವಾಗಿ ಬಳಸುವ ಯಾವುದಾದರೂ ಎರಡು ಸುರಕ್ಷಾ ಕ್ರಮಗಳನ್ನು ಹೆಸರಿಸಿ.

ಉತ್ತರ:- ವಿದ್ಯುತ್ ಮಂಡಲಗಳಲ್ಲಿ ಮತ್ತು ಉಪಕರಣಗಳಲ್ಲಿ ಸಾಮಾನ್ಯವಾಗಿ ಬಳಸುವ ಯಾವುದಾದರೂ ಎರಡು ಸುರಕ್ಷಾ ಕ್ರಮಗಳೆಂದರೆ (1) ವಿದ್ಯುತ್ ಫ್ಯೂಸ್
(2) ಭೂ ಸಂಪರ್ಕ ತಂತಿ

12) ಗೃಹ ವಿದ್ಯುತ್ ಮಂಡಲಗಳಲ್ಲಿ ಉಂಟಾಗುವ ಓವರ್ ಲೋಡ್‌ನ್ನು ತಪ್ಪಿಸಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು?

ಉತ್ತರ:- ಗೃಹ ವಿದ್ಯುತ್ ಮಂಡಲಗಳಲ್ಲಿ ಉಂಟಾಗುವ ಓವರ್ ಲೋಡ್‌ನ್ನು ತಪ್ಪಿಸಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರೆ

1) ವಿದ್ಯುತ್ ಮಂಡಳದಲ್ಲಿರುವ ಫ್ಯೂಸ್ ಮಂಡಲ ಹಾಗೂ ವಿದ್ಯುತ್ ಉಪಕರಣಗಳಿಗೆ ಓವರ್ ಲೋಡ್‌ನಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ.

2) ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಬಾರದು

3) ಅನೇಕ ವಿದ್ಯುತ್ ಸಲಕರಣೆಗಳನ್ನು ಏಕಕಾಲಕ್ಕೆ ಉಪಯೋಗಿಸಬಾರದು.

13) ಗೃಹ ಬಳಕೆಯ ವಿದ್ಯುತ್ ಮಂಡಲಗಳ ಬಗ್ಗೆ ಬರೆಯಿರಿ

ಉತ್ತರ:- ನಮ್ಮ ಮನೆಗಳಲ್ಲಿ, ನಾವು ಮುಖ್ಯ ವಿದ್ಯುತ್ ಪೂರೈಕೆಯ (mains ಎಂದೂ ಸಹ ಕರೆಯುವರು) ಮೂಲಕ ವಿದ್ಯುಚ್ಛಕ್ತಿಯನ್ನು ಪಡೆಯುತ್ತೇವೆ. ಇದು ವಿದ್ಯುತ್ ಕಂಬಗಳಿಗೆ ಹೊಂದಿಕೊಂಡಿರುವ ಮುಖ್ಯ ತಂತಿಯ ಮೂಲಕ ಅಥವಾ ನೆಲದಡಿಯಲ್ಲಿ ಹುದುಗಿಸಿದ ಕೇಬಲ್‌ಗಳ ಮೂಲಕ ನಮ್ಮ ಮನೆಯವರೆಗೆ ಬರುತ್ತದೆ. ಈ ಪೂರೈಕೆಯಲ್ಲಿನ ತಂತಿಗಳಲ್ಲಿ ಒಂದಾದ ಸಾಮಾನ್ಯವಾಗಿ ಕೆಂಪು ಅವಾಹಕ ಹೊದಿಕೆಯನ್ನು ಹೊಂದಿರುವ ತಂತಿಯನ್ನು ಸಜೀವ ತಂತಿ(ಅಥವಾ ಧನಾತ್ಮಕ) ಎಂದೂ ಹಾಗೂ ಇನ್ನೊಂದು ಕಪ್ಪು ಅವಾಹಕ ಹೊದಿಕೆಯನ್ನು ಹೊಂದಿರುವ ತಂತಿಯನ್ನು ತಟಸ್ಥ ತಂತಿ(ಅಥವಾ ಋಣಾತ್ಮಕ) ಎಂದೂ ಕರೆಯುವರು. ನಮ್ಮ ದೇಶದಲ್ಲಿ ಈ ಎರಡು ತಂತಿಗಳ ನಡುವಿನ ವಿಭವಾಂತರ 220V ಆಗಿದೆ.

ಮನೆಯಲ್ಲಿನ ಮೀಟರ್ ಬೋರ್ಡ್‌ನಲ್ಲಿ ಈ ತಂತಿಗಳು ಮುಖ್ಯ ಫ್ಯೂಸ್‌ನ ಮೂಲಕ ಹಾಯ್ದು ವಿದ್ಯುತ್ ಮೀಟರ್‌ಅನ್ನು ಪ್ರವೇಶಿಸುತ್ತದೆ. ಇವುಗಳನ್ನು ಮುಖ್ಯ ಸ್ವಿಚ್‌ನ ಮೂಲಕ ಮನೆಯಲ್ಲಿನ ವಿದ್ಯುತ್ ತಂತಿಗಳೊಂದಿಗೆ ಸಂಪರ್ಕಿಸಲಾಗುತ್ತದೆ. ಮನೆಯೊಳಗೆ ಈ ತಂತಿಗಳು ಪ್ರತ್ಯೇಕ ವಿದ್ಯುತ್ ಮಂಡಲಗಳಿಗೆ ವಿದ್ಯುತ್‌ಅನ್ನು ಪೂರೈಸುತ್ತವೆ. ಸಾಮಾನ್ಯವಾಗಿ ಎರಡು ಪ್ರತ್ಯೇಕ ವಿದ್ಯುತ್ ಮಂಡಲಗಳನ್ನು ಬಳಸುತ್ತೇವೆ. ಅವುಗಳಲ್ಲಿ ಒಂದು 15 A ವಿದ್ಯುತ್ ಪ್ರವಾಹವನ್ನು ಪ್ರವಹಿಸುವಂತೆ ಮಾಡುವ ಮಂಡಲದಲ್ಲಿ ಹೆಚ್ಚಿನ ಸಾಮರ್ಥ್ಯವುಳ್ಳ ಸಾಧನಗಳಾದ ಗೀಸರ್‌ಗಳು, ಕೂಲರ್‌ಗಳು, ತಂಪುಕಾರಕಗಳನ್ನು ಬಳಸಲಾಗುತ್ತದೆ. ಇನ್ನೊಂದು 5 A ವಿದ್ಯುತ್ ಪ್ರವಾಹವನ್ನು ಪ್ರವಹಿಸುವಂತೆ ಮಾಡುವ ಮಂಡಲದಲ್ಲಿ ಬಲ್ಬ್‌ಗಳು, ಫ್ಯಾನ್, ಇತ್ಯಾದಿಗಳನ್ನು ಬಳಸಲಾಗುತ್ತದೆ. ಹಸಿರು ಅವಾಹಕ ಹೊದಿಕೆಯನ್ನು ಹೊಂದಿರುವ ಭೂಸಂಪರ್ಕ ತಂತಿಯನ್ನು ಮನೆಯ ಹತ್ತಿರ ಭೂಮಿಯಲ್ಲಿ ಬಹಳಷ್ಟು ಆಳದಲ್ಲಿ ಹೂಳಲಾಗಿರುವ ಲೋಹದ ತಟ್ಟೆಗೆ ಜೋಡಿಸಲಾಗಿರುತ್ತದೆ. ಈ ತಂತಿಯ ಉಪಯೋಗವು ಪ್ರಮುಖವಾಗಿ ಲೋಹದ ಮೇಲ್ಮೈ ಹೊಂದಿರುವ ವಿದ್ಯುತ್ ಉಪಕರಣಗಳ ಸುರಕ್ಷತೆಗಾಗಿ ಬಳಸಲಾಗುತ್ತದೆ. ಉದಾಹರಣೆಗೆ ಇಸ್ತ್ರಿ ಪೆಟ್ಟಿಗೆ, ಟೋಸ್ಟರ್, ಮೇಜಿನ ಮೇಲಿನ ವಿದ್ಯುತ್ ಪಂಖ, ರೆಫ್ರಿಜರೇಟರ್ ಇತ್ಯಾದಿ. ವಿದ್ಯುತ್ ಉಪಕರಣಗಳಲ್ಲಿ ಅವುಗಳ ಲೋಹದ ಮೇಲ್ಮೈಗೆ ಭೂಸಂಪರ್ಕ ತಂತಿಯನ್ನು ಜೋಡಿಸಲಾಗುತ್ತದೆ ಇದು ಕಡಿಮೆ ರೋಧವನ್ನು ಹೊಂದಿರುವ ವಿದ್ಯುತ್ ಪ್ರವಾಹದ ಪಥವನ್ನು ಉಂಟುಮಾಡುತ್ತದೆ. ಹೀಗಾಗಿ, ಲೋಹದ ಮೇಲ್ಮೈ ಹೊಂದಿರುವ ಉಪಕರಣಕ್ಕೆ ಯಾವುದೇ ರೀತಿಯ ವಿದ್ಯುತ್ ಸೋರಿಕೆಯುಂಟಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿಸುತ್ತದೆ ಮತ್ತು ಬಳಕೆದಾರರಿಗೆ ತೀವ್ರ ವಿದ್ಯುತ್ ಆಘಾತವಾಗುವುದಿಲ್ಲ.



ಚಿತ್ರದಲ್ಲಿರುವಂತೆ ಸಾಮಾನ್ಯವಾಗಿ ಬಳಸುವ ಗೃಹ ಬಳಕೆಯ ವಿದ್ಯುತ್ ಮಂಡಲದ ಒಂದು ರೇಖಾಚಿತ್ರವನ್ನು ಕೊಡಲಾಗಿದೆ. ಪ್ರತಿಯೊಂದು ಪ್ರತ್ಯೇಕ ಮಂಡಲದಲ್ಲಿ ವಿವಿಧ ವಿದ್ಯುತ್ ಉಪಕರಣಗಳನ್ನು ಸಜೀವ ಮತ್ತು ತಟಸ್ಥ ತಂತಿಗಳ ನಡುವೆ ಜೋಡಿಸಲಾಗಿರುತ್ತದೆ. ಪ್ರತಿಯೊಂದು ವಿದ್ಯುತ್ ಉಪಕರಣವು ತನ್ನ ಮೂಲಕ ವಿದ್ಯುತ್ ಪ್ರವಾಹವನ್ನು ಪ್ರವಹಿಸಲು ಮತ್ತು ನಿಲ್ಲಿಸಲು 'ON/OFF' ಸ್ವಿಚ್ಚನ್ನು ಹೊಂದಿರುತ್ತದೆ. ಹಾಗಾಗಿ ಪ್ರತಿಯೊಂದು ಉಪಕರಣವು ಸಮಾನ ವಿಭವಾಂತರವನ್ನು ಹೊಂದಿರಲು ಅವುಗಳನ್ನು ಪರಸ್ಪರ ಸಮಾಂತರವಾಗಿ ಜೋಡಿಸಲಾಗಿರುತ್ತದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

10. Which are the various steps involved in the origin of life?

Ans:- (……..Contd)

Every element was in the atomic state. Condensation and cooling commenced resulting in development of core of heavy metals (e.g., Iron, Nickel), mantle of moderately heavy elements (e.g., Silicon, Aluminium) and surface of lighter elements (e.g., Sulphur, Sodium, Potassium, Phosphorus, Carbon, Nitrogen, Oxygen, etc.).

Volcanoes were abundant which continued to emit materials from inside over the surface.



Swan-necked experiment of Pasteur to prove biogenesis.

(2) Early Atmosphere - Even when surface of earth was semi-molten, it got enveloped by an atmosphere of lighter elements that still existed in the atomic stage, e.g., Hydrogen, Carbon, Nitrogen, Oxygen. Some of these had the tendency to escape into space as the force of gravity was not high. Early earth had, therefore, only 2 components, lithosphere and atmosphere. Hydrosphere did not develop till the temperature came down to less than 100 ° C.

Chemogeny or chemical Evolution

(3) Early Molecules - Elements present on the surface of earth as well as in the early atmosphere combined to produce simple and compound molecules. Metals combined to form metal nitrides and metal carbides, while atmospheric elements produced molecules of Hydrogen, Nitrogen, Water, Carbon Monoxide, Carbon Dioxide, Ammonia, Methane, etc. Free oxygen was absent. The atmosphere produced around the early hot earth due to reaction of free atoms is called **primary atmosphere**. It was **reducing** in nature due to absence of oxygen. It is also evident from the presence of reduced metals (e.g., Fe^{2+}) in early rocks while the recent rocks possess oxidized for m of metals (e.g., Pyrite Fe^{3+}). The molecules remained in the atmosphere till its temperature fell below 100° C. Below 100° C, water vapours condensed to form hot liquid water.



The latter fell down on surface of earth but evaporated immediately. It again became liquid to fall down again. This process of rain, heat and thunder continued for thousands of years. Volcanoes continued to emit lava and gases. Ultimately large oceans, lakes and rivers came into being. Water bodies came to have good quantity of salts brought down by rain from early atmosphere, volcanoes, erosion of rocks (e.g., chlorides, phosphates), washing of bottoms and shore lines as in fig below. This produced an early form of **hot dilute soup** of Haldane.



Sources of salts in early oceans

(4)Formation of Simple Organic Compounds-

According to Oparin and Haldane (1929), there was spontaneous generation of early organic molecules. It occurs when the atmosphere was reducing and devoid of ozone shield. Surface temperature of earth was more than 60° C. Ultraviolet radiations, cosmic rays, lightning and heat made the atmospheric components to react amongst themselves and produce organic compounds like sugars, fatty acids, glycerol, amino acids, pyrimidines as in figure below. There was little degradation of these organic compounds due to absence of enzymes and free oxygen. As a result a **dilute hot soup** or **broth** came into existence.

$$CH_4+CO_2+H_2O \rightarrow \text{Sugars+Fatty Acids+Glycerol}$$

The important basic requirements for origin of biomolecules were –

(i) **Reducing atmosphere** (atmosphere devoid of O_2 and having H_2)



Synthesis of organic compounds on early earth

(Contd……..)

ಕನ್ನಡ ಸಾಹಿತ್ಯ ಸಮ್ಮೇಳನ: ಮಂಡ್ಯ ಸಾಹಿತ್ಯಾಸಕ್ತರ ಬಳಗ ಎಚ್ಚರಿಕೆ

ಸಾಹಿತ್ಯೇತರರು ಅಧ್ಯಕ್ಷರಾದರೆ ನಿರಶನ

ಪ್ರಜಾವಾಣಿ ವಾರ್ತೆ

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಲೋಕದ ದಿಗ್ಗಜರೇ ಅಧ್ಯಕ್ಷರಾಗಬೇಕು. ಸಾಹಿತ್ಯೇತರರನ್ನು ಆಯ್ಕೆ ಮಾಡಿದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಬೇಕಾಗುತ್ತದೆ' ಎಂದು ಮಂಡ್ಯ ಸಾಹಿತ್ಯಾಸಕ್ತರ ಬಳಗದವರು ಎಚ್ಚರಿಕೆ ನೀಡಿದರು.

ನಗರದಲ್ಲಿ ಮಂಗಳವಾರ ಪ್ರತಿಭಟನಾ ಜಾಥಾ ನಡೆಸಿ, ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಲೇಖಕ ಜಗದೀಶ ಕೊಪ್ಪ, 'ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಏಕಪಕ್ಷೀಯವಾಗಿ ವರ್ತಿಸುತ್ತಿದ್ದಾರೆ. ಅವರ ಹುಚ್ಚಾಟಕ್ಕೆ ತಾಳ ಹಾಕುತ್ತಿರುವ ಸರ್ಕಾರದ ಧೋರಣೆಗೆ ನಮ್ಮ ವಿರೋಧವಿದೆ. ಸಾಹಿತ್ಯೇತರರು ಸಮ್ಮೇಳನಾಧ್ಯಕ್ಷರಾಗುವುದನ್ನು ಸಂಪೂರ್ಣ ವಿರೋಧಿಸುತ್ತೇವೆ' ಎಂದರು.

'ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಿ, ಕಲ್ಲಡ್ಕ ಪ್ರಭಾಕರ್, ಪ್ರಮೋದ್ ಮುತಾಲಿಕ್ ಅಂಥವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆಂದರೆ ಒಪ್ಪಲಾಗದು. ಎಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ ಅವರ ಹೆಸರನ್ನು ತೇಲಿ ಬಿಟ್ಟಿದ್ದಾರೆ. ಪುಣ್ಯಕ್ಕೆ ಪ್ರಜ್ವಲ್ ರೇವಣ್ಣ ಹೆಸರನ್ನು ಹೇಳಿಲ್ಲ' ಎಂದು ತಿಳಿಸಿದರು.

'ಅಮೆರಿಕದಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಅವರ ಮೊಮ್ಮಗಳನ್ನು ಆಹ್ವಾನಿಸಿರುವುದು ಅಧ್ಯಕ್ಷರಿಗೆ ಸಾಧನೆ ಎಂಬಂತೆ ಕಾಣುತ್ತಿದೆ. ಕನ್ನಂಬಾಡಿ ಅಣೆಕಟ್ಟೆ ಕಟ್ಟಲು ಒಂದೂವರೆ ಕ್ವಿಂಟಲ್ ಚಿನ್ನ ಮಾರಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸುತ್ತಿಲ್ಲ. ಜಿಲ್ಲೆಗೆ ಕೊಡುಗೆ ನೀಡಿದ ಟಿಪ್ಪು, ಶೇಷಾದ್ರಿ ಅಯ್ಯರ್ ಮರಿಮಕ್ಕಳು ಇಲ್ಲೇ ಇದ್ದರೂ ಆಹ್ವಾನಿಸಿಲ್ಲ. ಟಿಪ್ಪು ಸಾಧನೆಗಳನ್ನು ಸಮ್ಮೇಳನದ ಗೋಷ್ಠಿಯಲ್ಲಿ ಚರ್ಚಿಸಬೇಕು' ಎಂದು ಒತ್ತಾಯಿಸಿದರು.

'ಸಮ್ಮೇಳನಕ್ಕೆ ₹30 ಕೋಟಿ ಅಗತ್ಯ ವಿದೆಯೇ? ಎಷ್ಟು ಸರ್ಕಾರಿ ಶಾಲೆಗಳ ಸೂರು ಸರಿ ಇದೆ? ಸಮ್ಮೇಳನದ ಸಮಸ್ತ ಖರ್ಚುವೆಚ್ಚಗಳ 'ಸೋಷಿಯಲ್ ಆಡಿಟ್' ಆಗಬೇಕು. ಮಠಾಧಿಪತಿಗಳನ್ನೋ, ರಾಜಕಾರಣಿಗಳನ್ನೋ ಸಮ್ಮೇಳನಾಧ್ಯಕ್ಷರನ್ನಾಗಿಸುವುದು ಪರಿಷತ್ತಿಗೆ ಶೋಭೆ ತರುವುದಿಲ್ಲ' ಎಂದರು.

ಪ್ರೊ.ಜಿ.ಟಿ. ವೀರಪ್ಪ, ಚಿಕ್ಕಮರಳಿ ಬೋರೇಗೌಡ, ಮುಖಂಡರಾದ ಗುರುಪ್ರಸಾದ್ ಕೆರಗೋಡು, ಸಿ.ಕುಮಾರಿ, ಬಿ.ಟಿ.ವಿಶ್ವನಾಥ್ ಇದ್ದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತಿಗಳನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಸಾಹಿತ್ಯಾಸಕ್ತರ ಬಳಗದವರು ಪ್ರತಿಭಟನೆ ನಡೆಸಿದರು

ಸಿಇಟಿ: 16 ಸಾವಿರ ಸೀಟು ಉಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಎರಡನೇ ಮುಂದುವರಿದ ಸುತ್ತಿನ ಪ್ರವೇಶ ಪ್ರಕ್ರಿಯೆ ನಂತರ ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳ 16,004 ಸೀಟುಗಳು ಭರ್ತಿಯಾಗದೆ ಉಳಿದಿವೆ.

ಸರ್ಕಾರ ಹಾಗೂ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ನಡುವಿನ ಒಪ್ಪಂದದ ಪ್ರಕಾರ ಪ್ರವೇಶ ಪ್ರಕ್ರಿಯೆ ನಂತರ ಬಾಕಿ ಉಳಿದ ಸೀಟುಗಳನ್ನು ಕಾಲೇಜುಗಳಿಗೆ ಬಿಟ್ಟು ಕೊಡಬೇಕಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಎಂಜಿನಿಯರಿಂಗ್‌ನ ವಿವಿಧ ವಿಭಾಗಗಳಲ್ಲಿ 13,089, ಆರ್ಕಿಟೆಕ್ಚರ್ ಕೋರ್ಸ್‌ನಲ್ಲಿ 569 ಸೀಟು ಭರ್ತಿಯಾಗಿಲ್ಲ. ಸೀಟು ಹಂಚಿಕೆಯಾದ 2,208 ವಿದ್ಯಾರ್ಥಿಗಳು ಶುಲ್ಕ ಪಾವತಿಸಿಲ್ಲ. ಶುಲ್ಕ ಪಾವತಿಸಿದ 95 ವಿದ್ಯಾರ್ಥಿಗಳು ಕಾಲೇಜುಗಳಿಗೆ ಪ್ರವೇಶ ಪಡೆದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಈಗಲೂ ನನಗೆ ಸ್ವಂತ ಮನೆ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: '45 ವರ್ಷದ ರಾಜಕಾರಣದಲ್ಲಿ ಎಂದೂ ಬದಲಾಗಿಲ್ಲ, ಅನ್ಯಾಯ ಮಾಡಿಲ್ಲ. ಒಂದು ರೂಪಾಯಿ ಲಂಚ ಪಡೆದಿಲ್ಲ. ಈಗಲೂ ಸ್ವಂತ ಮನೆ ಇಲ್ಲ. ನನ್ನ ಮೇಲಿನ ಸುಳ್ಳು ಆರೋಪವನ್ನು ಸಹಿಸುತ್ತೀರಾ?' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಕ್ಷೇತ್ರ ವರುಣದ ಮತದಾರರನ್ನು ಪ್ರಶ್ನಿಸಿದರು.

ನಂಜನಗೂಡು ತಾಲ್ಲೂಕಿನ ತಾಯೂರು ಬಳಿ ಮಂಗಳವಾರ ಕ್ಷೇತ್ರ ವ್ಯಾಪ್ತಿಯಲ್ಲಿ ₹501ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ಮಾಡಿ ಮಾತನಾಡಿ, 'ಸಾರ್ವಜನಿಕರಿಂದ ಹಣ ಪಡೆದಿದ್ದರೆ ಒಂಬತ್ತು ಚುನಾವಣೆ ಗೆಲ್ಲಲು ಆಗುತ್ತಿತ್ತಾ? ನನ್ನ ಜೀವನ ತೆರೆದ ಪುಸ್ತಕ. ಯಾರೂ ಬೇಕಾದರೂ ಓದಬಹುದು' ಎಂದರು.

'ನನ್ನ ಬಾಮೈದ ತನ್ನ ತಂಗಿಗೆ ಅರಿಶಿನ ಕುಂಕುಮಕ್ಕೆ ಕೊಟ್ಟ ಜಮೀನನ್ನೇ ಮುಂದಿಟ್ಟುಕೊಂಡು ವಿವಾದ ಮಾಡಿದರು. ಮುಡಾದಿಂದ ಪಡೆದ ನಿವೇಶನಗಳನ್ನೇ ವಾಪಸ್ ಕೊಟ್ಟಿದ್ದೇವೆ. 4 ದಶಕದಿಂದ ಶಾಸಕನಾಗಿದ್ದರೂ, ಮೈಸೂರಿನಲ್ಲಿ ಮರಿಸ್ವಾಮಿ ಎಂಬುವರ ಮನೆಯಲ್ಲಿದ್ದೇನೆ. ಮೂರು ವರ್ಷದಿಂದ ಮನೆ ಕಟ್ಟಿಸುತ್ತಿದ್ದೇನೆ. ನೀವೇ ನಮ್ಮ ಮಾಲೀಕರು, ನೀವು ಮಾತನಾಡಿ' ಎಂದರು.

'ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಪ್ರಲ್ಹಾದ ಜೋಶಿ, ಬಿ.ವೈ. ವಿಜಯೇಂದ್ರ ಮೊದಲಾದವರಿಗೆ ನನ್ನನ್ನು ಕಂಡರೆ ಹೊಟ್ಟೆಉರಿ. ಮುಖ್ಯಮಂತ್ರಿ ಮೇಲೆ ಗೂಬೆ ಕೂರಿಸುವ ಕೆಲಸ ನಡೆದಿದೆ. ನನಗೆ ಜಾತಿ- ಧರ್ಮದ ಹಂಗಿಲ್ಲ. ನಿಮ್ಮ ಆಶೀರ್ವಾದವಿರುವವರೆಗೆ ಬಿಜೆಪಿ- ಜೆಡಿಎಸ್ ಅನ್ನು ಸಮರ್ಥವಾಗಿ ಎದುರಿಸಲಿದ್ದೇನೆ. ಕಾನೂನಿನ ಮೇಲೆ ಗೌರವವಿದ್ದು, ನ್ಯಾಯ ಸಿಗುವ ವಿಶ್ವಾಸವಿದೆ ಎಂದೂ ಮತದಾರರಿಗೆ ಅಗೌರವ ತರುವುದಿಲ್ಲ' ಎಂದರು.

ತೆರಿಗೆ ಅನ್ಯಾಯ: 'ಕೇಂದ್ರ ಸರ್ಕಾರ ಈಚೆಗಷ್ಟೇ ರಾಜ್ಯಗಳಿಗೆ ₹1.70 ಲಕ್ಷ ಕೋಟಿ ತೆರಿಗೆ ಪಾಲನ್ನು ಹಂಚಿದ್ದು, ಕರ್ನಾಟಕಕ್ಕೆ ಕೇವಲ ₹6,498 ಕೋಟಿ ಸಿಕ್ಕಿದೆ, ಉತ್ತರ ಪ್ರದೇಶಕ್ಕೆ ₹31 ಸಾವಿರ ಕೋಟಿ, ಬಿಹಾರಕ್ಕೆ ₹17 ಸಾವಿರ ಕೋಟಿ ಕೊಟ್ಟಿದೆ. ₹11,495 ಕೋಟಿ ವಿಶೇಷ ಅನುದಾನ ಕೊಡುವುದಾಗಿ ಹೇಳಿದ್ದರೂ ಒಂದು ರೂಪಾಯಿ ಕೊಟ್ಟಿಲ್ಲ. ರಾಜ್ಯದಿಂದಲೇ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ದೂರಿದರು.

ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, 'ತನಿಖೆಯ ನೆಪದಲ್ಲಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಯತ್ನ ನಡೆದಿದೆ. ಇಂದು ಕಾಂಗ್ರೆಸ್‌ಗೆ ಆದದ್ದು, ಮುಂದೆ ಎಲ್ಲ ವಿರೋಧ ಪಕ್ಷಗಳಿಗೂ ಆಗಬಹುದು. ದೇಶದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಶಾಲಾ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಾರ್ಯಾಲಯ, ಬೀದರ. ಜಿಲ್ಲೆ – ಬೀದರ.

No: DPI/2024-25/IND0350 Date: 21/10/2024

2023–24 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅಕ್ಷರ ಅವಿಷ್ಕಾರ ಯೋಜನೆ ಅನುದಾನದಡಿ ಬೀದರ ಜಿಲ್ಲೇಯ ಹುಮನಾಬಾದ ತಾಲೂಕಿನ 20 ಸರಕಾರಿ ಶಾಲೆಗಳಿಗೆ ಪ್ರೋಜೇಕ್ಟರ್/ಇಂಟರೆಕ್ಟಿವ ಎಲ್.ಇ.ಡಿ. ಡಿಸ್‌ಪ್ಲೇ ಮತ್ತು ಇತರೆ ಉಪಕರಣ ಸರಬರಾಜು ಸಂಬಂಧ ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. ದ್ವೀಲಕೋಟೆ ಪದ್ಧತಿಯಲ್ಲಿ ಆಸಕ್ತ ಅಧೀಕೃತ ಮಾರಾಟ ಸಂಸ್ಥೆಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ ಹಾಗೂ ವಿವರಗಳು: 1) ಟೆಂಡರ್ ಗೆ ಇಟ್ಟಿರುವ ಮೊಬಲಗು ರೂ:68.68ಲಕ್ಷ, 2) ಟೆಂಡರ್ ಡಾಕ್ಯುಮೆಂಟ್‌ನ್ನು ವೆಬ್ ಸೈಟ್ ನಿಂದ ಡೌನಲೋಡ್ ಮಾಡಕೊಳ್ಳಬೇಕಾದ ದಿನಾಂಕ :21–10–2024 ರಿಂದ 29–10–2024. ಸಂಜೆ: 5.00, 3) ಟೆಂಡರ್ ಬಿಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್ ಸೈಟ್ ಮೂಲಕ) ಸಮಯ ದಿ:29/10/2024 ಸಮಯ ಸಂಜೆ: 5.00, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ :30/10/2024 ಸಮಯ ಸಂಜೆ 5.15, 5) ಆರ್ಥಿಕ ಬಿಡ್ ಗಳನ್ನು ತೆರೆಯ ಬಹುದಾದ ಸಂಭಾವ್ಯ ದಿನಾಂಕ & ಸಮಯ ದಿ:08/11/2024 ಮು:11.00 ಗಂಟೆ, 6) ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) ರೂ:137400/–, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9448999330 8) ಅಂತರ ಜಾಲತಾಣದ ವಿಳಾಸ: www.kppp.kamataka.gov.in

ಸಹಿ/– ಉಪ ನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೀದರ ಜಿಲ್ಲೆ.

ವಾ.ಸಾ.ಸಂ.ಇ/ಬೀದರ/214/ಕೆಎಸ್‌ಎಂಸಿ&ಎ/2024–25

ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಯೋಜನಾ ಕಛೇರಿ, ಕಲಬುರಗಿ

ಸಂಖ್ಯೆ: ಸಶಿಕ/ಪತ್ರಿಕಾ ಪ್ರಕಟಣೆ/2024–25 ದಿನಾಂಕ:21–10–2024

–: ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :–

ಸಮಗ್ರ ಶಿಕ್ಷಣ ಕರ್ನಾಟಕ, ಕಲಬುರಗಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಸೇವೆ ಸರಬರಾಜು ಕಾಮಗಾರಿಗೆ ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಆಹ್ವಾನಿಸಲಾಗಿದೆ.

1) 2024–25 ನೇ ಸಾಲಿಗೆ ಕಲಬುರಗಿ ಜಿಲ್ಲೆಯ 6 ಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಿಗೆ ಸಿದ್ಧಪಡಿಸಿದ ಆಹಾರಪೂರೈಕೆ. ಟೆಂಡರ ಅಂದಾಜು ಮೊತ್ತ : ರೂ. 82,50,000/–, ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : ರೂ.1,65,000/–, 2) 2024–25 ನೇ ಸಾಲಿಗೆ ಕಲಬುರಗಿ ಜಿಲ್ಲೆಯ 6 ಕೆ.ಕೆ.ಜಿ.ಬಿ.ವಿ ವಸತಿ ನಿಲಯಗಳಿಗೆ ಅಗತ್ಯವಿರುವ ವಾರ್ಡನ್, ದೈಹಿಕ ಶಿಕ್ಷಕರು ಮತ್ತು ಮತ್ತು ಕಾವಲುಗಾರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ. ಟೆಂಡರ ಅಂದಾಜು ಮೊತ್ತ : ರೂ. 3,54,000/–, ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : ರೂ.7,080/–, 3) 2024–25 ನೇ ಸಾಲಿಗೆ ಕಲಬುರಗಿ ಜಿಲ್ಲೆಯ 7 ಕೆ.ಜಿ.ಬಿ.ವಿ ಟೈಪ್–4 ವಸತಿ ಶಾಲೆಗಳಿಗೆ ಅಗತ್ಯವಿರುವ ವಾರ್ಡನ್ ಕಾವಲುಗಾರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಟೆಂಡರ ಅಂದಾಜು ಮೊತ್ತ : ರೂ.3,58,500/–ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : ರೂ.7,170/–, 4) 2024–25ನೇ ಸಾಲಿಗಾಗಿ ಕಲಬುರಗಿ ಜಿಲ್ಲೆಯ ಡಿಪಿಓ ಕಛೇರಿಗೆ ವಾಹನ ಚಾಲಕರೊಂದಿಗೆ 1 ಕಾರ ಅಥವಾ ಬುಲೇರೋ ವಾಹನ (Non-Ac) ಬಾಡಿಗೆ ಆಧಾರದ ಸರಬರಾಜು ಮಾಡುವುದು. ಟೆಂಡರ ಅಂದಾಜು ಮೊತ್ತ : ರೂ.4,20,000/–, ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2%) : ರೂ. 10,500/–.

1) ಟೆಂಡರ ಪ್ರಕಟಣೆ ದಿನಾಂಕ : 22–10–2024, 2) ಟೆಂಡರ ಫಾರಂ ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ : 05–11–2024 ಸಾಯಂಕಾಲ 5.30 ಗಂಟೆಯ ವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 06–11–2024 ಬೆಳಿಗ್ಗೆ 11.00 ಗಂಟೆಗೆ, 4) ಮೂಲ ದಾಖಲೆಗಳ ಪರಿಶೀಲನೆ : 08–11–2024 ಬೆಳಿಗ್ಗೆ 11.00 ಗಂಟೆಗೆ, 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 12–11–2024 ಬೆಳಿಗ್ಗೆ 11.00 ಗಂಟೆಗೆ.

ಮೇಲಿನ ನಾಲ್ಕೂ ಟೆಂಡರ್‌ನ ಸಂಪೂರ್ಣ ವಿವರವನ್ನು **www.kppp.karnataka.gov.in** ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಗಮನಿಸುವುದು.

ಸಹಿ/– ಡಿಡಿಪಿಐ & ಡಿಪಿಓ
ಸಮಗ್ರ ಶಿಕ್ಷಣ ಕರ್ನಾಟಕ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/546/ಕೆಎಸ್‌ಎಂಸಿಎ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ))

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಉತ್ತರ ಪಶ್ಚಿಮ–1	ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024 (ಪರಿಶಿಷ್ಟ ಜಾತಿಗೆ ಮೀಸಲು)	ರೂ. 51,97,001/– ರೂ. 52,800/–	06.11.2024ರ ಮಧ್ಯಾಹ್ನ 12:00 ಗಂಟೆಯವರೆಗೆ	07.11.2024ರ ಮಧ್ಯಾಹ್ನ 12:30 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024	ರೂ. 30,48,495/– ರೂ.. 61,000/–		
3		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024	ರೂ. 39,24,730/– ರೂ. 79,000/–		
4		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024	ರೂ. 21,89,381/– ರೂ. 50,000/–		
5		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	ರೂ. 54,33,410/– ರೂ. 54,500/–		
6		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024	ರೂ. 37,83,691/– ರೂ. 75,700/–		
7		ಬೆಂಜಮಂ/ಕಾನಿಅ(ಉತ್ತರ ಪಶ್ಚಿಮ–1)/ಪಿಬಿ/ 2934/2024–25 ದಿನಾಂಕ: 21.10.2024(2ನೇ ಕರೆ)	ರೂ. 37,89,978/– ರೂ. 75,800/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಉತ್ತರ ಪಶ್ಚಿಮ–1).

ಮುಖ್ಯ ಅಭಿಯಂತರರ ಕಚೇರಿ(ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
8	ದಕ್ಷಿಣ ಪಶ್ಚಿಮ–2	ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 22,01,111/– ರೂ. 50,000/–	29.10.2024ರ ಸಂಜೆ 04:00 ಗಂಟೆಯವರೆಗೆ	30.10.2024ರ ಸಂಜೆ 04:00 ಗಂಟೆಯ ನಂತರ
9		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	ರೂ. 22,91,454/– ರೂ. 25,000/–		
10		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 26,89,161/– ರೂ. 54,000/–		
11		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 68,90,668/– ರೂ. 1,37,900/–		
12		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024 (ಪರಿಶಿಷ್ಟ ಜಾತಿಗೆ ಮೀಸಲು)	ರೂ. 22,85,853/– ರೂ. 25,000/–		
13		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 61,85,896/– ರೂ. 1,23,800/–		
14		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 68,15,066/– ರೂ. 1,36,400/–		
15		ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–2)/ತಾಂಅ/ ಪಿಬಿ/2505/2024–25 ದಿನಾಂಕ: 21.10.2024	ರೂ. 61,95,293/– ರೂ. 1,24,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ ಪಶ್ಚಿಮ–2).

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/2680/2024–25

ಕರ್ನಾಟಕ ಸರ್ಕಾರ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಅಧಿಸೂಚನೆ ಸಂಖ್ಯೆ: ಡಿಪಿಎಸ್/ಪಿಯುಆರ್‌ಬಿ/ಟಿಡಿಆರ್‌ಸಿ/09/2024–ಪಿಯುಆರ್/ಪಾರ್ಚ್ಮೆಂಟ್ & ಎನ್‌ಟಿಎಸ್ ದಿನಾಂಕ: 21–10–2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಹಳದಿ ಪಾರ್ಚ್‌ಮೆಂಟ್ ಕಾಗದ ಹಾಗೂ ನಾನ್–ಟೇರಬಲ್ ಶೀಟ್ಸ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.21.20 ಲಕ್ಷಗಳು ಹಾಗೂ ಇ.ಎಂ.ಡಿ.ಯು ರೂ.1.06 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 08–11–2024, 17.30 ಗಂಟೆ. ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು (ಪ್ರ)

ವಾ.ಸಾ.ಸಂ.ಇ/ವಾಪ್ರ/2676/ಆಕಾರ್/2024–25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ನಂ.1, ಡಾ. ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು – 560079
ದೂರವಾಣಿ: +91–80–29619801, ಇಮೇಲ್: md.ksmscl@gmail.com

No. KSMSCL/DRUGS/RETND(11)/2024-25/PRGM/GRUHA AROGYA/25/2024-25
Date: 22/10/2024

ಟೆಂಡರ್ ಪ್ರಕಟಣೆ

1. ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/DRUGS/RETND(II)/2024-25/PRGM/GRUHA AROGYA/25/2024-25(IND-0166).
2. ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/DRUGS/TND/2024-25/KFD/DEPA OIL/26/2024-25(IND-0167).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರನ್ನು ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. **2024–25 ನೇ ಸಾಲಿಗೆ NCD ಕಾರ್ಯಕ್ರಮದ ಗೃಹ ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ Medicine Boxes ಗಳನ್ನು ಖರೀದಿಸಿ ಪೂರೈಸುವ ಕುರಿತು.**
2. **2024–25 ನೇ ಸಾಲಿಗೆ KFD-NFDS ಕಾರ್ಯಕ್ರಮವಾದಡಿಯುಲ್ಲಿ DEPA OIL ನ್ನು ಖರೀದಿಸಿ ಪೂರೈಸುವ ಕುರಿತು.**

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ https://kppp.karnataka.gov.in ನಲ್ಲಿ 22/10/2024 ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕರು ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್. ಬೆಂಗಳೂರು.

DIPR/CP/2693/Zen/2024-25

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ಟಿಎಸ್‌ಪಿ/35/2024–25 ದಿನಾಂಕ : 22.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವಿಷಯ : ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿ ಕ್ರೀಡಾ ವಸತಿ ನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾಪಟುಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಒದಗಿಸುವ ಸಂಬಂಧ ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಕುರಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2024–25 ನೇ ಸಾಲಿಗೆ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿ ಕ್ರೀಡಾ ವಸತಿ ನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾಪಟುಗಳಿಗೆ ದೈನಂದಿನ ತರಬೇತಿಗೆ ಅವಶ್ಯಕವಿರುವ ಕ್ರೀಡಾ ಸಾಮಗ್ರಿಗಳನ್ನು ಒದಗಿಸುವ ಸಂಬಂಧ ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ : ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾಪಟುಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲು. ಟೆಂಡರ್‌ಗಿಟ್ಟ ಮೊತ್ತ : ರೂ 50,48,525/–, ಇಎಂಡಿ ಮೊತ್ತ : ರೂ.1,00,971.00. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. (1) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 06.11.2024 ಸಮಯ : 16.00 ಗಂಟೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07.11.2024 ಸಮಯ : 16.30 ಗಂಟೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : ಮುಂದಕ್ಕೆ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/2670/Zen/2024-25

ಆಯುಕ್ತರ ಕಛೇರಿ, ಮಹಾನಗರಪಾಲಿಕೆ, ಬಳ್ಳಾರಿ

ದೂರವಾಣಿ ಸಂಖ್ಯೆ: 08392–273479/278168 ಫ್ಯಾಕ್ಸ್: 08392–273477
ವೆಬ್‌ಸೈಟ್: www.ballaricity.mrc.gov.in | ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ –583101

ಸಂ:ಮನಪಾಬ/ಆಶಾ/ಘವನಿ/ತಾಂಶಾ/ಟೆಂಡರ್/15ನೇ ಹಣಕಾಸು /2024–25
ದಿನಾಂಕ: 21.10.2024

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರಪಾಲಿಕೆಯ 15ನೇ ಹಣಕಾಸು, ಸಿ.ಎಸ್.ಆರ್ ಅನುದಾನ ಹಾಗೂ ಎಸ್.ಬಿ.ಎಂ–2.0 ಅಡಿಯಲ್ಲಿ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ.4.20 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.274.34 ಲಕ್ಷಗಳು ಇರುತ್ತದೆ ಟೆಂಡರ್ ಇಂಡೆಂಟ್ ಸಂಖ್ಯೆ 1) DMA/2024-25/IND3705 2) DMA/2024-25/IND3716 3) DMA/2024-25/IND3717 4) DMA/2024-25/IND3686 5) DMA/2024-25/IND3744 ಸದರಿ ಟೆಂಡರ್ ಗಳನ್ನು ಸಲ್ಲಿಸಲು ಅಂತಿಮ ದಿನಾಂಕ:05.11.2024 ರ ಸಂಜೆ 04:00PM ಗಂಟೆರೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:06.11.2024 ರ ಸಂಜೆ 04:30PM ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:08.11.2024 ರ ಸಂಜೆ:04:30PM. ಮುಂದುವರೆದು ಟೆಂಡರ್ ಇಂಡೆಂಟ್ ಸಂಖ್ಯೆ 6) DMA/2024-25/IND3681 ಸದರಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:21.11.2024 ರ ಸಂಜೆ 04:00PM ಗಂಟೆರೊಳಗಾಗಿ ಸಲ್ಲಿಸಬಹುದು. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:07.11.2024 ರ ಬೆಳಿಗ್ಗೆ 11:30AM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:22.11.2024 ರ ಸಂಜೆ 04:30PM ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:25.11.2024 ರ ಸಂಜೆ:04:30PM. ಟೆಂಡರ್ ಇಂಡೆಂಟ್ ಸಂಖ್ಯೆ 7) DMA/2024-25/OW/WORK_INDENT30939 ಸದರಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:25.11.2024 ರ ಸಂಜೆ 04:00PM ಗಂಟೆರೊಳಗಾಗಿ ಸಲ್ಲಿಸಬಹುದು. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:11.11.2024 ರ ಬೆಳಿಗ್ಗೆ 11:30AM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:27.11.2024 ರ ಸಂಜೆ 04:30PM ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:29.11.2024 ರ ಸಂಜೆ:04:30PM. ಕಾಮಗಾರಿಗಳ ಎಲ್ಲಾ ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್: http://kppp.karnataka.gov.in ಅನ್ನು ಗಮನಿಸಲು ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08392–273479 ಗೆ ಕರೆಮಾಡಿ ಅಥವಾ ಇ–ಮೇಲ್ ವಿಳಾಸ ka.ballari.cc@gmail.com ಮೂಲಕ ಪಡೆಯಬಹುದು.

ಸಹಿ/– ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.

ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು–560 009
ದೂರವಾಣಿ ಸಂಖ್ಯೆ: 080–22010401/22282201, ಇಮೇಲ್: prcrdprkar@gmail.com

ಸಂಖ್ಯೆ: KPRC-MISC/154/2024(E-1432915) ದಿನಾಂಕ: 21–10–2024

ಸಂಯೋಜಕರ ನೇಮಕಾತಿಗೆ ಪ್ರಕಟಣೆ

ಕಲ್ಯಾಣ ಕರ್ನಾಟಕ ಪ್ರದೇಶದ ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಅನುಷ್ಟಾನಗೊಳಿಸುತ್ತಿರುವ **"Advancing Sustainable Menstrual Hygiene Management – An Initiative for Zero Menstrual Waste** (ಪ್ರೇರಣಾ)" ಕಾರ್ಯಕ್ರಮದಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಹ ಮತ್ತು ಅನುಭವಿ ಅಭ್ಯರ್ಥಿಗಳಿಂದ ಕೆಳಕಂಡ ತಾತ್ಕಾಲಿಕ ಹುದ್ದೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹುದ್ದೆಯ ಹೆಸರು	ಸಂಖ್ಯೆ
ಜಿಲ್ಲಾ ಎಸ್.ಎಂ.ಹೆಚ್.ಎಂ ಸಂಯೋಜಕರು (District Sustainable Menstrual Hygiene Management Coordinator)	03

ಸದರಿ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಳಿ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಮೇಲಿನ ಹುದ್ದೆಗೆ ಕನ್ನಡ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು ಹಾಗೂ ರಾಜ್ಯದ ವಿವಿಧ ಜಿಲ್ಲೆ/ತಾಲ್ಲೂಕು/ಗ್ರಾಮ ಪಂಚಾಯತಿಗಳಿಗೆ ವ್ಯಾಪಕವಾಗಿ ಪ್ರವಾಸ ಮಾಡುವ ಅವಶ್ಯಕತೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಸಕ್ತ ಅಭ್ಯರ್ಥಿಗಳು **https://prcrdpr.karnataka.gov.in** ಲಿಂಕ್ ನ ನೇಮಕಾತಿ ವಿಭಾಗದಡಿ ಒದಗಿಸಲಾದ ಹುದ್ದೆಯ ವಿವರಣೆಯನ್ನು **(Job Description)** ಅನ್ನು ವೀಕ್ಷಿಸಬಹುದು. ದಿನಾಂಕ: 29.10.2024 ರಂದು ಸಂಜೆ 5.30 ಗಂಟೆಯೊಳಗೆ ಅರ್ಜಿಯನ್ನು ಎಲ್ಲಾ ಲಗತ್ತುಗಳೊಂದಿಗೆ ಇ–ಮೇಲ್ ವಿಳಾಸ: **prckar.recruitment@gmail.com** ಕ್ಕೆ ಸಲ್ಲಿಸತಕ್ಕದ್ದು.

ಸಹಿ/–
ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

DIPR/CP/2668/Zen/2024-25

ರಾಜ್ಯ ಒಕ್ಕಲಿಗರ ಸಂಘ

ಕೃ. ರಾ. ರಸ್ತೆ, ಬೆಂಗಳೂರು 560004.

ನಂ.ರಾಒಸ: ಆಡಳಿತ/1213/2024–25 ದಿನಾಂಕ: 22–10–2024

ಪತ್ರಿಕಾ ಪ್ರಕಟಣೆ

ವಿಷಯ : ದಿನಾಂಕ: 30–10–2024ರ ಬುಧವಾರ ಬೆಳಗ್ಗೆ 11:00 ಗಂಟೆಗೆ ನಡೆಯಲಿರುವ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಸಭೆ.

ಉಲ್ಲೇಖ : ದಿನಾಂಕ: 22–10–2024ರ ಮಂಗಳವಾರದಂದು ನಡೆದ ಅವಿಶ್ವಾಸ ನಿರ್ಣಯದ ಸಭಾ ತೀರ್ಮಾನ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 22–10–2024ರ ಮಂಗಳವಾರದಂದು ಬೆಳಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಭವನದ ಎರಡನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ನಡೆದ ಅವಿಶ್ವಾಸ ನಿರ್ಣಯ ಸಭೆಯ ನಡವಳಿಯಂತೆ ಇನ್ನುಳಿದ ಅವಧಿಗೆ ಸಂಘದ ಪದಾಧಿಕಾರಿಗಳ ಆಯ್ಕೆಗಾಗಿ ಕಾರ್ಯಕಾರಿ ಸಮಿತಿ ಸಭೆಯನ್ನು ದಿನಾಂಕ: 30–10–2024 ರ ಬುಧವಾರ ಬೆಳಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ (ಬಿ.ಐ.ಟಿ) 6ನೇ ಮಹಡಿಯ ಎಂ.ಬಿ.ಎ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳು ಸಭೆಗೆ ಆಗಮಿಸಬೇಕಾಗಿ ಕೋರಿದೆ.

ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಚಿಸುವವರು ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯಂತೆ ನಾಮಪತ್ರವನ್ನು ಸಲ್ಲಿಸಬಹುದು. ನಾಮಪತ್ರವನ್ನು ಚುನಾವಣಾ ದಿನಾಂಕದಂದು ಹಂಗಾಮಿ ಪ್ರಧಾನ ಕಾರ್ಯದರ್ಶಿ (ಅಶೋಕ್ ಎಸ್.ಡಿ. ಜಯರಾಮ್)ರವರಿಂದ ಪಡೆಯಬಹುದಾಗಿರುತ್ತದೆ.

ರಾಜ್ಯ ಒಕ್ಕಲಿಗರ ಸಂಘದ ಇನ್ನುಳಿದ ಅವಧಿಗೆ ಆಯ್ಕೆ ಮಾಡಬೇಕಾದ ಪದಾಧಿಕಾರಿಗಳ ಸ್ಥಾನಗಳ ವಿವರ:–(1) ಅಧ್ಯಕ್ಷರು, (2) ಉಪಾಧ್ಯಕ್ಷ 2 ಸ್ಥಾನಗಳು, (3) ಪ್ರಧಾನ ಕಾರ್ಯದರ್ಶಿ, (4) ಸಹಾಯಕ ಕಾರ್ಯದರ್ಶಿ, (5) ಖಜಾಂಚಿ

ಚುನಾವಣಾ ವೇಳಾಪಟ್ಟಿ

1.	ನಾಮಪತ್ರಗಳ ಸಲ್ಲಿಕೆ.	ದಿನಾಂಕ: 30–10–2024 ರ ಬೆಳಗ್ಗೆ 11:00 ರಿಂದ 12:00 ಘಂಟೆಯವರೆಗೆ.
2.	ನಾಮಪತ್ರಗಳ ಪರಿಶೀಲನೆ.	ದಿನಾಂಕ: 30–10–2024 ರ ಬೆಳಗ್ಗೆ 12:00 ರಿಂದ ಮಧ್ಯಾಹ್ನ 12:30 ಘಂಟೆಯವರೆಗೆ.
3.	ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ.	ದಿನಾಂಕ: 30–10–2024 ರ ಮಧ್ಯಾಹ್ನ 12:45 ಘಂಟೆಗೆ.
4.	ನಾಮಪತ್ರ ಹಿಂಪಡೆಯುವುದು.	ದಿನಾಂಕ: 30–10–2024 ರ ಮಧ್ಯಾಹ್ನ 12:45 ರಿಂದ 1:00 ಘಂಟೆಯವರೆಗೆ.
5.	ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ.	ದಿನಾಂಕ: 30–10–2024 ರಂದು ಮಧ್ಯಾಹ್ನ 1:00 ರಿಂದ 1:15 ಘಂಟೆಯವರೆಗೆ.
6.	ಮತ ಚಲಾವಣೆ (ಅವಶ್ಯಕತೆ ಇದ್ದರೆ)	ದಿನಾಂಕ: 30–10–2024 ರ ಮಧ್ಯಾಹ್ನ 1:15 ರಿಂದ 2:00 ಘಂಟೆಯವರೆಗೆ.
7.	ಮತಗಳ ಎಣಿಕೆ.	ದಿನಾಂಕ: 30–10–2024 ರಂದು ಮತದಾನ ಮುಗಿದ ನಂತರ.
8.	ಫಲಿತಾಂಶ ಪ್ರಕಟಣೆ.	ದಿನಾಂಕ: 30–10–2024 ರಂದು ಮತ ಎಣಿಕೆ ಮುಗಿದ ನಂತರ.

ಸಹಿ/–
(ಅಶೋಕ್ ಎಸ್.ಡಿ. ಜಯರಾಮ್)
ಹಂಗಾಮಿ ಪ್ರಧಾನ ಕಾರ್ಯದರ್ಶಿ, ರಾಜ್ಯ ಒಕ್ಕಲಿಗರ ಸಂಘ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ

ನೋಂ.ಕಛೇರಿ: ನಂ.30/1, 1ನೇ & 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560 052. CIN: U37100KA2021SGC147734
TAN:BLRB21071B PAN:AAJCB8656M Email-Id: dgm3bswml@gmail.com

ಸಂ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡರ್/06/24–25 ದಿನಾಂಕ: 21.10.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬೃಬೆಂಮಪಾಲಿಕೆ ಸ್ಥಾಪಿಸಿದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಎಸ್‌ಒಪಿ ಪ್ರಕಾರ ಕಾಂಪೋಸ್ಟ್ ಉತ್ಪಾದಿಸಲು ಯಾವುದೇ ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯ ಸಂಸ್ಕರಣೆ ಕಾರ್ಯಾಚರಣೆ ಹಾಗೂ ನಿರ್ವಹಣೆ.
2. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಕಾಮಗಾರಿಗೆ ಬಿಎಸ್‌ಡಬ್ಲ್ಯೂಎಂಎಲ್ ನ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
3. ಪ್ರತಿ ಕಾಮಗಾರಿಯ ಎದುರು ಸೂಚಿಸಿರುವ ನಿಗದಿತ ಶುಲ್ಕವನ್ನು (ಹಿಂತಿರುಗಿಸಲಾಗದ್ದು) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಾವತಿಸಿ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್‌ನಿಂದ (https://kppp.karnataka.gov.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ಡುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್ಡುಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1.	Operation & Maintenance of processing plant of capacity 120TPD located at Seegehalli for a period of 12 months extendable for another 12 months through a performance-based service contract (PBSC)	676.78	Rs.1,00,000/- through e-payment under of the following i.e., online / RTGS / NEFT / OTC and the balance Rs.9,15,170/- by Bank Guarantee/FDR issued by Nationalized/ Scheduled Bank

Stipulated Period of Service Contract : 12 Months

ವೇಳಾಪಟ್ಟಿ: 1) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ: **25.10.2024**. 2) ಪೂರ್ವಭಾವಿ ಸಭೆಯನ್ನು **ದಿನಾಂಕ: 04.11.2024ರ ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಇಂಜಿನಿಯರ್ & ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052, ಇಲ್ಲಿ ನಡೆಸಲಾಗುವುದು. 3) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.11.2024 ಸಂಜೆ 4.00 ಗಂಟೆಯೊಳಗೆ**. 4) ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **12.11.2024 ರ ಸಂಜೆ 4.30 ಗಂಟೆಯ ನಂತರ.**

ಟಿಪ್ಪಣಿ: 1) ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ಜಿಎಸ್‌ಟಿ ಹೊರತುಪಡಿಸಿ ಪ್ರತಿ ಟನ್‌ಗೆ ದರಗಳನ್ನು ಉಲ್ಲೇಖಿಸಬೇಕು. 2) ಮೂರು ಏಜೆನ್ಸಿಗಳವರೆಗೆ ಕನ್ಸೋರ್ಷಿಯಮ್‌ಗೆ (Consortium) ಅನುಮತಿಸಲಾಗಿದೆ. ಟೆಂಡರ್‌ನ ಮಾನ್ಯತೆಯು ಟೆಂಡರ್ ತೆರೆಯುವ ದಿನಾಂಕದಿಂದ 180 ದಿನಗಳು. 3) ಆಸಕ್ತಿಯುಳ್ಳ ಬಿಡ್ಡುದಾರರು/ಗುತ್ತಿಗೆದಾರರು ಯಾರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನೋಂದಣಿ ಮಾಡಿರುವುದಿಲ್ಲವೋ ಅವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನೋಂದಾಯಿಸಿ ಭಾಗವಹಿಸಬಹುದು. 4) ಬಿಡ್ ದಾಖಲೆಗಳಲ್ಲಿರುವ ಟೆಂಡರ್ ಷರತ್ತುಗಳ ಪ್ರಕಾರ ಅರ್ಹತಾ ಮಾನದಂಡಗಳನ್ನು ಬಿಡ್ಡುದಾರರು ಪೂರೈಸಬೇಕಾಗಿರುತ್ತದೆ. 5) ಆನ್‌ಲೈನ್‌ನಲ್ಲಿ ಬಿಡ್ಡುಗಳನ್ನು ಸಲ್ಲಿಸುವ ಮೊದಲು ಬಿಡ್‌ನೊಂದಿಗೆ ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಲಗತ್ತಿಸಲಾಗಿದೆ ಎಂದು ಬಿಡ್ಡುದಾರರು ಖಚಿತಪಡಿಸಿಕೊಳ್ಳಬೇಕು. 6) ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಬೇಕು ಮತ್ತು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. 7) ವಿವರಗಳು, ನೋಂದಣಿ ಮತ್ತು ಇ–ಪಾವತಿಗಾಗಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಗೆ ಭೇಟಿ ನೀಡಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿಯನ್ನು ಸಂಪರ್ಕಿಸಬಹುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್

DIPR/CP/2664/MAA/24-25

ಚನ್ನಪಟ್ಟಣ: ಗುರುವಾರ ನಾಮಪತ್ರ ಸಲ್ಲಿಕೆ ● ಬೆಂಬಲಿಗರ ಸಭೆಯಲ್ಲೂ ಗುಟ್ಟು ಬಿಡದ ಸಿ.ಪಿ. ಯೋಗೇಶ್ವರ್

ಬಿಜೆಪಿ ಟಿಕೆಟ್: 'ಸೈನಿಕ'ನ ಆಸೆ ಇನ್ನೂ ಜೀವಂತ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ(ರಾಮನಗರ): ಚನ್ನಪಟ್ಟಣ ಉಪ ಚುನಾವಣೆಯ ಮೈತ್ರಿ ಟಿಕೆಟ್ ಹಗ್ಗಜಗ್ಗಾಟ ರೋಚಕ ಘಟ್ಟ ತಲುಪಿದೆ. ಬಿಜೆಪಿ ಟಿಕೆಟ್ ಸಿಗುವ ನಿರೀಕ್ಷೆಯಲ್ಲಿರುವ ಸಿ.ಪಿ. ಯೋಗೇಶ್ವರ್ ಇನ್ನೂ ಎರಡು ದಿನ ಕಾದು ನೋಡುವ ತೀರ್ಮಾನಕ್ಕೆ ಬಂದಿದ್ದಾರೆ.

'ಗುರುವಾರ(ಅ.24) ನಾಮಪತ್ರ ಸಲ್ಲಿಸುವೆ. ಆದರೆ, ಯಾವ ಪಕ್ಷದಿಂದ ಕಣಕ್ಕಿಳಿಯುತ್ತೇನೆ ಎಂದು ಮಂಗಳವಾರ ಸಂಜೆ ಹೊತ್ತಿಗೆ ತೀರ್ಮಾನಿಸುವೆ' ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ಯೋಗೇಶ್ವರ್ ಬೆಂಬಲಿಗರಿಗೆ ತಿಳಿಸಿದ್ದರು.

ಚನ್ನಪಟ್ಟಣದ ತಮ್ಮ ಮನೆಯಲ್ಲಿ ಮಂಗಳವಾರ ಬೆಂಬಲಿಗರ ಸಭೆ ಕರೆದಿದ್ದ ಯೋಗೇಶ್ವರ್ ಅಲ್ಲಿ ಅಂತಿಮ ನಿರ್ಧಾರ ಪ್ರಕಟಿಸುತ್ತಾರೆ ಎಂಬ ನಿರೀಕ್ಷೆ ಇತ್ತು. ಆದರೆ, ಅವರು ನಿರ್ಧಾರ ಪ್ರಕಟಿಸಲಿಲ್ಲ. ಬಿಜೆಪಿಯಿಂದ ಅಥವಾ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಬಗ್ಗೆಯೂ ಗುಟ್ಟು ಬಿಟ್ಟು ಕೊಡಲಿಲ್ಲ.

ಚನ್ನಪಟ್ಟಣ ಉಪಚುನಾವಣೆಯಲ್ಲಿ ಸಿ.ಪಿ.ಯೋಗೇಶ್ವರ್ ಅವರನ್ನು ಜೆಡಿಎಸ್‌ನಿಂದ ಕಣಕ್ಕಿಳಿಸುವ ಬಗ್ಗೆ ಚರ್ಚಿಸಿದ್ದೆವು. ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ

ಕೆ.ಅನ್ನದಾನಿ, ಜೆಡಿಎಸ್ ಎಸ್‌ಸಿ ವಿಭಾಗದ ರಾಜ್ಯ ಘಟಕದ ಅಧ್ಯಕ್ಷ

ದೆಹಲಿಯಿಂದ ಕರೆ: 'ಬೆಂಬಲಿಗರ ಸಭೆ ಕರೆದ ನಮ್ಮ ನಾಯಕರಿಗೆ ಬಿಜೆಪಿಯ ದೆಹಲಿ ನಾಯಕರಿಂದ ಕರೆ ಬಂದಿದೆ. ದುಡುಕಿನ ನಿರ್ಧಾರ ಕೈಗೊಳ್ಳದೆ ಕಾಯುವಂತೆ ಸೂಚಿಸಿದ್ದಾರೆ. ಮೈತ್ರಿ ಅಭ್ಯರ್ಥಿಯಾಗಿ ಅವರೇ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಾಗಿದೆ. ಹಾಗಾಗಿ, ಅವರು ತಮ್ಮ ನಿರ್ಧಾರ ಪ್ರಕಟಿಸುವುದನ್ನು ಮುಂದೂಡಿದ್ದಾರೆ' ಎಂದು ಯೋಗೇಶ್ವರ್ ಬೆಂಬಲಿಗರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಚನ್ನಪಟ್ಟಣ ಕುವೆಂಪು ನಗರದಲ್ಲಿರುವ ತಮ್ಮ ಮನೆಯ ಬಳಿ ಮಂಗಳವಾರ ಜಮಾಯಿಸಿದ್ದ ಬೆಂಬಲಿಗರನ್ನು ಉದ್ದೇಶಿಸಿ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಿ.ಪಿ. ಯೋಗೇಶ್ವರ್ ಮಾತನಾಡಿದರು

'ಬಿಜೆಪಿಯಿಂದ ಸ್ಪರ್ಧಿಸಲು ಒಪ್ಪಿಗೆ ನೀಡಿದರೆ ನೀಡಲಿ. ಇಲ್ಲದಿದ್ದರೆ ಬೆಂಬಲಿಗರ ಅಭಿಪ್ರಾಯದಂತೆ ಮುಂದಿನ ನಿರ್ಧಾರ ಕೈಗೊಳ್ಳುವೆ' ಎಂದು ಸಭೆಯ ಬಳಿಕ ಯೋಗೇಶ್ವರ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ

'ನಾನು ಮೈತ್ರಿ ಅಭ್ಯರ್ಥಿಯಾಗಲು ಒಪ್ಪಿರುವ ಜೆಡಿಎಸ್ ನಾಯಕರು, ಜೆಡಿಎಸ್‌ನಿಂದಲೇ ಕಣಕ್ಕಿಳಿಯಬೇಕು ಎಂದು ಏಕೆ ಷರತ್ತು ಹಾಕಬೇಕು? ಜೆಡಿಎಸ್‌ನಿಂದ ಸ್ಪರ್ಧಿಸಲು ನನ್ನ ಬೆಂಬಲಿಗರ ವಿರೋಧವಿದೆ. ಮಾತ್ರವಲ್ಲ ಇದರಿಂದ ಪಕ್ಷದೊಳಗೆ ನನ್ನ ಹಿರಿತನಕ್ಕೂ ಧಕ್ಕೆಯಾಗಲಿದೆ. ಹಾಗಾಗಿ, ನಾನು 15 ವರ್ಷಗಳಿಂದ ಇರುವ ಬಿಜೆಪಿಯಿಂದಲೇ ಸ್ಪರ್ಧಿಸಲು ಅವಕಾಶ ನೀಡಲಿ' ಎಂದು ಮನವಿ ಮಾಡಿದರು.

ಬಿಎಸ್‌ಪಿ ಅಥವಾ ಎಸ್‌ಪಿಯಿಂದ ಕಣಕ್ಕೆ?

ಬಿಜೆಪಿ ಟಿಕೆಟ್ ಸಿಗದಿದ್ದರೆ ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಅಥವಾ ಸಮಾಜವಾದಿ ಪಕ್ಷದಿಂದ(ಎಸ್‌ಪಿ) ಸ್ಪರ್ಧಿಸಲು ಯೋಗೇಶ್ವರ್ ಯೋಚಿಸುತ್ತಿದ್ದಾರೆ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ.

'2013ರಲ್ಲೂ ಅವರಿಗೆ ಟಿಕೆಟ್ ಸಿಗದಿದ್ದಾಗ ಕೊನೆಯ ಕ್ಷಣದಲ್ಲಿ ಸಮಾಜವಾದಿ ಪಕ್ಷದಿಂದ ಕಣಕ್ಕಿಳಿದು ಜಯ ಸಾಧಿಸಿದ್ದರು. ಈ ಬಾರಿಯೂ ರಾಷ್ಟ್ರೀಯ ಪಕ್ಷವೊಂದರಿಂದ ಸ್ಪರ್ಧಿಸಿ ಗೆದ್ದರೆ 2028ರ ಚುನಾವಣೆ ಹೊತ್ತಿಗೆ ಮರಳಿ ಬಿಜೆಪಿಗೆ ಬಂದು ಸ್ಪರ್ಧಿಸಿ ಕ್ಷೇತ್ರ ಉಳಿಸಿಕೊಳ್ಳುವ ಆಲೋಚನೆ ಅವರದ್ದು' ಎಂದು ಅವರ ಬೆಂಬಲಿಗರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಮುಸ್ಲಿಂ ಅಭ್ಯರ್ಥಿಗೆ ಶಿಗ್ಗಾವಿ ಟಿಕೆಟ್: ಜಮೀರ್ ಪಟ್ಟು

ಬೆಂಗಳೂರು: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ ವಸತಿ ಸಚಿವ ಜಮೀರ್ ಅಹಮದ್ ಖಾನ್, ಶಿಗ್ಗಾವಿ ಕ್ಷೇತ್ರದ ಟಿಕೆಟ್ ಅನ್ನು ಮುಸ್ಲಿಂ ಅಭ್ಯರ್ಥಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಉಪ ಚುನಾವಣೆ ನಡೆಯಲಿರುವ ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ರಾಜ್ಯಕ್ಕೆ ಬಂದಿರುವ ಸುರ್ಜೇವಾಲ ಅವರ ಜೊತೆ ಚರ್ಚೆ ನಡೆಸಿದ ಜಮೀರ್ ಅಹಮದ್ ಖಾನ್, 'ಕಳೆದ ವಿಧಾನ ಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯ ಕಾಂಗ್ರೆಸ್ ಪರ ನಿಂತಿದೆ. ಹೀಗಾಗಿ, ಶಿಗ್ಗಾವಿ ಟಿಕೆಟ್‌ನ್ನು ಮುಸ್ಲಿಂ ಸಮುದಾಯಕ್ಕೆ ನೀಡಲೇಬೇಕು' ಎಂದು ಪಟ್ಟು ಹಿಡಿದರು.

ಜಮೀರ್ ನೇತೃತ್ವದಲ್ಲಿ ಮುಸ್ಲಿಂ ಜನಪ್ರತಿನಿಧಿಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಇದೇ ಬೇಡಿಕೆ ಇಟ್ಟಿತ್ತು.

ಕಾರ್ಯದರ್ಶಿ ಹುದ್ದೆಗೆ ದಿವಾಕರ್; ಬಂಡಾಯ ಶಮನ

ಬಳ್ಳಾರಿ: ಸಂಡೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ದಿವಾಕರ್ ಅವರಿಗೆ ಪಕ್ಷದ ರಾಜ್ಯ ಕಾರ್ಯದರ್ಶಿ ಹುದ್ದೆ ನೀಡಿ, ಬಂಡಾಯ ಶಮನ ಮಾಡುವಲ್ಲಿ ಬಿಜೆಪಿ ನಾಯಕರು ಯಶಸ್ವಿಯಾಗಿದ್ದಾರೆ.

'ದಿವಾಕರ್ ಅವರು ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಅವರು ಪಕ್ಷದಲ್ಲೇ ಉಳಿಯುತ್ತಾರೆ' ಎಂದು ಬಳ್ಳಾರಿಯಲ್ಲಿ ಮಂಗಳವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಘೋಷಿಸಿದರು.

'ಯಡಿಯೂರಪ್ಪ ಸೈಕಲ್, ಬಸ್‌ನಲ್ಲಿ ತಿರುಗಿ ಪಕ್ಷ ಸಂಘಟಿಸಿ 66ನೇ ವಯಸ್ಸಿನಲ್ಲಿ ಮುಖ್ಯಮಂತ್ರಿ ಆದರು. ನನಗೆ ಈಗಿನ್ನೂ 57 ವರ್ಷ ವಯಸ್ಸು. ಆ ಲೆಕ್ಕದಲ್ಲಿ ನನಗೆ ಇನ್ನೂ 9 ರಿಂದ 10 ವರ್ಷ ಸಮಯವಿದೆ' ಎಂದು ಅವರು ಮುಖ್ಯಮಂತ್ರಿ ಆಗುವ ಇಂಗಿತ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನಿಂದ ಪ್ರಬಲ ಅಭ್ಯರ್ಥಿಗಳು ಕಣಕ್ಕೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಉಪಚುನಾವಣೆ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದ್ದು, ಶೀಘ್ರದಲ್ಲೇ ಪ್ರಕಟಿಸುತ್ತೇವೆ. ಪಕ್ಷದ ಚಿಹ್ನೆ ಮೇಲೆ ಯಾರೇ ಸ್ಪರ್ಧಿಸಿದರೂ ನಾನೇ ಅಭ್ಯರ್ಥಿ ಎಂದಿದ್ದೇನೆ. ಯೋಗೇಶ್ವರ್ ಸೇರಿದಂತೆ ಯಾರ ಜೊತೆಗೂ ಮಾತುಕತೆ ನಡೆಸಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, 'ರಾಜಕಾರಣದಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನವರು ಹೇಗೆ ಲೆಕ್ಕಾಚಾರ ಹಾಕುತ್ತಿದ್ದಾರೋ ಹಾಗೆಯೇ ನಾವೂ ಲೆಕ್ಕಾಚಾರ ಹಾಕಿ ತೀರ್ಮಾನಿಸುತ್ತೇವೆ. ಗೆಲ್ಲುವ ಅಭ್ಯರ್ಥಿಯನ್ನೇ ಆಯ್ಕೆ ಮಾಡುತ್ತೇವೆ' ಎಂದರು.

'ಈಗಾಗಲೇ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಮುಖ್ಯಮಂತ್ರಿ ಹಾಗೂ ನಾನು ಚರ್ಚಿಸಿದ್ದೇವೆ. ಖರ್ಗೆ ಅವರಿಂದ ಅನುಮತಿ ಪಡೆದು ಬಿ ಫಾರಂಗೆ ನಾನೇ ಸಹಿ ಹಾಕಿ ಕೊಡುವೆ' ಎಂದರು.

'ಚನ್ನಪಟ್ಟಣ ಅಭ್ಯರ್ಥಿ ಶೀಘ್ರ ನಿರ್ಧಾರ'

ಮೈಸೂರು: 'ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಅಭ್ಯರ್ಥಿಯಾಗಿ ಸಂಸದ ತುಕಾರಾಂ ಅವರ ಪತ್ನಿಯನ್ನು ಕಣಕ್ಕಿಳಿಸಲಾಗುವುದು. ಶಿಗ್ಗಾಂವಿ, ಚನ್ನಪಟ್ಟಣ ಅಭ್ಯರ್ಥಿ ಯಾರೆಂಬುದನ್ನು ನಿರ್ಧರಿಸಬೇಕಷ್ಟೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ತಮ್ಮ ನಿವಾಸದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಚನ್ನಪಟ್ಟಣ ಕ್ಷೇತ್ರಕ್ಕೆ ಡಿ.ಕೆ.ಸುರೇಶ್ ಹೆಸರು ಕೂಡ ಇದೆ. ಪಕ್ಷದ ಅಧ್ಯಕ್ಷರೇ ಅಲ್ಲಿರುವುದರಿಂದ ಅವರೇ ಸೂಕ್ತ ಅಭ್ಯರ್ಥಿಯನ್ನು ತೀರ್ಮಾನಿಸುತ್ತಾರೆ. ಒಳ್ಳೆಯ ಅಭ್ಯರ್ಥಿ ಹಾಕಬೇಕೆಂದು ನಾನೂ ಹೇಳಿದ್ದೇನೆ' ಎಂದರು.

'ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರುತ್ತಾರೆಯೇ' ಎಂಬ ಪ್ರಶ್ನೆಗೆ ಉತ್ತರಿಸಿ, 'ಪಕ್ಷದ ಸಿದ್ಧಾಂತ ಹಾಗೂ ಸಂವಿಧಾನದ ಮೌಲ್ಯಗಳನ್ನು ಒಪ್ಪಿ ಯಾರೇ ಬಂದರೂ ಸ್ವಾಗತ' ಎಂದರು.

ಕುಮಾರಸ್ವಾಮಿ ಸಿಟ್ಟು ಯಾರ ಮೇಲೆ?

ಬಿಜೆಪಿ ನಾಯಕರ ವಿರುದ್ಧ ಪದೇ ಪದೇ ಸಿಡಿಮಿಡಿ; ರಾಜಕೀಯ ಕುತೂಹಲ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒಂದು ವಾರದಿಂದ ಬಿಜೆಪಿಯ ಕೆಲವು ನಾಯಕರ ವಿರುದ್ಧ ಸಿಟ್ಟಿಗೆದ್ದಿದ್ದಾರೆ. ತಮ್ಮ ತೀಕ್ಷ್ಣ ಹೇಳಿಕೆಗಳ ಮೂಲಕ ಅವರನ್ನು ಪದೇ ಪದೇ ಕುಟುಕುತ್ತಿದ್ದಾರೆ. ಅಷ್ಟಕ್ಕೂ ಕೇಂದ್ರ ಸಚಿವರ ಕೋಪಕ್ಕೆ ಕಾರಣರಾದ ಬಿಜೆಪಿಯ ನಾಯಕರು ಯಾರು?' ಎನ್ನುವ ಕುತೂಹಲ ರಾಜಕೀಯ ವಲಯದಲ್ಲಿ ಮೂಡಿದೆ.

ಚನ್ನಪಟ್ಟಣ ಉಪಚುನಾವಣೆಯಲ್ಲಿ ಬಿಜೆಪಿಯ ಸಿ.ಪಿ.ಯೋಗೇಶ್ವರ್ ಅವರು ತಮ್ಮನ್ನೇ ಎನ್‌ಡಿಎ ಅಭ್ಯರ್ಥಿಯಾಗಿ ಘೋಷಿಸಬೇಕು ಎಂದು ಪಟ್ಟುಹಿಡಿದ ಬಳಿಕ ಕುಮಾರಸ್ವಾಮಿ ಅವರು ಮಾತಿನ ತುಪಾಕಿಯನ್ನು ಬಿಜೆಪಿ ನಾಯಕರತ್ತ ತಿರುಗಿಸಿದ್ದಾರೆ.

'ಬಿಜೆಪಿಯಲ್ಲಿ ಇರುವಂತಹ ಕೆಲವೇ ಕೆಲವರೊಟ್ಟಿಗೆ ಕುಮಾರಸ್ವಾಮಿಗೆ ದೆಹಲಿ ಮಟ್ಟದಲ್ಲಿ ಉತ್ತಮ ಬಾಂಧವ್ಯ ಇದೆ. ಅವರಿಗೆ ಏನಾದರೂ ಸಮಸ್ಯೆ ಮಾಡಬೇಕು ಎಂದು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕರ ಜತೆಗೂ ಕೈಜೋಡಿಸಿದ್ದಾರೆ' ಎಂದು ಭಾನುವಾರ ಹೇಳಿದ್ದ ಕುಮಾರಸ್ವಾಮಿ, 'ಮೋದಿ ಮತ್ತು ಶಾ ಹೇಳಿದರೆಂದು ತಾವು ಇನ್ನೆಷ್ಟು ಬಗ್ಗಲು ಸಾಧ್ಯ' ಎಂದು ತಮ್ಮ ಕಾರ್ಯಕರ್ತರೆದುರು ಮಂಗಳವಾರ ಅಸಹನೆ ವ್ಯಕ್ತಪಡಿಸಿದ್ದಾರೆ.

ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸುತ್ತಿರುವುದು ಬಿಜೆಪಿಯ ಒಕ್ಕಲಿಗ ನಾಯಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಿ.ಟಿ.ರವಿ, ಶೋಭಾ ಕರಂದ್ಲಾಜೆ ಮತ್ತಿತರರ ವಿರುದ್ಧ ಎನ್ನುವುದು ಆ ಪಕ್ಷದ ವಲಯದಲ್ಲಿ ಗುಟ್ಟಾಗಿ ಉಳಿದಿಲ್ಲ.

'ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ನಾಯಕತ್ವವನ್ನು ಸಂಪೂರ್ಣವಾಗಿ ಕುಮಾರಸ್ವಾಮಿ ಅವರಿಗೇ ಧಾರೆ ಎರೆದುಕೊಟ್ಟರೆ ತಮ್ಮ ಅಸ್ತಿತ್ವ ಏನು' ಎಂಬ ಪ್ರಶ್ನೆ ಈ ನಾಯಕರದು. ಹೀಗಾಗಿ ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಯಿಂದೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಬೇಕು ಎಂಬ ಪಟ್ಟು ಈ ನಾಯಕರದು. ಇದು ಕುಮಾರಸ್ವಾಮಿ ಅವರನ್ನು ಸಿಟ್ಟಿಗೆಬ್ಬಿಸಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಬಿಜೆಪಿಯಲ್ಲಿ ಆರ್.ಅಶೋಕ ಅವರು ಒಕ್ಕಲಿಗ ನಾಯಕರಾಗಿ ಪಕ್ಷಕ್ಕೆ ದೊಡ್ಡ ಮಟ್ಟದಲ್ಲಿ ಲಾಭ ತಂದುಕೊಡಲು ಸಾಧ್ಯವಾಗಿಲ್ಲ. ಮುಂಬರುವ ವರ್ಷಗಳಲ್ಲಿ ಅವರ ಪಾತ್ರ ಸೀಮಿತವಾಗಲಿದೆ. ರಾಮನಗರ ಉಸ್ತುವಾರಿ ಸಚಿವರಾಗಿದ್ದ ಅಶ್ವತ್ಥನಾರಾಯಣ ಅವರು ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಭಾಗದಲ್ಲಿ ಒಕ್ಕಲಿಗ ನಾಯಕರಾಗಿ ಬೆಳೆಯುವ ಪ್ರಯತ್ನ ಮಾಡಿದ್ದರು. ಅದೇ ಕಾರಣಕ್ಕೆ ಅವರಿಗೆ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡಲಾಗಿತ್ತು. ಆದರೆ, ಅವರ ಯತ್ನ ಯಶ ಕೊಟ್ಟಿರಲಿಲ್ಲ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದ ಬಹುತೇಕ ಸ್ಥಾನಗಳಲ್ಲಿ ಬಿಜೆಪಿಯ ಗೆಲುವಿಗೆ ಜೆಡಿಎಸ್ ಪಕ್ಷವೇ ಕಾರಣ ಎಂಬಂತೆ ಕುಮಾರಸ್ವಾಮಿ ಬಿಂಬಿಸಿಕೊಂಡಿದ್ದರು. 'ಜೆಡಿಎಸ್ ಮಾತ್ರವಲ್ಲ ನಮ್ಮ ಶ್ರಮವೂ ಇತ್ತಲ್ಲ, ನಾವೂ ಕೆಲಸ ಮಾಡಿದ್ದೆವು' ಎಂಬುದು ಬಿಜೆಪಿಯ ಒಕ್ಕಲಿಗರ ನಾಯಕರ ವಾದ. ಜೆಡಿಎಸ್ ಮತ್ತು ಕುಮಾರಸ್ವಾಮಿ ಅವರಿಗೆ ಪಕ್ಷದ ವರಿಷ್ಠರು ಮಣೆ ಹಾಕುತ್ತಾರೆ ಎಂಬ ಕಾರಣಕ್ಕೆ ಒಕ್ಕಲಿಗ ಸೀಮೆಯಲ್ಲಿ ತಾವು ಹೇಳಿದ್ದೇ ನಡೆಯಬೇಕು ಎಂಬ ಧೋರಣೆ ಕುಮಾರಸ್ವಾಮಿ ತಳೆದರೆ ಮುಂದಿನ ದಿನಗಳಲ್ಲಿ ತಮ್ಮ ರಾಜಕೀಯ ಭವಿಷ್ಯಕ್ಕೂ ಕುತ್ತಾಗಬಹುದು ಎಂಬ ಆತಂಕ ಬಿಜೆಪಿ ನಾಯಕರನ್ನು ಕಾಡಿದೆ ಎಂದು ಮೂಲಗಳು ಹೇಳಿವೆ.

'ಚನ್ನಪಟ್ಟಣ ಜೆಡಿಎಸ್ ಕ್ಷೇತ್ರವೇ ಇರಬಹುದು. ಆದರೆ, ಈ ಹಂತದಲ್ಲಿ ಜೆಡಿಎಸ್‌ನಿಂದ ಯಾರು ಸ್ಪರ್ಧಿಸಿದರೂ ಗೆಲ್ಲುವುದು ಕಷ್ಟ. ಯೋಗೇಶ್ವರ್ ಅವರಿಗೆ ಗೆಲ್ಲುವ ಅವಕಾಶಗಳು ಹೆಚ್ಚಾಗಿವೆ. ಜೆಡಿಎಸ್‌ಗೆ ಕೊಟ್ಟು ನಾವು ಗೆಲ್ಲುವ ಅವಕಾಶ ಕಳೆದುಕೊಳ್ಳುವುದು ಬೇಡ. ಇಲ್ಲವಾದರೆ, ಅದು ಕಾಂಗ್ರೆಸ್ ಪಾಲಾಗುತ್ತದೆ. ಆದ್ದರಿಂದ ಯೋಗೇಶ್ವರ್ ಅವರಿಗೇ ಟಿಕೆಟ್ ನೀಡುವುದು ಸೂಕ್ತ ಎಂಬ ಅಭಿಪ್ರಾಯವನ್ನು ಈ ನಾಯಕರು ಪಕ್ಷದ ವರಿಷ್ಠರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಹಳೇ ಮೈಸೂರು ಭಾಗದಲ್ಲಿ ಪಕ್ಷದ ತಳಹದಿಯನ್ನು ವಿಸ್ತರಿಸಲು ಇರುವ ಅವಕಾಶವನ್ನು ಕಳೆದುಕೊಳ್ಳಬಾರದು. ಪಕ್ಷದ ವಿವಿಧ ಸಮುದಾಯಗಳ ನಾಯಕರ ಬೆಳವಣಿಗೆಗೂ ಅವಕಾಶ ನೀಡಬೇಕು' ಎಂಬುದು ಬಿಜೆಪಿ ಒಕ್ಕಲಿಗರ ನಾಯಕರ ಅಭಿಪ್ರಾಯ.

'ನೋಂದಣಿಗೆ ಸಮಸ್ಯೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 21ರಂದು ನೋಂದಣಿ ಕಾಯ್ದೆ 1908ರ ನಿಯಮ 22(ಬಿ) ತಿದ್ದುಪಡಿ ವಿರೋಧಿಸಿ ಐದಾರು ಉಪ ನೋಂದಣಾಧಿಕಾರಿಗಳು ಕೆಲ ಕಾಲ ನೋಂದಣಿ ಸ್ಥಗಿತಗೊಳಿಸಿದ್ದರು. ಆ ಬಳಿಕ ಅವರೊಂದಿಗೆ ಚರ್ಚಿಸಿ ನೋಂದಣಿ ಕಾರ್ಯ ಎಂದಿನಂತೆ ಮುಂದುವರೆಸಲು ಕ್ರಮ ವಹಿಸಲಾಗಿದೆ ಎಂದು ನೋಂದಣಿ ಮತ್ತು ಮುದ್ರಾಂಕಗಳ ಆಯುಕ್ತ ಕೆ.ಎ ದಯಾನಂದ ಹೇಳಿದ್ದಾರೆ.

ಈಗ ನೋಂದಣಿ ಮಾಡಿಸಿಕೊಳ್ಳಲು ಯಾವುದೇ ಸಮಸ್ಯೆ ಇರುವುದಿಲ್ಲ. ಯಾರು ಬೇಕಾದರೂ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

'ಕೈ' ಸರ್ಕಾರದ ಜಾಹೀರಾತು: ಸಂಸದ ತುಕಾರಾಮ್ ಅನರ್ಹತೆಗೆ ಒತ್ತಾಯ

ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭಾ ಉಪಚುನಾವಣೆಯ ವೇಳಾಪಟ್ಟಿ ಪ್ರಕಟವಾದ ಬಳಿಕ ಸರ್ಕಾರದ ಸಾಧನೆಗಳನ್ನು ಬಿಂಬಿಸುವ ಜಾಹೀರಾತುಗಳನ್ನು ನೀಡಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಮಾದರಿ ನೀತಿಸಂಹಿತೆ ಉಲ್ಲಂಘಿಸಿದೆ ಎಂದು ಆರೋಪಿಸಿ ಬಿಜೆಪಿ ರಾಜ್ಯ ಘಟಕದ ನಿಯೋಗವು ಭಾರತೀಯ ಚುನಾವಣಾ ಆಯೋಗಕ್ಕೆ ಮಂಗಳವಾರ ದೂರು ನೀಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಮತ್ತಿತರರನ್ನು ಒಳಗೊಂಡ ನಿಯೋಗವು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ದೂರು ಸಲ್ಲಿಸಿತು.

'ರಾಜ್ಯದ ಮೂರು ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆಯಾಗಿದೆ. ಆ ಬಳಿಕ ಸರ್ಕಾರವು ಕನ್ನಡ ಹಾಗೂ ಇಂಗ್ಲಿಷ್ ಪತ್ರಿಕೆಗಳಿಗೆ ಪೂರ್ಣ ಪುಟದ ಜಾಹೀರಾತು ನೀಡಿದೆ. ವಿಧಾನಸಭಾ ಚುನಾವಣೆ ನಡೆಯುವ ಮಹಾರಾಷ್ಟ್ರದ ಪತ್ರಿಕೆಗಳಲ್ಲೂ ಜಾಹೀರಾತು ನೀಡಲಾಗಿದೆ. ಚುನಾವಣಾ ಆಯೋಗದ ನಿರ್ದೇಶನಗಳನ್ನು ಉಲ್ಲಂಘಿಸಿ ಈ ಜಾಹೀರಾತು ನೀಡಲಾಗಿದೆ. ಈ ಮೂಲಕ ಕಾಂಗ್ರೆಸ್ ಸರ್ಕಾರವು ಮತದಾರರ ಮೇಲೆ ಪ್ರಭಾವ ಬೀರುವ ಪ್ರಯತ್ನ ನಡೆಸಿದೆ' ಎಂದು ಬಿಜೆಪಿ ದೂರಿತು.

ಆಯೋಗಕ್ಕೆ ದೂರು ಸಲ್ಲಿಸಿ ಆರ್.ಅಶೋಕ, ಪಿ.ರಾಜೀವ್, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಮತ್ತಿತರ ನಾಯಕರು ಹೊರಬಂದರು

ಕರ್ನಾಟಕ ಸರ್ಕಾರದ 'ಗ್ಯಾರಂಟಿ' ಸಾಧನೆಗಳನ್ನು ಬಿಂಬಿಸುವ ಜಾಹೀರಾತುಗಳನ್ನು ತೆಲಂಗಾಣ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ ನೀಡಲಾಗಿತ್ತು. ಆಗ ಚುನಾವಣಾ ಆಯೋಗವು ಕರ್ನಾಟಕ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು' ಎಂದು ಬಿಜೆಪಿ ಹೇಳಿತು.

ಸಾರ್ವಜನಿಕರ ತೆರಿಗೆ ಹಣದಲ್ಲಿ ಜಾಹೀರಾತುಗಳನ್ನು ಪ್ರಕಟಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ನೀತಿಸಂಹಿತೆ ಉಲ್ಲಂಘಿಸಿದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ನಿಯೋಗವು ಒತ್ತಾಯಿಸಿತು.

ತುಕಾರಾಮ್ ಅನರ್ಹತೆಗೆ ಒತ್ತಾಯ: ಬಳ್ಳಾರಿಯ ಸಂಸದ ಇ.ತುಕಾರಾಮ್ ಅವರು ಎಲ್ಲ ಕಾನೂನನ್ನು ಗಾಳಿಗೆ ತೂರಿ ಅಕ್ರಮವಾಗಿ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಅವರನ್ನು ಅನರ್ಹಗೊಳಿಸಬೇಕು ಎಂದು ನಿಯೋಗ ಆಗ್ರಹಿಸಿತು.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಕುರಿತು ಸಾಕಷ್ಟು ಬಾರಿ ಚರ್ಚೆಗಳಾಗಿವೆ. ವಾಲ್ಮೀಕಿ ನಿಗಮದ ₹187 ಕೋಟಿ ಹಣವನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡಿದೆ. ಈ ಹಣವನ್ನು ಬಳ್ಳಾರಿ ಲೋಕಸಭಾ ಚುನಾವಣೆಗೂ ಬಳಸಲಾಗಿದೆ. ಮತದಾರರಿಗೆ ಆಮಿಷ ಒಡ್ಡಿ ಗೆಲುವು ಸಾಧಿಸಿರುವ ತುಕಾರಾಮ್ ಅವರನ್ನು ಅನರ್ಹಗೊಳಿಸಬೇಕು' ಎಂದು ಒತ್ತಾಯಿಸಿತು.

ಸಂಕ್ಷಿಪ್ತ ಸುದ್ದಿ

ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ ನಾಳೆಯಿಂದ

ಸುಗುಣೇಂದ್ರ ತೀರ್ಥ ಸ್ವಾಮೀಜಿ

ಉಡುಪಿ: ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ ಅ. 24ರಿಂದ 26ರ ವರೆಗೆ ಉಡುಪಿಯ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆಯಲಿದೆ. 24ರಂದು ಬೆಳಿಗ್ಗೆ 10 ಗಂಟೆಗೆ ಯೋಗ ಗುರು ಬಾಬಾ ರಾಮ್‌ದೇವ್ ಅವರು ಸಮ್ಮೇಳನ ಉದ್ಘಾಟಿಸುವರು ಎಂದು ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 24ರಂದು ಬೆಳಿಗ್ಗೆ 9ಕ್ಕೆ ಶೋಭಾಯಾತ್ರೆ ನಡೆಯಲಿದೆ. ಮೂರೂ ದಿನ ಬೆಳಿಗ್ಗೆ 6ರಿಂದ 7 ಗಂಟೆಯವರೆಗೆ ಬಾಬಾ ರಾಮದೇವ್ ಹಾಗೂ ಆಚಾರ್ಯ ಬಾಲಕೃಷ್ಣ ಅವರ ನೇತೃತ್ವದಲ್ಲಿ ಯೋಗ ತರಗತಿಗಳು ನಡೆಯಲಿವೆ. ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಪುತ್ತಿಗೆ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಸ್ವಾಮೀಜಿ, ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ, ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಅನುಗ್ರಹ ಭಾಷಣ ಮಾಡಲಿದ್ದಾರೆ ಎಂದರು.

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ, ಭಾರತೀಯ ವಿದ್ವತ್ ಪರಿಷತ್‌ನ ಅಧ್ಯಕ್ಷ ಪ್ರೊ. ವೀರನಾರಾಯಣ ಪಾಂಡುರಂಗಿ ಸೇರಿದಂತೆ ಹಲವು ಮಂದಿ ಗಣ್ಯರು ಭಾಗವಹಿಸುವರು ಎಂದು ವಿವರಿಸಿದರು.

ದರ್ಶನ್ ಜಾಮೀನು ಅರ್ಜಿ: ವಿಚಾರಣೆ 28ಕ್ಕೆ ಮುಂದೂಡಿಕೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಆರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಬಳ್ಳಾರಿ ಜೈಲು ಅಧಿಕಾರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಸದ್ಯ ನ್ಯಾಯಾಂಗ ಬಂಧನದಲ್ಲಿರುವ ದರ್ಶನ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್‌ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದರ್ಶನ್ ಪರ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ. ನಾಗೇಶ್, 'ದರ್ಶನ್ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದಾರೆ. ಅವರಿಗೆ ಬಳ್ಳಾರಿಯ ವಿಜಯನಗರ ವೈದ್ಯಕೀಯ ಸಂಸ್ಥೆಯಲ್ಲಿ (ವಿಮ್ಸ್) ಸೋಮವಾರವಷ್ಟೇ (ಅ.21) ಎಂಆರ್‌ಐ ಸ್ಕ್ಯಾನ್ ಮಾಡಿಸಲಾಗಿದೆ. ವೈದ್ಯರು ಶಸ್ತ್ರಚಿಕಿತ್ಸೆ ಅಗತ್ಯವೆಂದು ತಿಳಿಸಿದ್ದಾರೆ. ಹೀಗಾಗಿ, ವೈದ್ಯಕೀಯ ಕಾರಣಕ್ಕೆ ಜಾಮೀನು ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ದರ್ಶನ್ ಆರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಬಳ್ಳಾರಿಯ ಕೇಂದ್ರ ಕಾರಾಗೃಹದ ಅಧಿಕಾರಿಗೆ ನಿರ್ದೇಶಿಸಿತಲ್ಲದೆ, ಆಕ್ಷೇಪಣೆ ಸಲ್ಲಿಸುವಂತೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರಿಗೆ ಸೂಚಿಸಿತು. ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಲಾಗಿದೆ. ದರ್ಶನ್ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಬಾಂಗ್ಲಾದ ಮೂವರು ವಲಸಿಗರ ಬಂಧನ

ಹಾಸನ: ನಗರದಲ್ಲಿ ನಕಲಿ ಆಧಾರ್ ಕಾರ್ಡ್‌ನೊಂದಿಗೆ ವಾಸಿಸುತ್ತಿದ್ದ ಬಾಂಗ್ಲಾದೇಶದ ಮೂವರು ಅಕ್ರಮ ವಲಸಿಗರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಜಮಾಲ್ ಅಲಿ, ಫಾರೂಕ್ ಅಲಿ, ಅಕ್ಮಲ್ ಹಕ್ ಬಂಧಿತರು.ಕಟ್ಟಡ ನಿರ್ಮಾಣ ಕಾರ್ಮಿಕರಾಗಿರುವ ಮೂವರು, ನಗರದ 80 ಅಡಿ ರಸ್ತೆಯ ಗದ್ದೆಹಳ್ಳದಲ್ಲಿ ಜುಬೇರ್ ಮನೆಯಲ್ಲಿ ವಾಸವಾಗಿದ್ದರು.

'ಪಶ್ಚಿಮ ಬಂಗಾಳದ ವಿಳಾಸದಲ್ಲಿ ನಕಲಿ ಆಧಾರ್ ಕಾರ್ಡ್ ಪಡೆದು, ಬೆಂಗಳೂರಿನ ಮೂಲಕ ನಗರಕ್ಕೆ ಬಂದಿದ್ದ ಅವರು, ಪಶ್ಚಿಮ ಬಂಗಾಳದವರೆಂದೇ ಹೇಳಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪೆನ್ಷನ್ ಮೊಹಲ್ಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಚಾರಣೆ ನಡೆದಿದೆ.

ಕೊಡಗಿನಲ್ಲಿ ಸಿದ್ಧತೆ: 'ಕೊಡಗು ಜಿಲ್ಲೆಯಲ್ಲಿರುವ ಅಕ್ರಮ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಲು, ಪ್ರತಿ ಠಾಣಾವಾರು, ಅಸ್ಸಾಂ ಸೇರಿದಂತೆ ಹೊರ ರಾಜ್ಯದ ಕಾರ್ಮಿಕರ ದಾಖಲಾತಿಗಳನ್ನು ಪರಿಶೀಲಿಸಲಾಗುವುದು. ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಕಲುಷಿತ ನೀರು: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ (ತುಮಕೂರು): ತಾಲ್ಲೂಕಿನ ಸೋರಲಮಾವು ಗ್ರಾಮದಲ್ಲಿ ಎರಡು ದಿನಗಳ ಅಂತರದಲ್ಲಿ ವಾಂತಿ,ಭೇದಿಯಿಂದ ಬಾಲಕಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಕಲುಷಿತ ನೀರು ಸೇವನೆಯಿಂದ ಸಾವು ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಮಂಗಳವಾರ ಗುಂಡಮ್ಮ (60) ಹಾಗೂ ಭಾನುವಾರ ಭುವನೇಶ್ವರಿ (10) ಎಂಬುವರು ವಾಂತಿ,ಭೇದಿಯಿಂದ ಸಾವನ್ನಪ್ಪಿದ್ದಾರೆ. ಗ್ರಾಮದ ಹತ್ತಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದು, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.ಗ್ರಾಮದ ರತ್ನಮ್ಮ ಎಂಬುವರ ಆರೋಗ್ಯದಲ್ಲಿ ಏರುಪೇರಾಗಿದ್ದು ತಾಲ್ಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹಾಸನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗ್ರಾಮದಲ್ಲಿರುವ ಮಿನಿ ನೀರಿನ ಟ್ಯಾಂಕ್‌ನಿಂದ ಕುಡಿಯುವ ನೀರು ಪೂರೈಸಲಾಗುತ್ತಿದೆ. ಇದೇ ನೀರು ಕುಡಿದು ಅಸ್ವಸ್ಥರಾಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಇಂತಹ ಘಟನೆ ಪದೇ ಪದೇ ಸಂಭವಿಸುತ್ತಿದ್ದರೂ ಜಿಲ್ಲಾ ಆಡಳಿತ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿಲ್ಲ. ಘಟನೆ ನಡೆದ ನಂತರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸುಮ್ಮನಾಗುತ್ತಾರೆ. ಪ್ರಾಣ ಹೋದ ಮೇಲೆ ಬಂದು ಏನು ಮಾಡುತ್ತಾರೆ' ಎಂದು ಸೋರಲಮಾವು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣ: ರಣ ಕಣ

ಎರಡನೇ ಮುಖಪುಟದಿಂದ...

ಅಲ್ಲಿ, ಬಿಜೆಪಿಯ ರಾಜ್ಯ ನಾಯಕರ ವಿರುದ್ಧ ತಮ್ಮ ಅಸಹನೆಯನ್ನು ಗಟ್ಟಿ ಕಂಠದಲ್ಲಿ ಹೊರಹಾಕಿದರು.

'ಯೋಗೇಶ್ವರ್ ಅವರಿಗೆ ಪಕ್ಷದಿಂದ ಟಿಕೆಟ್ ಕೊಡಬಾರದು. ಅವರು ಅಧಿಕಾರದಲ್ಲಿ ಇದ್ದಾಗ ಜೆಡಿಎಸ್ ಕಾರ್ಯಕರ್ತರಿಗೆ ಕಿರುಕುಳ ನೀಡಿದ್ದರು. ಕ್ಷೇತ್ರದಲ್ಲಿ ಪಕ್ಷ ಮತ್ತು ಕಾರ್ಯಕರ್ತರ ಪಡೆಯನ್ನು ಗಟ್ಟಿಯಾಗಿ ಉಳಿಸಿಕೊಳ್ಳಬೇಕಾದರೆ ಕಾರ್ಯರೊಬ್ಬರಿಗೆ ಟಿಕೆಟ್ ಕೊಟ್ಟು ಕಣಕ್ಕೆ ಇಳಿಸಿ. ಇಲ್ಲವಾದರೆ ಅಸ್ತಿತ್ವ ಕಳೆದುಕೊಳ್ಳಬೇಕಾಗುತ್ತದೆ' ಎಂಬ ಒಕ್ಕೊರಲ ಅಭಿಪ್ರಾಯ ಜೆಡಿಎಸ್ ಸಭೆಯಲ್ಲಿ ಮೂಡಿಬಂತು.

ಈ ಬೆಳವಣಿಗೆಯ ಬೆನ್ನಲ್ಲೇ, ಪಕ್ಷದ ಸ್ಥಳೀಯ ಕಾರ್ಯಕರ್ತರೊಬ್ಬರಿಗೆ ಟಿಕೆಟ್ ನೀಡಿ ಕಣಕ್ಕಿಳಿಸುವ ಕುರಿತು ಕುಮಾರಸ್ವಾಮಿ ಸುಳಿವು ನೀಡಿದ್ದಾರೆ.

ಚನ್ನಪಟ್ಟಣ ಕ್ಷೇತ್ರದಲ್ಲಿ ತಮ್ಮ ಬೆಂಬಲಿಗರ ಸಭೆ ನಡೆಸಿದ ಯೋಗೇಶ್ವರ್, ಅಭಿಪ್ರಾಯ ಸಂಗ್ರಹಿಸಿದರು. 'ನಾನು ಸ್ಪರ್ಧಿಸುವುದು ಖಚಿತ. ಯಾವ ಚಿಹ್ನೆಯಿಂದ ಎಂಬುದನ್ನು ಆದಷ್ಟು ಶೀಘ್ರವೇ ಪ್ರಕಟಿಸುತ್ತೇನೆ' ಹೇಳಿರುವ ಯೋಗೇಶ್ವರ್ ಅವರು ಎಲ್ಲ ಅವಕಾಶಗಳನ್ನು ಮುಕ್ತವಾಗಿ ಇರಿಸಿಕೊಂಡಿದ್ದಾರೆ. ಈ ಮಧ್ಯೆ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಬಿ ಫಾರಂ ಪಡೆದಿಟ್ಟುಕೊಂಡಿದ್ದಾರೆ.

ಬಿಜೆಪಿ ಅಥವಾ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದೇ ಇದ್ದರೆ ಬಿಎಸ್‌ಪಿಯಿಂದ ಸ್ಪರ್ಧಿಸುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

'ಯೋಗೇಶ್ವರ್ ಅವರಿಗೆ ಬಿಜೆಪಿ ಟಿಕೆಟ್ ನೀಡಲಾಗುತ್ತದೆ. ಇದಕ್ಕೆ ಜೆಡಿಎಸ್ ಕೂಡ ಒಪ್ಪಿಕೊಂಡಿದೆ. ದೆಹಲಿಯಿಂದಲೇ ಅಧಿಕೃತ ಪ್ರಕಟಣೆ ಹೊರ ಬೀಳಲಿದೆ' ಎಂದು ಬಿಜೆಪಿ ನಾಯಕರು ಹೇಳಿಕೊಂಡಿದ್ದಾರೆ.

ಸಂಡೂರಿನಿಂದ ಅನ್ನಪೂರ್ಣ ಕಣಕ್ಕೆ

ಎರಡನೇ ಮುಖಪುಟದಿಂದ...

ಈ ಮಧ್ಯೆ, ಅಭ್ಯರ್ಥಿ ಆಯ್ಕೆ ಅಂತಿಮ ಗೊಳಿಸುವ ಕುರಿತು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದ್ದಾರೆ.

'ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಬಹುತೇಕ ಅಂತಿಮವಾಗಿದ್ದು, ಶೀಘ್ರದಲ್ಲೇ ಪ್ರಕಟಿಸುತ್ತೇವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಅನುಮತಿ ಪಡೆದು ನಾನು ಬಿ ಫಾರಂ ಕೊಡುತ್ತೇನೆ. ಚನ್ನಪಟ್ಟಣದಲ್ಲಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಇನ್ನೂ ಎಲ್ಲಿಯವರೆಗೆ ಬಗ್ಗಲಿ: ಎಚ್‌ಡಿಕೆ

ಎರಡನೇ ಮುಖಪುಟದಿಂದ...

'ಸಿ.ಪಿ. ಯೇಗೇಶ್ವರ್ ಅವರಿಗೆ ಜೆಡಿಎಸ್‌ನಿಂದಲೇ ಟಿಕೆಟ್ ಕೊಡಿ ಎಂದು ಅಮಿತ್ ಶಾ, ನಡ್ಡಾ, ಪ್ರಲ್ಹಾದ್ ಜೋಶಿ ಸೂಚಿಸಿದ್ದರು. ಅದಕ್ಕೂ ಒಪ್ಪಿಕೊಂಡೆ. ಅತ್ತ ಕಾಂಗ್ರೆಸ್ ನಾಯಕರು ಯೋಗೇಶ್ವರ್ ಸ್ವಾಗತಕ್ಕೆ ಸರದಿಯಲ್ಲಿ ನಿಂತಿದ್ದಾರೆ. ಇನ್ನು ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ಕಾರ್ಯಕರ್ತರ ಭಾವನೆಗಳಿಗೆ ವಿರುದ್ಧವಾಗಿ ನಿರ್ಧಾರ ಕೈಗೊಳ್ಳುವುದಿಲ್ಲ' ಎಂದರು.

ನಿಖಿಲ್‌ಗೆ ಟಿಕೆಟ್, ಕಾರ್ಯಕರ್ತರ ಪಟ್ಟು: 'ಯುವ ಜನತಾದಳದ ಅಧ್ಯಕ್ಷ ನಿಖಿಲ್‌ಗೆ ಟಿಕೆಟ್ ನೀಡಬೇಕು. ಯೋಗೇಶ್ವರ್‌ಗೆ ಟಿಕೆಟ್ ನೀಡಬಾರದು' ಎಂದು ಒತ್ತಾಯಿಸಿದ ಕಾರ್ಯಕರ್ತರು, ನಿಖಿಲ್ ಪರ ನಿರಂತರ ಘೋಷಣೆ ಕೂಗಿದರು.

ಕಾರ್ಯಕರ್ತರ ಆಕ್ರೋಶ ಮುಂದುವರಿದ ಕಾರಣ ಕುಮಾರಸ್ವಾಮಿ ಹಾಗೂ ನಿಖಿಲ್ ತಮ್ಮ ಭಾಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು, ಮಾಜಿ ಸಚಿವರಾದ ಸಾ.ರಾ. ಮಹೇಶ್, ವೆಂಕಟರಾವ್ ನಾಡಗೌಡ, ಶಾಸಕ ಶರಣುಗೌಡ ಕಂದಕೂರ, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ಚನ್ನಪಟ್ಟಣ ತಾಲ್ಲೂಕು ಅಧ್ಯಕ್ಷ ಜಯಮುತ್ತು, ಹಿರಿಯ ಮುಖಂಡ ಪ್ರಸನ್ನ ಉಪಸ್ಥಿತರಿದ್ದರು.

ಯೋಗೇಶ್ವರ್ ಬಳಿ ಐದು ಬಿ ಫಾರಂ: ನಿಖಿಲ್ ಕುಮಾರಸ್ವಾಮಿ

ಕಾಂಗ್ರೆಸ್ ಸೇರಲು ಸಜ್ಜಾಗಿರುವ ಸಿ.ಪಿ. ಯೋಗೇಶ್ವರ್ ಜೇಬಿನಲ್ಲಿ ಐದು ಬಿ ಫಾರಂ ಇಟ್ಟುಕೊಂಡು ತಿರುಗಾಡುತ್ತಿದ್ದಾರೆ ಎಂದು ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಟೀಕಿಸಿದರು.

'ನಾವು ಹೊಂದಾಣಿಕೆ ರಾಜಕೀಯ ಮಾಡಲ್ಲ. ಒಂದು ಪಕ್ಷದಲ್ಲಿ ಇದ್ದು ಬೇರೆ ಪಕ್ಷಗಳ ಬಿ ಫಾರಂ ಇಟ್ಟುಕೊಂಡು ಓಡಾಡುವುದು ಗೊತ್ತಿಲ್ಲ. ಹಾಗೆ ಮಾಡುವ ಜಾಯಮಾನವೂ ನಮ್ಮದಲ್ಲ' ಎಂದರು.

'ರಾಜ್ಯ ಬಿಜೆಪಿ ನಾಯಕರು ಸಹ ಯೋಗೇಶ್ವರ್ ಪರ ನಿಂತಿದ್ದಾರೆ. ಆದರೆ, ಅವರು ಕಾಂಗ್ರೆಸ್ ಬಾಗಿಲು ಬಡಿಯುತ್ತಿದ್ದಾರೆ. ಯಾರು ಏನೇ ಮಾಡಲಿ ಚುನಾವಣೆಗೆ ಹೆದರಿ ಕೂರುವುದಿಲ್ಲ. ಚನ್ನಪಟ್ಟಣದಲ್ಲಿ ನಮ್ಮದೇ ಮತಗಳಿವೆ' ಎಂದು ಹೇಳಿದರು.

ಕಳಪೆ ಆಹಾರ ತಯಾರಿಕೆ; ಅಧಿಕಾರಿಗಳಿಗೆ ತರಾಟೆ

ಐವರು ಸಿಬ್ಬಂದಿ ಅಮಾನತು

ಪ್ರಜಾವಾಣಿ ವಾರ್ತೆ

ಮಂಡ್ಯ: ಇಲ್ಲಿನ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಆಸ್ಪತ್ರೆಯಲ್ಲಿ ರೋಗಿಗಳಿಗೆ ಕಳಪೆ ಆಹಾರ ಮತ್ತು ಬೂಸ್ಟ್ ಬಂದ ಬ್ರೆಡ್ ನೀಡುತ್ತಿದ್ದುದನ್ನು ಕಂಡ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ಅವರು ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಆಯೋಗದ ತಂಡ ಮಂಗಳವಾರ ಭೇಟಿ ನೀಡಿದ ಸಂದರ್ಭ, ಅಡುಗೆ ಕೋಣೆಯಲ್ಲಿ 538 ರೋಗಿಗಳಿಗೆ ಅಗತ್ಯವಿದ್ದಷ್ಟು ಆಹಾರವನ್ನು ತಯಾರಿಸಿರಲಿಲ್ಲ. ಗುಣಮಟ್ಟದ ಆಹಾರ ಸಾಮಗ್ರಿ ಮತ್ತು ತರಕಾರಿಯ ದಾಸ್ತಾನೂ ಇರಲಿಲ್ಲ. ಅವಧಿ ಮೀರಿದ ಬ್ರೆಡ್ ಇಡಲಾಗಿತ್ತು. ಅದನ್ನು ಕಂಡು ಡಾ.ಕೃಷ್ಣ ಸಿಟ್ಟಾದರು.

'ಆಹಾರ ಸ್ವಲ್ಪವೂ ರುಚಿಯಾಗಿರುವುದಿಲ್ಲ. ಹಾಲಿನಲ್ಲಿ ಸ್ವಲ್ಪವೂ ಸತ್ವವಿಲ್ಲ' ಎಂದು ರೋಗಿಗಳು ದೂರಿದರು. ಮತ್ತೆ ಕೆಲವರು, 'ಇಲ್ಲಿ ಉಚಿತವಾಗಿ ಆಹಾರ ಕೊಡುವ ಬಗ್ಗೆ ಗೊತ್ತೇ ಇಲ್ಲ. ಹೀಗಾಗಿ ಹೊರಗಡೆ ಕ್ಯಾಂಟೀನ್‌ನಲ್ಲಿ ಹಣ ಕೊಟ್ಟು ತಿಂಡಿ–ಊಟ ತರುತ್ತಿದ್ದೇವೆ' ಎಂದು ಅಲವತ್ತುಕೊಂಡರು.

ಡಾ.ಕೃಷ್ಣ ಮಾತನಾಡಿ, 'ಜಿಲ್ಲಾಸ್ಪತ್ರೆಯ ವಾರ್ಡ್‌ಗಳಲ್ಲಿ ಸ್ವಚ್ಛತೆ ಇಲ್ಲ. ಶೌಚಾಲಯಗಳು ಗಬ್ಬು ನಾರುತ್ತಿವೆ. ಒಂದೇ ಬೆಡ್ ಮೇಲೆ ಇಬ್ಬರು ರೋಗಿಗಳು ಮಲಗಿದ್ದಾರೆ. ರೋಗಿಗಳಿಗೆ ಅಗತ್ಯವಾದಷ್ಟು ಆಹಾರ ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಆಹಾರ ಆಯೋಗದ ಅಧ್ಯಕ್ಷ ಡಾ.ಕೃಷ್ಣ ಮತ್ತು ಸದಸ್ಯರ ತಂಡ ಭೇಟಿ ನೀಡಿ, ರೋಗಿಗಳಿಗೆ ಕೊಡುವ ಬ್ರೆಡ್ ಗುಣಮಟ್ಟವನ್ನು ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

ಐವರ ಅಮಾನತು: ಅಂಗನವಾಡಿಗಳಿಗೆ ಕಳಪೆ ಆಹಾರ ಪೂರೈಸುತ್ತಿದ್ದ ಆರೋಪದ ಮೇರೆಗೆ, ಮಂಡ್ಯ ತಾಲ್ಲೂಕಿನ ಹಳೇಬೂದನೂರು ಗ್ರಾಮದ ಮಹಿಳಾ ಪೂರಕ ಪೌಷ್ಟಿಕ ಆಹಾರ ತಯಾರಿಕಾ ಕೇಂದ್ರದ (ಮಂಡ್ಯ ಮತ್ತು ದುದ್ದ ಎಂ.ಎಸ್.ಪಿ.ಸಿ.) ಐವರು ಸಿಬ್ಬಂದಿಯನ್ನು ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ಅವರ ಸೂಚನೆ ಮೇರೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಮಾನತುಗೊಳಿಸಿದ್ದಾರೆ.

ಸುಧಾ ಜಿ.ಎಲ್. (ಕಾರ್ಯದರ್ಶಿ), ಕಾಳಮ್ಮ (ಅಧ್ಯಕ್ಷೆ) ಹಾಗೂ ಅಂಬಿಕಾ ಡಿ, ನಯನಾ ಕೆ.ಟಿ., ಕಾವ್ಯಾ ಕೆ.ಸಿ (ಮೂವರು ಸದಸ್ಯರು) ಅಮಾನತುಗೊಂಡವರು.

ಮುಖ್ಯಾಂಶಗಳು

- ರೋಗಿಗಳಿಗೆ ಅಗತ್ಯವಾದಷ್ಟು ಆಹಾರ ನೀಡದ ಬಗ್ಗೆಯೂ ಅಸಮಾಧಾನ
- ಮಿಮ್ಸ್ ರೋಗಿಗಳಿಗೆ ಬೂಸ್ಟ್ ಬಂದ ಬ್ರೆಡ್ ವಿತರಣೆ
- ಆಹಾರ ಆಯೋಗದ ಅಧ್ಯಕ್ಷರಿಂದ ವೈದ್ಯಾಧಿಕಾರಿಗಳ ತರಾಟೆ



ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡವೊಂದು ಮಂಗಳವಾರ ಬುಡಮೇಲಾಗಿ ಉರುಳಿ ಬಿದ್ದಿದ್ದು, ಅಗ್ನಿಶಾಮಕ ದಳ ಹಾಗೂ ಪೊಲೀಸರು, ಅವಶೇಷಗಳಡಿ ಸಿಲುಕಿದ್ದ ಕಾರ್ಮಿಕ ರಕ್ಷಣೆಗಾಗಿ ಕಾರ್ಯಾಚರಣೆ ನಡೆಸಿದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಒಬ್ಬರ ಶವ ಪತ್ತೆ: 7 ಮಂದಿ ಕಾಣೆ

ಎರಡನೇ ಮುಖಪುಟದಿಂದ..

ಯಾದಗಿರಿಯ ಜಗಮ್ಮ, ಮಲ್ಲಪ್ಪ, ನಾಗರಾಜು, ಬಿಹಾರದ ರಮೇಶ್ ಕುಮಾರ್, ಪಾಶ್ವಾನ್ ಅವರು ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಿಹಾರದ ಮಹ್ಮದ್ ಅರ್ಮಾನ್, ಮಹ್ಮದ್ ಅರ್ಷದ್, ತಿರುಪಾಲಿ, ಸೋಲೊಪಾಶ್ವನ್, ಚಿತ್ತೂರಿನ ತುಳಸಿ ರೆಡ್ಡಿ ಹಾಗೂ ಗಜೇಂದ್ರ ನಾಪತ್ತೆ ಆಗಿದ್ದಾರೆ. ಗಜೇಂದ್ರ ಅವರ ಊರು ಗೊತ್ತಾಗಿಲ್ಲ.

ಅರ್ಮಾನ್

ಕಳಪೆ ಕಾಮಗಾರಿಯಿಂದ ಕುಸಿತ: 'ಕಳಪೆ ಕಾಮಗಾರಿ ಯಿಂದಲೇ ಕಟ್ಟಡ ಬುಡಮೇಲಾಗಿ ಉರುಳಿ ಬಿದ್ದಿರುವ ಶಂಕೆ ವ್ಯಕ್ತವಾಗಿದೆ. ಮಾಲೀಕ ಆಂಧ್ರಪ್ರದೇಶದ ಮುನಿರಾಜು ರೆಡ್ಡಿ, ಅವರ ಪುತ್ರ ಮೋಹನ್ ರೆಡ್ಡಿ ಹಾಗೂ ಕಟ್ಟಡದ ನಿರ್ಮಾಣ ಕಾಮಗಾರಿಯ ಮೇಸ್ತ್ರಿ ನಾಪತ್ತೆ ಆಗಿದ್ದಾರೆ. ಅವರಿಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ತಳಪಾಯದಲ್ಲಿ ಕಬ್ಬಿಣದ ರಾಡುಗಳನ್ನು ಸರಿಯಾಗಿ ಅಳವಡಿಕೆ ಮಾಡಿರಲಿಲ್ಲ. ಇದೇ ಕಾರಣಕ್ಕೆ ಭಾರ ತಡೆಯದೇ ಕಟ್ಟಡ ಉರುಳಿರುವ ಸಾಧ್ಯತೆಯಿದೆ' ಎಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವರು ಶಂಕಿಸಿದ್ದಾರೆ.

> **ಅವಘಡದಲ್ಲಿ 20 ಜನ ಕಾರ್ಮಿಕರು ಸಿಲುಕಿದ್ದರು. ಅದರಲ್ಲಿ ಕೆಲವರನ್ನು ರಕ್ಷಿಸಲು ಸಾಧ್ಯವಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆಸಲಾಗಿದೆ.**
> **ದೇವರಾಜು,** ಡಿಸಿಪಿ, ಪೂರ್ವ ವಿಭಾಗ

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ: ಮಂಗಳವಾರ ಮಧ್ಯಾಹ್ನ 3.40ರ ಸುಮಾರಿಗೆ ಕಟ್ಟಡ ಉರುಳಿದೆ. ಎದುರು ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಕಟ್ಟಡವು ಬುಡಮೇಲಾಗಿ ಉರುಳುತ್ತಿರುವ ದೃಶ್ಯವು ಸೆರೆಯಾಗಿದೆ.

ಕೆಳ ಅಂತಸ್ತಿನಲ್ಲಿ ಮಹಿಳೆ ಸೇರಿದಂತೆ ಐವರು ಕೆಲಸ ಮಾಡುತ್ತಿದ್ದ ದೃಶ್ಯವೂ ಸೆರೆಯಾಗಿತ್ತು. ಅವರ ಮೇಲೆಯೇ ಕಟ್ಟಡ ಕುಸಿದಿದೆ.

ಮಾಹಿತಿ ತಿಳಿದ ತಕ್ಷಣವೇ ಅಗ್ನಿಶಾಮಕದ ದಳದ 50ಕ್ಕೂ ಹೆಚ್ಚು ಸಿಬ್ಬಂದಿ ಹಾಗೂ ಸ್ಥಳೀಯ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಕಾರ್ಯಾಚರಣೆಗೆ ಜೆಸಿಬಿ ಯಂತ್ರ ಬಳಕೆ ಮಾಡಲಾಗಿದೆ. ಉರುಳಿ ಬಿದ್ದ ಕಟ್ಟಡದ ಮಧ್ಯಭಾಗದಲ್ಲಿ ಸಿಲುಕಿದ್ದರು. ಕಿಟಕಿಗೆ ಅಳವಡಿಸಿದ್ದ ಕಬ್ಬಿಣದ ಸರಳುಗಳನ್ನು ತೆಗೆದು ಅವರನ್ನು ರಕ್ಷಿಸಲಾಗಿದೆ. ನಾಪತ್ತೆ ಆದವರಿಗೆ ಶ್ವಾನ ದಳ ಹಾಗೂ ಎನ್‌ಡಿಆರ್‌ಎಫ್ ಬಳಸಿಕೊಂಡು ಶೋಧ ನಡೆಸಲಾಗುತ್ತಿದೆ.

ಪೇಂಟಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕರು: ಕಟ್ಟಡದ ಬಹುತೇಕ ಕಾಮಗಾರಿ ಮುಕ್ತಾಯಗೊಂಡಿತ್ತು. ಪೇಂಟಿಂಗ್ ಹಾಗೂ ಟೈಲ್ಸ್ ಕಾಮಗಾರಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಕಟ್ಟಡ ನೆಲಕ್ಕುರುಳಿದೆ. ಅರ್ಧ ಕಟ್ಟಡ ಕುಸಿದು ಪಕ್ಕದ ಖಾಲಿ ನಿವೇಶನದ ಮೇಲೆ ಬಿದ್ದಿದೆ. ಬೃಹತ್ ಗಾತ್ರದ ಕಾಂಕ್ರೀಟ್ ಪಿಲ್ಲರ್‌ಗಳಿಂದ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ಕಮಿಷನರ್ ಸತೀಶ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

'ಮಳೆಯಿಂದ ನೀರು ಬಂದಿತ್ತು'

'ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದರಿಂದ ಕಾಂಪೌಂಡ್ ನಿರ್ಮಾಣಕ್ಕೆ ಕಟ್ಟಡದ ಸುತ್ತಲೂ ದೊಡ್ಡದಾದ ಗುಂಡಿ ತೆಗೆಯಲಾಗಿತ್ತು. ಹೆಣ್ಣೂರು ಭಾಗದಲ್ಲಿ ಮಂಗಳವಾರ ಮಧ್ಯಾಹ್ನ ಜೋರು ಮಳೆ ಸುರಿದಿತ್ತು. ಗುಂಡಿಗಳಲ್ಲಿ ನೀರು ತುಂಬಿತ್ತು. ತೇವಾಂಶ ಹೆಚ್ಚಳವಾಗಿ ಕಟ್ಟಡ ಕುಸಿದಿರುವ ಸಾಧ್ಯತೆಯೂ ಇದೆ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಕುಟುಂಬಸ್ಥರ ಆಕ್ರಂದನ: ಕಟ್ಟಡ ಕುಸಿದ ಮಾಹಿತಿ ತಿಳಿದು ಸ್ಥಳಕ್ಕೆ ಬಂದಿದ್ದ ಕಾರ್ಮಿಕರ ಕುಟುಂಬಸ್ಥರು ಕಣ್ಣೀರು ಹಾಕಿದರು. ಆಕ್ರಂದನ ಮುಗಿಲು ಮುಟ್ಟಿತ್ತು.

'ಕಳಪೆ ಕಾಮಗಾರಿಯೇ ಕಾರಣ'

ಸ್ಥಳಕ್ಕೆ ಕೆಆರ್ ಪುರ ಶಾಸಕ ಬೈರತಿ ಬಸವರಾಜ್ ಭೇಟಿ ನೀಡಿ ಪರಿಶೀಲಿಸಿದರು. ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಬಸವರಾಜ್, 'ಬಿಹಾರ ಹಾಗೂ ಆಂಧ್ರಪ್ರದೇಶದ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಮಳೆಯಿಂದ ಕಟ್ಟಡ ಕುಸಿದಿಲ್ಲ. ಕಟ್ಟಡ ಕುಸಿತಕ್ಕೆ ಕಳಪೆ ಕಾಮಗಾರಿ ಕಾರಣವಾಗಿದೆ. ಕಾರ್ಯಾಚರಣೆ ನಡೆಸಿ ಕಾರ್ಮಿಕರ ಜೀವ ಉಳಿಸುವ ಕೆಲಸ ಮಾಡುತ್ತೇವೆ. ಜೆಸಿಬಿ ಹಾಗೂ ಹಿಟಾಚಿ ಯಂತ್ರಗಳನ್ನು ಕಾರ್ಯಾಚರಣೆಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಜನವರಿಯಲ್ಲಿ ಕೌಶಲ ಶೃಂಗಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೊದಲ ಬಾರಿಗೆ ನಗರದಲ್ಲಿ ಕೌಶಲ ಶೃಂಗಸಭೆ ನಡೆಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ (ಐಟಿ,ಬಿಟಿ) ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಐಟಿ, ಬಿಟಿ ಇಲಾಖೆ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ಅಧಿಕಾರಿಗಳ ಜೊತೆಗಿನ ಸಂವಾದದಲ್ಲಿ ಅವರು ಮಾತನಾಡಿದರು.

ಜನವರಿಯಲ್ಲಿ 2–3 ದಿನ ನಡೆಯುವ ಶೃಂಗಸಭೆಗೆ ಕಾರ್ಪೊರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಅನುದಾನಿತ ಸಂಸ್ಥೆಗಳು, ನಾಸ್ಕಂ, ಕೈಗಾರಿಕೆಗಳು, ಕೌಶಲ ತರಬೇತುದಾರರನ್ನು ಆಹ್ವಾನಿಸಲಾಗುವುದು. ಮುಂದಿನ 3–4 ವರ್ಷ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಬಹುದು. ನೀಲನಕ್ಷೆ ಸಿದ್ಧಪಡಿಸಲಾಗುವುದು ಮತ್ತು ಬಜೆಟ್‌ನಲ್ಲಿ ಅನುದಾನ ಹಂಚಿಕೆಗೂ ಸಹಕಾರಿಯಾಗಲಿದೆ ಎಂದು ಹೇಳಿದರು.

'ರಾಜ್ಯದಲ್ಲಿ ಅತ್ಯುತ್ತಮ ಮತ್ತು ಹೆಚ್ಚು ತರಬೇತಿ ಪಡೆದ ಮಾನವ ಸಂಪನ್ಮೂಲ ಹೊಂದಿದ್ದೇವೆ. ಕರ್ನಾಟಕದ 2023–24ನೇ ಸಾಲಿನ ನಿವ್ವಳ ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ಶೇ 10.2ರಷ್ಟಿದ್ದು, ದೇಶದಲ್ಲಿ ಅಗ್ರಸ್ಥಾನದಲ್ಲಿದೆ. ಸಮೀಕ್ಷೆ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ಹತ್ತು ನಗರಗಳ ಪೈಕಿ ಬೆಂಗಳೂರು ಸಹ ಒಂದು. ಹಾಗಾಗಿ ಚೆನ್ನೈ, ದೆಹಲಿ, ಮುಂಬೈ, ಹೈದರಾಬಾದ್ ನಗರಗಳೊಂದಿಗೆ ಸ್ಪರ್ಧೆ ನಡೆಸುತ್ತಿಲ್ಲ' ಎಂದರು.

ಕೌಶಲ ಸಮ್ಮೇಳನಕ್ಕೂ ಮುನ್ನ ವಿವಿಧ ಕ್ಷೇತ್ರಗಳ ತಜ್ಞರು, ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಮತ್ತೊಮ್ಮೆ ಸಭೆ ನಡೆಸಿ, ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ಕಂಪನಿಗಳ ಹಿರಿಯ ಮಾನವ ಸಂಪನ್ಮೂಲ ಅಧಿಕಾರಿಗಳು 'ನಿಪುಣ ಕರ್ನಾಟಕ' ಯೋಜನೆ ಕುರಿತು ಸಲಹೆಗಳನ್ನು ನೀಡಿದರು.

ನಿಪುಣ ಕರ್ನಾಟಕ: ಇದಕ್ಕೂ ಮುನ್ನ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳ ತಜ್ಞರು ಹಾಗೂ ಪ್ರತಿನಿಧಿಗಳ ಜತೆ ಸಂವಾದ ನಡೆಸಿದ ಪ್ರಿಯಾಂಕ್ ಖರ್ಗೆ, 'ಉದ್ಯೋಗ ಸನ್ನದ್ಧತೆಗಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಮೂಲಕ ಉದ್ಯೋಗಾವಕಾಶ ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸಲು 'ನಿಪುಣ ಕರ್ನಾಟಕ'ಕ್ಕೆ ಶೀಘ್ರ ಚಾಲನೆ ನೀಡಲಾಗುವುದು' ಎಂದರು.

ಟೆಕ್ ಶೃಂಗಸಭೆ: ಬೆಂಗಳೂರು ಟೆಕ್ ಶೃಂಗಸಭೆಯು ನ.19ರಿಂದ 21ರವರೆಗೆ ಅರಮನೆ ಆವರಣದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಕೆಡಿಇಎಂ ಸಿಇಒ ಸಂಜೀವ್ ಗುಪ್ತಾ, ಜೆಎಫ್‌ಎಚ್‌ಎಫ್‌ನ ಅಶೋಕ್, ನಾಸ್ಕಂ ಪ್ರತಿನಿಧಿ ಭಾಸ್ಕರ್, ಹರ್ಕಿ ಸಿಇಒ ನೇಹಾ ಬಗೇರಿಯಾ, ಐಟಿ,ಬಿಟಿ ಕಾರ್ಯದರ್ಶಿ ಡಾ.ಏಕರೂಪ್ ಕೌರ್ ಪಾಲ್ಗೊಂಡಿದ್ದರು.

> **ಬೆಂಗಳೂರು ನಗರದಲ್ಲಿ ಸಾಕಷ್ಟು ಕಂಪನಿಗಳು ಇದ್ದು, 'ನಿಪುಣ ಕರ್ನಾಟಕ' ಯೋಜನೆಯಲ್ಲಿ ವಿದ್ಯಾರ್ಥಿಗಳು ಕೌಶಲ ತರಬೇತಿ ಪಡೆದು ಉದ್ಯೋಗ ಪಡೆಯಬಹುದು. ಮಹಿಳೆಯರಿಗೂ ಉದ್ಯೋಗಾವಕಾಶ ಸಾಕಷ್ಟು ಇದೆ.**
> **ಅಪರ್ಣಾ,** ಟಿಎಚ್‌ಬಿಎಸ್, ಹಿರಿಯ ಮಾನವ ಸಂಪನ್ಮೂಲ ಅಧಿಕಾರಿ

> **ಸದೃಢ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮುಖ್ಯ. ಹಾಗಾಗಿ ಶಿಕ್ಷಕರಿಗೆ ಕೌಶಲ ತರಬೇತಿ ನೀಡಿ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಸಜ್ಜುಗೊಳಿಸಬೇಕು.**
> **ನಾಗನಗೌಡ,** ಹಿರಿಯ ಮಾನವ ಸಂಪನ್ಮೂಲ ಅಧಿಕಾರಿ, ಪ್ರವರ ಕನ್ಸಲ್ಟೆನ್ಸಿ

'ಅಕ್ರಮ ಕಟ್ಟಡ ನಿರ್ಮಾಣದ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡಗಳ ಸುಭದ್ರತೆಯ ಪ್ರಮಾಣ ಪತ್ರ, ವಿನ್ಯಾಸ ಸೇರಿದಂತೆ ಪಾಲಿಕೆಯಿಂದ ಅನುಮತಿ ತೆಗೆದುಕೊಳ್ಳದೆ ಕಟ್ಟಡ ನಿರ್ಮಾಣ ಮಾಡುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಆದಷ್ಟು ಬೇಗ ಇದರ ಬಗ್ಗೆ ಸಮೀಕ್ಷೆ ಕಾರ್ಯ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ ಅವರು ಮಾತನಾಡಿದರು.

'60x40 ಅಳತೆಯ ನಿವೇಶನದಲ್ಲಿ ಇಷ್ಟು ದೊಡ್ಡ ಕಟ್ಟಡ ಕಟ್ಟಿರುವುದು ದೊಡ್ಡ ಅಪರಾಧ. ಅಧಿಕಾರಿಗಳು ಮೂರು ಬಾರಿ ನೋಟಿಸ್ ನೀಡಿದ್ದೇವೆ ಎಂದು ತಿಳಿಸಿದ್ದಾರೆ. ನೋಟೀಸ್ ನೀಡಿದರೆ ಸಾಲದು ಅದರ ಬದಲು ಕಠಿಣ ಕ್ರಮ ತೆಗೆದುಕೊಳ್ಳಬೇಕಿತ್ತು. ಇದು ನಮಗೆ ದೊಡ್ಡ ಪಾಠವಾಗಿದೆ. ರಕ್ಷಣಾ ಕಾರ್ಯ ಮುಗಿದ ನಂತರ ಮುಂದಿನ ಎರಡು ದಿನಗಳಲ್ಲಿ ಇದರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ನಗರದಾದ್ಯಂತ ಅಕ್ರಮ ಕಟ್ಟಡಗಳ ಬಗ್ಗೆ ಸರ್ವೆ ಕಾರ್ಯ ಮಾಡಲಾಗುವುದು. ಕಟ್ಟಡ ವಿನ್ಯಾಸ ಹೊಂದಿರದವರಿಗೆ ಯಾವುದೇ ಕಾರಣಕ್ಕೂ ನೋಂದಣಿ ಮಾಡಿಕೊಡಬಾರದು ಎಂದು ಕಂದಾಯ ಇಲಾಖೆಗೆ ಸೂಚನೆ ನೀಡಲಾಗುವುದು. ಕಡಿಮೆ ದುಡ್ಡಿಗೆ ನಿವೇಶನ ತೆಗೆದುಕೊಂಡು ಮಾರಾಟ ಮಾಡಲು ಈ ರೀತಿ ಮಾಡಲಾಗುತ್ತದೆ. ಇಂತಹ ಅಕ್ರಮಗಳನ್ನು ತಡೆಗಟ್ಟುವ ಕಾರಣಕ್ಕಾಗಿ ರೇರಾ ಕಾಯ್ದೆ ಜಾರಿಯಲ್ಲಿದೆ ಎಂದರು.

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡದವರು ಅತ್ಯಂತ ಜಾಗರೂಕವಾಗಿ ರಕ್ಷಣಾ ಕೆಲಸ ಮಾಡುತ್ತಿದ್ದಾರೆ. ಆಂಧ್ರ ಮತ್ತು ಬಿಹಾರ್ ರಾಜ್ಯದ ಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಿದ್ದರು. ಮೃತಪಟ್ಟಿರುವ ಒಬ್ಬ ಕಾರ್ಮಿಕರ ಗುರುತು ಸಿಕ್ಕಿದ್ದು, ಆತ ಬಿಹಾರದವರು ಎಂದು ತಿಳಿದುಬಂದಿದೆ ಎಂದರು. ಕಟ್ಟಡ ನಿರ್ಮಾಣ ಗುತ್ತಿಗೆದಾರ, ನಿವೇಶನದ ಮಾಲೀಕ ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳಲಾಗುವುದು. ರಕ್ಷಣೆ ಕಾರ್ಯ ಮುಗಿದ ನಂತರ ಕಾರ್ಮಿಕರಿಗೆ ಪರಿಹಾರವನ್ನು ಕೊಡಲಾಗುವುದು ಎಂದರು.

ನಗರದ ಬಾಬುಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದರು

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commissionerahvs@gmail.com ಫೋನ್: 080–23412767
ಸಂ.ಆಪಸಂ/ವಿಎಂಎಸ್/DRUGS AND CHEMICALS/ಟೆಂಡರ್/2024–25 ದಿನಾಂಕ : 22–10–2024

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2024–25 ನೇ ಸಾಲಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸುವ ಸಂಬಂಧ KPP Portal ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿ ಪಡಿಸಿದ ಮೊತ್ತ ರೂ.4602.55 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 22.10.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ : 22.10.2024 ರಿಂದ 21.11.2024 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್‌ನ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
DIPR/CP/2691/Zen/2024-25

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560 027.
ದೂರವಾಣಿ: 080–22278813/14/15/16, ವೆಬ್‌ಸೈಟ್: www. ksmc.karnataka.gov.in
ಸಂ. 57/ಕೆ.ಎಸ್.ಎಂ.ಸಿ.ಎಲ್/ಯಾಂ/ಕೆ.ಎಂ.ಎಂ/ಟಿ.ಎಂ.ಸಿ/2024–25/2354 ದಿನಾಂಕ : 22.10.2024

ಅಲ್ಪಾವಧಿ ಇ–ಟೆಂಡರ್ ಆಹ್ವಾನ

ಮೈಸೂರು ಜಿಲ್ಲೆಯಲ್ಲಿರುವ ಸಂಸ್ಥೆಯ ಕಾರ್ಯ ಮ್ಯಾಗ್ನಸೈಟ್ ಗಣಿಗೆ ಹೊಸ Tractor Mounted Compressor (TMC) ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	04.11.2024 ಸಂಜೆ 05.00 ಗಂಟೆಯವರೆಗೆ
ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ	06.11.2024 ಬೆಳಿಗ್ಗೆ 11.00 ಗಂಟೆಗೆ
ಇ.ಎಂ.ಡಿ ಮೊತ್ತ	ರೂ.35,000/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: 080–46010000/68948777
ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಜಾ)
DIPR/CP/KAVITA/2694/2024-25

EMPLOYEES' PROVIDENT FUND ORGANIZATION
Ministry of Labour & Employment, Government of India
Zonal Office, Karnataka (Other than Bengaluru) & Goa.

The EPFO, Zonal Office, Hubballi invites application for empanelment of Advocates to represent CBT, EPF in various judicial Fora Viz. High Court of Karnataka (Dharwad & Kalaburagi Bench), DCDRF and other lower courts from eligible Advocates in the prescribed format.
The last date for submission of application is **22.11.2024, 6.00 PM.**
Further details regarding notification can also be obtained from **EPFO, Zonal Office, Karnataka (Other than Bengaluru) & Goa, Employees' Provident Fund Organization, Office of Additional Central PF Commissioner, Karnataka (Other than Bengaluru) & Goa, Bhavishya Nidhi Bhavan, New Block No. 10, Behind Income Tax Office Navanagar, Hubballi – 580025. E-mail : acc.hubligoa@epfindia.gov.in, Ph. No. 9645940789.**

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com
No:HIMS/C-LIB/E-Ten/002/2024-25 Date: 18.10.2024

ಟೆಂಡರ್ ಪ್ರಕಟಣೆ

ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಮತ್ತು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಿರುವ ವೈದ್ಯಕೀಯ ಪುಸ್ತಕಗಳನ್ನು ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. Sl.No.1)Tender Particulars: Medical Books Qty: Refer Tender document EMD(Rs.):1,80,000/- ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಡನೆ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ:21.10.2024.ರಿಂದ ಪ್ರಾರಂಭವಾಗುವುದು.ಭರ್ತಿ ಮಾಡಿದ ಇ–ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ:04.11.2024.ರ ಸಂಜೆ 5.00ಗಂಟೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.
ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/586/ಕೆಎಸ್ಎಂಸಿಎ/2024–25

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 (ಬೆಂಘತ್ಯಾನಿನಿ), ನಂ.30/1, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.
ಸಂ: ಉಪ್ರವ್ಯ–3/(ಬೆಂಘತ್ಯಾನಿನಿ)/ಟೆಂಡರ್–02/ತಿದ್ದುಪಡಿ–03/24–25 ದಿನಾಂಕ: 21.10.2024

ತಿದ್ದುಪಡಿ–03

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ವಿಸ್ತರಣೆ.
ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ: DGM-3/BSWML/TEND/02/24-25,Dated: 31.08.2024 and Corrigendum no: DGM-3/BSWML/TEND-02/CORR-02/24-25 Dated: 10.10.2024
ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.
ನಿಗದಿತ ಅವಧಿ / ವೇಳಾಪಟ್ಟಿ

ಕ್ರ. ಸಂ.	ವಿವರ	ಟೆಂಡರ್/ತಿದ್ದುಪಡಿ ಪ್ರಕಟಣೆಯ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಬಿಡ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	22.10.2024 ಸಂಜೆ 16.00 ಗಂಟೆವರೆಗೆ	29.10.2024 ಸಂಜೆ 16.00 ಗಂಟೆವರೆಗೆ
2	ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	23.10.2024 ಸಂಜೆ 16.30 ಗಂಟೆ ನಂತರ	30.10.2024 ಸಂಜೆ 16.30 ಗಂಟೆ ನಂತರ

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಬಹುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ
ವಾಸಾಸಂಇ/ವಾ.ಪ್ರ/2662/ಎಂಎಎ/24–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2024-25/3419 Date:21-10-2024

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ–3&4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 05 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.253.00 ಲಕ್ಷಗಳು ಹಾಗೂ ಕನಿಷ್ಠ ರೂ.85.00 ಲಕ್ಷಗಳು. 1. ಕೆ.ಡಬ್ಲ್ಯೂ–4 ಕಾಮಗಾರಿಗಾಗಿ ಪೂರ್ವಟೆಂಡರ ಸಭೆಯು ದಿನಾಂಕ:28–10–2024 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:29–10–2024 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ:30–10–2024 ಸಂಜೆ–4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1010/KSMCA/2024-25

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, , ಭೂತರಾಮನಹಟ್ಟಿ, ಬೆಳಗಾವಿ - 591156
(ನ್ಯಾಕ್ ಮಾನ್ಯತೆ:B+ ಗ್ರೇಡ್ - 2021)
Website:www.rcub.ac.in ದೂರವಾಣಿ ಸಂಖ್ಯೆ: 0831-2565208,2565219 E-mail:cdc@rcub.ac.in
ಕ್ರ.ಸಂ.:ರಾಚವಿ/ಬೆಳಗಾವಿ/ಸಿ.ಡಿ.ಸಿ.(ಸಂಯೋಜನೆ)/2024–25/107 ದಿನಾಂಕ: 23.10.2024

ಅಧಿಸೂಚನೆ ಪ್ರಕಟಣೆ

ವಿಷಯ: 2025–26ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ವಿವಿಧ ಬಗೆಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.10.2024
***
ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನ್ವಯ, 2025–26 ನೇ ಶೈಕ್ಷಣಿಕ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯಲ್ಲಿ ಹೊಸದಾಗಿ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಇಚ್ಛಿಸಿರುವ ಸಂಘ–ಸಂಸ್ಥೆಗಳಿಂದ ಮತ್ತು ಈಗಾಗಲೇ ಸಂಯೋಜಿತಗೊಂಡಿರುವ ಮಹಾವಿದ್ಯಾಲಯಗಳಿಂದ ಸ್ನಾತಕ / ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ / ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ / ಪ್ರವೇಶ ಮಿತಿ ಹೆಚ್ಚಳ / ಶಾಶ್ವತ ಸಂಯೋಜನೆ ನವೀಕರಣ ಸೇರಿದಂತೆ ವಿವಿಧ ರೀತಿಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಸದರಿ ಅರ್ಜಿಗಳನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಸಂಯೋಜನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಪಡಿಸಿದ UUCMS ತಂತ್ರಾಂಶದ Affiliation Module ನಲ್ಲಿರುವಂತೆ ಸಂಯೋಜನಾ ಅರ್ಜಿಯನ್ನು http://uucms.karnataka.gov.in ಲಿಂಕ್‌ನ ಮುಖಾಂತರ ಸಲ್ಲಿಸಬಹುದಾಗಿದೆ.

ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ವೇಳಾಪಟ್ಟಿ

		ಪ್ರಾರಂಭ ದಿನ	ಕೊನೆಯ ದಿನ
1.	ದಂಡ ರಹಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿ ಸಲ್ಲಿಸುವಿಕೆ.	25.10.2024	10.11.2024 ಸಂಜೆ 05.00 ರ ಒಳಗಾಗಿ
2.	ರೂ.10,000/- ದಂಡ ಶುಲ್ಕದೊಂದಿಗೆ ಸಂಯೋಜನಾ ಅರ್ಜಿ ಸಲ್ಲಿಸುವಿಕೆ	10.11.2024	15.11.2024 ಸಂಜೆ 05.00 ರ ಒಳಗಾಗಿ

ವಿಶೇಷ ಸೂಚನೆ: ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಸಹಿ/– ಕುಲಸಚಿವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿನ (http://www.rcub.ac.in) CDC Link ನಲ್ಲಿ ಲಭ್ಯವಿರುವ Affiliation Notification –2025–26 ರಲ್ಲಿ ನೋಡಬಹುದಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 (ಬೆಂಘತ್ಯಾನಿನಿ), ನಂ.30/1, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.
ಸಂ: ಉಪ್ರವ್ಯ–3/(ಬೆಂಘತ್ಯಾನಿನಿ)/ಟೆಂಡರ್–03/ತಿದ್ದುಪಡಿ–03/24–25 ದಿನಾಂಕ: 21.10.2024

ತಿದ್ದುಪಡಿ–03

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ವಿಸ್ತರಣೆ.
ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ: DGM-3/BSWML /TEND/03/24-25,Dated: 31.08.2024 and Corrigendum no: DGM-3/BSWML/TEND-03/CORR-02/24-25 Dated: 10.10.2024.
ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.
ನಿಗದಿತ ಅವಧಿ / ವೇಳಾಪಟ್ಟಿ

ಕ್ರ. ಸಂ.	ವಿವರ	ಟೆಂಡರ್/ತಿದ್ದುಪಡಿ ಪ್ರಕಟಣೆಯ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಬಿಡ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	22.10.2024 ಸಂಜೆ 16.00 ಗಂಟೆವರೆಗೆ	29.10.2024 ಸಂಜೆ 16.00 ಗಂಟೆವರೆಗೆ
2	ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	23.10.2024 ಸಂಜೆ 16.30 ಗಂಟೆ ನಂತರ	30.10.2024 ಸಂಜೆ 16.30 ಗಂಟೆ ನಂತರ

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಬಹುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ
ವಾಸಾಸಂಇ/ವಾ.ಪ್ರ/2663/ಎಂಎಎ/24–25

ಸರ್ ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ
ಇಂದಿರಾನಗರ, ಬೆಂಗಳೂರು – 560 038.
ದೂರವಾಣಿ: 080–25281245, ಇ–ಮೇಲ್:ghibengaluru@gmail.com
ಸಂಖ್ಯೆ:GHI/HNS/01/2023-24 ದಿನಾಂಕ:21.10.2024

ಮರು ಟೆಂಡರ್ ಅಧಿಸೂಚನೆ

ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು, ಇಲ್ಲಿಗೆ **2024–25ನೇ ಸಾಲಿಗೆ ಪರಿಕರಗಳು ಮತ್ತು ಲೇಖನ HNS ಸಾಮಗ್ರಿಗಳನ್ನು ಒಂದು ವರ್ಷದ ಅವಧಿಗೆ** ಸರಬರಾಜು ಮಾಡಲು ಅರ್ಹ ಸಂಸ್ಥೆಗಳಿಂದ ಇ–ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸಂಸ್ಥೆಗಳು ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ https://kppp.karnataka.gov.in/#/portal/portal.home ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದಾಗಿದೆ.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: **21.10.2024ರಿಂದ** 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **05.11.2024ರ ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.11.2024ರ ಬೆಳಿಗ್ಗೆ 11.00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **11.11.2024ರ ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ನಮೂನೆಗಳನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿರುವ ಕೊನೆಯ ದಿನವು ಆಕಸ್ಮಿಕವಾಗಿ ಸರ್ಕಾರಿ ರಜಾದಿನವೆಂದು ಘೋಷಣೆಯಾದಲ್ಲಿ ಅದರ ಮುಂದಿನ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸುವುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/–
ವೈದ್ಯಕೀಯ ಅಧೀಕ್ಷಕರು.
ವಾಸಾಸಂಇ/ವಾಪ್ರ/ಜಿಎ/2678/2024–25

KSIIDC
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–1 ದೂರವಾಣಿ: 080–22258131–33, ಇ–ಮೇಲ್: murthy.ksiidc@gmail.com // info@ksiidc.com ವೆಬ್‌ಸೈಟ್: https://ksiidc.karnataka.gov.in

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಾಡಿಗೆ ಆಧಾರದ ಮೇಲೆ ಆಂಬ್ಯುಲೆನ್ಸ್ ಮತ್ತು ಕಾರ್ಯಾಚರಣೆಯ ವಾಹನಗಳನ್ನು ಒದಗಿಸಲು ಏಜೆನ್ಸಿಯ ಆಯ್ಕೆಗಾಗಿ ಇ–ಟೆಂಡರ್ ಪ್ರಕಟಣೆ (ಕರೆ–4)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ, ಇವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದ್ದಾರೆ. ಕೆಎಸ್‌ಐಐಡಿಸಿಯು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್ ಮತ್ತು ಕಾರ್ಯಾಚರಣೆಯ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಏಜೆನ್ಸಿಯ ಆಯ್ಕೆಗಾಗಿ ಟೆಂಡರ್ (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಪಡೆಯಬಹುದು.
ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಇ.ಎಂ.ಡಿ. **ರೂ.75,000/-** (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ).
ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕಾರ್ಯಾಚರಣೆಯ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಇ.ಎಂ.ಡಿ: **ರೂ.1,00,000/-** (ರೂಪಾಯಿ ಒಂದು ಲಕ್ಷ ಮಾತ್ರ).
ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **23.10.2024ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ **04.11.2024 ರಂದು 11.00 ಗಂಟೆಗೆ.** ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ: **13.11.2024 ರಂದು 17.30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ https://kppp.karnataka.gov.in ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.
ಸಹಿ/- ಪ್ರಧಾನ ವ್ಯವಸ್ಥಾಪಕರು (ಪ್ರ) ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ನಗರಸಭೆ ಕಾರ್ಯಾಲಯ, ಹೆಬ್ಬಗೋಡಿ
ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
ಸ್ವಚ್ಛ ಭಾರತ
E-Mail: itstaff_ulb_hebbagodi@yahoo.com | Website: www.hebbagodicity.mrc.gov.in
ಸಂ:ಹೆ.ನ.ಸ/ತಾ.ಶಾ/ಟೆ.ನೋ/ಸಿ.ಆರ್/08/2024–25 ದಿನಾಂಕ: 22.10.2024

ಅಲ್ಪಾವಧಿ ಹಾಗೂ ಪೂರ್ಣಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ನಗರಸಭಾ ನಿಧಿ ಮತ್ತು 2024–25ನೇ ಸಾಲಿನ 15ನೇ ಹಣಕಾಸು ನಿಧಿ ಅನುದನದಡಿ ಒಟ್ಟು 09 ಕಾಮಗಾರಿ ಒಟ್ಟು ಮೊತ್ತ ರೂ. 323.88 ಲಕ್ಷ (ಕನಿಷ್ಟ ಮೊತ್ತ ರೂ. 11.94 ಲಕ್ಷ ಗರಿಷ್ಠ ಮೊತ್ತ ರೂ.90.90ಲಕ್ಷ) ಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2, ಮತ್ತು ಕೆ.ಡಬ್ಲ್ಯೂ–3, ನಿಯಮಾವಳಿಗಳಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ / ಸರಬರಾಜುದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಅಲ್ಪಾವಧಿ ಟೆಂಡನ್ನು **ದಿನಾಂಕ:23.10.2024 ರಿಂದ ದಿನಾಂಕ: 06.11.2024 ಸಂಜೆ 5:00ವರೆಗೆ** ಹಾಗೂ ಪೂರ್ಣಾವಧಿ ಟೆಂಡರ್‌ನ್ನು **ದಿನಾಂಕ: 23.10.2024 ರಿಂದ ದಿನಾಂಕ: 14.11.2024 ಸಂಜೆ 5.00 ಗಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಅಲ್ಪಾವಧಿ ಟೆಂಡರ್ **ದಿನಾಂಕ:07.11.2024 ಸಂಜೆ 5:00 ನಂತರ** ತೆರೆಯಲಾಗುವುದು ಹಾಗೂ ಪೂರ್ಣಾವಧಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು **15.11.2024 ಸಂಜೆ 5:00ಕ್ಕೆ** ತೆರೆಯಲಾಗುವದು. ಹೆಚ್ಚಿನ ಮಾಹಿತಿಗಾಗಿ **www.hebbagodicity.mrc.gov.in** or **https://kppp.karnataka.gov.in**ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– (ಶ್ರೀಮತಿ ಪ್ರಮೀಳಾ ಪಿ.ರಾಮಚಂದ್ರ) ಅಧ್ಯಕ್ಷರು ನಗರಸಭೆ, ಹೆಬ್ಬಗೋಡಿ
ವಾಸಾಸಂಇ/ವಾಪ್ರ/ಜಿಎ/2684/2024–25
ಸಹಿ/– (ಶ್ರೀ ಕೆ. ನರಸಿಂಹಮೂರ್ತಿ ಕೆ.ಎಂ.ಎ.ಎಸ್) ಪೌರಾಯುಕ್ತರು ನಗರಸಭೆ, ಹೆಬ್ಬಗೋಡಿ



❦ ಸುಭಾಷಿತ ❦

ಗುರಿಯೆಡೆಗೆ ಹೆಜ್ಜೆ ಹಾಕುತ್ತಿರುವ ನಿನ್ನ ಅರಿಯದವರಿಗೆ,
ಸಾಧನೆಯ ಶಿಖರದೊಂದಿಗೆ ಪರಿಚಯವಾಗುವಂತಿರು.
-ದ.ರಾ.ಬೇಂದ್ರೆ

ಪೌರತ್ವ: ಅಸ್ಸಾಂ ರಾಜ್ಯದ ವಿವಾದಿತ ವಿಷಯವೊಂದಕ್ಕೆ ತೃಪ್ತಿಕರ ಅಂತ್ಯ

ಪೌರತ್ವ ಕಾಯ್ದೆಯ 'ಸೆಕ್ಷನ್ 6ಎ'ಯ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿಯುವ ಮೂಲಕ ಸುಪ್ರೀಂ ಕೋರ್ಟ್, ಅಸ್ಸಾಂನಲ್ಲಿ ಬಹುಕಾಲದಿಂದ ಚರ್ಚೆಗೆ ಒಳಗಾಗಿದ್ದ ಹಾಗೂ ವಿವಾದಕ್ಕೆ ತುತ್ತಾಗಿದ್ದ ವಿಷಯವೊಂದನ್ನು ಇತ್ಯರ್ಥಪಡಿಸಿದೆ. 1966ರ ಜನವರಿ 1ರ ನಂತರ ಹಾಗೂ 1971ರ ಮಾರ್ಚ್ 25ಕ್ಕೆ ಮೊದಲು ಅಸ್ಸಾಂ ಪ್ರವೇಶಿಸಿ, ಆ ರಾಜ್ಯದಲ್ಲಿ ನೆಲಸಿರುವವರಿಗೆ ಭಾರತದ ಪೌರರಾಗಿ ಹೆಸರು ನೋಂದಾಯಿಸಿಕೊಳ್ಳಲು ಈ ಕಾಯ್ದೆಯ ಸೆಕ್ಷನ್ 6ಎ ಅವಕಾಶ ಕಲ್ಪಿಸುತ್ತದೆ. 1985ರಲ್ಲಿ ಅಸ್ಸಾಂ ಒಪ್ಪಂದಕ್ಕೆ ಸಹಿ ಹಾಕಿದ ನಂತರದಲ್ಲಿ ಈ ಸೆಕ್ಷನ್ ಸೇರಿಸಲಾಯಿತು. 1970 ಹಾಗೂ 1980ರ ದಶಕಗಳಲ್ಲಿ ಅಸ್ಸಾಂನಲ್ಲಿ ನಡೆದಿದ್ದ ವಿದೇಶಿಯರ ವಿರುದ್ಧದ ಪ್ರತಿಭಟನೆಗಳನ್ನು ಕೊನೆಗೊಳಿಸುವ ಭಾಗವಾಗಿ ಈ ಸೆಕ್ಷನ್ ರೂಪಿಸಲಾಯಿತು. ಕಾಯ್ದೆಯ ಸೆಕ್ಷನ್ 6ಎ ದೇಶದ ಸಂವಿಧಾನದ 14 ಹಾಗೂ 29ನೇ ವಿಧಿಗಳನ್ನು ಉಲ್ಲಂಘಿಸುತ್ತದೆ, ಏಕೆಂದರೆ ಸಮಾನತೆಯ ಹಕ್ಕಿಗೆ ಮತ್ತು ಅಸ್ಸಾಂನ ಜನರಿಗೆ ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಇರುವ ಹಕ್ಕಿಗೆ ಇದು ವಿರುದ್ಧವಾಗಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಲಾಗಿತ್ತು. ಆದರೆ ಈ ವಾದವನ್ನು ಕೋರ್ಟ್ ತಿರಸ್ಕರಿಸಿದೆ. ಶಾಸನವೊಂದರ ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಪ್ರಶ್ನೆ ಎದ್ದಾಗ ನ್ಯಾಯಾಲಯವು ಹೊಂದಾಣಿಕೆಯ ನಿಲುವು ತಾಳಬೇಕಾಗುತ್ತದೆ, ಅಸ್ಸಾಂನಲ್ಲಿನ ಸಂದರ್ಭವು ಈ ಸೆಕ್ಷನ್ ಅನ್ನು ಸಮರ್ಥಿಸುತ್ತದೆ ಎಂದು ಕೋರ್ಟ್ ಹೇಳಿದೆ. ಅಸ್ಸಾಂ ಒಪ್ಪಂದದ ಪರಿಣಾಮವಾಗಿ, ಈ ಸೆಕ್ಷನ್ ಸೇರಿಸಲಾಗಿದೆ. ಭಾರತ ಮೂಲದ ವಲಸಿಗರ ಅಗತ್ಯಗಳನ್ನು ಹಾಗೂ ಅದರಿಂದ ರಾಜ್ಯಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಅಗತ್ಯಗಳ ಮೇಲೆ ಆಗುವ ಪರಿಣಾಮಗಳ ನಡುವೆ ಸಮತೋಲನ ತರುವ ಗುರಿಯು ಶಾಸನ ರೂಪಿಸಿದವರ ಮುಂದಿತ್ತು ಎಂದು ಕೋರ್ಟ್ ವಿವರಿಸಿದೆ.

ಕೋರ್ಟ್ ಆಡಿರುವ ಕೆಲವು ಮಾತುಗಳು, ಈಗ ಕೋರ್ಟ್ ಅಂಗಳದಲ್ಲಿ ಇರುವ ಪೌರತ್ವ ತಿದ್ದುಪಡಿ ಕಾಯ್ದೆಯ ದೃಷ್ಟಿಯಿಂದಲೂ ಮಹತ್ವ ಹೊಂದಿವೆ

ಕೋರ್ಟ್ ನೀಡಿರುವ ತೀರ್ಪು ಹಾಗೂ ಅದು ಆಡಿರುವ ಮಾತುಗಳು ಮುಖ್ಯವಾಗುತ್ತವೆ. ನ್ಯಾಯಾಲಯವು ಪೌರತ್ವದ ವಿಚಾರದಲ್ಲಿ ಉದಾರವಾದಿ ನಿಲುವೊಂದನ್ನು ತಾಳಿದೆ. ಪೌರತ್ವವನ್ನು ನಕಾರಾತ್ಮಕವಾಗಿ ಅರ್ಥೈಸಿ, ನಿರ್ದಿಷ್ಟ ವರ್ಗಕ್ಕೆ ಮಾತ್ರ ಪೌರತ್ವ ನೀಡಿ, ಇನ್ನೊಂದು ವರ್ಗವನ್ನು ಅಕ್ರಮ ವಲಸಿಗರು ಎಂದು ಕರೆಯುವ ಕೆಲಸವನ್ನು ಮಾಡಲಾಗದು ಎಂದು ಕೋರ್ಟ್ ಹೇಳಿದೆ. 4–1ರ ಬಹುಮತದ ತೀರ್ಪನ್ನು ಬರೆದಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು, ಸಂಸ್ಕೃತಿಯನ್ನು ರಕ್ಷಿಸಲು ಸಂವಿಧಾನ ನೀಡಿರುವ ಹಕ್ಕನ್ನು ಭಾರತದ ಬಹುಸಂಸ್ಕೃತಿಗಳ ಹಾಗೂ ಬಹುತ್ವದ ನೆಲೆಯಲ್ಲಿ ಕಾಣಬೇಕು ಎಂದು ಸ್ಪಷ್ಟಪಡಿಸಿದ್ದಾರೆ. ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆಗಳನ್ನು ಉಲ್ಲೇಖಿಸಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರು, ಭ್ರಾತೃತ್ವ ಎಂಬ ಪರಿಕಲ್ಪನೆಯು ಎಲ್ಲರನ್ನೂ ಒಳಗೊಳ್ಳುವ ಪಾತ್ರವನ್ನು ನಿಭಾಯಿಸುತ್ತದೆ, ಆದರೆ ಅರ್ಜಿದಾರರು ಬಹಳ ಸೀಮಿತವಾದ ದೃಷ್ಟಿಕೋನ ಹೊಂದಿದ್ದಾರೆ ಎಂದು ಹೇಳಿದ್ದಾರೆ.

1971ರ ಮಾರ್ಚ್ 25 ಅನ್ನು ಅಂತಿಮ ದಿನಾಂಕ ಎಂದು ಗುರುತಿಸಿದ್ದನ್ನು ಕೋರ್ಟ್ ಒಪ್ಪಿರುವುದು ಹಾಗೂ ಅದು ಆಡಿರುವ ಕೆಲವು ಮಾತುಗಳು, ಈಗ ಕೋರ್ಟ್ ಅಂಗಳದಲ್ಲಿ ಇರುವ ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ದೃಷ್ಟಿಯಿಂದಲೂ ಮಹತ್ವ ಹೊಂದಿವೆ. ತಿದ್ದುಪಡಿ ಕಾಯ್ದೆಯಲ್ಲಿ ಸೇರಿಸಲಾಗಿರುವ ಸೆಕ್ಷನ್ 6ಬಿ, ನೆರೆಯ ಪಾಕಿಸ್ತಾನ, ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶದಿಂದ ಭಾರತಕ್ಕೆ 2014ರ ಡಿಸೆಂಬರ್ 31ಕ್ಕೆ ಮೊದಲು ಬಂದ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯದವರಿಗೆ ಭಾರತೀಯ ಪೌರತ್ವವನ್ನು ನೀಡಲು ಅವಕಾಶ ಕಲ್ಪಿಸುತ್ತದೆ. ಸೆಕ್ಷನ್ 6ಎ ಧರ್ಮನಿರಪೇಕ್ಷವಾದುದು ಎಂದು ಕೋರ್ಟ್ ಹೇಳಿರುವುದರ ಆಧಾರದಲ್ಲಿ ಗಮನಿಸಿದಾಗ, 6ಬಿ ಅಡಿಯಲ್ಲಿ ಇರುವ ಷರತ್ತುಗಳು ಕೆಲವು ಮಿತಿಗಳನ್ನು ಹೇರುವಂತೆ ಕಾಣುತ್ತವೆ. ಅಸ್ಸಾಂಗೆ ಸೆಕ್ಷನ್ 6ಎ ಅಡಿಯಲ್ಲಿ ಅನ್ವಯವಾಗುವ ಗಡುವು ಹಾಗೂ ತಿದ್ದುಪಡಿ ಕಾಯ್ದೆಯ ಸೆಕ್ಷನ್ 6ಬಿ ಅಡಿಯಲ್ಲಿ ಇಡೀ ದೇಶಕ್ಕೆ ಅನ್ವಯವಾಗುವ ಗಡುವು ಬೇರೆ ಬೇರೆ. ಸಿಎಎ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯು ಸಂಬಂಧಪಟ್ಟ ನ್ಯಾಯಪೀಠದ ಎದುರು ಬಂದಾಗ, ಈ ವಿಚಾರಗಳ ಕಡೆ ಗಮನ ಹರಿಸಬೇಕಾಗುತ್ತದೆ. ಸೆಕ್ಷನ್ 6ಎ ಸಿಂಧುತ್ವವನ್ನು ಎತ್ತಿಹಿಡಿಯುವ ಸಂದರ್ಭದಲ್ಲಿ ಕೋರ್ಟ್, ಅದರ ದುರ್ಬಳಕೆಯ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಿದೆ ಎಂಬುದು ಗಮನಾರ್ಹ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ: ಸಾಹಿತಿಯೇ ಯುಕ್ತ, ಅನ್ಯಥಾ ಶರಣಂ ನಾಸ್ತಿ

ಕಬ್ಬಿಣದ ಅಂಗಡೀಲಿ ನೊಣಕ್ಕಿಲ್ಲ ಕೆಲಸ

ಪಡಸಾಲೆ

ರಘುನಾಥ ಚ.ಹ.

ಪುರಂದರ ದಾಸರ 'ಆರು ಹಿತವರು ನಿನಗೆ ಈ ಮೂವರೊಳಗೆ' ಕೀರ್ತನೆಯಲ್ಲಿನ 'ನಾರಿ, ಧಾರುಣಿ, ಬಲು ದಿನದ ಸಿರಿ'ಯ ಜಾಗದಲ್ಲಿ, 'ಸಾಹಿತಿಯೋ ಧರ್ಮಗುರುವೋ ರಾಜಕಾರಣಿಯೋ' ಎನ್ನುವ ಆಯ್ಕೆಗಳನ್ನು ಇರಿಸಿದರೆ ಹೇಗೆ? ಮಂಡ್ಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಸಾಹಿತ್ಯೇತರ ಕ್ಷೇತ್ರದವರು ಯಾಕಾಗಬಾರದು ಎನ್ನುವ ಚರ್ಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಅವಕಾಶ ಕಲ್ಪಿಸಿದೆ. ಸಾಹಿತ್ಯವನ್ನು ಪ್ರೀತಿಯಿಂದ ನೋಡುವವರು ಹಾಗೂ ಕಡೆಗಣ್ಣಿನಿಂದ ಕಾಣುವವರು ತಮ್ಮ ಆಯ್ಕೆಯ ಹೆಸರುಗಳನ್ನು ಸಮ್ಮೇಳನಾಧ್ಯಕ್ಷರ ಸ್ಥಾನದಲ್ಲಿ ಕಲ್ಪಿಸಿಕೊಂಡು ಸಂಭ್ರಮಿಸುತ್ತಿದ್ದಾರೆ.

ಸಾಹಿತ್ಯೇತರ ಕ್ಷೇತ್ರದ ವ್ಯಕ್ತಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರೆ ಹೇಗೆನ್ನುವ ಚರ್ಚೆ, ಗಂಭೀರ ವಿಷಯಗಳನ್ನು ಅಲಕ್ಷಿಸಿ, ಕಾಲಹರಣಕ್ಕಾಗಿ ಚರ್ಚೆಗಳನ್ನು ನಡೆಸುವ ಸದ್ಯದ ಸಂದರ್ಭಕ್ಕೆ ತಕ್ಕಂತಿದೆ; 'ಕಬ್ಬಿಣದ ಅಂಗಡೀಲಿ ನೊಣಕ್ಕೇನು ಕೆಲಸ' ಎನ್ನುವ ಗಾದೆಯನ್ನು ನೆನಪಿಸುವಂತಿದೆ. ಮಂಡ್ಯದಲ್ಲಿ ನಡೆಯಲಿರುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಠಾಧಿಪತಿಯೋ ರಾಜಕಾರಣಿಯೋ ವಿಜ್ಞಾನಿಯೋ ಅಧ್ಯಕ್ಷರಾದರೆ ತಪ್ಪೇನು ಎನ್ನುವುದು ಚರ್ಚೆಯ ವಿಷಯವಾಗಿರುವುದು ದುರದೃಷ್ಟಕರ. ಸಾಹಿತ್ಯ ಉತ್ಸವದಲ್ಲಿ ಸಾಹಿತಿಗೇ ಅಧ್ಯಕ್ಷತೆ ದೊರೆಯಬೇಕು ಎನ್ನುವುದು ಸಾಮಾನ್ಯಜ್ಞಾನ. ಧಾರ್ಮಿಕ ಉತ್ಸವಕ್ಕೆ ಧಾರ್ಮಿಕ ವ್ಯಕ್ತಿಯೇ ಸೂಕ್ತವಾದಂತೆ, ರಾಜಕೀಯ ಮೇಳಗಳಲ್ಲಿ ರಾಜಕಾರಣಿ ಇರುವಂತೆ, ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಯೇ ಅಧ್ಯಕ್ಷರಾಗಬೇಕು; ಅನ್ಯಥಾ ಶರಣಂ ನಾಸ್ತಿ.

ಮಠಾಧೀಶರು ಇಲ್ಲವೇ ರಾಜಕಾರಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವುದಿರಲಿ, ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಚರ್ಚಿಸುವುದೇ ದೊಡ್ಡ ಚೋದ್ಯ. ಧಾರ್ಮಿಕ ವ್ಯಕ್ತಿ ಅಥವಾ ರಾಜಕಾರಣಿ ಸಾಹಿತಿಯೂ ಆಗಿದ್ದಲ್ಲಿ ಅವರ ಹೆಸರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಪರಿಗಣಿಸುವುದರಲ್ಲಿ ತಪ್ಪಿಲ್ಲ. ಆದರೆ, ಕಳೆದೊಂದು ದಶಕದ ಅವಧಿಯಲ್ಲಿ ಸಾಹಿತ್ಯಸಂವೇದನೆಯ ಸೃಜನಶೀಲ ವ್ಯಕ್ತಿಗಳನ್ನು ಧರ್ಮ–ರಾಜಕಾರಣ ಸೃಷ್ಟಿಸಿಲ್ಲ. ಸಾಹಿತ್ಯದ ಆಶಯಗಳನ್ನು ಮುಕ್ಕುಗೊಳಿಸುವ ಇಲ್ಲವೇ ನಿಕೃಷ್ಟವಾಗಿ ಕಾಣುವ ವ್ಯಕ್ತಿಗಳೇ ರಾಜಕಾರಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಹೆಚ್ಚಾಗಿ ಚಲಾವಣೆಯಲ್ಲಿದ್ದಾರೆ. ಪರ ಧರ್ಮ ಹಾಗೂ ಪರ ವಿಚಾರವನ್ನು ಸಹಿಷ್ಣುತೆಯಿಂದ ನೋಡುವ ಸ್ವಾಮೀಜಿಗಳು ವಿರಳ ಎನ್ನುವಂತಾಗಿದೆ. ಜಾತಿ ಜನಗಣತಿ ಹಾಗೂ ಜಾತ್ಯತೀತ ಪರಿಕಲ್ಪನೆಗೂ ವ್ಯತ್ಯಾಸ ತಿಳಿಯದ ಧರ್ಮಗುರುಗಳು ಹಾಗೂ ಜಾತಿ ರಾಜಕಾರಣದ ಕೂಪದಲ್ಲಿ ಸುಖಿಸುತ್ತಿರುವ ರಾಜಕಾರಣಿಗಳ ಕಾಲವಿದು. ಇಂಥವರನ್ನು ಸಾಹಿತ್ಯ ಸಮ್ಮೇಳನದಲ್ಲಿ ಮೆರೆಸಿ, ಸಾಧಿಸಬಹುದಾದ ಆಶಯ ಯಾವುದಿದ್ದೀತು?

ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಲ್ಲಿ ಸಾಹಿತ್ಯೇತರ ಕ್ಷೇತ್ರಗಳ ವ್ಯಕ್ತಿಯನ್ನು ಕಾಣಬಯಸುವ ಚರ್ಚೆಯ ಹಿಂದೆ, ಸಾಹಿತ್ಯ ಹಾಗೂ ಸಾಹಿತಿಯನ್ನು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಅಪ್ರಸ್ತುತಗೊಳಿಸುವ ದುರುದ್ದೇಶ ಇರುವಂತಿದೆ. ಇತ್ತೀಚಿನ ವರ್ಷಗಳ ರಾಜಕೀಯ ಬೆಳವಣಿಗೆಗಳು, ನಾಡಿನ ಸಾಕ್ಷಿಪ್ರಜ್ಞೆಯ ರೂಪದಲ್ಲಿ ನೋಡಲಾಗುತ್ತಿದ್ದ ಸಾಹಿತಿಗಳನ್ನು ಆ ಸ್ಥಾನದಿಂದ ಪದಚ್ಯುತಗೊಳಿಸಿವೆ ಹಾಗೂ ಆ ಸ್ಥಾನದಲ್ಲಿ ಮಠಾಧೀಶರನ್ನು ಕೂರಿಸಿವೆ. ಅದೇ ಕೈಗಳು ಈಗ ಸಾಹಿತ್ಯ ಸಮ್ಮೇಳನದ ಕೇಂದ್ರ ಸ್ಥಾನದಿಂದಲೂ ಸಾಹಿತಿಯನ್ನು ದೂರವಾಗಿಸಲು ಪ್ರಯತ್ನಿಸುತ್ತಿವೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸಾಹಿತಿಗೇ ಸಲ್ಲಬೇಕು ಎಂದು ಹೇಳುವ ಸಂದರ್ಭದಲ್ಲಿ, ಸಾಹಿತ್ಯ ಹಾಗೂ ಸಾಹಿತಿಯ ವಿಶ್ವಾಸಾರ್ಹತೆ ಸಾರ್ವಜನಿಕವಾಗಿ ಪ್ರಶ್ನೆಗೊಳಗಾಗಿರುವುದನ್ನು ಗಮನಿಸಬೇಕು. ಕೆಲವು ಸಾಹಿತಿಗಳು ಅಧಿಕಾರ ರಾಜಕಾರಣ ಹಾಗೂ ಧರ್ಮ ರಾಜಕಾರಣದ ಭಾಗವಾಗಿರುವುದನ್ನೂ ಮರೆಯಬಾರದು. ಆದರೆ, ಸಾಹಿತಿಗಳ ಛದ್ಮವೇಷವನ್ನೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನೂ ಪ್ರತ್ಯೇಕವಾಗಿಯೇ ನೋಡಬೇಕು. ಸಾಹಿತ್ಯದ ಬಗ್ಗೆ ಜನಸಾಮಾನ್ಯರಲ್ಲಿ ಇನ್ನೂ ಗೌರವ ಹಾಗೂ ನಿರೀಕ್ಷೆಗಳು ಉಳಿದುಕೊಂಡಿವೆ. ಆ ಕಾರಣದಿಂದಲೇ ಸಾಹಿತ್ಯ ಸಮ್ಮೇಳನ ಜನರಲ್ಲಿ ಉತ್ಸಾಹ ಹುಟ್ಟಿಸುತ್ತದೆ; ಸಮ್ಮೇಳನಗಳಲ್ಲಿ ಲಕ್ಷ ಲಕ್ಷ ಜನ ಸೇರುತ್ತಾರೆ.

ಬೇರೆ ಕ್ಷೇತ್ರದ ಸಾಧಕರನ್ನು ಅಧ್ಯಕ್ಷರನ್ನಾಗಿಸುವ ಮೂಲಕ ಸಮ್ಮೇಳನವನ್ನು ಎಲ್ಲ ಕನ್ನಡಿಗರನ್ನೂ ಒಳಗೊಳ್ಳುವ ವೇದಿಕೆಯನ್ನಾಗಿಸಬೇಕು ಎನ್ನುವ ಅಭಿಪ್ರಾಯವೂ ಇದೆ. ಆದರೆ, ಸಾಹಿತ್ಯ ಸಮ್ಮೇಳನ ಈಗಾಗಲೇ ಎಲ್ಲರನ್ನೂ ಒಳಗೊಳ್ಳುವ ವೇದಿಕೆಯಾಗಿದೆ. ಅತಿಥಿ ಅಭ್ಯಾಗತರಲ್ಲಿ ಎಲ್ಲ ಕ್ಷೇತ್ರದವರೂ ಇದ್ದಾರೆ. ಕೃಷಿ, ಸಿನಿಮಾ, ಪತ್ರಿಕೋದ್ಯಮ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳ ಕುರಿತು ಚರ್ಚೆ ಆಗುತ್ತಿದೆ. ಹೀಗೆ ಎಲ್ಲರನ್ನೂ ಒಳಗೊಂಡರೂ, ಸಮ್ಮೇಳನದ ಕೇಂದ್ರದಲ್ಲಿ ಸಾಹಿತಿ ಹಾಗೂ ಸಾಹಿತ್ಯವೇ ಇರಬೇಕಾದುದು ನ್ಯಾಯ. ಆ ಪರಿಪಾಟವನ್ನು ಬದಲಿಸುವುದಾದರೆ, ಸಮ್ಮೇಳನದ ಜೊತೆಗಿರುವ ಸಾಹಿತ್ಯಕ್ಕೆ ಅರ್ಥವೆಲ್ಲಿದೆ?

ಸಾಹಿತ್ಯದ ಬಗ್ಗೆ ಕಾಳಜಿಯುಳ್ಳವರು ಗಂಭೀರವಾಗಿ ಚರ್ಚಿಸಬೇಕಾಗಿರುವುದು ಸಮ್ಮೇಳನದ ಅಧ್ಯಕ್ಷರು ಯಾರಾಗಬೇಕೆನ್ನುವುದನ್ನಲ್ಲ; ಸಮ್ಮೇಳನದ ಸ್ವರೂಪ ಹೇಗಿರಬೇಕು ಎನ್ನುವುದನ್ನು. ಸಾಹಿತ್ಯ ಸಮ್ಮೇಳನಗಳು ವರ್ಷದಿಂದ ವರ್ಷಕ್ಕೆ ಬಿಳಿಯಾನೆಗಳಾಗುತ್ತಿರುವುದು ಸಹೃದಯರ ಆತಂಕಕ್ಕೆ ಕಾರಣವಾಗಬೇಕು. ಸಾಹಿತ್ಯ ಸಮ್ಮೇಳನವೊಂದಕ್ಕೆ ಇಪ್ಪತ್ತು ಇಪ್ಪತ್ತೈದು ಕೋಟಿ ರೂಪಾಯಿ ಖರ್ಚು ಮಾಡುವ ಔಚಿತ್ಯದ ಬಗ್ಗೆ ಚರ್ಚೆಯಾಗಬೇಕು. ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಸಮ್ಮೇಳನವನ್ನು ನಡೆಸುವ ಸಾಧ್ಯತೆಗಳ ಹುಡುಕಾಟ ಇಂದಿನ ಅಗತ್ಯ. ಸದ್ಯದ ಖರ್ಚುವೆಚ್ಚಗಳನ್ನು ನೋಡಿದರೆ, ಕಸಾಪ ಸಮ್ಮೇಳನ ದೇಶದ ಅತ್ಯಂತ ದುಬಾರಿ ಸಾಹಿತ್ಯೋತ್ಸವ ಆಗಿರುವಂತಿದೆ. ಸಮ್ಮೇಳನದ ಮೌಲ್ಯ ಹೆಚ್ಚಾಗುವುದು ಸಾಹಿತ್ಯದ ಗುಣಮಟ್ಟದಿಂದಲೇ ಹೊರತು, ಹೆಚ್ಚು ಹಣ ಖರ್ಚು ಮಾಡುವುದರಿಂದಲ್ಲ ಎನ್ನುವುದನ್ನು ಸಮ್ಮೇಳನ ನಡೆಸುವ ಕಸಾಪ ಅರಿಯಬೇಕು, ಹಣ ನೀಡುವ ಸರ್ಕಾರವೂ ತಿಳಿಯಬೇಕು.

ಕಳೆದ ವರ್ಷವೇ ನಡೆಯಬೇಕಾಗಿದ್ದ ಸಮ್ಮೇಳನವನ್ನು ಅನುದಾನದ ಕೊರತೆಯಿಂದಾಗಿ ಮುಂದೂಡಲಾಗಿತ್ತು. 'ರಾಜ್ಯದ ಬಹುತೇಕ ಕಡೆ ಬರ ಬಿದ್ದಿದೆ. ರೈತರ ಮನೆಯಲ್ಲಿ ಅನ್ನವಿಲ್ಲ. ಇಂಥ ಸಂದರ್ಭದಲ್ಲಿ ಸಾಹಿತ್ಯದ ಹೋಳಿಗೆ ಸವಿಯಬಾರದು ಎಂಬ ಕಾರಣಕ್ಕೆ ಸ್ವಯಂಪ್ರೇರಣೆಯಿಂದ ತಾತ್ಕಾಲಿಕವಾಗಿ ಸಮ್ಮೇಳನ ನಿಲ್ಲಿಸಿದ್ದೇವೆ. ಪರಿಷತ್ತು ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಇದನ್ನು ಇನ್ನಷ್ಟು ಜನಪರ ಮಾಡುವ ಉದ್ದೇಶದಿಂದ ಹೀಗೆ ನಿರ್ಧರಿಸಲಾಗಿದೆ' ಎಂದು 2023ರ ನವೆಂಬರ್‌ನಲ್ಲಿ ಪರಿಷತ್ತು ಹೇಳಿಕೊಂಡಿತ್ತು. ಪರಿಷತ್ತಿನ ಉದ್ದೇಶ ಸರಿಯಾಗಿತ್ತು. ಆದರೆ, ಸಂಕಷ್ಟದ ಸ್ಥಿತಿ ಈಗ ಬಗೆಹರಿದಿದೆಯೆಂದು ಪರಿಷತ್ತು ಭಾವಿಸಿದೆಯೆ? ಅನಾವೃಷ್ಟಿ ಜಾಗದಲ್ಲಿ ಅತಿವೃಷ್ಟಿಯಿರುವುದನ್ನು ಬಿಟ್ಟರೆ ನಾಡಿನ ಜನರ ಸಂಕಷ್ಟ ಯಥಾಸ್ಥಿತಿಯಲ್ಲಿಯೇ ಇದೆ. ಬರಗಾಲದ ನಿರ್ದಿಷ್ಟ ವರ್ಷ ಮಾತ್ರವಲ್ಲ, ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸಮ್ಮೇಳನ ನಡೆಸುವಷ್ಟರ ಮಟ್ಟಿಗೆ ಕರ್ನಾಟಕ ಹಿಂದೆಂದೂ ಸಮೃದ್ಧವಾಗಿರಲಿಲ್ಲ, ಈಗಲೂ ಸಮೃದ್ಧಿಯಿಲ್ಲ.

ಸಮ್ಮೇಳನಗಳನ್ನು ಜನಪರ ಮಾಡಬೇಕೆನ್ನುವ ಉದ್ದೇಶ ಪ್ರಾಮಾಣಿಕವಾದುದಾದರೆ, ಅವುಗಳನ್ನು ಸರಳಗೊಳಿಸುವ ನಿಟ್ಟಿನಲ್ಲಿ ಪರಿಷತ್ತು ಯೋಚಿಸಬೇಕು. ಜೊತೆಗೆ ಅವು ಸೃಜನಶೀಲವೂ ಆಗಬೇಕು. ಭಾವುಕತೆಯ ಜೊತೆಗೆ ಬೌದ್ಧಿಕತೆಯೂ ಸಮ್ಮೇಳನದ ಭಾಗವಾಗಬೇಕು. ಸಮ್ಮೇಳನದ ಶೀರ್ಷಿಕೆಯಲ್ಲಿರುವ 'ಸಾಹಿತ್ಯ'ಕ್ಕೆ ಅರ್ಥ ದೊರಕಿಸಿಕೊಡುವ ರೂಪದಲ್ಲಿ ಗೋಷ್ಠಿಗಳು ರೂಪುಗೊಳ್ಳಬೇಕು. ಇಂಥ ಸಮ್ಮೇಳನಗಳನ್ನು ನಡೆಸಲಿಕ್ಕೆ ಇಪ್ಪತ್ತು– ಮೂವತ್ತು ಕೋಟಿ ರೂಪಾಯಿ ಅಗತ್ಯವಿಲ್ಲ. ಸರ್ಕಾರದ ಅನುದಾನಕ್ಕಾಗಿಯೂ ಪರಿಷತ್ತು ಕಾಯಬೇಕಾಗಿಲ್ಲ. ಸ್ಥಳೀಯವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವ ಮೂಲಕ ಸಮ್ಮೇಳನವನ್ನು ನಡೆಸುವ ಸವಾಲನ್ನು ಪರಿಷತ್ತು ಸ್ವೀಕರಿಸಬೇಕು. ಭವ್ಯ ವೇದಿಕೆ ಹಾಗೂ ಸಮಾರಾಧನೆಯಂತಹ ಊಟದ ವ್ಯವಸ್ಥೆಯನ್ನು ಕೈಬಿಟ್ಟರೆ, ಸಮ್ಮೇಳನಗಳ ಬೊಜ್ಜು ಸಾಕಷ್ಟು ಕರಗುತ್ತದೆ. ಸಾಹಿತಿಗಳು ಕೂಡ ಹಮ್ಮುಬಿಮ್ಮು ಬಿಟ್ಟು ಸಮ್ಮೇಳನದಲ್ಲಿ ಭಾಗವಹಿಸುವಂತಹ ಸ್ಥಿತಿಯನ್ನು ಕಸಾಪ ಸೃಷ್ಟಿಸಬೇಕು.

ಸಮ್ಮೇಳನಗಳು ಸರಳವಾಗಬೇಕು ಎನ್ನುವಾಗ್ಗೆ, ದುಬಾರಿ ವೆಚ್ಚದ ಕಾರ್ಯಕ್ರಮಗಳಿಗೆ ಇಲ್ಲದ ತಕರಾರು ಸಾಹಿತ್ಯಕ್ಕೆ ಮಾತ್ರವೇಕೆ ಎನ್ನುವ ಪ್ರಶ್ನೆ ತಲೆದೋರುತ್ತದೆ. ಉತ್ತರ ಸರಳವಾದುದು. ಸಮಾಜಕ್ಕೆ ಅಗತ್ಯವಾದ ಮೌಲ್ಯ ವ್ಯವಸ್ಥೆಯ ಮಾದರಿಗಳನ್ನು ರೂಪಿಸುವಲ್ಲಿ ಸಾಹಿತ್ಯಕ್ಷೇತ್ರದ ಪಾಲು ದೊಡ್ಡದು. ಹಾಗಾಗಿ, ಬರವಣಿಗೆಯಲ್ಲಿ ಮಾತ್ರವಲ್ಲದೆ ಕೃತಿಯಲ್ಲೂ ಸರಳತೆ ಅಳವಡಿಸಿಕೊಳ್ಳುವ ಮೂಲಕ– ಅನಗತ್ಯ ಕೊಬ್ಬನ್ನು ಕರಗಿಸಿಕೊಳ್ಳುವ ಮೂಲಕ– ಸಮಾಜಕ್ಕೆ 'ಸರಳ ಸೌಂದರ್ಯ'ದ ಮೇಲ್ಪಂಕ್ತಿ ಹಾಕಿಕೊಡಬೇಕಾದುದು ಸಾಹಿತ್ಯ ಕ್ಷೇತ್ರದ ಹೊಣೆಗಾರಿಕೆ.

ಚುರುಮುರಿ

ನೆಂದಕಾಳೂರು

• ಮಣ್ಣೆ ರಾಜು

'ಎಡೆಬಿಡದೆ ಸುರಿಯುವ ಮಳೆಯಿಂದ ಬೆಂಗಳೂರು ನೆಂದು, ನೊಂದುಬಿಟ್ಟಿದೆ ಕಣ್ರೀ, ಪಾಪ...' ಸುಮಿ ಸಂಕಟಪಟ್ಟಳು.

'ಬೆಂಗಳೂರು ಬೇಸಿಗೆಯಲ್ಲಿ ಬೆವರುತ್ತದೆ, ಚಳಿಗಾಲದಲ್ಲಿ ನಡುಗುತ್ತದೆ, ಮಳೆಗಾಲದಲ್ಲಿ ನೆಂದು ತೊಪ್ಪೆಯಾಗುತ್ತದೆ. ಕಾಲಕಾಲದ ಕಷ್ಟವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಬೆಂಗಳೂರು ಬೆಳೆಸಿಕೊಳ್ಳಬೇಕು' ಅಂದ ಶಂಕ್ರಿ.

'ರಾಜಧಾನಿಯೇ ಮಳೆಯಲ್ಲಿ ನೆಂದು, ನೊಂದು, ನರಳಿದರೆ ರಾಜ್ಯ ನೆಮ್ಮದಿಯಾಗಿರಲು ಸಾಧ್ಯವೆ? ಬೆಂಗಳೂರಿನ ಜಲಬಾಧೆಗೆ ಚಿಕಿತ್ಸೆ ನೀಡಿ, ರೋಗನಿರೋಧಕ ಶಕ್ತಿ ಹೆಚ್ಚಿಸಬೇಕು. ನಗರ ಮಹಾಪೂರದ ಫಜೀತಿಯಿಂದ ಕಾಪಾಡಬೇಕು'.

'ಹಾಗಂತ ಇಡೀ ಊರಿಗೆ ಕೊಡೆ ಹಿಡಿಯಲಾಗುತ್ತಾ? ಬಕೆಟ್ ಹಿಡಿದು ಮಳೆಯನ್ನು ನಿಯಂತ್ರಿಸಲಾಗುತ್ತಾ?'

'ಹಿಂದಿನವರು ಕೆರೆ ಕಟ್ಟಿ ಆಮೇಲೆ ಊರು ಕಟ್ಟುತ್ತಿದ್ದರಂತೆ. ಈಗಿನ ನಾವು ಕೆರೆ, ರಾಜಕಾಲುವೆ ಮುಚ್ಚಿ ಕಟ್ಟಡ ಕಟ್ಟುತ್ತಿದ್ದೇವೆ. 'ಕಟ್ಟು-ಪಾಡು'ಗಳನ್ನು ಬದಲಾಯಿಸಿಕೊಂಡು ನಾವು ಬೆಂಗಳೂರು ಬಾಧೆಯನ್ನು ನಿವಾರಿಸಬೇಕು'.

'ಇಷ್ಟೊಂದು ಮಳೆ ಸುರಿದರೂ ಬೆಂಗಳೂರಿನ ಕುಡಿಯುವ ನೀರಿನ ದಾಹ ಇಂಗಿಲ್ಲ'.

'ಇಂಗಿಸುವುದು ಸುಲಭವಲ್ಲ. ಮಳೆನೀರನ್ನು ಕುಡಿದು ಕೂಡಿಡುವ ಶಕ್ತಿ ಬೆಂಗಳೂರಿಗಿಲ್ಲ, ಹೀಗಾಗಿ ಗುಟುಕು ನೀರಿಗೂ ಕಾವೇರಿ ನೀರನ್ನು ನಂಬಿಕೊಳ್ಳುವಂತಾಗಿದೆ'.

'ಬೆಂಗಳೂರು ಬೆಳೆದಂತೆ ಕಾವೇರಿಯ ನೀರಿನ ಪ್ರಮಾಣ ಹೆಚ್ಚುವುದಿಲ್ಲ. ನೀರು ಕೊಡಲು ಕಾವೇರಿಗೂ ಕಷ್ಟವಾಗುತ್ತದೆ'.

'ಅಷ್ಟೇ ಅಲ್ಲ, ಬೆಂಗಳೂರಿಗೆ ನೀರು ಕೊಡುವ ಕಾವೇರಿಗೆ ಬೆಂಗಳೂರು ಏನು ಕೊಟ್ಟಿದೆ ಎಂದು ಯಾರೂ ಪ್ರಶ್ನೆ ಮಾಡಬಾರದು'.

'ಹಾಗಾಗಬಾರದು, ಕುಡಿಯುವ ನೀರು ಸರಬರಾಜಿನ ಜಲಮಂಡಳಿಯಂತೆ ಸರ್ಕಾರ ಮಳೆಮಂಡಳಿ ಸ್ಥಾಪಿಸಿ ಬೆಂಗಳೂರಿನ ಮಳೆ ನೀರನ್ನು ಕಾವೇರಿಗೆ ಹರಿಸುವ ಯೋಜನೆ ರೂಪಿಸಬೇಕು. ನೀರನ್ನು ಕೊಟ್ಟು-ಪಡೆಯುವ ಸಹಕಾರಿ ವ್ಯವಹಾರದಿಂದ ಕಾವೇರಿಗೂ ಖುಷಿ ಆಗಬಹುದು' ಅಂದ ಶಂಕ್ರಿ.

ದಿನದ ಟ್ವೀಟ್

ನಗರ ಯೋಜನೆ ಆದ್ಯತೆಯಾಗಲಿ

ಪರಿಸ್ಥಿತಿ ಹೃದಯವಿದ್ರಾವಕವಾಗಿದೆ... ಕೆಟ್ಟದಾದ ನಗರ ಯೋಜನೆಯಿಂದಾಗಿ ನಗರಗಳು ಮುಳುಗುತ್ತಿವೆ. ತುರ್ತು ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ! #BengaluruRains

ಪಾರಸ್ ಬಟಾವಿಯಾ, ಎಂಜಿನಿಯರ್

ಕಿಡಿನುಡಿ

ಮಾಲಿನ್ಯಕ್ಕೆ ಯಾರೂ ಹೊಣೆಯಲ್ಲ. ಒಂದೆರಡು ತಿಂಗಳಲ್ಲಿ ಈ ವಿಷಯ ಮರೆತೇಹೋಗುತ್ತದೆ ಎಂಬುದು ರಾಜಕಾರಣಿಗಳಿಗೆ ತಿಳಿದಿದೆ. ದೆಹಲಿಯ ನಿವಾಸಿಗಳು ಮಾಲಿನ್ಯದಿಂದ ಆಗುವ, ಅದರಲ್ಲೂ ಶಾಲಾ ಮಕ್ಕಳ ಮೇಲೆ ಅದು ಬೀರುವ ದೀರ್ಘಕಾಲಿಕ ಪರಿಣಾಮಗಳನ್ನು ಲೆಕ್ಕಿಸದೆ, ಅದು ಸಹಜ ಎಂಬಂತೆ ಒಪ್ಪಿಕೊಂಡುಬಿಟ್ಟಿದ್ದಾರೆ. ಹೊಸದಾದ 'ಉಚಿತ ಭಾಗ್ಯ'ಗಳಿಗಾಗಿ ಕಾಯುತ್ತಿರುವ ಅವರು, ತಮ್ಮತನವನ್ನೇ ಕಳೆದುಕೊಂಡಿದ್ದಾರೆ. ಕರುಣಾಜನಕ ಸ್ಥಿತಿ.

ಅರವಿಂದ್ ಮಾಹೇಶ್ವರಿ, ನೌಕಾಪಡೆಯ ನಿವೃತ್ತ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 23-10-1999

• **ಅತ್ಯುತ್ತಮ ರಸ್ತೆ: ಇನ್ನೂ ಮಾಯಾಮೃಗ**

ಬೆಂಗಳೂರು, ಅ. 22– ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆಗಳಲ್ಲಿ ಓಡಾಡುವ ನಗರದ ನಾಗರಿಕರ ಕನಸು ಈ ವರ್ಷದ ಅಂತ್ಯಕ್ಕೆ ನನಸಾಗುವ ಸಾಧ್ಯತೆಗಳು ಈಗ ದೂರವಾಗಿವೆ.

ಬಹುದಿನಗಳ ಈ ಮಹತ್ವದ ಯೋಜನೆ ಇನ್ನೂ ಕಾಗದದ ರೂಪದಲ್ಲಿಯೇ ಇದ್ದು ವಾಸ್ತವ ರೂಪ ಪಡೆಯಲು ಮತ್ತಷ್ಟು ದಿನ ಕಾಯುವಂತಾಗಿದೆ.

ಉದ್ದೇಶಿತ ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆಗಳ ನಿರ್ಮಾಣಕ್ಕೆ ಬಾಂಡ್‌ಗಳ ಮೂಲಕ ಸಂಗ್ರಹಿಸಿರುವ ಹಣ ಇದ್ದರೂ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿಲ್ಲ. ಯೋಜನೆಯ ಫಲ ಈ ವರ್ಷದ ಅಂತ್ಯಕ್ಕೆ ನಗರದ ನಾಗರಿಕರಿಗೆ ದೊರೆಯಲಿದೆ ಎಂದು ಪಾಲಿಕೆ ಹತ್ತು ಹಲವು ಬಾರಿ ಪ್ರಕಟಿಸಿತ್ತು. ಆದರೆ ಈಗ ಪಾಲಿಕೆ ಹೇಳುವ ಪ್ರಕಾರ 'ಸತತವಾಗಿ ಸುರಿದ ಮಳೆಯಿಂದಾಗಿ' ಮತ್ತೆ ಕಾಮಗಾರಿಗಳು ಮುಂದಕ್ಕೆ ಹೋಗಲಿವೆ.

• **ರಾಜೀವ್ ಗಾಂಧಿ, ಕ್ವಟ್ರೋಚಿ, ಛಡ್ಡಾ ವಿರುದ್ಧ ಆರೋಪಪಟ್ಟಿ**

ನವದೆಹಲಿ, ಅ. 22 (ಪಿಟಿಐ): 12 ವರ್ಷದ ಹಿಂದೆ ಇಡೀ ದೇಶವನ್ನೇ ತಲ್ಲಣಗೊಳಿಸಿದ ಬೋಫೋರ್ಸ್ ಫಿರಂಗಿ ವ್ಯವಹಾರದಲ್ಲಿ ರುಷುವತ್ತು ಪಡೆದ ಆರೋಪದಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ಭಾಗಿಯಾಗಿದ್ದಾರೆ ಎಂದು ಹಗರಣ ಕುರಿತು ತನಿಖೆ ನಡೆಸಿದ ಸಿಬಿಐ ಹೇಳಿದೆ.

ಆದರೆ ಇದೇ ಆರೋಪದ ಸಂಬಂಧ ಇಟಲಿ ಉದ್ಯಮಿ ಒಟ್ಟಾವಿಯೋ ಕ್ವಟ್ರೋಚಿ, ರಕ್ಷಣಾ ಇಲಾಖೆಯ ಮಾಜಿ ಕಾರ್ಯದರ್ಶಿ ಎಸ್.ಕೆ. ಭಟ್ನಾಗರ್, ಉದ್ಯಮಿ ವಿನ್ ಛಡ್ಡಾ ಹಾಗೂ ಮತ್ತಿಬ್ಬರ ವಿರುದ್ಧ ನಿಯೋಜಿತ ಸಿಬಿಐ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದೆ. ರಾಜೀವ್ ಮರಣದ ನಂತರ ಅವರ ವಿರುದ್ಧದ ತನಿಖೆ ಕೈಬಿಡಲಾಗಿದೆ ಎಂಬುದನ್ನು ತೋರಿಸಲು ಆರೋಪಪಟ್ಟಿಯಲ್ಲಿ ಅವರ ಹೆಸರನ್ನು ನಮೂದಿಸಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 23-10-1974

• **ಚಾಚೂ ತಪ್ಪದೆ ಕೃತಿಗಿಳಿಸಿ ವರದಿ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ**

ಬೆಂಗಳೂರು, ಅ. 22– ಅಸ್ಪೃಶ್ಯತಾ ನಿವಾರಣಾ ಶಾಸನದ ಸರ್ವ ವಿಧಿಗಳನ್ನು ಚಾಚೂ ತಪ್ಪದೆ ಜಾರಿಗೆ ತರುವಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯು ಎಲ್ಲ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದೆ.

ಶಾಸನದ ವಿಧಿಗಳನ್ನು ಸ್ಪಷ್ಟಪಡಿಸಿ ಅವುಗಳ ಜಾರಿಯಲ್ಲಿ ಅಧಿಕಾರಿಗಳು ತಪ್ಪಿದರೆ ಅದನ್ನು ಉಗ್ರವಾಗಿ ಪರಿಗಣಿಸಲಾಗುವುದು ಎಂದು ಸ್ಪಷ್ಟಪಡಿಸಿರುವ ಸುತ್ತೋಲೆಯು ಕೈಗೊಂಡ ಕ್ರಮಗಳ ಬಗ್ಗೆ ಪ್ರತಿ ತಿಂಗಳು ವರದಿ ಕಳುಹಿಸಬೇಕು ಎಂದು ಹೇಳಿದೆ.

• **ಚುನಾವಣೆ ಆಯೋಗದ ಮೇಲೆ ಲೆಕ್ಕಪತ್ರ ಸಮಿತಿಗೆ ಅಧಿಕಾರ**

ಮದರಾಸ್, ಅ. 22– ಚುನಾವಣಾ ಆಯೋಗದ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ಮತ್ತು ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಲೆಕ್ಕಪತ್ರ ಸಮಿತಿಗಳಿಗೆ ಅಧಿಕಾರವಿರಬೇಕು ಎಂದು ಲೋಕಸಭೆಯ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಜ್ಯೋತಿರ್ಮಯ ಬಸು ಅವರು ಇಂದು ಸಲಹೆ ಮಾಡಿದರು.

ಸಂಗತ

ಪ್ರಶಸ್ತಿ, ಸಾಧನೆ, ಕಾಂಚಾಣದ ಕುಣಿತ

ಪ್ರಶಸ್ತಿಯನ್ನು ಹಣ ಕೊಟ್ಟು ಪಡೆಯುವ ಜಾಯಮಾನವು ಶ್ರಮವಿಲ್ಲದೆ ಹಣ ಗಳಿಸುವ ಒಂದು ಜಾಲವನ್ನು ಬಲಪಡಿಸುವ ಅಪಾಯವನ್ನು ಕಡೆಗಣಿಸುವಂತಿಲ್ಲ

• ಪ.ರಾಮಕೃಷ್ಣ ಶಾಸ್ತ್ರಿ

ಗೆಳೆಯರೊಬ್ಬರಿಗೆ ಇಂಗ್ಲೆಂಡ್ ಮೂಲದ ಒಂದು ಸಂಸ್ಥೆಯಿಂದ ಪತ್ರ ಬಂದಿತ್ತು. 'ವಿಶ್ವದ ಎಂಬತ್ತು ಮಂದಿ ಸಾಧಕರಲ್ಲಿ ನೀವೂ ಒಬ್ಬರೆಂದು ನಾವು ಗುರುತಿಸಿದ್ದೇವೆ. ಇದಕ್ಕಾಗಿ ಅಂತರರಾಷ್ಟ್ರೀಯ ಪ್ರಶಸ್ತಿಯೊಂದನ್ನು ನಿಮಗೆ ಕೊಡಲು ಬಯಸಿದ್ದೇವೆ. ಈ ಬಗ್ಗೆ ನಿಮ್ಮ ಸಮ್ಮತಿಯನ್ನು ತಿಳಿಸಬೇಕು' ಎಂದು ಪತ್ರದಲ್ಲಿ ಬರೆಯಲಾಗಿತ್ತು. ಗೆಳೆಯ ಸಂತೋಷದಿಂದ ಒಪ್ಪಿ ಅದಕ್ಕೆ ಮಾರೋಲೆಯನ್ನು ಬರೆದರು.

ಅದಾಗಿ ಕೆಲ ದಿನಗಳ ಬಳಿಕ ಅವರಿಗೆ ಎರಡನೆಯ ಪತ್ರ ಬಂದಿತು. ಅದರಲ್ಲಿ 'ಪ್ರಶಸ್ತಿಯನ್ನು ಸ್ವರ್ಣಪತ್ರ, ರಜತಪತ್ರ ಅಥವಾ ತಾಮ್ರಪತ್ರದಲ್ಲಿ ನೀಡಲಾಗುತ್ತದೆ. ನಿಮಗೆ ಯಾವ ಪತ್ರದಲ್ಲಿ ಬೇಕು ಎಂಬುದನ್ನು ನೀವೇ ನಿರ್ಧರಿಸಿ, ಅದರ ಮುಂದೆ ಸೂಚಿಸಿರುವ ಮೊತ್ತವನ್ನು ನಮ್ಮ ಬ್ಯಾಂಕ್ ಖಾತೆಗೆ ತುಂಬಿ. ಆಗ ಪ್ರಶಸ್ತಿಯ ದಿನಾಂಕವನ್ನು ನಿರ್ಧರಿಸಿ ನಿಮಗೆ ತಿಳಿಸಲಾಗುತ್ತದೆ' ಎಂದಿತ್ತು. ಅದನ್ನು ಓದಿ ಗೆಳೆಯ ಪೆಚ್ಚಾದರು.

ತಮಗೆ ವಿದೇಶದ ಸಂಸ್ಥೆಯೊಂದು ಪ್ರಶಸ್ತಿ ಕೊಡಮಾಡುತ್ತಿದೆ ಎಂದು ಅವರು ಅದಾಗಲೆ ಎಲ್ಲರಲ್ಲಿಯೂ ಹೇಳಿಕೊಂಡಿದ್ದರು. ಸ್ಥಳೀಯ ಪತ್ರಿಕೆಗಳೂ ಈ ಕುರಿತು ವರದಿ ಮಾಡಿದ್ದವು. ಆಪ್ತರು ಶುಭಾಶಯ ಕೋರಿ ಕಟೌಟ್‌ಗಳನ್ನು ರಸ್ತೆಗಳಲ್ಲಿ ನಿಲ್ಲಿಸಿದ್ದರು. ಆದರೆ ಗೆಳೆಯರಲ್ಲಿ ಆ ಸಂಸ್ಥೆಯವರು ಪ್ರಶಸ್ತಿಗಾಗಿ ಕೇಳಿದ್ದಷ್ಟು ಹಣ ಇರಲಿಲ್ಲ. ಬಳಿಕ ಅವರು ಆ ಪ್ರಶಸ್ತಿಯನ್ನು ಪಡೆಯುವ ಬಯಕೆಯನ್ನು ಅಲ್ಲಿಗೇ ಕೈಬಿಟ್ಟರು.

ಪ್ರಶಸ್ತಿಗಾಗಿ ಹಪಹಪಿಸುತ್ತ ಅರ್ಜಿಗಳನ್ನು ಸಲ್ಲಿಸುತ್ತಲೇ ಹೋಗುವವರು ಇರುವ ಈ ಕಾಲದಲ್ಲಿ, ಪ್ರಶಸ್ತಿಗಳನ್ನು ಮಾರಾಟ ಮಾಡುವ ದಂಧೆ ಅನೇಕರಿಗೆ ಭಾರಿ ಲಾಭವನ್ನು ತಂದುಕೊಡುತ್ತಿದೆ. ಒಂದು ಶಾಲು, ಒಂದು ತಟ್ಟೆ, ಒಂದು ಹಾರ, ಒಂದು ಪತ್ರ ಇವಿಷ್ಟಕ್ಕೆ ಜೀವನದಲ್ಲಿ ಏನೋ ಮಹತ್ವವಾದುದನ್ನು ಪಡೆದಿರುವಂತೆ ಬೀಗುತ್ತ, ಮನೆಯ ಷೋಕೇಸ್ ತುಂಬ ಕೆಲಸಕ್ಕೆ ಬಾರದ ಸ್ಮರಣಿಕೆಗಳನ್ನು ತುಂಬಿಕೊಳ್ಳುವವರೇ ಅಂತಹವರ ಆದಾಯಕ್ಕೆ ಮೂಲವಾಗುತ್ತಿದ್ದಾರೆ.

ಕೆಲವು ಸಂಸ್ಥೆಗಳು ಪ್ರಶಸ್ತಿಗಳನ್ನು ಹೀಗೆ ಮಾರಾಟ ಮಾಡುವುದನ್ನೇ ತಮ್ಮ ದಂಧೆಯನ್ನಾಗಿ ಮಾಡಿಕೊಂಡಿವೆ. ಪ್ರಶಸ್ತಿ ಬೇಕು ಎಂದು ಬಯಸುವವರಿಂದಲೇ ಒಂದು ಮೊತ್ತದ ಹಣ ಪಡೆದು, ಅದರಲ್ಲಿ ಅರ್ಧದಷ್ಟನ್ನು ವೇದಿಕೆಯಲ್ಲಿ ಪ್ರಶಸ್ತಿಯ ಜೊತೆಗೆ ಅವರಿಗೆ ಕೊಟ್ಟು, ಇನ್ನರ್ಧವನ್ನು ತಾವೇ ಉಳಿಸಿಕೊಳ್ಳುವ ತೆರಮರೆಯ ವಿದ್ಯಮಾನಕ್ಕೂ ಬರವಿಲ್ಲ.

ಪರಿಚಿತರೊಬ್ಬರು ತಾರಸಿಯ ತುಂಬ ವಿವಿಧ ಬಗೆಯ ಗಿಡಗಳನ್ನು ಬೆಳೆದಿದ್ದಾರೆ. ಇದು ಅಪರೂಪದ ಸಾಧನೆ ಖಂಡಿತ ಅಲ್ಲ. ಆದರೂ ಅವರು ಈ ಸಾಧನೆಗಾಗಿ ತಮಗೆ ಸಿಕ್ಕಿಂ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಲಭಿಸಿರುವುದಾಗಿ ಪದವಿ ಪತ್ರವನ್ನು ತೋರಿಸಿದರು. ಕರ್ನಾಟಕವಿರಲಿ, ನೆರೆಹೊರೆಯ ರಾಜ್ಯಗಳು ಕೂಡ ಅವರ ಸಾಧನೆಯನ್ನು ಗುರುತಿಸದೇ ಇರುವಾಗ, ದೇಶದ ಯಾವುದೋ ಮೂಲೆಯಲ್ಲಿರುವ ಪುಟ್ಟ ರಾಜ್ಯವೊಂದು ಅದನ್ನು ಗುರುತಿಸಿ ಗೌರವಿಸಲು ಮುಂದಾಗಿದೆ ಅಂದರೆ ಅದು ಅಭಿಮಾನದ ವಿಷಯವೇ ಸರಿ. ಆದರೆ ಈ ವಿಷಯವನ್ನು ಮುಕ್ತವಾಗಿ ಅವರಲ್ಲಿ ಹೇಳಿದಾಗ, ಅವರು ಪಿಸುದನಿಯಲ್ಲಿ 'ಈ ಪ್ರಶಸ್ತಿ ಅಷ್ಟು ಸುಲಭದಲ್ಲಿ ಬಂದದ್ದಲ್ಲ. ಅದಕ್ಕೆ ಸುಮಾರು ಎರಡು ಲಕ್ಷ ರೂಪಾಯಿ ಕೊಡಬೇಕಾಗಿ ಬಂತು' ಎಂದು ಹೇಳಿದರು.

ಸರ್ಕಾರಗಳು ಕೊಡುವ ಕೆಲವು ಪ್ರಶಸ್ತಿಗಳು ಪಾರದರ್ಶಕವೆಂದು ಎಷ್ಟೇ ಹೇಳಿಕೊಂಡರೂ ಅವುಗಳ ಬಗೆಗೆ ಅಪಸ್ವರವಂತೂ ಇದ್ದೇ ಇರುತ್ತದೆ. ಅರ್ಹರನ್ನು ಗುರುತಿಸಿ ನೀಡುತ್ತಿಲ್ಲ, ಯಾರ್ಯಾರಿಗೋ ಕೊಡುತ್ತಾರೆ ಎಂದು ಗೊಣಗುವವರ ಸಂಖ್ಯೆ ಕಡಿಮೆಯೇನಿಲ್ಲ. ಹಾಗೆಯೇ ಇನ್ನಿತರ ಅವೆಷ್ಟೋ ಸಂಸ್ಥೆಗಳ ಮೂಲಕ ಘೋಷಣೆಯಾಗುವ ವಾರ್ಷಿಕ ಪ್ರಶಸ್ತಿಗಳ ಹಿಂದೆಯೂ ಕಾಂಚಾಣದ ಕರಾಮತ್ತು ಇದೆ ಎಂಬ ಗುಮಾನಿ ಸಾರ್ವಜನಿಕರಿಗೆ ಬಂದರೆ ಅದು ಪೂರ್ಣ ನಿರಾಧಾರ ಎನ್ನುವಂತಹ ಸಂಗತಿಯಂತೂ ಅಲ್ಲ.

ಕೆಲವರಿಗೆ ಬಂದ ಪ್ರಶಸ್ತಿಗಳಂತೂ ಅವು ಯಾವ ಸಂಸ್ಥೆಗಳಿಂದ ಬಂದಿವೆ, ಆ ಸಂಸ್ಥೆಗಳು ಎಷ್ಟರಮಟ್ಟಿಗೆ ಪ್ರಖ್ಯಾತಿ ಪಡೆದಿವೆ, ನಿಜಕ್ಕೂ ಅವು ಅಸ್ತಿತ್ವದಲ್ಲಿ ಇವೆಯೇ ಎಂಬುದೇ ತಿಳಿಯದಷ್ಟು ಚಿತ್ರ ವಿಚಿತ್ರವಾದ ಹೆಸರುಗಳನ್ನು ಹೊಂದಿರುತ್ತವೆ. ಅವನ್ನು ಪಡೆಯಲು ತವಕಿಸುವ ಮಂದಿ ಅದಕ್ಕಾಗಿ ತೆರುವ ಹಣದ ಮೊತ್ತ ಸಣ್ಣದೇನೂ ಆಗಿರುವುದಿಲ್ಲ.

ಪ್ರಶಸ್ತಿಯನ್ನು ಪಡೆಯುವ ಸಲುವಾಗಿ ನೂಕುನುಗ್ಗಲು, ಅದರ ಬಗೆಗೆ ಶಿಫಾರಸು ಮಾಡಿಸಲು ಪ್ರತಿಷ್ಠಿತ ವ್ಯಕ್ತಿಗಳ ಬಳಿಗೆ ಹೋಗಿ ಪೀಡಿಸುವ ಜನ, ಎಷ್ಟು ಹಣವನ್ನಾದರೂ ವೆಚ್ಚ ಮಾಡಲು ಸಿದ್ಧರಿರುತ್ತಾರೆ. ಕಡೆಗೂ ಪ್ರಶಸ್ತಿ ಬಂದಾಗ ಅವರಿಗೆ ಆಗುವ ಸಂತೋಷ, ಸಿಗಲಿಲ್ಲ ಅನ್ನುವಾಗ ಹೊರಹೊಮ್ಮುವ ನಿಟ್ಟುಸಿರನ್ನು ಕಂಡರೆ ನಿಜಕ್ಕೂ ಬೇಸರವಾಗುತ್ತದೆ. ಸನ್ಮಾನಗಳು, ಪ್ರಶಸ್ತಿಗಳು ಬಂದಾಗ ತಮ್ಮ ಬದುಕು ಸಾರ್ಥಕವಾಯಿತು ಎಂದುಕೊಂಡು ಬೀಗುವವರನ್ನು ಕಂಡರೆ ಅನುಕಂಪವೂ ಮೂಡುತ್ತದೆ.

ಪ್ರಶಸ್ತಿಯೇ ಸಾಧನೆಯ ಮಾನದಂಡವಲ್ಲ. ನಿಜವಾದ ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಪ್ರಾಮಾಣಿಕ ಮನೋಭಾವ ಬತ್ತಿಹೋಗುತ್ತಿರುವುದು ವಿಷಾದನೀಯ. ಹಾಗೆಂದ ಮಾತ್ರಕ್ಕೆ ಪ್ರಶಸ್ತಿಯನ್ನು ಹಣ ಕೊಟ್ಟು ಪಡೆಯುವ ಜಾಯಮಾನ ಎಂದಿಗೂ ಸಲ್ಲದು. ಇಂತಹ ಬೆಳವಣಿಗೆಯು ಶ್ರಮವಿಲ್ಲದೆ ಹಣ ಗಳಿಸುವ ಒಂದು ಜಾಲವನ್ನು ಬಲಪಡಿಸುವ ಅಪಾಯವನ್ನು ಕಡೆಗಣಿಸುವಂತಿಲ್ಲ. ನಮ್ಮ ಮನೋನಿಗ್ರಹ ಮಾತ್ರ ಈ ಬಗೆಯ ದಂಧೆಗೆ ಕಡಿವಾಣ ಹಾಕಬಲ್ಲದು.

ವಾಚಕರ ವಾಣಿ

ಕುಸಿದುಬಿದ್ದ ಮಹತ್ವಾಕಾಂಕ್ಷೆಯ ಲೆಕ್ಕ ಇಡುವಿರಾ?!

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದಿದ್ದ ಪೂರ್ವಭಾವಿ ಪರೀಕ್ಷೆ ರದ್ದಾಗಿದ್ದರಿಂದ, ಈ ಪರೀಕ್ಷೆಗೆ ಖರ್ಚಾಗಿದ್ದ ₹ 13.40 ಕೋಟಿ ನಷ್ಟವಾದಂತಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಅ. 21). ಹೀಗೆ, ಪರೀಕ್ಷೆಗೆ ಖರ್ಚಾದ ಹಣವನ್ನೇನೋ ಸುಲಭವಾಗಿ ಲೆಕ್ಕ ಹಾಕಿಬಿಡಬಹುದು. ಅದನ್ನು ದಂಡದ ರೂಪದಲ್ಲೋ ಶುಲ್ಕದ ರೂಪದಲ್ಲೋ ಹೇಗಾದರೂ ಭರಿಸಬಹುದು. ಆದರೆ ಪರೀಕ್ಷೆ ರದ್ದಾಗಿದ್ದರಿಂದ, ಹುತ್ತಗಟ್ಟಿಕೊಂಡು ತಯಾರಿ ನಡೆಸಿದ್ದ ಆಕಾಂಕ್ಷಿಗಳ ಮಹತ್ವಾಕಾಂಕ್ಷೆ ಕುಸಿದುಬಿತ್ತಲ್ಲ, ಅದರ ನಷ್ಟವನ್ನು ಲೆಕ್ಕ ಹಾಕುವುದು ಹೇಗೆ?

ಜೆ.ಬಿ.ಮಂಜುನಾಥ, ಪಾಂಡವಪುರ

ಪ್ರಜಾಸತ್ತೆಗೆ ಎಸಗುವ ಪ್ರಮಾದ

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂದು ಹಟಕ್ಕೆ ಬಿದ್ದಿರುವ ಬಿಜೆಪಿ ಮುಖಂಡ ಸಿ.ಪಿ.ಯೋಗೇಶ್ವರ್, ವಿಧಾನಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ವಿಧಾನ ಪರಿಷತ್ತು ಹಾಗೂ ರಾಜ್ಯಸಭೆಯು ಸರ್ಕಾರಗಳಿಗೆ ಸಲಹೆ, ಮಾರ್ಗದರ್ಶನಗಳನ್ನು ನೀಡುವ ಪ್ರಬುದ್ಧರ ಮನೆಗಳೆಂದು ಎಲ್ಲರೂ ತಿಳಿದಿದ್ದಾರೆ. ತಮ್ಮನ್ನು ಆರಿಸಿದವರು ಚುನಾಯಿತ ಸದಸ್ಯರು ಎನ್ನುವುದನ್ನು ಮರೆತು, ಅವುಗಳ ಸದಸ್ಯರು ರಾಜಕೀಯ ಕಾರಣಗಳಿಗೆ ಅವಧಿಯ ನಡುವೆಯೇ ತಮ್ಮ ಸ್ಥಾನ ತ್ಯಜಿಸುವುದು ಪ್ರಜಾಸತ್ತೆಗೆ ಎಸಗುವ ಪ್ರಮಾದವಲ್ಲವೇ? 'ಕೊಟ್ಟ ಕುದುರೆಯನ್ನೇರದೆ' ಇನ್ನೊಂದು ದೊಡ್ಡ 'ಜವಾಬ್ದಾರಿ'ಯತ್ತ ಹೊರಡುವುದು ಸರಿಯೇ?

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ತುಷ್ಟೀಕರಣದಿಂದ ಸಮಾಜಘಾತುಕರಿಗೆ ಕುಮ್ಮಕ್ಕು

ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಗಲಭೆಗೆ ಸಂಬಂಧಿಸಿದ ಪ್ರಕರಣಗಳನ್ನು ವಾಪಸ್ ಪಡೆಯುವಂತೆ ರೋಷನ್ ಬೇಗ್ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಮನವಿ ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಅ. 22). ಇತ್ತೀಚೆಗಷ್ಟೆ ಕೆಲ ಮುಖಂಡರ ಆಣತಿಯಂತೆ, ಹುಬ್ಬಳ್ಳಿ ಹಿಂಸಾಚಾರ ಪ್ರಕರಣವನ್ನು ವಾಪಸ್ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ. ಹೀಗೆ ಎಲ್ಲೆಲ್ಲಿ ಗಲಾಟೆ, ದೌರ್ಜನ್ಯ, ಹಿಂಸಾಚಾರ ನಡೆದಿರುತ್ತವೆಯೋ ಅವುಗಳಿಗೆ ಕಾರಣರಾದ ಆರೋಪ ಎದುರಿಸುತ್ತಿರುವವರಿಗೆ ಸಂಬಂಧಿಸಿದ ಪ್ರಕರಣಗಳನ್ನು ವಾಪಸ್ ಪಡೆಯುತ್ತಾ ಹೋದರೆ ಇದಕ್ಕೆ ಕೊನೆಯೆಂಬುದೇ ಇರುವುದಿಲ್ಲ. ಇವೇನು ಸಣ್ಣಪುಟ್ಟ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲ. ಇಂತಹ ಗಂಭೀರ ಪ್ರಕರಣಗಳನ್ನು ವಾಪಸ್ ಪಡೆದರೆ ಸಮಾಜಘಾತುಕ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟಂತೆ ಆಗುವುದಿಲ್ಲವೇ?

ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಕೃತ್ಯದ ಆರೋಪಿಯನ್ನು ಸಹ ಬಿಡುಗಡೆ ಮಾಡಬೇಕೆಂದು ಮುಂದೊಂದು ದಿನ ಒತ್ತಡ ಬರಬಹುದು. ಈ ರೀತಿಯ ತುಷ್ಟೀಕರಣ ಕಾನೂನುಬಾಹಿರ. ಯಾವುದೇ ಪ್ರಕರಣ ಒಮ್ಮೆ ದಾಖಲಾದ ನಂತರ ಅದು ಕೋರ್ಟ್‌ನಲ್ಲೇ ಇತ್ಯರ್ಥವಾಗಬೇಕು. ಸುಖಾಸುಮ್ಮನೆ ಕೆಲವು ಪ್ರಭಾವಿ ವ್ಯಕ್ತಿಗಳ ಶಿಫಾರಸಿನಂತೆ ಅದನ್ನು ವಾಪಸ್ ತೆಗೆದುಕೊಳ್ಳಬಾರದು.

ಎಚ್.ವಿ.ಶ್ರೀಧರ್, ಬೆಂಗಳೂರು

ಅಸಮ್ಮತಿ!

'ರತನ್‌ಗೆ ಭಾವಪೂರ್ಣ ಬೀಳ್ಕೊಡುಗೆ'.
ಅಂಥವರಿಗೆಲ್ಲಿ ಬಂತು ಬೀಳ್ಕೊಡುಗೆ?
(ಅಮರ ಅವರ ಕೊಡುಗೆ)
ಸಮ್ಮತವಲ್ಲ
'ಪೂರ್ಣ' ದೃಷ್ಟಿಗೆ!

ಸಿ.ಪಿ.ಕೆ., ಮೈಸೂರು

ಭಾಷಾ ಸಂವರ್ಧನೆ: ಚಿತ್ಪಾವನಿಯನ್ನೂ ಪರಿಗಣಿಸಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರಾಜ್ಯದ ಹಲವು 'ಕಿರು' ಭಾಷೆಗಳ ಸಂವರ್ಧನೆಗೆ ಯೋಜನೆ ಪ್ರಕಟಿಸಿರುವುದು ಕ್ರಾಂತಿಕಾರಕ ಕ್ರಮ. ಕರ್ನಾಟಕದಲ್ಲಿ ಇರುವ ಎಲ್ಲ ಭಾಷೆಗಳ ಹೊಣೆಯೂ ತನ್ನದು ಎಂಬ ನಿಲುವು ತಳೆದ ಪ್ರಾಧಿಕಾರಕ್ಕೆ ಅಭಿನಂದನೆ. ರಾಜ್ಯದಲ್ಲಿ ಇರುವ ಒಂದು ವಿಶಿಷ್ಟ ಆಡುಮಾತು, ಚಿತ್ಪಾವನ ಬ್ರಾಹ್ಮಣರು ಮಾತನಾಡುವ ಚಿತ್ಪಾವನಿ ಭಾಷೆ. ಇದು ಜನವರ್ಗದ ಮೂಲ ಭಾಷೆ ಹಾಗೂ ಮಹಾರಾಷ್ಟ್ರೀಯ ಪ್ರಾಕೃತದ ಒಂದು ರೂಪ. ಬಹುಶಃ ಸುಮಾರು 10ನೇ ಶತಮಾನದಲ್ಲಿ ಕವಲಾದ ಈ ಭಾಷೆಯು ಮಹಾರಾಷ್ಟ್ರದ ಪ್ರಾಚೀನ ಕಾವ್ಯಗಳ ಭಾಷೆಯನ್ನು ಹೋಲುತ್ತದೆ.

ಕರ್ನಾಟಕ ಕರಾವಳಿಗೆ ಸುಮಾರು 1,600ರಲ್ಲಿ ವಲಸೆ ಬಂದ ಚಿತ್ಪಾವನರು ಇಂದಿಗೂ ಆಡುವ ವಿಶಿಷ್ಟ ಭಾಷೆ ಇದಾಗಿದೆ. ಮಹಾರಾಷ್ಟ್ರದ ಮೂಲಸ್ಥಾನವಾದ ರತ್ನಾಗಿರಿ, ಚಿಪಳೂಣದಲ್ಲಿ ಈ ಭಾಷೆ ಲುಪ್ತವಾಗಿ ಹೋಗಿದ್ದು, ಅಲ್ಲಿ ಚಿತ್ಪಾವನರೂ ಆಧುನಿಕ ಮರಾಠಿ ಭಾಷೆಯನ್ನು ಬಳಸುತ್ತಾರೆ! ಗೋವಾದಲ್ಲಿ ಇದು ಸ್ವಲ್ಪಮಟ್ಟಿಗೆ ಉಳಿದುಕೊಂಡಿದೆ. ದಕ್ಷಿಣ ಕನ್ನಡದಲ್ಲಿ ಹಾಲಾಡಿಯಿಂದ ಅರಸಿನಮಕ್ಕಿವರೆಗೆ ಜೀವಂತವಾಗಿ ಉಳಿದಿರುವ ಭಾಷೆಯಾಗಿದೆ. ಮಹಾರಾಷ್ಟ್ರದ ಮರಾಠಿ ಭಾಷೆಯ ಹಳೆಯ ರೂಪ ಈಗ ಕರ್ನಾಟಕದಲ್ಲಿ ಉಳಿದಿದೆ. ಬೇರೆ ಭಾಷೆಗಳ ಮಧ್ಯದಲ್ಲಿ ಉಳಿದುಕೊಂಡ ಒಂದು ಪ್ರತ್ಯೇಕ ಭಾಷೆಯಾಗಿರುವ ಇದು ಒಂದು ವಿಶಿಷ್ಟ ಭಾಷಾ ವಿದ್ಯಮಾನ, ಸಂಶೋಧನಾ ನಿಧಿ. ಥಾಮಸ್ ಗ್ರಿಯರ್ಸನ್‌ನ ಮಹಾಭಾಷಾ ಸಮೀಕ್ಷೆಗಳಲ್ಲೂ ಇದು ದಾಖಲಾಗಿದೆ. ಕರ್ನಾಟಕ ಮತ್ತು ವಿಶ್ವದ ಬೇರೆಡೆ ವಲಸೆ ಹೋದ ದಕ್ಷಿಣ ಕನ್ನಡದ ಚಿತ್ಪಾವನರು ಸೇರಿದಂತೆ ಕೆಲವೇ ಸಾವಿರ ಜನ ಇದನ್ನು ಬಳಕೆ ಮಾಡುತ್ತಿದ್ದಾರೆ. ರಕ್ಷಿಸಲ್ಪಡಬೇಕಾದ ಈ ಭಾಷಾ ಸಂಪದದ ಬಗ್ಗೆ ಪ್ರಾಧಿಕಾರವು ಗಮನಹರಿಸಬೇಕು.

ಎಂ.ಪ್ರಭಾಕರ ಜೋಶಿ, ಮಂಗಳೂರು

ಜಾತಿ ಜನಗಣತಿಯಿಂದ ಆಗುವ ದುಷ್ಪರಿಣಾಮ ವಿವರಿಸಲಿ

ಜಾತ್ಯತೀತವಾಗಿರುವ ದೇಶದಲ್ಲಿ ಜಾತಿ ಜನಗಣತಿ ನಡೆಸಬೇಕಾದ ಅಗತ್ಯ ಇದೆಯೇ ಎಂಬ ವಿಚಾರವನ್ನು ಮುನ್ನೆಲೆಗೆ ತಂದಿರುವ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಒಂದು ಸ್ವಾರಸ್ಯಕರ ಚರ್ಚೆಗೆ ನಾಂದಿ ಹಾಡಿದ್ದಾರೆ. ರಾಜ್ಯದಲ್ಲೇ ಆಗಲಿ, ದೇಶದಲ್ಲೇ ಆಗಲಿ ನಾಗರಿಕರನ್ನು, ನಾಯಕರನ್ನು, ಅಷ್ಟೇ ಏಕೆ ಮಠಾಧೀಶರನ್ನೂ ಗುರುತಿಸುವುದು ಅವರವರ ಜಾತಿಯ ಮುಖಾಂತರ. ಹಾಗಿರುವಾಗ ಜಾತಿ ಜನಗಣತಿ ನಡೆಸುವುದು ಬೇಡವೇ?

ಸ್ವಾಮೀಜಿ ಮೊದಲ ಬಾರಿಗೆ ಜಾತ್ಯತೀತತೆ ಬಗ್ಗೆ ಮಾತನಾಡಿರುವುದು ಜನರನ್ನು ಚಕಿತಗೊಳಿಸಿದೆ. ಬರೀ ಹೇಳಿಕೆಗಿಂತ ಜಾತಿ ಜನಗಣತಿಯಿಂದ ಆಗುವ ದುಷ್ಪರಿಣಾಮಗಳ ಕುರಿತು ವಿವರಿಸಿ ಸಮಾಜದ ಗಮನ ಸೆಳೆಯುತ್ತಾರೆಂದು ಆಶಿಸೋಣವೇ?

ಶಾಂತಕುಮಾರ್, ಸರ್ಜಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಘರ್ಷದ ವಾತಾವರಣದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ತರಹೇವಾರಿ ಲೆಕ್ಕಾಚಾರ

ಬ್ರಿಕ್ಸ್ ಶೃಂಗಸಭೆ: ಕದನ ಕುತೂಹಲ

ಸದಸ್ಯ ರಾಷ್ಟ್ರಗಳು



ಬ್ರೆಜಿಲ್ | ರಷ್ಯಾ | ಭಾರತ | ಚೀನಾ | ದಕ್ಷಿಣ ಆಫ್ರಿಕಾ | ಸೌದಿ ಅರೇಬಿಯಾ | ಈಜಿಪ್ಟ್ | ಇಥಿಯೋಪಿಯ | ಇರಾನ್ | ಯುಎಇ

ರಷ್ಯಾದ ಕಜಾನ್ ನಗರದಲ್ಲಿ 16ನೇ ಬ್ರಿಕ್ಸ್ ಶೃಂಗಸಭೆ ಆರಂಭವಾಗಿದೆ. ಉಕ್ರೇನ್ ಯುದ್ಧದಿಂದಾಗಿ ವಿಶ್ವದ ಹಲವು ರಾಷ್ಟ್ರಗಳ ವಿರೋಧ ಎದುರಿಸುತ್ತಿರುವ ರಷ್ಯಾ ಅಧ್ಯಕ್ಷ ಪುಟಿನ್‌ಗೆ ಈ ಸಭೆಯು ಮಹತ್ವದ್ದಾಗಿದೆ. ಚೀನಾಗೆ ಈ ಸಂಬಂಧ ಹಲವು ಲೆಕ್ಕಾಚಾರ ಇದ್ದರೆ, ದ್ವಿಪಕ್ಷೀಯ ಮಾತುಕತೆ ಸೇರಿದಂತೆ ಹಲವು ನೆಲೆಯಲ್ಲಿ ಭಾರತಕ್ಕೂ ಇದು ಮುಖ್ಯವಾದುದಾಗಿದೆ. ಜಗತ್ತು ಹಲವು ರೀತಿಯ ಸಂಘರ್ಷಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲಿ ಬ್ರಿಕ್ಸ್ ಸಮಾವೇಶ ನಡೆಯುತ್ತಿದ್ದು, ಅಮೆರಿಕವೂ ಸೇರಿದಂತೆ ರಾಷ್ಟ್ರ ರಾಷ್ಟ್ರಗಳ ನಡುವಿನ ಸಂಬಂಧದಲ್ಲಿ ಇದು ಎಂಥ ಪರಿಣಾಮಗಳನ್ನು ಉಂಟುಮಾಡಲಿದೆ ಎನ್ನುವ ಕುತೂಹಲ ಜಾಗತಿಕ ವಲಯದಲ್ಲಿದೆ

ಬ್ರಿಕ್ಸ್: ಏನು, ಎತ್ತ?

10 ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಸಂಖ್ಯೆ

350 ಕೋಟಿ ಬ್ರಿಕ್ಸ್ ಸದಸ್ಯ ರಾಷ್ಟ್ರಗಳಲ್ಲಿರುವ ಜನಸಂಖ್ಯೆ

45% ಜಾಗತಿಕ ಜನಸಂಖ್ಯೆಯಲ್ಲಿ ಈ ರಾಷ್ಟ್ರಗಳ ಪಾಲು

29.19 ಲಕ್ಷಕೋಟಿ ಡಾಲರ್ (₹**2,453** ಲಕ್ಷ ಕೋಟಿ) ಬ್ರಿಕ್ಸ್ ರಾಷ್ಟ್ರಗಳ ಜಿಡಿಪಿ ಗಾತ್ರ

28% ಜಾಗತಿಕ ಆರ್ಥಿಕತೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ಜಿಡಿಪಿ ಪಾಲು

44% ಜಾಗತಿಕವಾಗಿ ಉತ್ಪಾದನೆಯಾಗುವ ಕಚ್ಚಾ ತೈಲದಲ್ಲಿ ಬ್ರಿಕ್ಸ್ ಸದಸ್ಯರಾಷ್ಟ್ರಗಳು ಉತ್ಪಾದಿಸುವ ತೈಲದ ಪ್ರಮಾಣ

ಆಧಾರ: ಬಿಬಿಸಿ, ಸಿಎನ್‌ಎನ್, ಪಿಟಿಐ, ಬ್ರಿಕ್ಸ್ 24 ವೆಬ್‌ಸೈಟ್

ಪ್ರಜಾವಾಣಿ ವಾರ್ತೆ

ಜಗತ್ತಿನ ಬೆಳೆಯುತ್ತಿರುವ ಆರ್ಥಿಕತೆಯ ದೇಶಗಳಾದ ಭಾರತ, ಚೀನಾ, ಸೌದಿ ಅರೇಬಿಯಾ, ಯುಎಇ ಸೇರಿದಂತೆ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿರುವ ಶೃಂಗಸಭೆಯತ್ತ ಇಡೀ ವಿಶ್ವವೇ ಗಮನ ನೆಟ್ಟಿದೆ. 2006ರಲ್ಲಿ ಬ್ರಿಕ್ ಆರಂಭವಾದಾಗ (ದಕ್ಷಿಣ ಆಫ್ರಿಕಾ ಸೇರ್ಪಡೆಗೊಂಡ ನಂತರ ಅದು ಬ್ರಿಕ್ಸ್ ಆಯಿತು) ಅದನ್ನು ಜಿ-20ಗೆ ವಿರುದ್ಧವಾದ ಕೂಟ ಎಂದೇ ಕೆಲವರು ಅರ್ಥೈಸಿದ್ದರು. ಜಗತ್ತಿನ ಪ್ರಮುಖ ಅಭಿವೃದ್ಧಿಶೀಲ ರಾಷ್ಟ್ರಗಳ ಕೂಟವಾಗಿದ್ದ ಬ್ರಿಕ್ಸ್, ಪಾಶ್ಚಿಮಾತ್ಯ ಮತ್ತು ಐರೋಪ್ಯ ರಾಷ್ಟ್ರಗಳ ಜಾಗತಿಕ ಏಕಸ್ವಾಮ್ಯಕ್ಕೆ ಸಡ್ಡು ಹೊಡೆಯುವ ಯತ್ನ ಎಂದೇ ವಿಶ್ಲೇಷಿಸಲಾಗಿತ್ತು. ಈ ದಿಸೆಯಲ್ಲಿ ಬ್ರಿಕ್ಸ್ ಶೃಂಗಸಭೆಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಕುತೂಹಲವಿದ್ದು, ಅಲ್ಲಿನ ಬೆಳವಣಿಗೆಗಳ ಬಗ್ಗೆ ಅರಿಯಲು ಜಗತ್ತಿನ ಪ್ರಮುಖ ರಾಷ್ಟ್ರಗಳು ಕುತೂಹಲದಿಂದ ಕಾಯುತ್ತಿವೆ.

16ನೇ ಬ್ರಿಕ್ಸ್ ಶೃಂಗಸಭೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮಟ್ಟಿಗಂತೂ ಬಹಳ ಮುಖ್ಯವಾದ ಕೂಟವಾಗಿದೆ. ಉಕ್ರೇನ್ ಯುದ್ಧದ ಸಂಬಂಧ ಅಂತರರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ (ಐಸಿಸಿ) ಪುಟಿನ್ ಬಂಧನಕ್ಕೆ ವಾರಂಟ್ ಜಾರಿ ಮಾಡಿದೆ. ರಷ್ಯಾ ಮೇಲೆ ಹಲವು ರಾಷ್ಟ್ರಗಳು ನಿರ್ಬಂಧಗಳನ್ನು ಹೇರಿವೆ. ಜಾಗತಿಕ ಮಟ್ಟದಲ್ಲಿ ರಷ್ಯಾವನ್ನು ಒಬ್ಬಂಟಿಯನ್ನಾಗಿಸುವಂಥ ಬೆಳವಣಿಗೆಗಳ ನಡುವೆ ಬ್ರಿಕ್ಸ್ ಶೃಂಗಸಭೆ ಅದಕ್ಕೆ ವರದಾನವಾಗಿ ಒದಗಿದೆ. ಜಾಗತಿಕ ಮಟ್ಟದ 20ಕ್ಕೂ ಹೆಚ್ಚು ನಾಯಕರು ಅಲ್ಲಿ ನೆರೆಯುವುದು, ಅವರೊಂದಿಗೆ ಪುಟಿನ್ ಮಾತುಕತೆ ನಡೆಸುವುದು ರಷ್ಯಾವನ್ನು ಏಕಾಂಗಿಯನ್ನಾಗಿಸುವ ಪ್ರಯತ್ನಗಳನ್ನು ವಿಫಲಗೊಳಿಸಲಿದೆ ಎನ್ನುವ ವಿಶ್ಲೇಷಣೆ ಕೇಳಿಬಂದಿದೆ. ವಿಶೇಷ ಎಂದರೆ, ಕಳೆದ ವರ್ಷ ಜೊಹಾನ್ಸ್‌ಬರ್ಗ್‌ನಲ್ಲಿ ನಡೆದಿದ್ದ ಬ್ರಿಕ್ಸ್ ಸಮ್ಮೇಳನದಲ್ಲಿ ಐಸಿಸಿಯ ವಾರಂಟ್ ಕಾರಣದಿಂದ ಪುಟಿನ್ ರಷ್ಯಾದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದರು.

ಉಕ್ರೇನ್ ಯುದ್ಧ ಆರಂಭವಾದ ನಂತರ ರಷ್ಯಾದಲ್ಲಿ ನಡೆಯುತ್ತಿರುವ ಮೊದಲ ಮಹತ್ವದ ಅಂತರರಾಷ್ಟ್ರೀಯ ಸಮಾವೇಶ ಇದಾಗಿದೆ. ಹಾಗೆಯೇ ಈಜಿಪ್ಟ್, ಇಥಿಯೋಪಿಯಾ, ಯುಎಇ, ಇರಾನ್, ಸೌದಿ ಅರೇಬಿಯಾ ದೇಶಗಳು ಬ್ರಿಕ್ಸ್ ಸೇರ್ಪಡೆಗೊಂಡ ನಂತರ ನಡೆಯುತ್ತಿರುವ ಮೊದಲ ಶೃಂಗಸಭೆಯೂ ಹೌದು. ಭಾರತವು ಜಾಗತಿಕ ಅಭಿವೃದ್ಧಿ ಕಾರ್ಯಸೂಚಿ, ಬಹುಪಕ್ಷೀಯ ಮಾತುಕತೆ, ಹವಾಮಾನ ಬದಲಾವಣೆ, ಆರ್ಥಿಕ ವಿಚಾರಗಳಲ್ಲಿ ಇತರೆ ರಾಷ್ಟ್ರಗಳೊಂದಿಗೆ ಸಮನ್ವಯ ಸಾಧಿಸುವ ಸಂಬಂಧ ಮಾತುಕತೆ ನಡೆಸುವ ಇರಾದೆ ಹೊಂದಿದೆ. ಚೀನಾ, ಬ್ರಿಕ್ಸ್ ಸದಸ್ಯ ರಾಷ್ಟ್ರಗಳಲ್ಲಿ ವಿವಿಧ ಬೃಹತ್ ಯೋಜನೆಗಳಿಗೆ ಹಣಕಾಸು, ಇತರೆ ನೆರವು ನೀಡುವ ಮೂಲಕ ಪರೋಕ್ಷ ಹಿಡಿತ ಸಾಧಿಸುವ ದಿಕ್ಕಿನಲ್ಲಿ ಪ್ರಯತ್ನ ನಡೆಸುತ್ತಿದೆ.

ಸಾಮೂಹಿಕ ಬೆಳವಣಿಗೆ, ಸುಸ್ಥಿರ ಅಭಿವೃದ್ಧಿ ಮತ್ತು ಜಾಗತಿಕ ಮಟ್ಟದಲ್ಲಿ ಸಂಪನ್ಮೂಲಗಳ ಸಮಾನ ಹಂಚಿಕೆಯ ಗುರಿಗಳನ್ನು ಹೊಂದಿದ್ದೇವೆ ಎನ್ನುವುದು ಬ್ರಿಕ್ಸ್ ದೇಶಗಳ ಹೇಳಿಕೆ. ಆದರೆ, ಬ್ರಿಕ್ಸ್‌ನ ದೂರಗಾಮಿ ಉದ್ದೇಶಗಳ ಬಗೆಗೂ ವಿಶ್ವಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಅಮೆರಿಕ ನೇತೃತ್ವದ ಪಾಶ್ಚಿಮಾತ್ಯ ಏಕಸ್ವಾಮ್ಯದ ವಿರುದ್ಧ ಪ್ರಬಲ ಜಾಗತಿಕ ದಕ್ಷಿಣವನ್ನು ಕಟ್ಟುವುದು, ಅದಕ್ಕೆ ಪೂರಕವಾಗಿ ಆರ್ಥಿಕ, ರಾಜಕೀಯ ವಿಚಾರಗಳಲ್ಲಿ ಸಮನ್ವಯ ಸಾಧಿಸುವುದು; ಒಟ್ಟಾರೆಯಾಗಿ, ಜಾಗತಿಕ ಅಧಿಕಾರ ಚಿತ್ರಣದಲ್ಲಿ ಗಮನಾರ್ಹ ಬದಲಾವಣೆ ತರುವುದು ಕೂಟದ ಉದ್ದೇಶ ಎನ್ನಲಾಗುತ್ತಿದ್ದು, ಬ್ರಿಕ್ಸ್ ಶೃಂಗಸಭೆಯ ಹಿನ್ನೆಲೆಯಲ್ಲಿ ಪುಟಿನ್ ಆಡಿರುವ ಮಾತುಗಳು ಇದನ್ನೇ ಧ್ವನಿಸುತ್ತಿವೆ.

ಬ್ರಿಕ್ಸ್ ರಾಷ್ಟ್ರಗಳ ಹೆಚ್ಚುತ್ತಿರುವ ಆರ್ಥಿಕ ಮತ್ತು ರಾಜಕೀಯ ಪ್ರಭಾವದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿರುವ ಪುಟಿನ್, 'ಇದು ಯಾರೂ ನಿರಾಕರಿಸಲಾಗದ ವಾಸ್ತವ' ಎಂದಿದ್ದಾರೆ. 'ಬ್ರಿಕ್ಸ್ ಮತ್ತು ಇತರ ಸಮಾನ ಆಸಕ್ತಿಯ ರಾಷ್ಟ್ರಗಳು ಜೊತೆಗೂಡಿ ಕೆಲಸ ಮಾಡಿದರೆ, ಹೊಸ ಜಾಗತಿಕ ವ್ಯವಸ್ಥೆಯ ಸೃಷ್ಟಿಗೆ ನಾಂದಿ ಹಾಡಬಹುದಾಗಿದೆ' ಎಂದೂ ಹೇಳಿರುವ ಅವರು, 'ಬ್ರಿಕ್ಸ್ ಎನ್ನುವುದು ಪಶ್ಚಿಮ ವಿರೋಧಿ ಒಕ್ಕೂಟ' ಎನ್ನುವುದನ್ನು ನಿರಾಕರಿಸಿದ್ದಾರೆ.

ಶೃಂಗಸಭೆಯಲ್ಲಿ ರಷ್ಯಾ–ಉಕ್ರೇನ್ ಯುದ್ಧದ ಬಗ್ಗೆ ಸಹಜವಾಗಿಯೇ ಚರ್ಚೆ ನಡೆಯಲಿದೆ. ಜತೆಗೆ ಇರಾನ್–ಇಸ್ರೇಲ್ ಸಂಘರ್ಷವೂ ಸೇರಿದಂತೆ ಮಧ್ಯಪ್ರಾಚ್ಯದ ಬಿಕ್ಕಟ್ಟು, ಇಸ್ರೇಲ್‌ಗೆ ಅಮೆರಿಕದ ಬೆಂಬಲ ಮತ್ತಿತರ ವಿಚಾರಗಳೂ ಚರ್ಚೆಯಾಗಲಿವೆ. ಬ್ರಿಕ್ಸ್ ಶೃಂಗಸಭೆಯಿಂದ ಕೂಟದ ಹೊರಗೆ ಮತ್ತು ಒಳಗೆ ಎಂಥ ಪರಿಣಾಮಗಳು ಘಟಿಸಲಿವೆ ಎನ್ನುವ ಕುತೂಹಲವೂ ವ್ಯಾಪಕವಾಗಿದೆ.

ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ಸನಿಹದಲ್ಲಿದೆ. ಚುನಾವಣೆಯಲ್ಲಿ ಯಾರು ಗೆಲ್ಲಲಿದ್ದಾರೆ ಎನ್ನುವುದು ಅಮೆರಿಕ ಮತ್ತು ಇತರ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ಬದಲಾವಣೆ ತರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ದಿಸೆಯಲ್ಲಿಯೂ ಬ್ರಿಕ್ಸ್ ಶೃಂಗಸಭೆಗೆ ವಿಶೇಷ ಮಹತ್ವ ಇದೆ.



ಪರಸ್ಪರ ಸಹಕಾರದ ಉದ್ದೇಶ

ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾಗಳು 2006ರಲ್ಲಿ ಒಟ್ಟಾಗಿ ಹುಟ್ಟುಹಾಕಿದ ಸಂಘಟನೆ 'ಬ್ರಿಕ್'. ನಾಲ್ಕು ವರ್ಷಗಳ ಬಳಿಕ, 2010ರಲ್ಲಿ ದಕ್ಷಿಣ ಆಫ್ರಿಕಾ ಕೂಡ ಈ ಕೂಟದ ಸದಸ್ಯ ರಾಷ್ಟ್ರವಾಯಿತು. ಆ ನಂತರ ಇದು 'ಬ್ರಿಕ್ಸ್' ಆಯಿತು. 2023ರಲ್ಲಿ ನಾಲ್ಕು ರಾಷ್ಟ್ರಗಳ (ಈಜಿಪ್ಟ್, ಇರಾನ್, ಇಥಿಯೋಪಿಯ, ಯುಎಇ) ಸೇರ್ಪಡೆಯನ್ನು ಘೋಷಿಸಲಾಗಿದ್ದು, ಈ ವರ್ಷದ ಜನವರಿಯಲ್ಲಿ ಸೌದಿ ಅರೇಬಿಯಾವೂ ಕೂಟವನ್ನು ಸೇರಿದೆ. ಸದ್ಯ 10 ದೇಶಗಳು ಸದಸ್ಯತ್ವ ಹೊಂದಿವೆ. ಮಲೇಷ್ಯಾ, ಥಾಯ್ಲೆಂಡ್‌ಗಳಂತಹ ದೇಶಗಳು ಈ ಸಂಘಟನೆಯನ್ನು ಸೇರಲು ಪ್ರಯತ್ನಿಸುತ್ತಿವೆ.

ವ್ಯಾಪಾರ, ಇಂಧನ, ಭದ್ರತೆ, ಅಭಿವೃದ್ಧಿ, ಹವಾಮಾನ ಬದಲಾವಣೆ ಸೇರಿದಂತೆ ಜಾಗತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ನೀಡುವ ಧ್ಯೇಯೋದ್ದೇಶವನ್ನು ಬ್ರಿಕ್ಸ್ ಹೊಂದಿದೆ. ಜಾಗತಿಕ ಮಟ್ಟದಲ್ಲಿ ಅಮೆರಿಕ ಸೇರಿದಂತೆ ಪಶ್ಚಿಮದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಪರ್ಯಾಯವಾದ ಶಕ್ತಿಯನ್ನು ಹುಟ್ಟುಹಾಕುವ ಲೆಕ್ಕಾಚಾರವೂ ಬ್ರಿಕ್ಸ್ ರಾಷ್ಟ್ರಗಳದ್ದು.

ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮಾದರಿಯಲ್ಲೇ ಬ್ರಿಕ್ಸ್ ರಾಷ್ಟ್ರಗಳು ರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕ್ (ಎನ್‌ಡಿಬಿ) ಮತ್ತು ಆಪದ್ಧನ ವ್ಯವಸ್ಥೆಯನ್ನೂ (ಕಂಟಿಂಜೆಂಟ್ ರಿಸರ್ವ್ ಅರೇಂಜ್‌ಮೆಂಟ್–ಸಿಆರ್‌ಎ) ಹುಟ್ಟು ಹಾಕಿವೆ.

ಸದಸ್ಯ ರಾಷ್ಟ್ರಗಳು ಬ್ರಿಕ್ಸ್ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸರದಿಯಂತೆ ವಹಿಸಿಕೊಳ್ಳುತ್ತವೆ. ಭಾರತ ಈವರೆಗೆ ಮೂರು ಬಾರಿ ಅಧ್ಯಕ್ಷ ಸ್ಥಾನ ಪಡೆದಿದೆ. ಈ ವರ್ಷ ರಷ್ಯಾ ಈ ಜವಾಬ್ದಾರಿಯನ್ನು ವಹಿಸಿದೆ.

ಬ್ರಿಕ್ಸ್ ವಿಸ್ತರಣೆಯಿಂದ ಭಾರತಕ್ಕೆ ಅನುಕೂಲ?

'ಬ್ರಿಕ್ಸ್', ಚೀನಾ ಪ್ರೇರಿತ ಸಂಘಟನೆ ಎಂಬ ಅಭಿಪ್ರಾಯ ಜಾಗತಿಕ ಮಟ್ಟದಲ್ಲಿದ್ದರೂ, ಇದರ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿರುವ ಭಾರತವು ಸಂಘಟನೆ ರೂಪುಗೊಳ್ಳುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಜಾಗತಿಕ ಮಟ್ಟದ ವೇದಿಕೆಗಳಲ್ಲಿ ಭಯೋತ್ಪಾದನೆ, ಹವಾಮಾನ ಬದಲಾವಣೆಯಂತಹ ಜಾಗತಿಕ ವಿಚಾರಗಳನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತಿರುವ ಭಾರತ, ಜಾಗತಿಕ ನಾಯಕತ್ವ ವಹಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಪಶ್ಚಿಮ ಮತ್ತು ಪೂರ್ವ ರಾಷ್ಟ್ರಗಳ ನಡುವಿನ ಕೊಂಡಿಯಾಗಿಯೂ ಕಾರ್ಯನಿರ್ವಹಿಸುತ್ತಿದೆ. ರಷ್ಯಾ, ಇರಾನ್‌ನಂತಹ ಅಮೆರಿಕದ ವಿರೋಧಿ ರಾಷ್ಟ್ರಗಳೊಂದಿಗೆ ಭಾರತ ಉತ್ತಮ ಸ್ನೇಹ ಹೊಂದಿದ್ದರೂ, ಅಮೆರಿಕ ಸೇರಿದಂತೆ ಪಶ್ಚಿಮದ ರಾಷ್ಟ್ರಗಳೊಂದಿಗೆ ಉತ್ತಮ ರಾಜತಾಂತ್ರಿಕ ಬಾಂಧವ್ಯವನ್ನು ಕಾಪಾಡಿಕೊಳ್ಳುವಲ್ಲಿಯೂ ಯಶಸ್ವಿಯಾಗಿದೆ.

ಬ್ರಿಕ್ಸ್ ಸಂಘಟನೆ ವಿಸ್ತಾರವಾಗಿರುವುದರಿಂದ ಭಾರತಕ್ಕೆ ಹೆಚ್ಚು ಅನುಕೂಲವಾಗಲಿದೆ. ಮಧ್ಯಪ್ರಾಚ್ಯ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ ಇನ್ನಷ್ಟು ಉತ್ತಮಗೊಳ್ಳಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

2020ರಲ್ಲಿ ಲಡಾಖ್‌ನ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ ಉಂಟಾದ ಘರ್ಷಣೆಯ ಬಳಿಕ ಭಾರತ ಮತ್ತು ಚೀನಾ ನಡುವೆ ಉಂಟಾಗಿದ್ದ ಗಡಿ ಬಿಕ್ಕಟ್ಟು ಸದ್ಯದ ಮಟ್ಟಿಗೆ ಪರಿಹಾರ ಆಗಿರುವುದನ್ನು ಎರಡೂ ರಾಷ್ಟ್ರಗಳು ಶೃಂಗಸಭೆಗೂ ಮುನ್ನ ಘೋಷಿಸಿರುವುದು ಕೂಡ ಈ ಸಂದರ್ಭದಲ್ಲಿ ಮಹತ್ವ ಪಡೆದಿದೆ.

ಡಿಸೆಂಬರ್‌ನಲ್ಲಿ ಮೆಜೆಸ್ಟಿಕ್-2 ತೆರೆಗೆ

ಮೆಜೆಸ್ಟಿಕ್‌ನಲ್ಲಿನ ಅಕ್ರಮ ಚಟುವಟಿಕೆಗಳು, ರೌಡಿಸಂ ಕುರಿತಾದ ಕಥೆ ಹೇಳುವ 'ಮೆಜೆಸ್ಟಿಕ್-2' ಡಿಸೆಂಬರ್‌ನಲ್ಲಿ ತೆರೆಗೆ ಬರಲು ಸಿದ್ಧವಾಗಿದೆ. ಇತ್ತೀಚೆಗಷ್ಟೇ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಗೊಂಡಿದೆ. ದರ್ಶನ್ ಅಭಿನಯದ 'ಮೆಜೆಸ್ಟಿಕ್' ಚಿತ್ರಕ್ಕೆ ಕಥೆ ಬರೆದಿದ್ದ ರಾಮು ನಿರ್ದೇಶಿಸಿರುವ ಈ ಚಿತ್ರವನ್ನು ಹೆಚ್.ಆನಂದಪ್ಪ ನಿರ್ಮಿಸಿದ್ದಾರೆ.

'ಮಾರ್ಚ್ 31ಕ್ಕೆ ನಮ್ಮ ಚಿತ್ರದ ಶೂಟಿಂಗ್ ಆರಂಭಿಸಿ, ಬೆಂಗಳೂರು ಸುತ್ತಮುತ್ತ ನಿರಂತರವಾಗಿ 126 ದಿನಗಳ ಕಾಲ ಶೂಟಿಂಗ್ ಮಾಡಿದ್ದೇವೆ. ಚಿತ್ರದುರ್ಗದ ಮುರುಘಾಮಠದಲ್ಲಿ ಡ್ಯುಯೆಟ್ ಸಾಂಗ್ ಚಿತ್ರೀಕರಣ ನಡೆಸಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿದ್ದು ಡಿಸೆಂಬರ್ 26ಕ್ಕೆ ಚಿತ್ರ ಬಿಡುಗಡೆ ಆಲೋಚನೆಯಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ ರಾಮು.

ಯುವನಟ ಭರತ್‌ಗೆ ಸಂಹಿತಾ ವಿನ್ಯಾ ಜೋಡಿಯಾಗಿದ್ದಾರೆ. ಮಾಲಾಶ್ರೀ ಒಂದು ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರುತಿ ನಾಯಕನ ತಾಯಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿನು ಮನಸು ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಭರತ್ | ಸಂಹಿತಾ ವಿನ್ಯಾ

'ಕಸ್ಟಡಿ' ಚಿತ್ರದಲ್ಲಿ ಪ್ರಿಯಾ ಶಠಮರ್ಷಣ

'ಭೀಮ' ಸಿನಿಮಾದಲ್ಲಿ 'ಗಿರಿಜಾ' ಹೆಸರಿನ ಪೊಲೀಸ್ ಅಧಿಕಾರಿ ಪಾತ್ರಕ್ಕೆ ಬಣ್ಣಹಚ್ಚಿದ್ದ ನಟಿ ಪ್ರಿಯಾ ಶಠಮರ್ಷಣ ಇದೀಗ 'ಕಸ್ಟಡಿ' ಎಂಬ ಸಿನಿಮಾದಲ್ಲೂ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಬೃಂದಾವನ್ ಎಂಟರ್‌ಪ್ರೈಸಸ್ ಲಾಂಛನದಲ್ಲಿ ನಾಗೇಶ್ ಕುಮಾರ್ ಯು.ಎಸ್. ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ ಜೆ.ಜೆ.ಶ್ರೀನಿವಾಸ್ ನಿರ್ದೇಶನವಿದೆ. ಬೆಂಗಳೂರಿನ ಟೊರಿನೊ ಫ್ಯಾಕ್ಟರಿ ಆವರಣದಲ್ಲಿ ಈ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. 'ಸೈಬರ್ ಕ್ರೈಂ ಕುರಿತಾದ ಕಥಾಹಂದರ ಹೊಂದಿರುವ 'ಕಸ್ಟಡಿ' ಚಿತ್ರದಲ್ಲಿ ಮೊಬೈಲ್ ಸುತ್ತ ಚಿತ್ರದ ಕಥೆ ನಡೆಯುತ್ತದೆ. ಸೈಬರ್ ಕ್ರೈಂನ ಕುರಿತಾದ ಕಥೆಗಳು ಸಾಕಷ್ಟು ಬಂದಿವೆಯಾದರೂ ಈ ಕಥೆ ಭಿನ್ನವಾಗಿದೆ. ವರ್ಷದ ಹಿಂದೆ ಈ ಚಿತ್ರದ ಕಥೆ ಸಿದ್ಧವಾಗಿತ್ತು. ಚಿತ್ರದಲ್ಲಿ ಖಡಕ್ ಪೊಲೀಸ್ ಅಧಿಕಾರಿ ಪಾತ್ರದ ಅನ್ವೇಷಣೆಯಲ್ಲಿದ್ದಾಗ ಪ್ರಿಯಾ ಅವರು ಈ ಪಾತ್ರ ಮಾಡಬಹುದು ಅನಿಸಿತು. ಅವರು ಕಥೆ ಕೇಳಿ ಒಪ್ಪಿಕೊಂಡರು. ಚಿತ್ರೀಕರಣ ಮುಕ್ತಾಯದ ಹಂತ ತಲುಪಿದೆ. ಕಾಕ್ರೋಚ್ ಸುಧಿ ಅವರೂ ಈ ಚಿತ್ರದ ಮುಖ್ಯಪಾತ್ರದಲ್ಲಿದ್ದಾರೆ' ಎಂದರು ಶ್ರೀನಿವಾಸ್.

'ನನ್ನ 'ಗಿರಿಜಾ' ಪಾತ್ರಕ್ಕೆ ಜನ ನೀಡಿದ ಪ್ರೀತಿಗೆ ಆಭಾರಿ. ಈ ಚಿತ್ರದಲ್ಲೂ ನಾನು ಖಡಕ್ ಪೊಲೀಸ್ ಅಧಿಕಾರಿ. 'ದುರ್ಗಾಪರಮೇಶ್ವರಿ' ನನ್ನ ಪಾತ್ರದ ಹೆಸರು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥೆಯನ್ನು ನಿರ್ದೇಶಕರು ಹೆಣೆದಿದ್ದಾರೆ. ನಾನು ಈ ಚಿತ್ರ ಒಪ್ಪಿಕೊಳ್ಳಲು ಪ್ರಮುಖ ಕಾರಣ ಇದುವೇ' ಎಂದರು ಪ್ರಿಯಾ. ನಾಗೇಂದ್ರ ಅರಸ್, ಚಿಂಗಾರಿ ಮಹಾದೇವ್, ಮ್ಯಾಜಿಕ್ ರಮೇಶ್, ಮಧು ಕೆ.ಆರ್ ಪೇಟೆ, ಪವನ್ ಕುಮಾರ್, ಆರಾಧ್ಯ, ಕುಮಾರ್ ಶ್ರೀನಿವಾಸಮೂರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶಂಕರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪ್ರಿಯಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಗನ್ ಹಿಡಿದಿಡುವ ಪೋಸ್ಟರ್‌ನ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ. ಅದರಲ್ಲಿ ಹಿಂದಿಯಲ್ಲಿ 'ಬದ್ಲಾ ಪುರಾ' (ಸೇಡು ತೀರಿತು) ಎಂದು ಬರೆಯಲಾಗಿದೆ. ಇತ್ತೀಚೆಗೆ ನಡೆದ ಎನ್‌ಸಿಪಿ ಮುಖಂಡ ಬಾಬಾ ಸಿದ್ದೀಕಿ ಅವರ ಹತ್ಯೆಯೊಂದಿಗೆ ಪೋಸ್ಟರ್‌ಗಳಿಗೆ ಸಂಬಂಧ ಕಲ್ಪಿಸುವ ಮೂಲಕ ಅವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಈ ಪೋಸ್ಟರ್‌ಗೂ ಬಾಬಾ ಸಿದ್ದೀಕಿ ಹತ್ಯೆಗೂ ಯಾವುದೇ ಸಂಬಂಧ ಇಲ್ಲ.

ಪೋಸ್ಟರ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 'ಹಿಂದೂಸ್ಥಾನ್ ಟೈಮ್ಸ್'ನಲ್ಲಿ ಸೆಪ್ಟೆಂಬರ್ 26, 2024ರಂದು ಪ್ರಕಟವಾದ ಸುದ್ದಿಯ ಜತೆಗೆ ಇದೇ ಫೋಟೊ ಪ್ರಕಟವಾಗಿರುವುದು ಕಂಡುಬಂತು. 'ಬದ್ಲಾಪುರ ಲೈಂಗಿಕ ದೌರ್ಜನ್ಯ ಘಟನೆಯ ಆರೋಪಿ ಅಕ್ಷಯ್ ಶಿಂದೆ ಎನ್‌ಕೌಂಟರ್‌ನಲ್ಲಿ ಹತನಾಗಿದ್ದು, ಅಪರಿಚಿತರು ಮುಂಬೈನಲ್ಲಿ ದೇವೇಂದ್ರ ಫಡಣವೀಸ್ ಅವರ ಪೋಸ್ಟರ್‌ಗಳನ್ನು ಅಳವಡಿಸಿದ್ದಾರೆ. ಸೇಡು ತೀರಿತು ಎಂದು ಅದರಲ್ಲಿ ಬರೆಯಲಾಗಿದೆ' ಎಂದು ಫೋಟೊ ಜತೆಗೆ ವಿವರಣೆ ನೀಡಲಾಗಿತ್ತು. ಬಾಬಾ ಸಿದ್ದೀಕಿ ಹತ್ಯೆ ನಡೆದಿರುವುದು ಅಕ್ಟೋಬರ್ 12ರಂದು. ಫಡಣವೀಸ್ ಪೋಸ್ಟರ್‌ಗಳು ಬದ್ಲಾಪುರ ಎನ್‌ಕೌಂಟರ್‌ಗೆ ಸಂಬಂಧಿಸಿದ್ದು, ಬಾಬಾ ಸಿದ್ದೀಕಿ ಹತ್ಯೆ ನಡೆಯುವುದಕ್ಕೆ ಮುಂಚೆಯೆ ಅವನ್ನು ಅಂಟಿಸಲಾಗಿತ್ತು. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಹುಟ್ಟು ಸಾವುಗಳ ಬೆಸುಗೆ ಜೀವನ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

50

ನಮ್ಮೆಲ್ಲರ ಜೀವನದಲ್ಲಿ ನಮಗೆ ಅತ್ಯಂತ ಸಮೀಪವಾಗಿದ್ದು ಎಂದರೆ ಸಾವು. ಸಾವು ನಮ್ಮ ನೆರಳಿನಷ್ಟೇ ಸಮೀಪವಾಗಿರುತ್ತದೆ. ತಾಯಿಯ ಗರ್ಭದಿಂದ ಬಂದು ಭೂಗರ್ಭ ಸೇರುವವರೆಗೂ ಸಾವು ನಮ್ಮ ಜೊತೆಜೊತೆಯಾಗಿಯೇ ಇರುತ್ತದೆ. ಹುಟ್ಟಿನ ದಿನದಿಂದಲೇ ಜೀವನದ ಜೊತೆಗೆ ಸಾವೂ ಆರಂಭವಾಗಿದೆ. ಹುಟ್ಟು ಆಕಸ್ಮಿಕ ಘಟನೆಯಾಗಿರಬಹುದು, ಆದರೆ ಸಾವು ಕ್ಷಣಕ್ಷಣಕ್ಕೂ ನಮ್ಮ ಜೊತೆಯಲ್ಲೇ ಇರ್ತದೆ. ಹುಟ್ಟು ಸಾವು ಎರಡೂ ಬೇರ್ಪಡಿಸಲಾಗದಷ್ಟು ಬೆರೆತುಕೊಂಡಿವೆ. ಬಂಡಿಗೆ ಹೇಗೆ ಎರಡು ಚಕ್ರಗಳೋ ಹಾಗೆ, ಹುಟ್ಟು ಸಾವು ಎಂಬ ಎರಡು ಚಕ್ರಗಳಿಂದ ನಡೆಯುವ ಬಂಡಿಗೆ ಜೀವನ ಅನ್ನುತ್ತಾರೆ. ನಮಗೆ ಅರಿವಿರಬಹುದು ಅಥವಾ ಇಲ್ಲದೇ ಇರಬಹುದು. ಆದರೆ ಸಾವು ನಮ್ಮ ಜೊತೆಗೇ ಇರುತ್ತದೆ.

ಒಂದು ಮಗುವಿಗೆ ಒಂದು ವರ್ಷ ತುಂಬಿದಾಗ ಹ್ಯಾಪಿ ಬರ್ತ್ ಡೇ ಆಚರಿಸುತ್ತೇವೆ. ಕೇಕ್ ತಂದು ದೀಪ ಹಚ್ಚಿಟ್ಟು ಹ್ಯಾಪಿ ಬರ್ತ್ ಡೇ ಅಂತ ಹಾಡಿ ಸಂತೋಷಪಡುತ್ತೇವೆ. ಎಲ್ಲ ಸಂಬಂಧಿಕರು, ಬೀಗರು, ಸ್ನೇಹಿತರು ಎಲ್ಲರನ್ನೂ ಕರೆದು ಬೀಗುತ್ತೇವೆ. 'ನನ್ನ ಮಗ ಒಂದು ವರ್ಷ ದೊಡ್ಡವನಾದ' ಅಂತ ಹೆಮ್ಮೆ ಪಡ್ತೀವಿ. ಆದರೆ, ಒಂದು ವರ್ಷ ದೊಡ್ಡವ ಆದ ಅನ್ನೋದು ವ್ಯಾವಹಾರಿಕ ಸತ್ಯ ಅಷ್ಟೆ. ಒಂದು ವರ್ಷ ಸಾವಿಗೆ ಹತ್ತಿರವಾದ ಅನ್ನೋದು ವಾಸ್ತವಿಕ ಸತ್ಯ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಸಾವನ್ನು ಬಿಟ್ಟು ಜೀವನ ಇಲ್ಲ, ಜೀವನ ಬಿಟ್ಟು ಸಾವಿಲ್ಲ. ಹುಟ್ಟು ಸಾವುಗಳ ಬೆಸುಗೆಯೇ ಜೀವನ.

'ಸಾವು ನನ್ನ ಪಾಕೇಟಿನಲ್ಲಿಯೇ ಇದೆ' ಎನ್ನುವುದು ಮನುಷ್ಯನಿಗೆ ಗೊತ್ತಿದೆ. ಆದರೂ ಭಯ ಕಾಡುತ್ತದೆ. ಭಯ ಯಾಕೆ? ಮಗು ಹುಟ್ಟಿತು ಎಂದರೆ ಬಾಯಲ್ಲಿ ಸಕ್ಕರೆ ಹಾಕ್ತೀವಿ. ಸತ್ತ ಅಂದರೆ ಭಯ ಪಡ್ತೀವಿ ಯಾಕೆ? ಮನುಷ್ಯ ಸಾವಿಗೆ ಯಾಕೆ ಭಯ ಪಡ್ತಾನೆ ಎಂದರೆ ತನ್ನ ದೇಹವೂ ಸೇರಿದಂತೆ ಗಳಿಸಿದ ಆಸ್ತಿ, ಅಧಿಕಾರ, ಕೀರ್ತಿ ಎಲ್ಲವೂ ನಂದು ಎಂದು ಭ್ರಮಿಸಿದ್ದಾನೆ. ಅವೆಲ್ಲ ಕೈಬಿಟ್ಟು ಹೋಗತ್ತೈತಿ ಅಂತ ಅವನಿಗೆ ಸಾವೆಂದರೆ ಭಯ ಶುರುವಾಗತ್ತೈತಿ. ನನ್ನದು ಅಂತ ಯಾವುದೆಲ್ಲಾ ಐತಿ ಅದನ್ನೆಲ್ಲಾ ಸಾವು ಕಸಿದುಕೊಂಡು ಹೋಗತ್ತೈತಿ. ಅದಕ್ಕೇ ಭಯ. ಬಹಳ ಶ್ರೀಮಂತರಿದ್ದವರು ತಾವು ಗಳಿಸಿದ್ದನ್ನು ಸಮಾಧಿ ಒಳಗ ಇಟ್ಟುಕೊಂಡಿದ್ದಾರೇನು? ಏನೂ ಇಲ್ಲ. ಅಲ್ಲಿ ಹೋದಾಗ ಅದೇ ಒಂದು ಎರೆಮಣ್ಣಿನ ಕರಿಹೆಂಟಿ, ಅದರ ಮ್ಯಾಲೆ ಕಾರಿಕಂಟಿ ಕುಣ್ಯಾಗ ನೀನು ಒಬ್ಬಂಟಿ. ಶವದ ಮೇಲೆ ಹೊದಿಸಿದ ಬಟ್ಟೆಗೆ ಜೇಬೂ ಇಲ್ಲ. ಒಳಗೆ ಏನಾದರೂ ಇಟ್ಟುಕೊಳ್ಳೋಣ ಅಂದರೆ, ತಿಜೋರಿ ಇಡೋಣ ಅಂದರೆ ಅಲ್ಲಿ ಜಾಗವೂ ಇಲ್ಲ. ನಿನ್ನ ಕಾಲು ಮಡಚಿ, ಗೋಣು ಮಡಚಿ ಒಳಗೆ ಇಟ್ಟಾರ. ಯಾವುದು ನನ್ನದು ಎಂದು ನೀನು ನಂಬಿದ್ದೆ ಅದೆಲ್ಲವನ್ನೂ ಸಾವು ಅಳಿಸಿ ಹಾಕಿಬಿಟ್ಟಿದೆ.

ಸಮುದ್ರದ ದಂಡೆಯ ಮೇಲೆ ಮಕ್ಕಳು ಮರಳಿನ ಮನೆ ಕಟ್ಟಿ ಸಂತೋಷ ಪಡುತ್ತಾರೆ. ಆಗಲೇ ದೊಡ್ಡ ತೆರೆ ಬಂದು ಅದನ್ನು ಅಳಿಸಿ ಹೋಗುತ್ತದೆ. ಹಾಗೆಯೇ ನಂದು ಹೊಲ, ಮನೆ, ಅಧಿಕಾರ, ಕೀರ್ತಿ ಎಂದು ಸಂತೋಷಪಡೋದರೊಳಗೆ ಸಾವು ಎಂಬ ತೆರೆ ಬಂದು ಎಲ್ಲವನ್ನೂ ಅಳಿಸಿ ಹಾಕಿಬಿಡುತ್ತದೆ. ಇದು ಜೀವನದ ಸತ್ಯ. ಇದನ್ನು ಅರ್ಥ ಮಾಡಿಕೊಳ್ಳಬೇಕು ಮನುಷ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಅಕ್ಟೋಬರ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಕೃಷ್ಣ ಸಪ್ತಮಿ ಗಂ. 25-19 ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ಶಿವ ಗಂ. 06-59 ನಂತರ ಸಿದ್ಧಿ ಗಂ. 29-52 ಕರಣ: ವಿಷ್ಟಿ ಗಂ. 13-18 ನಂತರ ಬವ ಗಂ. 25-19, ತುಲಾ ಮಾಸದ 06 ನೇ ದಿನ, ಮಳೆನಕ್ಷತ್ರ: ಚಿತ್ರ 4.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-26 ಸೂರ್ಯಾಸ್ತ: 06-03
ಮುಸ್ಲಿಂ ದಿನಾಂಕ: 19 ರಬಿಯುಸ್ಸಾನಿ, ಅದೃಷ್ಟ ಸಂಖ್ಯೆ: 5, 6

ಮೇಷ: ಎಲ್ಲರೊಂದಿಗೆ ಹೊಂದಿಕೊಳ್ಳುವ ಗುಣ ಬೆಳೆಸಿಕೊಳ್ಳಿ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗದಿರಬಹುದು. ಕೆಲಸಗಳು ವಿಳಂಬವಾಗಿಯಾದರೂ ದಿನದ ಅಂತ್ಯದಲ್ಲಿ ಪೂರ್ಣಗೊಳ್ಳಲಿವೆ.

ವೃಷಭ: ಸರ್ವರಂಗದಲ್ಲೂ ಜಯಶಾಲಿಯಾಗುವ ಯೋಗವಿದೆ. ರಾಜಕೀಯ ವರ್ಗದವರಿಗೆ ಹೆಚ್ಚಿನ ಮನ್ನಣೆ, ಸ್ಥಾನಮಾನಗಳು ಸಿಗಲಿವೆ. ಸಜ್ಜನರ ಒಡನಾಟದಿಂದ ಶ್ರೇಯೋಭಿವೃದ್ಧಿ ಉಂಟಾಗಲಿದೆ.

ಮಿಥುನ: ದೈವಾನುಗ್ರಹದಿಂದ ಸಂತಾನ ಭಾಗ್ಯ ಪ್ರಾಪ್ತವಾಗಲಿದ್ದು, ಮನೆಯಲ್ಲಿ ಸಂಭ್ರಮ ಸಡಗರದ ವಾತಾವರಣ ಸೃಷ್ಟಿಯಾಗಲಿದೆ. ವೃತ್ತಿಯಲ್ಲಿ ಅನ್ಯರ ಸಹಾಯ ಅಪೇಕ್ಷಿಸುವುದಕ್ಕಿಂತ ಸ್ವಸಾಮರ್ಥ್ಯವನ್ನು ಪ್ರದರ್ಶಿಸಿ.

ಕರ್ಕಾಟಕ: ಹಿಂದಿನ ಜೀವನದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕಲಿದೆ. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು.

ಸಿಂಹ: ಮುಂಜಾನೆ ಏಳುವಾಗಲೇ ನೀವು ಉತ್ಸಾಹಿಗಳಾಗಿರುತ್ತೀರಿ. ರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ವೃತ್ತಿಪರವಾಗಿ ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಉತ್ತಮ.

ಕನ್ಯಾ: ಸಾಗರೋತ್ಪನ್ನ ವಸ್ತುಗಳ ಮಾರಾಟಗಾರರು ವೃತ್ತಿಯಲ್ಲಿ ಜಾಗರೂಕರಾಗಿರಿ. ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಎದುರಾಗಲಿದೆ. ತಾಳ್ಮೆ ಅತ್ಯಗತ್ಯ.

ತುಲಾ: ವ್ಯಾಪಾರದ ಅಭಿವೃದ್ಧಿಗೆ ವಿವಿಧ ಉಪಾಯಗಳನ್ನು ಬಳಸುವುದು ಒಳ್ಳೆಯದು. ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವಗಳು ಗೆಲುವಿಗೆ ಕಾರಣವಾಗಲಿವೆ.

ವೃಶ್ಚಿಕ: ಆರಕ್ಷಕರಿಗೆ ಅಥವಾ ಭದ್ರತಾ ಪಡೆಯವರಿಗೆ ಕಾರ್ಯದೊತ್ತಡ ಹೆಚ್ಚಲಿದೆ. ವೃತ್ತಿಯಲ್ಲಿ ನಿಮ್ಮಿಂದ ತಪ್ಪುಗಳಾಗುವ ಸಂಭವವಿದ್ದು, ಹೆಚ್ಚಿನ ಜಾಗ್ರತೆ ವಹಿಸಿ. ಧಾರ್ಮಿಕ ಕಾರ್ಯಗಳಿಗೆ ಧನವ್ಯಯವಾಗಲಿದೆ.

ಧನು: ಮೇಲಧಿಕಾರಿಗಳ ಒತ್ತಡವನ್ನು ಮೆಟ್ಟಿನಿಲ್ಲುವಲ್ಲಿ ಯಶಸ್ವಿಯಾಗುವಿರಿ. ಶ್ರೀ ವಿಷ್ಣುಸಹಸ್ರನಾಮವನ್ನು ಪಠಿಸುವುದರಿಂದ ಹೆಚ್ಚಿನ ಶ್ರೇಯೋಭಿವೃದ್ಧಿ ಪಡೆಯಲು ಕಾರಣವಾಗುವುದು.

ಮಕರ: ಜೀವನದ ಕುರಿತಾದ ನಿರುತ್ಸಾಹದಿಂದ ಹೊರಬಂದು ಹೆಚ್ಚಿನ ಅವಕಾಶಗಳನ್ನು ನಿಮ್ಮದಾಗಿಸಿಕೊಳ್ಳಿರಿ. ಮನಸ್ಸಿಗೆ ಮುದ ತರುವ ಸಂಗತಿಗಳು ಜರುಗಲಿವೆ. ಧಾರ್ಮಿಕ ಕೆಲಸ ಕಾರ್ಯಗಳ ಬಗ್ಗೆ ಆಸಕ್ತಿ ಹೆಚ್ಚಲಿದೆ.

ಕುಂಭ: ಹಿರಿಯರಾದವರ ಸಲಹೆಗಳನ್ನು ಪಡೆದುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಕೌಟುಂಬಿಕವಾಗಿ ಎಲ್ಲರೊಂದಿಗೂ ಪೂಜಾ ಸಮಾರಂಭದಲ್ಲಿ ಭಾಗಿಯಾಗುವಿರಿ.

ಮೀನ: ಲೋಹದ ವಸ್ತು ಮಾರಾಟಗಾರರಿಗೆ ಹೆಚ್ಚಿನ ಲಾಭವಾಗಲಿದೆ. ನಿರಂತರ ಧನ ಸಂಪಾದನೆಯಿಂದ ಆತ್ಮಸ್ಥೈರ್ಯ ವೃದ್ಧಿಯಾಗುವುದು. ವಿದ್ಯಾರ್ಥಿಗಳಿಗೆ ಅನುಕೂಲ. ರಾಜಕೀಯದಲ್ಲಿ ಉತ್ತಮ ಭವಿಷ್ಯವಿದೆ.

ಪದಬಂಧ 5840

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (3)
3.ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
5.ರತ್ನಗಳ ಆಶ್ರಯ ಸ್ಥಾನ ಅಥವಾ ಸಮುದ್ರ (4)
7.ಜಾಗದಲ್ಲಿ ನಿಂತು ನೋಡಿದ ನವಿಲಿನ ಕುಣಿತ (3)
10.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
13.ಈತ ತೃಪ್ತಿ ಹೊಂದಿದವನು (3)
16.ತಾನೇ ಸಂಪಾದಿಸಿದ್ದು (4)
18.ಗರ ಬಡಿದಂತಿರುವವನು ಹಳ್ಳಿಯವ (3)
19.ಗಟಾರದ ಹತ್ತಿರವಿರುವ ಗಂಡು ಕುರಿ (3)

ಮೇಲಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಒದಗುವ ಸಹಾಯಕ (4)
2.ಬಡಿವಾರ ತೋರಿಸಿದಾಗ ಆವರಿಸಿದ ಕ್ಷಾಮ (2)
3.ಕಠೋರವಾದ ಕೈ! (2)
4. ಕವಿ ಕುಮಾರವ್ಯಾಸನು ಹುಟ್ಟಿದ ಜಿಲ್ಲೆ (3)
6.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
7.ವೇದ ಕೊನೆಗಿದ್ದಾಗ ಕಾಣಿಸಿದ ಅಗ್ನಿ (4)
8.ಉಜ್ಜುವಾಗ ಹಿಡಿದಿರುವ ಹಗ್ಗ (2)
9.ಹುಟ್ಟಿದ ಕುಲದಿಂದ ದೂರವಾದವನು (4)
11.ತಿರುವು ಮುರುವಾದ ಸೇತುವೆ (2)
12.ಸಿಲಿಕಾನ್ ಸಿಟಿ ಎಂದು ಹೆಸರಾಗಿರುವ ಊರು (4)
14.ಆತುರದಿಂದ ಓಡುತ್ತಿರುವ ಕುದುರೆ (3)
15. ಹೆಸರು ಮೊದಲಾದುದನ್ನು ಬರೆದಿರುವ ಪಟ್ಟಿ ಉಲ್ಟಾ ಆಗಿದೆ (2)
16.ವರ್ಣ ಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚ್ಚರಿಸಬಹುದಾದ ಅಕ್ಷರ (2)
17.ತಟಕ್ಕನೆ ತಲುಪಿದ ದಡ! (2)



5839ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅಪರಿಚಿತ 6.ಪರಂಪರೆ
7.ಪರಸತಿ 9.ಮಣೆ
10.ಪ್ರಭೆ 11.ಮತಿಹೀನ
14.ಪಾರಂಗತ 15.ನವದಂಪತಿ

ಮೇಲಿಂದ ಕೆಳಕ್ಕೆ:
1.ಶಾಪಗ್ರಸ್ತ 2.ಅಪರೂಪ
4.ಪದಚ್ಯುತಿ 5.ತವರೂಣ
8.ಸದ್ಗತಿ 10.ಪ್ರಭಂಜನ
11.ಮನಸ್ತಾಪ 12.ನವರಂಗ
13.ಪಾರಾಂತರ

ಸುಡೊಕು 6225

		5		8		4		
	8	4	7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9	8	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6224 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಕಾಯ್ದೆಯು ಸರ್ಕಾರಕ್ಕೆ ಮದರಸಾ ನಿಯಂತ್ರಿಸುವ ಅಧಿಕಾರ ನೀಡಲಿದೆ –ಸುಪ್ರೀಂ ಕೋರ್ಟ್

‘ಧರ್ಮಬೋಧನೆ ಮುಸ್ಲಿಮರಿಗೆ ಸೀಮಿತವಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮದರಸಾ ಕಾಯ್ದೆ –ತೀರ್ಪು ಕಾಯ್ದಿರಿಸಿದ ಪೀಠ
- ಮದರಸಾದ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು

ನವದೆಹಲಿ: ‘ಧರ್ಮಬೋಧನೆ ಎಂದಿಗೂ ದೇಶಕ್ಕೆ ಹೊರತಾದುದಲ್ಲ ಮತ್ತು ಇದು, ಮುಸ್ಲಿಮರಿಗೆ ಮಾತ್ರ ಸೀಮಿತವಲ್ಲ. ಹಿಂದೂ, ಸಿಖ್, ಕ್ರೈಸ್ತ ಎಲ್ಲ ಧರ್ಮೀಯರಲ್ಲೂ ಇದೆ. ದೇಶದಲ್ಲಿ ಸಂಸ್ಕೃತಿ, ಧರ್ಮ ಹಾಗೂ ನಾಗರಿಕತೆಗಳು ಸಮ್ಮಿಳಿತವಾಗಬೇಕು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಕೇರೀಕರಣಗೊಳ್ಳುವ (ಘೆಟ್ಟೊ- ಅಲ್ಪಸಂಖ್ಯಾತರ ಪ್ರದೇಶ) ಪ್ರಕ್ರಿಯೆಗೆ ಉತ್ತರವೆಂದರೆ ಆ ಜನರನ್ನು ಮುಖ್ಯವಾಹಿನಿಗೆ ಬರುವಂತೆ ನೋಡಿಕೊಳ್ಳುವುದು ಮತ್ತು ಅವರು ಒಟ್ಟಿಗೆ ಬರಲು ಅವಕಾಶ ಮಾಡಿಕೊಡುವುದು ಎಂಬುದೇ ಆಗಿದೆ. ಆದರೆ, ಈಗ ಏನಾಗುತ್ತಿದೆ. ಜನರನ್ನು ಒಂದು ಚೌಕಟ್ಟಿಗೇ ಸೀಮಿತಗೊಳಿಸುತ್ತಿದ್ದೇವೆ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಉತ್ತರ ಪ್ರದೇಶದ ಮದರಸಾ ಕಾಯ್ದೆ–2004 ಅಸಾಂವಿಧಾನಿಕ ಎಂದು ಹೇಳಿದ್ದ ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ, ಅಂಜುಂ ಖಾದ್ರಿ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಕಾಯ್ದೆ ಅಸಾಂವಿಧಾನಿಕ, ಜಾತ್ಯತೀತ ತತ್ವಗಳಿಗೆ ವಿರುದ್ಧ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿತ್ತು. ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಪೀಠ, ತೀರ್ಪನ್ನು ಕಾಯ್ದಿರಿಸಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಪೀಠದ ಇತರ ಸದಸ್ಯರಾಗಿದ್ದಾರೆ.

ಉತ್ತರ ಪ್ರದೇಶ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ‘ಹೈಕೋರ್ಟ್ ಇಡೀ ಕಾಯ್ದೆ ರದ್ದುಪಡಿಸುವ ಬದಲಿಗೆ, ಮೂಲಭೂತ ಹಕ್ಕುಗಳ ಉಲ್ಲಂಘನೆ ಎನ್ನಲಾದ ಅಂಶವನ್ನು ರದ್ದುಪಡಿಸಬಹುದಿತ್ತು’ ಎಂದರು.

ವಿಚಾರಣೆಯ ಒಂದು ಹಂತದಲ್ಲಿ, ‘ಮದರಸಾದ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಈ ಕಾಯ್ದೆಯ ಪರಿಧಿಯಿಂದ ಮದರಸಾವನ್ನು ಹೊರಗಿಡುವುದು ಎಂದರೆ, ‘ಸ್ನಾನ ಮಾಡಿಸುತ್ತಿದ್ದ ಶಿಶುವನ್ನು ಎಸೆದಂತೆ’ ಎಂದು ಪೀಠವು ಅಭಿಪ್ರಾಯಪಟ್ಟಿತು.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು, ‘ಹೈಕೋರ್ಟ್ ತೀರ್ಪಿನಿಂದಾಗಿ ಹಲವು ಮಕ್ಕಳು ಶಿಕ್ಷಣ ವಂಚಿತರಾಗುತ್ತಾರೆ. ನೂರಾರು ಮಕ್ಕಳನ್ನು ಈಗ ಬಲವಂತವಾಗಿ ಹೊರಗೆ ಕಳುಹಿಸುವುದು ಜಾತ್ಯತೀತತೆ ಅಲ್ಲ’ ಎಂದರು. ಇದಕ್ಕೆ ಪೀಠವು ‘ಜಾತ್ಯತೀತತೆ ಎಂದರೆ ಬದುಕುವುದು, ಬದುಕಲು ಬಿಡುವುದು’ ಎಂದರು.

ಇಡೀ ಕಾಯ್ದೆಯನ್ನು ರದ್ದುಪಡಿಸುವುದು ಎಂದರೆ ಅದರರ್ಥ, ಮದರಸಾಗಳು ನಿಯಂತ್ರಣ ಇಲ್ಲದೆಯೇ ಮುಂದುವರಿಯುತ್ತವೆ ಎಂಬುದೇ ಆಗಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಮದರಸಾಗಳು ಮುಖ್ಯವಾಹಿನಿಗೆ ಬರಲು ನೆರವಾಗುತ್ತಿಲ್ಲ ಎಂಬ ವಾದಕ್ಕೆ ಪ್ರತಿಯಾಗಿ, ಧಾರ್ಮಿಕ ಸಂಸ್ಥೆಗಳು ಮುಸ್ಲಿಮರಿಗೆ ಮಾತ್ರ ಸೀಮಿತವಲ್ಲ. ಬೌದ್ಧ ಬಿಕ್ಕುಗಳಿಗೆ ತರಬೇತಿ ನೀಡುವ ಸಂಸ್ಥೆಗಳಿವೆ. ಇಸ್ಲಾಂ ಅನ್ನು ಕೇಂದ್ರೀಕರಿಸಿ ಮಾಡುತ್ತಿರುವ ವಾದವು, ಭಾರತದಲ್ಲಿ ಎಲ್ಲ ಧರ್ಮಗಳಿಗೂ ಅನ್ವಯವಾಗುತ್ತದೆ. ಅಂದರೆ ವೇದ ಪಾಠಶಾಲಾಗಳಿಂದ, ಬೌದ್ಧ ಬಿಕ್ಕುಗಳು, ಜೈನ ಅರ್ಚಕರ ತರಬೇತಿ ಸಂಸ್ಥೆಗಳಿಗೂ ಅನ್ವಯವಾಗುತ್ತವೆ ಎಂದು ಪೀಠವು ಹೇಳಿತು.

2 ವರ್ಷ ‘ಸಭ್ಯ’ ನಡವಳಿಕೆ ಷರತ್ತು ರದ್ದು ಮಾಡಿದ ಕೋರ್ಟ್



ನವದೆಹಲಿ: ಜೀವಾವಧಿ ಶಿಕ್ಷೆಯನ್ನು ಮಾಫಿ ಮಾಡುವುದಕ್ಕೆ ಅಪರಾಧಿಯು ಕಡ್ಡಾಯವಾಗಿ ಎರಡು ವರ್ಷ ‘ಸಭ್ಯವಾಗಿ’ ನಡೆದುಕೊಂಡಿರಬೇಕು ಎಂಬ ಷರತ್ತನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

‘ಈ ಷರತ್ತು ನಿರಂಕುಶ, ಗೊಂದಲಕಾರಿ ಹಾಗೂ ವ್ಯಕ್ತಿನಿಷ್ಠವಾಗಿದೆ’ ಎಂದಿರುವ ಸುಪ್ರೀಂ ಕೋರ್ಟ್, ಇದು ಸಂವಿಧಾನದ 14ನೇ ವಿಧಿಗೆ ವಿರುದ್ಧವೂ ಆಗಲಿದೆ’ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಆಗಸ್ಟಿನ್ ಜಾರ್ಜ್ ಮಹೀಹ್ ಅವರು ಇದ್ದ ನ್ಯಾಯಪೀಠವು, ‘ಸಿಆರ್‌ಪಿಸಿ ಅಥವಾ ಅದಕ್ಕೆ ಸಮಾನವಾದ ಇತರ ಕಾಯ್ದೆಯಲ್ಲಿ ಸಭ್ಯ ಅಥವಾ ಅಸಭ್ಯ ಎಂಬ ಬಗ್ಗೆ ವ್ಯಾಖ್ಯಾನವೇ ಇಲ್ಲ’ ಎಂದು ಹೇಳಿದೆ. ‘ಅಪರಾಧಿಯೊಬ್ಬನಿಗೆ ಕ್ಷಮಾದಾನ ನೀಡುವ ಇಲ್ಲವೇ ನೀಡದಿರುವ ನಿರ್ಧಾರವು ತರ್ಕಬದ್ಧವಾಗಿರಬೇಕು ಹಾಗೂ ಸಂಬಂಧಪಟ್ಟವರಿಗೆ ನ್ಯಾಯಸಮ್ಮತವಾಗಿರಬೇಕು’ ಎಂದು ಸೋಮವಾರ ನೀಡಿರುವ ತೀರ್ಪಿನಲ್ಲಿ ನ್ಯಾಯಪೀಠ ಹೇಳಿದೆ.

‘ಸಿಆರ್‌ಪಿಸಿ ಸೆಕ್ಷನ್ 432ರ ಸಬ್‌ಸೆಕ್ಷನ್(1) ಅಡಿ ದತ್ತವಾದ ಅಧಿಕಾರ ಬಳಸಿ ಇಂತಹ ಷರತ್ತನ್ನು ವಿಧಿಸಲು ನೀಡುವ ಅವಕಾಶವು, ಅಪರಾಧಿಗೆ ನೀಡಿದ ಕ್ಷಮಾದಾನವನ್ನು ತಮಗೆ ತೋಚಿದಂತೆ ರದ್ದು ಮಾಡಲು ಅಧಿಕಾರಿಗಳ ಕೈಗೆ ನೀಡುವ ಅಸ್ತ್ರವಾಗಲಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಕ್ಷಮಾದಾನ ತನ್ನ ಹಕ್ಕು ಎಂಬಂತೆ ಅಪರಾಧಿ ಕೋರುವಂತಿಲ್ಲ. ಆದರೆ, ಕಾನೂನು ಪ್ರಕಾರ ಹಾಗೂ ಸರ್ಕಾರದ ನೀತಿಯ ಅನ್ವಯ ತನಗೆ ಕ್ಷಮಾದಾನ ನೀಡಲು ಪರಿಗಣಿಸಿ ಎಂಬುದಾಗಿ ಅರ್ಜಿ ಸಲ್ಲಿಸಲು ಆತನಿಗೆ ಹಕ್ಕು ಇದೆ’ ಎಂದು ನ್ಯಾಯಪೀಠ ಹೇಳಿದೆ.

ಮಫತ್‌ಭಾಯ್ ಮೋತಿಭಾಯ್ ಸಾಗರ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿದೆ.ಅಪರಾಧಿಯ ವಿರುದ್ಧ ಗಂಭೀರ ಪ್ರಕರಣ ದಾಖಲಾಗಿತ್ತು ಎಂಬುದು ಆತನಿಗೆ ಕ್ಷಮಾದಾನ ನೀಡಿ ಹೊರಡಿಸಿರುವ ಆದೇಶವನ್ನು ರದ್ದು ಮಾಡುವುದಕ್ಕೆ ಆಧಾರವಾಗದು ಎಂದೂ ಹೇಳಿದೆ.

ಬುಲ್ಡೋಜರ್ ಕ್ರಮ ಇಲ್ಲ: ಸರ್ಕಾರ ಭರವಸೆ

ಬಹರಾಇಚ್ ಜಿಲ್ಲೆಯಲ್ಲಿ ಹಿಂಸಾಚಾರದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ವಿರುದ್ಧ ‘ಬುಲ್ಡೋಜರ್ ಕ್ರಮ’ ಕೈಗೊಳ್ಳುವುದಿಲ್ಲ ಎಂದು ಉತ್ತರ ಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಭರವಸೆ ನೀಡಿದೆ.

ಪ್ರಕರಣದ ವಿಚಾರಣೆಯು ಬುಧವಾರ ಮುಂದುವರಿಯಲಿದ್ದು, ಅಲ್ಲಿಯವರೆಗೆ ರಾಜ್ಯ ಸರ್ಕಾರವು ಯಾವುದೇ ಕ್ರಮ ಜರುಗಿಸಬಾರದು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ಪೀಠವು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರಿಗೆ ಸೂಚಿಸಿತು. ನಟರಾಜ್ ಅವರು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದರು.

ಹಿಂಸಾಚಾರದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ವ್ಯಕ್ತಿಗಳ ವಿರುದ್ಧ, ಅವರಿಗೆ ಸೇರಿದ ಕಟ್ಟಡಗಳ ನಿರ್ಮಾಣ ಅಕ್ರಮ ಎಂದು ಕ್ರಮ ಜರುಗಿಸಲು ಉತ್ತರ ಪ್ರದೇಶ ಸರ್ಕಾರವು ಮುಂದಾಗಿದೆ ಎಂದು ಹಿರಿಯ ವಕೀಲ ಸಿ.ಯು. ಸಿಂಗ್ ಮತ್ತು ಇತರರು ಮಾಹಿತಿ ನೀಡಿದರು.

‘ಈ ನ್ಯಾಯಾಲಯ ನೀಡಿರುವ ಸೂಚನೆಗಳ ಬಗ್ಗೆ ನಿಮಗೆ ಗೊತ್ತಿದೆ. ರಾಜ್ಯ ಸರ್ಕಾರವು ಸೂಚನೆಗಳನ್ನು ಉಲ್ಲಂಘಿಸುವುದರಿಂದ ಆಗುವ ಅಪಾಯ ಮೈಮೇಲೆ ಎಳೆದುಕೊಳ್ಳಲು ಬಯಸಿದ್ದರೆ, ಅದು ಅವರ ಆಯ್ಕೆಯಾಗಿರುತ್ತದೆ’ ಎಂದು ಪೀಠ ಹೇಳಿತು.

ಬಹರಾಇಚ್ ಜಿಲ್ಲೆಯ ಗ್ರಾಮವೊಂದ ರಲ್ಲಿ ನಡೆದ ಕೋಮು ಹಿಂಸಾಚಾರದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಮೂವರಿಗೆ, ಕಟ್ಟಡ ಧ್ವಂಸಗೊಳಿಸುವ ನೋಟಿಸ್ ನೀಡಲಾಗಿದೆ. ಉತ್ತರ ಪ್ರದೇಶದ ಲೋಕೋಪಯೋಗಿ ಇಲಾಖೆಯು ಈ ನೋಟಿಸ್ ನೀಡಿದೆ.

‘ಮದರಸಾ ಕುರಿತ ಕಾಯ್ದೆಗೆ ಬದ್ಧ’

‘ಮದರಸಾ ನಿರ್ವಹಣೆ ಕುರಿತು ರೂಪಿಸಿರುವ ಕಾಯ್ದೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ. ಇಡೀ ಕಾಯ್ದೆಯೇ ಅಸಾಂವಿಧಾನಿಕ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿಲ್ಲ’ ಎಂದು ಉತ್ತರ ಪ್ರದೇಶ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್ ಎದುರು ಪ್ರತಿಪಾದಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಮೂವರು ಸದಸ್ಯ ನ್ಯಾಯಪೀಠವು ಈ ಪ್ರಕರಣದ ವಿಚಾರಣೆಯ ವೇಳೆ, ಉತ್ತರ ಪ್ರದೇಶ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರಿಗೆ, ‘ರಾಜ್ಯದ ಕಾಯ್ದೆ ಸಿಂಧುತ್ವದ ಪರವಾಗಿ ಇದ್ದೀರಾ’ ಎಂದು ಪ್ರಶ್ನಿಸಿತು.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿ ವಿಚಾರಣೆಯ ಆರಂಭದಲ್ಲೇ ಸಿಜೆಐ ಈ ಪ್ರಶ್ನೆ ಎತ್ತಿದ್ದರು. ರಾಜ್ಯ ಸರ್ಕಾರ ‘ಉತ್ತರ ಪ್ರದೇಶ ಮದರಸಾ ಮಂಡಳಿ ಕಾಯ್ದೆ 2004’ ರೂಪಿಸಿದೆ. ಇದು, ಮದರಸಾಗಳ ನಿರ್ವಹಣೆ, ಅಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಸಂವಿಧಾನಕ್ಕೆ ಬದ್ಧರಾಗಿರುವುದರ ಖಾತರಿಪಡಿಸುತ್ತದೆ. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರು ಪೀಠದ ಇತರ ಸದಸ್ಯರು ಈ ಕಾಯ್ದೆಯು ‘ಅಸಾಂವಿಧಾನಿಕ’ ಎಂದು ಅಲಹಾಬಾದ್ ಹೈಕೋರ್ಟ್ ಮಾರ್ಚ್ 22ರಂದು ಘೋಷಿಸಿತ್ತು.

ಇದು, ಜಾತ್ಯತೀತ ಸಿದ್ಧಾಂತಗಳ ಉಲ್ಲಂಘನೆಯಾಗಿದೆ ಎಂದೂ ಹೇಳಿತ್ತು. ಮದರಸಾಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಸಾಮಾನ್ಯ ಶಾಲೆಗಳಿಗೆ ದಾಖಲುಪಡಿಸಲು ಕ್ರಮವಹಿಸಬೇಕು ಎಂದೂ ಸೂಚಿಸಿತ್ತು.

ಸುದ್ದಿ 2 ನಿಮಿಷ

ಸಿದ್ದೀಕ್‌ಗೆ ಮಧ್ಯಂತರ ರಕ್ಷಣೆ ಮುಂದುವರಿಕೆಗೆ ಆದೇಶ

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಮಲಯಾಳ ಚಿತ್ರನಟ ಸಿದ್ದೀಕ್ ಅವರನ್ನು ಬಂಧಿಸದಂತೆ ಸುಪ್ರೀಂ ಕೋರ್ಟ್ ಮಧ್ಯಂತರ ರಕ್ಷಣೆಯನ್ನು ಮಂಗಳವಾರ ಮತ್ತೆ ಎರಡು ವಾರ ಮುಂದುವರಿಸಿದೆ.

ಅರ್ಜಿದಾರರು ಸಾಕ್ಷ್ಯಗಳನ್ನು ನಾಶಪಡಿಸಬಹುದು ಎಂಬ ಕೇರಳ ಸರ್ಕಾರದ ಆಕ್ಷೇಪವನ್ನು ತಳ್ಳಿಹಾಕಿದ ನ್ಯಾಯಮೂರ್ತಿಗಳಾದ ಬೆಲಾ ಎಂ.ತ್ರಿವೇದಿ, ಸತೀಶ್ ಚಂದ್ರ ಶರ್ಮಾ ಅವರನ್ನು ಒಳಗೊಂಡ ನ್ಯಾಯಪೀಠವು, ಆ ರೀತಿ ಮಾಡುವುದಿದ್ದರೆ, ಈಗಾಗಲೇ ಮಾಡುತ್ತಿದ್ದರು ಎಂದು ತಿಳಿಸಿದೆ.

ಕೇರಳ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ರಂಜಿತ್ ಕುಮಾರ್, ‘ಆರೋಪಿಯು ತನಿಖೆಗೆ ಸಹಕರಿಸು ತ್ತಿಲ್ಲ, ಸಾಕ್ಷ್ಯ ನಾಶಪಡಿಸುತ್ತಿದ್ದಾರೆ’ ಎಂದು ನ್ಯಾಯಾಲಯದ ಗಮನಕ್ಕೆ ತಂದರು. ಈ ಪ್ರಕರಣವು 2016ರಲ್ಲಿಯೇ ನಡೆದಿದೆ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ಮಧ್ಯಂತರ ರಕ್ಷಣೆಯನ್ನು ಎರಡು ವಾರ ಮುಂದುವರಿಸಿತು

ಸಿದ್ದೀಕ್ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 376 (ಅತ್ಯಾಚಾರ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿ ಮೊಕದ್ದಮೆ ದಾಖಲಾಗಿದೆ.

ಆಮ್‌ಸ್ಟರ್‌ಡ್ಯಾಮ್‌ಗೆ ತೆರಳಲು ತೀಸ್ತಾಗೆ ‘ಸುಪ್ರೀಂ’ ಅನುಮತಿ

ನವದೆಹಲಿ (ಪಿಟಿಐ): ನವೆಂಬರ್ 14ರಿಂದ 24ರವರೆಗೆ ಆಮ್‌ಸ್ಟರ್ ಡ್ಯಾಮ್‌ನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಾಕ್ಷ್ಯಚಿತ್ರ ಉತ್ಸವದಲ್ಲಿ ಭಾಗಿಯಾಗಲು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

‘ನನ್ನ ಸಾಕ್ಷ್ಯಚಿತ್ರವು ಪ್ರಶಸ್ತಿಗೆ ಭಾಜನವಾಗಿದ್ದು ಕಾರ್ಯಕ್ರಮ ಆಯೋಜಕರಿಂದ ಆಹ್ವಾನ ಬಂದಿದೆ. ಹೀಗಾಗಿ ಆಮ್‌ಸ್ಟರ್ ಡ್ಯಾಮ್‌ಗೆ ತೆರಳಲು ಅನುಮತಿ ನೀಡಬೇಕು’ ಎಂದು ಸೆಟಲ್ವಾಡ್ ಅವರು ನ್ಯಾಯಾಲಯವನ್ನು ಕೋರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ನ್ಯಾಯಪೀಠವು, ಕಾರ್ಯಕ್ರಮಕ್ಕೆ ತೆರಳಲು ಅನುಮತಿ ನೀಡಿತು.

2002ರ ಗೋಧ್ರಾ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಅಮಾಯಕರನ್ನು ಬಂಧಿಸಲು ದಾಖಲೆಗಳನ್ನು ತಿರುಚಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2023ರಲ್ಲಿ ಸೆಟಲ್ವಾಡ್ ಅವರಿಗೆ ಜಾಮೀನು ನೀಡಿದೆ.

ಬಿಜೆಪಿಯ ಮೂವರು ಮಾಜಿ ಶಾಸಕರು ಜೆಎಂಎಂ ಸೇರ್ಪಡೆ

ಪ್ರಜಾ ಮತ
ಜನತಂತ್ರದ ಹಬ್ಬ

ರಾಂಚಿ (ಪಿಟಿಐ): ಮೂವರು ಮಾಜಿ ಶಾಸಕರು ಸೇರಿದಂತೆ ಬಿಜೆಪಿಯ ಹಲವು ನಾಯಕರು ಆಡಳಿತಾರೂಢ ಜಾರ್ಖಂಡ್ ಮುಕ್ತಿ ಮೋರ್ಚಾಗೆ (ಜೆಎಂಎಂ) ಸೇರ್ಪಡೆಯಾಗಿದ್ದಾರೆ.

ಲೂಯಿಸ್ ಮರಾಂಡಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಾಬುಲಾಲ್ ಮರಾಂಡಿ ಅವರಿಗೆ ಪತ್ರ ಬರೆದು, ‘ಬದ್ಧತೆಯಿರುವ ನನ್ನಂಥ ಕಾರ್ಯಕರ್ತರನ್ನು ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ’ ಎಂಬುದಾಗಿ ದೂರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸರಾಂಗಿ, ಲಕ್ಷ್ಮಣ್ ಟುಡು ಅವರೂ ಮರಾಂಡಿ ಅವರಿಗೆ ಪತ್ರ ಬರೆದು ಪಕ್ಷದ ನಾಯಕತ್ವದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿವೆ.

ಬಿಜೆಪಿ ತ್ಯಜಿಸಿ, ಎನ್‌ಸಿಪಿ ಸೇರಿದ ಮಾಜಿ ಶಾಸಕ(ಮುಂಬೈ ವರದಿ): ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವಾಗಲೇ ನವಿ ಮುಂಬೈ ಭಾಗದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಪಕ್ಷದ ಹಿರಿಯ ನಾಯಕ, ಮಾಜಿ ಶಾಸಕ ಸಂದೀಪ್ ನಾಯ್ಕ್ ಅವರು ಮಂಗಳವಾರ ಬಿಜೆಪಿ ತೊರೆದು, ಶರದ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸೇರ್ಪಡೆಯಾದರು.

ಸೀಟು ಹಂಚಿಕೆ ಕುರಿತು ಒಮ್ಮತ ತೇಜಸ್ವಿ ಯಾದವ್

ರಾಂಚಿ(ಪಿಟಿಐ): ಜಾರ್ಖಂಡ್ ವಿಧಾನಸಭೆ ಚುನಾವಣೆಗೆ ಸೀಟು ಹಂಚಿಕೆಗಳ ವಿಚಾರವಾಗಿ ‘ಇಂಡಿಯಾ’ ಮೈತ್ರಿಕೂಟದ ಅಂಗಪಕ್ಷಗಳಲ್ಲಿ ಒಮ್ಮತ ಮೂಡಿದೆ. ಹೇಮಂತ ಸೊರೇನ್ ಅವರೇ ಮತ್ತೆ ಮುಖ್ಯಮಂತ್ರಿ ಆಗುವರು ಎಂದು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಮಂಗಳವಾರ ಹೇಳಿದ್ದಾರೆ.

‘ತೇಜಸ್ವಿ ಯಾದವ್, ಮುಖ್ಯಮಂತ್ರಿ ಹೇಮಂತ ಸೊರೇನ್ ಅವರನ್ನು ಮೂರು ಬಾರಿ ಭೇಟಿ ಮಾಡಿದ್ದರೂ, ತಮ್ಮ ಪಕ್ಷಕ್ಕೆ ಸಾಕಷ್ಟು ಸೀಟುಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಹೇಳಿದ ಬೆನ್ನಲ್ಲೇ ತೇಜಸ್ವಿ ಯಾದವ್ ಅವರಿಂದ ಈ ಮಾತು ಹೊರಬಿದ್ದಿದೆ.

‘ಮೈತ್ರಿಕೂಟ ಒಗ್ಗಟ್ಟಾಗಿದೆ. ಸೀಟುಗಳ ಹಂಚಿಕೆ ಕುರಿತು ಒಮ್ಮತ ಮೂಡಿದ್ದು, ಶೀಘ್ರವೇ ಘೋಷಣೆ ಮಾಡಲಾಗುತ್ತದೆ’ ಎಂದು ಹೇಳಿದ್ದಾರೆ.

ವಯನಾಡ್‌ಗೆ ಸೋನಿಯಾ, ಪ್ರಿಯಾಂಕಾ

ಪ್ರಜಾವಾಣಿ ವಾರ್ತೆ

ಮೈಸೂರು: ವಯನಾಡ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ಪ್ರಿಯಾಂಕಾ ಗಾಂಧಿ, ತಮ್ಮ ತಾಯಿ ಸೋನಿಯಾ ಗಾಂಧಿ ಜೊತೆ ಮೈಸೂರು ವಿಮಾನ ನಿಲ್ದಾಣಕ್ಕೆ ಮಂಗಳವಾರ ಸಂಜೆ ಬಂದಿಳಿದರು. ಬಳಿಕ ರಸ್ತೆ ಮಾರ್ಗವಾಗಿ ವಯನಾಡ್‌ಗೆ ತೆರಳಿದರು.

ದೆಹಲಿಯಿಂದ ವಿಶೇಷ ವಿಮಾನದ ಮೂಲಕ ಸಂಜೆ 6.10ರ ಸುಮಾರಿಗೆ ವಿಮಾನ ನಿಲ್ದಾಣಕ್ಕೆ ಬಂದ ಅವರನ್ನು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೆವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವಾಗತಿಸಿದರು.

ಸಂಜೆ 6.30ರ ವೇಳೆಗೆ ಸೋನಿಯಾ, ಪ್ರಿಯಾಂಕಾ ಹಾಗೂ ಕುಟುಂಬದವರು ರಸ್ತೆ ಮಾರ್ಗದ ಮೂಲಕ ವಯನಾಡ್‌ನತ್ತ ಪ್ರಯಾಣಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸಂಜೆ ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವಾಗತಿಸಿದರು

ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಸಂಸದ ಸುನಿಲ್ ಬೋಸ್, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ರವಿಶಂಕರ್, ದರ್ಶನ್ ಧ್ರುವನಾರಾಯಣ್, ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪ ಅಮರನಾಥ್ ಈ ಸಂದರ್ಭ ಇದ್ದರು.

ವಯನಾಡ್‌ಗೆ ನನ್ನ ಸಹೋದರಿಗಿಂತಲೂ ಉತ್ತಮ ಪ್ರತಿನಿಧಿ ಊಹಿಸಲಾರೆ: ರಾಹುಲ್

ನವದೆಹಲಿ (ಪಿಟಿಐ): ‘ವಯನಾಡ್‌ನ ಜನರಿಗೆ ನನ್ನ ಹೃದಯದಲ್ಲಿ ಬಹಳ ವಿಶೇಷವಾದ ಸ್ಥಾನವಿದೆ. ಆ ಜನರನ್ನು ಪ್ರತಿನಿಧಿಸಲು ನನ್ನ ಸಹೋದರಿಗಿಂತ ಉತ್ತಮರನ್ನು ನಾನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರ ಅವರು ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಯುಡಿಎಫ್ ಅಭ್ಯರ್ಥಿಯಾಗಿ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ. ಮಂಗಳವಾರ ರಾಹುಲ್ ಹಾಗೂ ಪ್ರಿಯಾಂಕಾ ಕೇರಳಕ್ಕೆ ತೆರಳಲಿದ್ದಾರೆ. ಇದಕ್ಕೂ ಮುನ್ನ ರಾಹುಲ್ ಅವರು ಈ ಪೋಸ್ಟ್ ಹಂಚಿಕೊಂಡಿದ್ದಾರೆ.

‘ಈ ಕ್ಷೇತ್ರದ ಬೇಕು–ಬೇಡಗಳ ಕುರಿತು ಸಂಸತ್ತಿನಲ್ಲಿ ಆಕೆ ಶಕ್ತಿಯುತವಾಗಿ ತನ್ನ ಧ್ವನಿ ಇರಿಸಲಿದ್ದಾಳೆ ಎನ್ನುವ ಬಗ್ಗೆ ನನಗೆ ಬಲವಾದ ನಂಬಿಕೆ ಇದೆ’ ಎಂದು ಹೇಳಿದ ರಾಹುಲ್, ನಾಮಪತ್ರಕ್ಕೂ ಮುನ್ನ ಆಯೋಜನೆಗೊಂಡಿರುವ ರೋಡ್‌ಶೊನಲ್ಲಿ ಭಾಗವಹಿಸುವಂತೆ ಜನರಲ್ಲಿ ಕೋರಿದ್ದಾರೆ. ‘ನಾವೆಲ್ಲರೂ ಒಗ್ಗೂಡಿ ವಯನಾಡ್ ಇನ್ನು ಮುಂದೆಯೂ ಪ್ರೀತಿಯನ್ನು ಪ್ರತಿನಿಧಿಸುವಂತೆ ಮಾಡೋಣ’ ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ.

ಪ್ರಚಾರಕ್ಕೆ ಸಿದ್ಧತೆ

ಮಹಾರಾಷ್ಟ್ರದಲ್ಲಿ ಚುನಾವಣೆ ರಂಗೇರುತ್ತಿದ್ದು, ನಾಗ್ಪುರದಲ್ಲಿ ವ್ಯಾಪಾರಿಯೊಬ್ಬ ಮಂಗಳವಾರ ವಿವಿಧ ಪಕ್ಷಗಳ ಚಿಹ್ನೆಗಳಿದ್ದ ಟೀ–ಶರ್ಟ್ ಮತ್ತು ಬಾವುಟಗಳ ಮಾರಾಟದಲ್ಲಿ ತೊಡಗಿರುವುದು ಕಂಡುಬಂತು –ಪಿಟಿಐ ಚಿತ್ರ

ಪ್ರಸಾರ ಸೇವೆಗಳ ಮಸೂದೆ: ಆರ್‌ಟಿಐ ಅರ್ಜಿ
ಪರಿಷ್ಕೃತ ಕರಡು ನೀಡಲು ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ‘ಪ್ರಸಾರ ಸೇವೆಗಳ ನಿಯಂತ್ರಣ ಮಸೂದೆ’ಯ ಪರಿಷ್ಕೃತ ಕರಡು ಕುರಿತು ವಿವರಗಳನ್ನು ನೀಡುವುದಕ್ಕೆ ನಿರಾಕರಿಸಿದೆ.

‘ಮಸೂದೆಯ ನಿರ್ದಿಷ್ಟ ಭಾಗಗಳನ್ನು ಅಪ್‌ಡೇಟ್ ಮಾಡಲಾಗಿದೆ ಹಾಗೂ ಅವುಗಳನ್ನು ಕೆಲ ಭಾಗೀದಾರರೊಂದಿಗೆ ಹಂಚಿಕೊಳ್ಳಲಾಗಿದೆ’ ಎಂದು ಹೇಳಿರುವ ಕೇಂದ್ರ ಸರ್ಕಾರ, ಪರಿಷ್ಕೃತ ಕರಡುವನ್ನು ನೀಡಲು ನಿರಾಕರಿಸಿದೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಸಲ್ಲಿಸಲಾದ ಅರ್ಜಿಯೊಂದಕ್ಕೆ ನೀಡಿರುವ ಉತ್ತರದಲ್ಲಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಈ ಮಾಹಿತಿ ನೀಡಿದೆ.

ಮಸೂದೆಯ ಎರಡೂ ಆವೃತ್ತಿಗಳ ಸ್ಥಿತಿಗತಿ ಕುರಿತು ಕೂಡ ಸಚಿವಾಲಯ ಮಾಹಿತಿ ನೀಡಿಲ್ಲ. ಈ ಪೈಕಿ ಒಂದು ಆವೃತ್ತಿಯನ್ನು ಸಾರ್ವಜನಿಕ ವಲಯದಿಂದ ದೂರವೇ ಇಟ್ಟಿರುವುದು ಗಮನಾರ್ಹ.

ಪ್ರಚಲಿತ ವಿದ್ಯಮಾನಗಳ ಕುರಿತು ಆನ್‌ಲೈನ್ ವೇದಿಕೆಗಳಿಗೆ ವಿಷಯವಸ್ತು ಸಿದ್ಧಪಡಿಸುವವರನ್ನು ‘ಒಟಿಟಿ’ ಅಥವಾ ‘ಡಿಜಿಟಲ್ ಬ್ರಾಡ್‌ಕಾಸ್ಟರ್’ ಎಂಬುದಾಗಿ ಪರಿಗಣಿಸುವ ಪ್ರಸ್ತಾವವನ್ನು ಪರಿಷ್ಕೃತ ಕರಡು ಒಳಗೊಂಡಿತ್ತು. ಇದಕ್ಕೆ ವ್ಯಾಪಕ ಟೀಕೆ ವ್ಯಕ್ತವಾದ ಕಾರಣ, ಕಳೆದ ವರ್ಷ ಆಗಸ್ಟ್‌ನಲ್ಲಿ ಈ ವಿಚಾರ ಕುರಿತು ಸಾರ್ವಜನಿಕರಿಂದ ಸಲಹೆ–ಸೂಚನೆಗಳನ್ನು ಸಚಿವಾಲಯ ಆಹ್ವಾನಿಸಿತ್ತು.

ಅ. 15ರ ವರೆಗೆ ಸಲಹೆ–ಸೂಚನೆ ನೀಡಲು ಅವಕಾಶ ನೀಡಿದ್ದ ಸಚಿವಾಲಯ, ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆ ಬಳಿಕ ಹೊಸದಾಗಿ ಕರಡು ಪ್ರಕಟಿಸುವುದಾಗಿ ಹೇಳಿತ್ತು.

‘ಮಸೂದೆಯ ಒಂದು ಆವೃತ್ತಿಯನ್ನು ಆಯ್ದ ಭಾಗೀದಾರರೊಂದಿಗೆ ಹಂಚಿಕೊಳ್ಳಲಾಗಿದೆ. ಇದು, ಸಮಾಲೋಚನೆ ಪ್ರಕ್ರಿಯೆ ಕುರಿತಂತೆ ಗಂಭೀರ ಪ್ರಶ್ನೆಗಳನ್ನು ಕೇಳುವಂತೆ ಮಾಡಿದೆ. ಮಸೂದೆಯು ವ್ಯಾಪಕ ಪರಿಣಾಮ ಬೀರುವುದರಿಂದ, ಸಮಾಲೋಚನೆ ಮತ್ತು ಪರಿಷ್ಕರಣೆ ಪ್ರಕ್ರಿಯೆ ಕುರಿತು ಗೋಪ್ಯತೆ ಕಾಯ್ದುಕೊಳ್ಳುವುದು ಅಪಾಯಕಾರಿ’ ಎಂದು ಮಾಹಿತಿ ಹಕ್ಕು ಹೋರಾಟಗಾರ್ತಿ ಅಂಜಲಿ ಭಾರದ್ವಾಜ್ ಹೇಳಿದ್ದಾರೆ.

ಗಾಜಿನ ಬಾಟಲಿ ಒಡೆದು ಅಧ್ಯಕ್ಷರತ್ತ ಎಸೆದ ಟಿಎಂಸಿ ಸದಸ್ಯ ಅಮಾನತು

ನವದೆಹಲಿ (ಪಿಟಿಐ): ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ಮಂಗಳವಾರ ಇಲ್ಲಿ ನಡೆದ ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಜಂಟಿ ಸದನ ಸಮಿತಿ ಸಭೆಯಲ್ಲಿ ಗಾಜಿನ ಬಾಟಲಿ ಒಡೆದು ಅಧ್ಯಕ್ಷರ ಪೀಠದತ್ತ ಎಸೆದರು ಎಂದು ಮೂಲಗಳು ತಿಳಿಸಿವೆ.

ಸಮಿತಿ ಸಭೆಯು ಅನುಚಿತ ಬೆಳವಣಿಗೆಗಳಿಗೆ ಸಾಕ್ಷಿಯಾಗಿದ್ದು ಬ್ಯಾನರ್ಜಿ ಅವರನ್ನು ಒಂದು ದಿನದ ಮಟ್ಟಿಗೆ ಅಮಾನತು ಮಾಡಲಾಗಿದೆ.

ಒಂದು ಹಂತದಲ್ಲಿ ವಾಗ್ವಾದ ಅತಿರೇಕಕ್ಕೆ ಹೋದಾಗ ಬ್ಯಾನರ್ಜಿ ಅವರು ಗಾಜಿನ ಬಾಟಲಿ ಒಡೆದು ಅಧ್ಯಕ್ಷ ಬಿಜೆಪಿಯ ಜಗದಾಂಬಿಕಾ ಪಾಲ್‌ರತ್ತ ಎಸೆದರು. ಈ ಘಟನೆಗೆ ಮುನ್ನ ಮಾಜಿ ನ್ಯಾಯಮೂರ್ತಿ,ಬಿಜೆಪಿ ಸದಸ್ಯ ಅಭಿಜಿತ್ ಗಂಗೋಪಾಧ್ಯಾಯ ಜೊತೆ ಬಿಸಿ ಚರ್ಚೆನಡೆದಿತ್ತು.

ಗಾಜಿನ ಬಾಟಲಿಯನ್ನು ಕೋಪದಿಂದ ಒಡೆದ ಸಂದರ್ಭದಲ್ಲಿ ಬ್ಯಾನರ್ಜಿ ಅವರ ಕಿರುಬೆರಳಿಗೂ ಗಾಯವಾಗಿದ್ದು, ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ.

ಮೂಲಗಳ ಪ್ರಕಾರ, ಸಭೆಯಿಂದ ಬ್ಯಾನರ್ಜಿ ಅಮಾನತುಪಡಿಸಲು ಕೋರಿ ಬಿಜೆಪಿಯ ಸದಸ್ಯ ನಿಶಿಕಾಂತ್ ದುಬೆ ಅವರು ಮಂಡಿಸಿದ ನಿರ್ಣಯ ಕುರಿತು 9–8 ಮತಗಳು ಬಂದವು. ಸಭೆಯ ನಂತರ ಘಟನೆ ಕುರಿತು ಸುದ್ದಿಗಾರರ ಜೊತೆಗೆ ಚರ್ಚಿಸಲು ಬ್ಯಾನರ್ಜಿ ನಿರಾಕರಿಸಿದರು.

ಕೈಬೆರಳಿಗೆ ಬ್ಯಾಂಡೇಜ್ ಹಾಕಿಸಿಕೊಂಡಿರುವ ಕಲ್ಯಾಣ್ ಬ್ಯಾನರ್ಜಿ –ಪಿಟಿಐ ಚಿತ್ರ

ಪ್ರಾಥಮಿಕ ಚಿಕಿತ್ಸೆ ಬಳಿಕ ಬ್ಯಾನರ್ಜಿ ಅವರನ್ನು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಮತ್ತು ಎಎಪಿ ನಾಯಕ ಸಂಜಯ್ ಸಿಂಗ್ ಅವರು ಸಭಾ ಕೊಠಡಿಗೆ ಕರೆದೊಯ್ದರು.

ವಿಪಕ್ಷಗಳಿಂದ ಟೀಕೆ • ಯೋಗಿ ಸರ್ಕಾರದಿಂದ ಕ್ರಮ
‘ಎನ್‌ಕೌಂಟರ್’ಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ಸರ್ಕಾರವು ಪೊಲೀಸ್ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ನೂತನ ಮಾರ್ಗಸೂಚಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಪೊಲೀಸರು ನೈಜ ಅಪರಾಧಿಗಳನ್ನು ಬಂಧಿಸುವಲ್ಲಿ ವಿಫಲರಾಗಿ ತಮ್ಮ ತಪ್ಪನ್ನು ಮುಚ್ಚಿಹಾಕಲು ‘ಎನ್‌ಕೌಂಟರ್’ ನಡೆಸುತ್ತಾರೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರು ‘ಎನ್‌ಕೌಂಟರ್’ಗೆ ವ್ಯಾಪಕ ಖಂಡನೆ ವ್ಯಕ್ತಪಡಿಸುತ್ತಿದ್ದಾರೆ. ಈ ನಡುವೆ ಸರ್ಕಾರ ಈ ಕ್ರಮ ಕೈಗೊಂಡಿದೆ.

ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಅವರು, ‘ಜಿಲ್ಲಾ ಪೊಲೀಸ್ ಮುಖ್ಯಸ್ಥರಿಗೆ ನೂತನ ಮಾರ್ಗಸೂಚಿಗೆ ಸಂಬಂಧಿಸಿದಂತೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ. ಅದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ’ ಎಂದು ಹೇಳಿದರು.

ನೂತನ ಮಾರ್ಗಸೂಚಿ ಏನು?

- ಎನ್‌ಕೌಂಟರ್‌ನಲ್ಲಿ ‘ಕ್ರಿಮಿನಲ್’ ಗಾಯಗೊಂಡರೆ ಅಥವಾ ಮೃತಪಟ್ಟರೆ ಘಟನಾಸ್ಥಳದ ದೃಶ್ಯವನ್ನು ಕಡ್ಡಾಯವಾಗಿ ಚಿತ್ರೀಕರಿಸಬೇಕು
- ಇಬ್ಬರು ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಬೇಕು. ಆ ಪ್ರಕ್ರಿಯೆಯನ್ನೂ ಚಿತ್ರೀಕರಿಸಬೇಕು
- ವಿಧಿವಿಜ್ಞಾನ ಪ್ರಯೋಗಾಲಯದ ತಂಡವು ಘಟನಾಸ್ಥಳ ಪರಿಶೀಲಿಸಬೇಕು
- ಎನ್‌ಕೌಂಟರ್ ನಡೆದ ಸ್ಥಳದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗೆ ಆ ಪ್ರಕರಣದ ತನಿಖೆಯ ಜವಾಬ್ದಾರಿ ನೀಡುವಂತಿಲ್ಲ
- ಎನ್‌ಕೌಂಟರ್ ನಡೆಸಿದ ಅಧಿಕಾರಿಗಿಂತ ತನಿಖಾಧಿಕಾರಿಯು ಕನಿಷ್ಠ ಒಂದಾದರೂ ಹೆಚ್ಚಿನ ಶ್ರೇಣಿಯನ್ನು ಹೊಂದಿರಬೇಕು
- ಎನ್‌ಕೌಂಟರ್‌ನಲ್ಲಿ ಮೃತಪಟ್ಟ ಕುಟುಂಬಕ್ಕೆ ತಕ್ಷಣವೇ ಮಾಹಿತಿ ನೀಡಬೇಕು
- ಎನ್‌ಕೌಂಟರ್‌ಗೆ ಬಳಸಿ ಸಾಧನವನ್ನು ವಶಕ್ಕೆ ಒಪ್ಪಿಸಿ, ಪರಿಶೀಲನೆ ನಡೆಸಬೇಕು

ರಾಜ್ಯದಲ್ಲಿ 2017ರಿಂದ (ಯೋಗಿ ಆದಿತ್ಯನಾಥ ಅವರ ಸರ್ಕಾರದ ಅವಧಿ) ಈವರೆಗೆ 207 ಆರೋಪಿಗಳನ್ನು ಎನ್‌ಕೌಂಟರ್ ಮೂಲಕ ಹತ್ಯೆ ಮಾಡಲಾಗಿದೆ ಎನ್ನುತ್ತವೆ ಅಂಕಿಅಂಶಗಳು.

‘ಕಳೆದ 7 ವರ್ಷಗಳಲ್ಲಿ ಪೊಲೀಸರು ಮತ್ತು ‘ಕ್ರಿಮಿನಲ್’ಗಳ ಮಧ್ಯೆ ಸುಮಾರು 12,000 ಎನ್‌ಕೌಂಟರ್‌ಗಳು ನಡೆದಿವೆ. ಇದರಲ್ಲಿ 12 ಮಂದಿ ಪೊಲೀಸರೂ ಮೃತಪಟ್ಟಿದ್ದಾರೆ. 6,500 ಆರೋಪಿಗಳು ಗಾಯಗೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೋರಿಸ್ ಸ್ಯಾಮ್ಯುಯೆಲ್ ಕ್ರಿಶ್ಚಿಯನ್ ಎಂಬಾತನನ್ನು ಬಂಧಿಸಿದ ಪೊಲೀಸರು
ನಕಲಿ ಕೋರ್ಟ್ ನಡೆಸಿ ಸಿಕ್ಕಿಬಿದ್ದ ಭೂಪ!

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಗಾಂಧಿನಗರದಲ್ಲಿ ನಕಲಿ ನ್ಯಾಯಾಲಯ ಸ್ಥಾಪಿಸಿ, ಅಲ್ಲಿನ ನ್ಯಾಯಾಧೀಶ ತಾನು ಎಂಬಂತೆ ಬಿಂಬಿಸಿಕೊಂಡು, ಆದೇಶಗಳನ್ನು ಹೊರಡಿಸಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಈ ವ್ಯಕ್ತಿಯು ತನ್ನ ಕಚೇರಿಯನ್ನೇ ಕೋರ್ಟ್‌ನಂತೆ ಪರಿವರ್ತಿಸಿದ್ದ, ತಾವು ನಿಜವಾದ ನ್ಯಾಯಾಲಯದಲ್ಲಿ ಇದ್ದೇವೆ ಎಂಬ ಭಾವನೆ ಜನರಲ್ಲಿ ಮೂಡುವಂತೆ ಮಾಡಿದ್ದ.

ಬಂಧಿತನ ಹೆಸರು ಮೋರಿಸ್ ಸ್ಯಾಮ್ಯುಯೆಲ್ ಕ್ರಿಶ್ಚಿಯನ್. ಸರ್ಕಾರಿ ಜಮೀನಿಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಈತ 2019ರಲ್ಲಿ ತನ್ನ ಕಕ್ಷಿದಾರನ ಪರವಾಗಿ ಆದೇಶವೊಂದನ್ನು ನೀಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಂದರೆ, ಈ ನಕಲಿ ನ್ಯಾಯಾಲಯವು ಕನಿಷ್ಠ ಐದು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿತ್ತು ಎಂದು ಅವರು ಅಂದಾಜಿಸಿದ್ದಾರೆ.

ನಗರ ಸಿವಿಲ್ ನ್ಯಾಯಾಲಯದಲ್ಲಿ ಜಮೀನು ವ್ಯಾಜ್ಯ ಬಾಕಿ ಇದ್ದವರನ್ನು ಮೋರಿಸ್ ತನ್ನತ್ತ ಸೆಳೆಯುತ್ತಿದ್ದ. ಅವರಿಂದ ನಿರ್ದಿಷ್ಟ ಮೊತ್ತವನ್ನು ಪ್ರಕರಣ ಬಗೆಹರಿಸಿಕೊಡಲು ಶುಲ್ಕವಾಗಿ ಪಡೆಯುತ್ತಿದ್ದ. ನಂತರ ಆತ ತನ್ನನ್ನು ನ್ಯಾಯಾಲಯದಿಂದ ನೇಮಕಗೊಂಡಿರುವ ಅಧಿಕೃತ ರಾಜಿ ಸಂಧಾನಕಾರ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದ.

ಕಕ್ಷಿದಾರರಿಗೆ ಗಾಂಧಿನಗರದಲ್ಲಿ ಇರುವ ತನ್ನ ಕಚೇರಿಗೆ ಬರಹೇಳುತ್ತಿದ್ದ. ಈ ಕಚೇರಿಯು ನ್ಯಾಯಾಲಯದಂತೆಯೇ ಕಾಣುವಂತೆ ರೂಪಿಸಿದ್ದ. ನ್ಯಾಯಮಂಡಳಿಯ ಮುಖ್ಯಸ್ಥ ತಾನು ಎಂದು ತೋರಿಸಿಕೊಂಡು, ಕಕ್ಷಿದಾರರಿಗೆ ಅನುಕೂಲ ಆಗುವಂತೆ ಆದೇಶ ಹೊರಡಿಸುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈತನ ಜೊತೆಗಾರರು ಈತ ನಡೆಸುತ್ತಿದ್ದ ನಕಲಿ ನ್ಯಾಯಾಲಯದಲ್ಲಿ ವಕೀಲರಂತೆ, ಕೋರ್ಟ್ ಸಿಬ್ಬಂದಿಯಂತೆ ನಿಂತುಕೊಂಡಿರುತ್ತಿದ್ದರು. ಇದರಿಂದಾಗಿ ಅಲ್ಲಿನ ಕಲಾಪಗಳು ನೈಜವಾದವು ಎಂಬ ಭಾವನೆಯು ಕಕ್ಷಿದಾರರಲ್ಲಿ ಮೂಡುತ್ತಿತ್ತು ಎಂದು ಪೊಲೀಸರು ವಿವರಿಸಿದ್ದಾರೆ.

ನಗರ ಸಿವಿಲ್ ನ್ಯಾಯಾಲಯದ ರಿಜಿಸ್ಟ್ರಾರ್ ಅವರು ಈ ವ್ಯಕ್ತಿಯ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಇದರ ಪರಿಣಾಮವಾಗಿ ಈತನನ್ನು ಬಂಧಿಸಲಾಗಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ವಿವಿಧ ಸೆಕ್ಷನ್ನುಗಳ ಅಡಿಯಲ್ಲಿ ಈತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ವಂಚನೆ ಬಯಲಾಗಿದ್ದು ಹೀಗೆ...

2019ರಲ್ಲಿ ಮೋರಿಸ್ ತನ್ನ ಕಕ್ಷಿದಾರರ ಪರವಾಗಿ ತನ್ನ ನಕಲಿ ನ್ಯಾಯಾಲಯದ ಮೂಲಕ ಒಂದು ಆದೇಶ ನೀಡಿದ್ದ.

ಸಂಬಂಧಪಟ್ಟ ಜಮೀನಿನ ಕಂದಾಯ ದಾಖಲೆಗಳಲ್ಲಿ ತಮ್ಮ ಹೆಸರು ಬರಬೇಕು ಎಂದು ಕಕ್ಷಿದಾರರು ಬಯಸಿದ್ದರು. ಸರ್ಕಾರವು ತನ್ನನ್ನು ಅಧಿಕೃತ ರಾಜಿ ಸಂಧಾನಕಾರನನ್ನಾಗಿ ನೇಮಕ ಮಾಡಿದೆ ಎಂದು ಮೋರಿಸ್ ಹೇಳಿದ್ದ.

ನಂತರ ಈತ ತನ್ನ ನ್ಯಾಯಾಲಯದಲ್ಲಿ ನಕಲಿ ಕಲಾಪ ನಡೆಸಿ, ಕಕ್ಷಿದಾರನ ಪರವಾಗಿ ಆದೇಶ ಹೊರಡಿಸಿದ್ದ. ಕಂದಾಯ ದಾಖಲೆಗಳಲ್ಲಿ ತನ್ನ ಕಕ್ಷಿದಾರರ ಹೆಸರನ್ನು ಸೇರಿಸಬೇಕು ಎಂದು ಕಲೆಕ್ಟರ್‌ಗೆ ಆದೇಶದಲ್ಲಿ ಸೂಚಿಸಿದ್ದ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಆದೇಶವನ್ನು ಅನುಷ್ಠಾನಕ್ಕೆ ತರಲು ಮೋರಿಸ್ ಇನ್ನೊಬ್ಬ ವಕೀಲರ ಮೂಲಕ ನಗರ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದ, ಅದರ ಜೊತೆಯಲ್ಲಿ ತನ್ನ ನ್ಯಾಯಾಲಯ ನೀಡಿದ್ದ ನಕಲಿ ಆದೇಶವನ್ನು ಲಗತ್ತಿಸಿದ್ದ.

ಆದರೆ, ಮೋರಿಸ್ ಎಂಬಾತ ರಾಜಿ ಸಂಧಾನಕಾರನೂ ಅಲ್ಲ, ಈತ ನೀಡಿರುವ ಆದೇಶಕ್ಕೆ ಮಾನ್ಯತೆಯೂ ಇಲ್ಲ ಎಂಬುದನ್ನು ಸಿವಿಲ್ ನ್ಯಾಯಾಲಯದ ರಿಜಿಸ್ಟ್ರಾರ್ ಹಾರ್ದಿಕ್ ದೇಸಾಯಿ ಅವರು ಕಂಡುಕೊಂಡರು. ಅವರು ಪೊಲೀಸರಿಗೆ ಈತನ ಬಗ್ಗೆ ದೂರು ನೀಡಿದರು.

ಪೂರ್ವ ಲಡಾಖ್‌ನಲ್ಲಿ ಅನಿಶ್ಚಿತ ಸ್ಥಿತಿ ● ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿಕೆ

ವಿಶ್ವಾಸ ಮರುಸ್ಥಾಪಿಸುವ ಯತ್ನ ಆರಂಭ

ಉಪೇಂದ್ರ ದ್ವಿವೇದಿ

ನವದೆಹಲಿ (ಪಿಟಿಐ): 'ಭಾರತ–ಚೀನಾ ಗಡಿಯಲ್ಲಿ ವಿಶ್ವಾಸವನ್ನು ಮರುಸ್ಥಾಪಿಸಲು ನಾವು ಯತ್ನಿಸುತ್ತಿದ್ದೇವೆ. ಈ ಗುರಿ ಸಾಧಿಸಲು ಉಭಯ ರಾಷ್ಟ್ರಗಳು ಪರಸ್ಪರ ಭರವಸೆ ನೀಡಬೇಕಾಗಿದೆ' ಎಂದು ಭಾರತೀಯ ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಮಂಗಳವಾರ ಹೇಳಿದರು.

ಪೂರ್ವ ಲಡಾಖ್‌ನಲ್ಲಿ ಅನಿಶ್ಚಿತತೆ ಅಂತ್ಯಗೊಳಿಸಲು ಒಪ್ಪಂದಕ್ಕೆ ಬರಲಾಗಿದೆ ಎಂದು ಭಾರತ ಪ್ರಕಟಿಸಿದ ಹಿಂದೆಯೇ ಅವರು ಈ ಮಾತು ಹೇಳಿದ್ದಾರೆ. ರಕ್ಷಣಾ ಇಲಾಖೆಯ ಚಿಂತಕರ ಚಾವಡಿ ಯುಎಸ್‌ಐ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಈ ಬಗ್ಗೆ ಮಾತನಾಡಿದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಒಪ್ಪಂದಕ್ಕೆ ಬರಲಾಗಿದೆ ಎಂಬುದನ್ನು ಸೋಮವಾರ ಪ್ರಕಟಿಸಿದ್ದರು. ಗಡಿಯಲ್ಲಿ,ಪೂರ್ವ ಲಡಾಖ್ ಬಳಿ ನಾಲ್ಕು ವರ್ಷಗಳಿಂದ ಮೂಡಿರುವ ಅನಿಶ್ಚಿತ ಪರಿಸ್ಥಿತಿಯನ್ನು ಅಂತ್ಯಗೊಳಿಸುವಲ್ಲಿ ಇದೊಂದು ಪ್ರಮುಖ ಹೆಜ್ಜೆ ಎಂದು ಹೇಳಲಾಗಿದೆ.

'2020ರ ಏಪ್ರಿಲ್‌ನಲ್ಲಿ ಇದ್ದ ಸ್ಥಿತಿಯ ಮರುಸ್ಥಾಪನೆ ನಮ್ಮ ಗುರಿ. ಆ ನಂತರ ಗಡಿಯಲ್ಲಿ ನಿಯೋಜಿಸಿರುವ ಸೇನೆ ವಾಪಸು ಕರೆಯಿಸಿಕೊಳ್ಳುವುದು ಮತ್ತು ಗಡಿಯಲ್ಲಿ ಸಹಜ ಗಸ್ತು ನಿರ್ವಹಣೆ ಇರಲಿದೆ. ಸಹಜ ಗಸ್ತು ಈಗಲೇ ಆರಂಭವಾಗುವುದಿಲ್ಲ. ಅದು, ಹಂತ ಹಂತವಾಗಿ ಜಾರಿಗೆ ಬರಲಿದೆ' ಎಂದು ಸೇನಾ ಮುಖ್ಯಸ್ಥರು ಹೇಳಿದರು.

'ಇದು, 2020ರ ಏಪ್ರಿಲ್‌ನಲ್ಲಿ ಇದ್ದ ನಮ್ಮ ನಿಲುವು. ಈಗಲೂ ಅದೇ ನಿಲುವು ಇದೆ. ಈಗ ನಾವು ಪರಸ್ಪರ ವಿಶ್ವಾಸ ಮರುಸ್ಥಾಪಿಸಲು ಯತ್ನಿಸುತ್ತಿದ್ದೇವೆ. ಉಭಯತ್ರರು ಪರಸ್ಪರ ನೋಡುವಂತಾಗಲು ಹಾಗೂ ಪರಸ್ಪರ ಮನದಟ್ಟು ಮಾಡಲು ಬೇಕಾದ ಬಫರ್ ವಲಯವನ್ನು ಈಗ ಸೃಷ್ಟಿಸಲಾಗಿದೆ. 2020ರ ಏಪ್ರಿಲ್‌ನಲ್ಲಿನ ವಾತಾವರಣ ಸೃಷ್ಟಿಸಲು ಬೇಕಾದ ಅನುಕೂಲವನ್ನು ಗಸ್ತು ಒದಗಿಸಲಿದೆ. ಆ ಪ್ರಕ್ರಿಯೆ ಈಗ ಆರಂಭವಾಗಿದೆ ಎಂದು ವಿವರಿಸಿದರು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು, ಸಂಘರ್ಷ ಆರಂಭಕ್ಕೂ ಮೊದಲು ಉಭಯ ಸೇನೆಗಳ ಯೋಧರು ಗಸ್ತು ನಡೆಸುತ್ತಿದ್ದಂತೆ ಮುಂದೆಯೂ ಗಸ್ತು ನಡೆಸುವರು ಎಂದು ಹೇಳಿದ್ದರು.

'ರಾಷ್ಟ್ರೀಯ ಹಿತಾಸಕ್ತಿ ವಿಷಯದಲ್ಲಿ ಒಪ್ಪಂದ ಮೂಡುವುದು ಕಷ್ಟ'

'ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ಒಡಂಬಡಿಕೆಗೆ ಬರುವುದು ಸುಲಭವಲ್ಲ' ಎಂದು ನೌಕಾಪಡೆಯ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ಮತ್ತು ಚೀನಾ ಗಡಿ ವಿಷಯದಲ್ಲಿ ಒಪ್ಪಂದಕ್ಕೆ ಬಂದಿರುವುದನ್ನು ತಿಳಿದು ಸಂತೋಷವಾಗಿದೆ ಎಂದು ಪ್ರತಿಕ್ರಿಯಿಸಿದರು. ನೌಕಾಪಡೆಯ ಸ್ವಾವಲಂಬನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಡಿ ವಿಷಯದಲ್ಲಿ ಒಪ್ಪಂದಕ್ಕೆ ಬರುವುದು ಕಷ್ಟ. ಅಲ್ಲಿ ಭಿನ್ನ ದೃಷ್ಟಿಕೋನವಿರುತ್ತದೆ. ಚಿಂತನೆ ಇರುತ್ತದೆ. ಭಾವನಾತ್ಮಕ ವಿಷಯಗಳಿರುತ್ತವೆ. ಭೂಮಿಗೆ ಸಂಬಂಧಿಸಿದ ವಿವಾದ ಇರುತ್ತದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲವನ್ನು ಗಮನಿಸದೇ ಮಾತುಕತೆ ನಡೆಸಬೇಕಾಗುತ್ತದೆ ಎಂದರು.

ಈಗ ಒಪ್ಪಂದಕ್ಕೆ ಬರಲಾಗಿದೆ. ಅದರ ವಿವರಗಳು ನನಗೆ ಗೊತ್ತಿಲ್ಲ. ನನಗೆ ಗೊತ್ತಿರಬೇಕಾದ ಅಗತ್ಯವೂ ಇಲ್ಲ. ಏನೋ ಒಂದು ಒಪ್ಪಂದವಾಗಿದೆ. ಎಲ್ಲರಿಗೂ ಖುಷಿಯಾಗಿದೆ ಎಂದು ಅವರು ಹೇಳಿದರು.

ಭಾರತದ ಜೊತೆಗೆ ಒಪ್ಪಂದ ದೃಢಪಡಿಸಿದ ಚೀನಾ

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಉಭಯ ಸೇನೆಗಳ ನಡುವೆ ಮೂಡಿರುವ ಅನಿಶ್ಚಿತತೆಯನ್ನು ಅಂತ್ಯಗೊಳಿಸಲು ಭಾರತದ ಜೊತೆಗೆ ಒಪ್ಪಂದಕ್ಕೆ ಬರಲಾಗಿದೆ ಎಂದು ಚೀನಾ ಮಂಗಳವಾರ ದೃಢಪಡಿಸಿದೆ.

ಭಾರತ ಮತ್ತು ಚೀನಾ ನಡುವೆ ರಾಜತಾಂತ್ರಿಕ, ಸೇನಾ ಹಂತದಲ್ಲಿ ಮಾತುಕತೆ ನಡೆದಿದ್ದವು ಎಂದು ಚೀನಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಮಂಗಳವಾರ ತಿಳಿಸಿದರು.

'ಉಭಯತ್ರರು ಪರಿಹಾರಕ್ಕೆ ಬಂದಿದ್ದೇವೆ. ಒಪ್ಪಂದ ಜಾರಿಗೊಳಿಸಲು ಭಾರತದ ಜೊತೆಗೂಡಿ ಚೀನಾ ಕಾರ್ಯನಿರ್ವಹಿಸಲಿದೆ' ಎಂದರು. ಆದರೆ, ಒಪ್ಪಂದದ ವಿವರಗಳನ್ನು ನೀಡಲು ಅವರು ನಿರಾಕರಿಸಿದರು.

ಬ್ರಿಕ್ಸ್ ರಾಷ್ಟ್ರಗಳ ಶೃಂಗಸಭೆ ವೇಳೆ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವಣ ಮಾತುಕತೆ ಕುರಿತ ಪ್ರಶ್ನೆಗೆ, 'ಅಂತಹ ಯಾವುದೇ ಬೆಳವಣಿಗೆಗಳಿದ್ದರೆ ನಿಮಗೆ ತಿಳಿಸುತ್ತೇವೆ' ಎಂದು ತಿಳಿಸಿದರು.

ಚೀನಾ ಮತ್ತು ಭಾರತ ನಡುವಣ ವಾಸ್ತವ ಗಡಿ ರೇಖೆಯಲ್ಲಿ ಪೂರ್ವ ಲಡಾಖ್ ಬಳಿ ನಾಲ್ಕು ವರ್ಷಗಳಿಂದ ಇದ್ದ ಅನಿಶ್ಚಿತ ಸ್ಥಿತಿ ಅಂತ್ಯಗೊಳಿಸಲು ಚೀನಾದ ಜೊತೆ ಒಪ್ಪಂದಕ್ಕೆ ಬರಲಾಗಿದೆ ಎಂದು ಭಾರತ ಸೋಮವಾರ ಪ್ರಕಟಿಸಿತ್ತು.

'ರಷ್ಯಾ ಸೇನೆಯಿಂದ 85 ಭಾರತೀಯರ ಬಿಡುಗಡೆ'

ನವದೆಹಲಿ (ಪಿಟಿಐ): ರಷ್ಯಾ ಸೇನೆಯು ಈವರೆಗೆ ಭಾರತ ಮೂಲದ 85 ಸೈನಿಕರನ್ನು ಬಿಡುಗಡೆ ಮಾಡಿದೆ. ಉಳಿದ 20 ಸೈನಿಕರನ್ನು ವಾಪಸ್ ಕರೆಸಿಕೊಳ್ಳುವ ಪ್ರಯತ್ನ ಮುಂದುವರಿದಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ತಿಳಿಸಿದರು.

'ಬ್ರಿಕ್ಸ್ ಶೃಂಗಸಭೆಯ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ದ್ವಿಪಕ್ಷೀಯ ಸಭೆಯಲ್ಲಿ ಮಾತುಕತೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ಉಳಿದ ಸೈನಿಕರ ವಾಪಸಾತಿ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ' ಎಂದು ತಿಳಿಸಿದರು.

'ಈ ವಿಚಾರವಾಗಿ ಭಾರತವು ರಷ್ಯಾದ ರಕ್ಷಣಾ ಸಚಿವಾಲಯದೊಂದಿಗೆ ನಿರಂತರ ಸಂಪರ್ಕದಲ್ಲಿದೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು.

ಜುಲೈನಲ್ಲಿ ಪುಟಿನ್ ಅವರೊಂದಿಗೆ ನಡೆಸಿದ ಮಾತುಕತೆ ಸಂದರ್ಭದಲ್ಲೂ ಪ್ರಧಾನಿ ಮೋದಿ ಅವರು ಭಾರತೀಯರ ಬಿಡುಗಡೆಗೆ ಆಗ್ರಹಿಸಿದ್ದರು.

ಲಾಹೋರ್ ಜಗತ್ತಿನ ಅತ್ಯಂತ ಮಲಿನ ನಗರ

ಲಾಹೋರ್ (ಪಿಟಿಐ): ಪಾಕಿಸ್ತಾನದ ಸಾಂಸ್ಕೃತಿಕ ನಗರ ಲಾಹೋರ್‌ನಲ್ಲಿ ವಾಯು ಗುಣಮಟ್ಟ ತೀವ್ರ ಕುಸಿದಿದ್ದು, ಜಗತ್ತಿನಲ್ಲೇ ಅತಿ ಹೆಚ್ಚು ಮಾಲಿನ್ಯವಿರುವ ನಗರ ಎಂದು ಘೋಷಿಸಲಾಗಿದೆ.

ನಗರದ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯುಐ) 394ಕ್ಕೆ ಕುಸಿದಿದ್ದು, ಮಾಲಿನ್ಯವನ್ನು ತಗ್ಗಿಸಲು ಕೃತಕ ಮಳೆ ಸುರಿಸಲು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಸರ್ಕಾರ ಚಿಂತನೆ ನಡೆಸುತ್ತಿದೆ.

ಕೃಷಿ ತ್ಯಾಜ್ಯಗಳನ್ನು ಸುಡುವುದರಿಂದ ಮತ್ತು ಕೈಗಾರಿಕೆಗಳ ತ್ಯಾಜ್ಯಗಳಿಂದಾಗಿ ನಗರದಲ್ಲಿ ದಟ್ಟ ಹೊಗೆ ಆವರಿಸಿದೆ. ಹೊಗೆ ನಿವಾರಕ ದಳವನ್ನು ಅಂತಹ ಸ್ಥಳಕ್ಕೆ ಕಳುಹಿಸಲಾಗಿದೆ ಎಂದು ಮುಖ್ಯಮಂತ್ರಿ ಮರಿಯಂ ನವಾಜ್ ನೇತೃತ್ವದ ಸರ್ಕಾರ ತಿಳಿಸಿದೆ. ಎಕ್ಯುಐ 150ಕ್ಕಿಂತ ಹೆಚ್ಚಿದ್ದರೆ ಅತ್ಯಂತ ಅನಾರೋಗ್ಯಕರ ವಾತಾವರಣ ಎಂದು ಪರಿಗಣಿಸಲಾಗುತ್ತದೆ.

ವಾಯುಭಾರ ಕುಸಿತ: ಭಾರಿ ಮಳೆ ನಿರೀಕ್ಷೆ

ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಮಂಗಳವಾರದ ಹೊತ್ತಿಗೆ ತೀವ್ರಗೊಂಡಿದೆ. ಅ.24 ಹಾಗೂ 25ರಂದು ಇದು ಇನ್ನಷ್ಟು ತೀವ್ರಗೊಳ್ಳಲಿದ್ದು, ಗುರುವಾರದ ಹೊತ್ತಿಗೆ ತೀವ್ರ ಚಂಡಮಾರುತ ಉಂಟಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅ.24 ಹಾಗೂ 25ರಂದು ಒಡಿಶಾ, ಪಶ್ಚಿಮ ಬಂಗಾಳ ಹಾಗೂ ಜಾರ್ಖಂಡ್‌ನ ದಕ್ಷಿಣ ಭಾಗಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ. 'ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧವಾಗಿದ್ದೇವೆ' ಎಂದು ಭಾರತೀಯ ಕರಾವಳಿ ಪಡೆ ಹೇಳಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ.



ಒಡಿಶಾ ಮೇಲೆ ತೀವ್ರ ಪರಿಣಾಮ

- ಚಂಡಮಾರುತ ಅಪ್ಪಳಿಸುವ ಮುನ್ಸೂಚನೆ ಇರುವೆಡೆ ಜನರನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ಸುಮಾರು 800 ನಿರಾಶ್ರಿತ ಶಿಬಿರಗಳನ್ನು ಸರ್ಕಾರ ಸಿದ್ಧಪಡಿಸಿದೆ.
- ಮುಂದಿನ 15 ದಿನಗಳಲ್ಲಿ ಹೆರಿಗೆ ಆಗಲಿರುವ ಗರ್ಭಿಣಿಯರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅವರನ್ನು ಈಗಾಗಲೇ ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ
- ಕೆಲವು ದಿನಗಳವರೆಗೆ ಪುರಿ ಜಗನ್ನಾಥ ದೇವಾಲಯಕ್ಕೆ ಭೇಟಿ ನೀಡದಂತೆ ಜಿಲ್ಲಾಡಳಿತವು ಭಕ್ತರಲ್ಲಿ ಮನವಿ ಮಾಡಿದೆ
- ಇಲಾಖೆ ಮುನ್ಸೂಚನೆ ನೀಡಿದಂತೆಯೇ ಚಂಡಮಾರುತ ಸಾಗುವ ಮಾರ್ಗವು ಇರುವುದಿಲ್ಲ. ಹಲವು ಬಾರಿ ಗಾಳಿ ಬೀಸುವ ದಿಕ್ಕಿನ ಕಾರಣಕ್ಕಾಗಿ ಬೇರೆಡೆ ಸಾಗಿದ ಉದಾಹರಣೆಗಳಿವೆ. ಆದ್ದರಿಂದ, ಚಂಡಮಾರುತದ ದಿಕ್ಕು ಯಾವೆಲ್ಲ ಪ್ರದೇಶಗಳಿಗೆ ಬದಲಾಗಬಹುದು ಎಂಬುದನ್ನು ಯೋಚಿಸಿ, ಅಲ್ಲಿಯೂ ಜನರನ್ನು ಸ್ಥಳಾಂತರಿಸುವ ಕಾರ್ಯ ನಡೆಸುತ್ತಿದ್ದೇವೆ –ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ
- ಭಾರಿ ಪರಿಣಾಮ ಅಂದಾಜಿಸಲಾಗಿರುವ ಪ್ರದೇಶಗಳಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪಡೆ ಹಾಗೂ ಅಗ್ನಿಶಾಮಕ ಸೇವೆ ನಿಯೋಜನೆ. ಕೇಂದ್ರದಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ 11 ತಂಡಗಳ ನಿಯೋಜನೆ

ಮುಂದಿನ ಎರಡು ದಿನಗಳಲ್ಲಿ ಭಾರಿ ಮಳೆಯಾಗುವ ಪ್ರದೇಶಗಳು

ಒಡಿಶಾ: ಬಾಲೇಶ್ವರ, ಮಯೂರ್‌ಭಂಜ್, ಬಾದ್ರಕ್, ಕೇಂದ್ರಪಡಾ, ಜಗತ್‌ಸಿಂಹಪುರ, ಕೇಂದುಝುರ್, ಜೈಪುರ, ಕಟಕ್, ಖೋರ್ದಾ, ಪುರಿ

ಪಶ್ಚಿಮ ಬಂಗಾಳ: ದಕ್ಷಿಣ 24 ಪರಗಣ, ಉತ್ತರ 24 ಪರಗಣ, ಮೇದಿನಿಪುರ, ಝುಡ್‌ಗ್ರಾಮ್, ಹೌರಾ, ಹೂಗ್ಲಿ, ಕೋಲ್ಕತ್ತ, ಬಂಕುರ

ಆಧಾರ: ಪಿಟಿಐ, ಭಾರತೀಯ ಹವಾಮಾನ ಇಲಾಖೆಯ ಪತ್ರಿಕಾ ಪ್ರಕಟಣೆ

ನೌಕಾಪಡೆ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಮಾಹಿತಿ

'4 ಯುದ್ಧ ನೌಕೆ ಶೀಘ್ರ ಸೇರ್ಪಡೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಷ್ಯಾದಲ್ಲಿ ನಿರ್ಮಿಸಲಾದ ಒಂದು ಯುದ್ಧ ನೌಕೆ ಸೇರಿ ನಾಲ್ಕು ಮುಂಚೂಣಿ ಯುದ್ಧ ನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಮುಂದಿನ ಎರಡು ತಿಂಗಳೊಳಗೆ ಸೇನೆಗೆ ಸೇರ್ಪಡೆ ಮಾಡಲು ಭಾರತೀಯ ನೌಕಾಪಡೆ ಸಜ್ಜಾಗಿದೆ.

ಹಿಂದೂ ಮಹಾಸಾಗರದಲ್ಲಿ ಚೀನಾ ತನ್ನ ಪ್ರಾಬಲ್ಯ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ರಕ್ಷಣಾ ಇಲಾಖೆ ಈ ಕ್ರಮಕ್ಕೆ ಮುಂದಾಗಿದೆ.

ದೇಶಿಯವಾಗಿ ಸಿದ್ಧಪಡಿಸಿದ, ನಾಲ್ಕನೆಯ ಅಣುಶಕ್ತಿ ಚಾಲಿತ, ಗುರಿ ನಿರ್ದೇಶಿತ ಕ್ಷಿಪಣಿಗಳ ಜಲಾಂತರ್ಗಾಮಿ ನೌಕೆಯ (ಎಸ್‌ಎಸ್‌ಬಿಎನ್) ಪರೀಕ್ಷಾರ್ಥ ಚಾಲನೆಯ ಸಂದರ್ಭದಲ್ಲಿಯೇ ಈ ಹೊಸ ಯುದ್ಧ ನೌಕೆಗಳು ಮತ್ತು ದೇಶೀಯವಾಗಿ ನಿರ್ಮಿಸಲಾದ ಪರಮಾಣು ಚಾಲಿತ ದಾಳಿಯ ಎರಡು ಜಲಾಂತರ್ಗಾಮಿ ನೌಕೆಗಳನ್ನು (ಎಸ್‌ಎಸ್‌ಎನ್) ಸೇರ್ಪಡೆ ಮಾಡಲು ಅನುಮೋದನೆ ಪಡೆಯಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾ ನಿರ್ಮಿಸಿರುವ ಯುದ್ಧ ನೌಕೆ ತುಶೀಲ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಸೆಂಬರ್‌ನಲ್ಲಿ ಕೈಗೊಳ್ಳಲಿರುವ ಮಾಸ್ಕೊ ಭೇಟಿಯ ಸಂದರ್ಭ ಕಾರ್ಯಾರಂಭ ಮಾಡುವ ಸಾಧ್ಯತೆಯಿದೆ ಎಂದು ನೌಕಾಪಡೆಯ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಹೇಳಿದ್ದಾರೆ.

'ನೌಕೆ ಬಳಕೆಗೆ ಸಂಬಂಧಿಸಿದ ಎಲ್ಲ ಪ್ರಯೋಗಗಳು ಪೂರ್ಣಗೊಂಡಿವೆ. ನೌಕೆಯು ಕಾರ್ಯಾಚರಿಸಲು ಸಿದ್ಧವಾಗಿದೆ' ಎಂದು ಅವರು ಪತ್ರಿಕಾಗೋಷ್ಠಿಯ ನೇಪಥ್ಯದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

8 ವರ್ಷಗಳ ಹಿಂದಿನ ಒಪ್ಪಂದ: ನಾಲ್ಕು ಯುದ್ಧ ನೌಕೆಗಳ ನಿರ್ಮಾಣ ಒಪ್ಪಂದವನ್ನು ಭಾರತವು ರಷ್ಯಾ ಜತೆಗೆ 2016ರಲ್ಲಿ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ, ಎರಡು ನೌಕೆಗಳು ರಷ್ಯಾದ ಹಡಗುಕಟ್ಟೆಯಲ್ಲಿ ಮತ್ತು ಇನ್ನೆರಡು ಗೋವಾ ಹಡಗುಕಟ್ಟೆಯಲ್ಲಿ ನಿರ್ಮಾಣವಾಗುತ್ತವೆ. ರಷ್ಯಾ ನಿರ್ಮಿತ ಎರಡು ಹಡಗುಗಳಲ್ಲಿ ತುಶೀಲ್ ಮೊದಲನೆಯದು. ಇನ್ನೊಂದು ನೌಕೆ 'ತಮಾಲ್' ಅನ್ನು ನಂತರದಲ್ಲಿ ರಷ್ಯಾ ಪೂರೈಸಲಿದೆ.

ಕಳೆದ ವಾರ ದೇಶದ ನಾಲ್ಕನೇ ಎಸ್‌ಎಸ್‌ಬಿಎನ್ ಕಾರ್ಯಾರಂಭ ಮಾಡಿರುವ ಕುರಿತು ಪ್ರತಿಕ್ರಿಯೆ ಕೇಳಿದಾಗ, 'ಎಸ್‌ಎಸ್‌ಬಿಎನ್ ಕಾರ್ಯಕ್ರಮ ಯಶಸ್ವಿಯಾಗಿದೆ. ಎರಡು ಜಲಾಂತರ್ಗಾಮಿ ನೌಕೆಗಳನ್ನು ನಿಯೋಜಿಸಲಾಗಿದೆ' ಎಂದು ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಹೇಳಿದರು.

ಮೊದಲ ಎರಡು, ಪರಮಾಣು ಚಾಲಿತ ಗುರಿ ನಿರ್ದೇಶಿತ ಕ್ಷಿಪಣಿ ಜಲಾಂತರ್ಗಾಮಿ ನೌಕೆಗಳಾದ ಐಎನ್‌ಎಸ್ ಅರಿಹಂತ್ ಮತ್ತು ಐಎನ್‌ಎಸ್ ಅರಿಘಾಟ್ ಕಾರ್ಯಾರಂಭ ಮಾಡಿವೆ. ಎಸ್4 ಮತ್ತು ಎಸ್4* ಹೆಸರಿನ ಇನ್ನೆರಡು ಜಲಾಂತರ್ಗಾಮಿ ನೌಕೆಗಳನ್ನು ಸಮುದ್ರಕ್ಕೆ ಪ್ರಯೋಗಾರ್ಥ ಇಳಿಸಲಾಗಿದ್ದು, ಇವು ಕಾರ್ಯಾರಂಭಕ್ಕೆ ಕೆಲವು ವರ್ಷ ತೆಗೆದುಕೊಳ್ಳಬಹುದು.

ಅ.28-29 ರಂದು 'ಸ್ವಾವಲಂಬನ್': 'ಸ್ವಾವಲಂಬನ್' ಸಮ್ಮೇಳನ ಇದೇ 28-29 ರಂದು ದೆಹಲಿಯಲ್ಲಿ ನಡೆಯಲಿದ್ದು, ಇದರಲ್ಲಿ ಕೆಲವು ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗುತ್ತದೆ ಎಂದು ಕೃಷ್ಣ ಸ್ವಾಮಿನಾಥನ್ ಹೇಳಿದರು.

ಸಲ್ಮಾನ್ ಖಾನ್‌ಗೆ ಬೆದರಿಕೆ: ಕ್ಷಮೆಯಾಚನೆ



ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ₹5ಕೋಟಿ ಬೇಡಿಕೆಯ ಬೆದರಿಕೆ ಸಂದೇಶ ಕಳುಹಿಸಿದ್ದ ಮೊಬೈಲ್ ಫೋನ್ ಸಂಖ್ಯೆಯಿಂದಲೇ ಮುಂಬೈ ಸಂಚಾರ ಪೊಲೀಸರಿಗೆ ಕ್ಷಮೆಯಾಚನೆಯ ಸಂದೇಶ ಬಂದಿದೆ.

ಸಂಚಾರ ಪೊಲೀಸರ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಸೋಮವಾರ ಕ್ಷಮೆಯಾಚನೆಯ ಸಂದೇಶ ಬಂದಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು. ಬೆದರಿಕೆ ಸಂದೇಶ ಕಳುಹಿಸಿದ್ದ ಮೊಬೈಲ್ ಫೋನ್ ಸಂಖ್ಯೆಯಿಂದಲೇ ಕ್ಷಮೆಯಾಚನೆಯ ಸಂದೇಶವೂ ಬಂದಿದೆ ಎಂಬುದು ತನಿಖೆಯ ಸಮಯದಲ್ಲಿ ದೃಢಪಟ್ಟಿದೆ ಎಂದು ಅವರು ಹೇಳಿದರು.

ಜಾತಿಗಣತಿ ವಿರೋಧಕ್ಕೆ ಸಚಿವರ 'ಸಹಿ'

ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಸಂಸದ ಬಸವರಾಜ ಬೊಮ್ಮಾಯಿ, ಮಹಾಸಭಾ ಅಧ್ಯಕ್ಷ ಶಂಕರ್ ಬಿದರಿ, ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ, ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಈಶ್ವರ್ ಖಂಡ್ರೆ, ಸಂಸದ ಜಗದೀಶ್ ಶೆಟ್ಟರ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ...

ಕಾಂಗ್ರೆಸ್ ಶಾಸಕರಾದ ವಿನಯ ಕುಲಕರ್ಣಿ, ವಿಜಯಾನಂದ ಕಾಶಪ್ಪನವರ, ಹಂಪನಗೌಡ ಬಾದರ್ಲಿ, ಸಿ.ಎಸ್. ನಾಡಗೌಡ, ಸಂಸದ ಸಾಗರ್ ಖಂಡ್ರೆ, ಮುಖಂಡ ಅಲ್ಲಂ ವೀರಭದ್ರಪ್ಪ, ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಸೇರಿದಂತೆ ಹಲವರು ಸಭೆಯಲ್ಲಿದ್ದರು. ಸುದೀರ್ಘ ಚರ್ಚೆಯ ಬಳಿಕ ನಿರ್ಣಯಗಳನ್ನು ಅಂಗೀಕರಿಸಲಾಗಿದೆ.

ಮಹಾಸಭಾ ನಿರ್ಣಯಗಳೇನು?

ಒಂದನೇ ಪುಟದಿಂದ...

- ವೀರಶೈವ–ಲಿಂಗಾಯತ ಎಲ್ಲಾ ಉಪಪಂಗಡಗಳನ್ನು ಕೇಂದ್ರ ಹಿಂದುಳಿದ ವರ್ಗಗಳ(ಒಬಿಸಿ) ಪಟ್ಟಿಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿಯವರು ಶಿಫಾರಸು ಮಾಡಬೇಕು
- ಸಾಮಾಜಿಕ ಅಸಮಾನತೆಯ ನಿರ್ಮೂಲನೆ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಎಲ್ಲ ಸೈದ್ಧಾಂತಿಕ, ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಪ್ರಕ್ರಿಯೆಗಳಲ್ಲಿ ವೀರಶೈವ ಲಿಂಗಾಯತ ಸಮುದಾಯ ಮುಂಚೂಣಿಯಲ್ಲಿ ನಿಂತು ಬೆಂಬಲಿಸುತ್ತದೆ. ನಾವು ಜಾತಿ ಗಣತಿಯ ವಿರೋಧಿಗಳಲ್ಲ

ಉಗ್ರರನ್ನು ಗುರಿಯಾಗಿರಿಸಿಕೊಂಡು ವಾಯುದಾಳಿ ಮುಂದುವರಿಸಿದ ಇಸ್ರೇಲ್

ಇಸ್ರೇಲ್ ಮೇಲೆ ಹಿಜ್ಬುಲ್ಲಾ ಸರಣಿ ರಾಕೆಟ್ ದಾಳಿ

ಟೆಲ್ ಅವೀವ್ (ಎಪಿ): ಇಸ್ರೇಲ್‌ನ ಹೆಚ್ಚು ಜನವಸತಿ ಪ್ರದೇಶಗಳನ್ನು ಗುರಿಯಾಗಿರಿಸಿಕೊಂಡು ಮಂಗಳವಾರ ಹಿಜ್ಬುಲ್ಲಾಗಳು ಸರಣಿ ರಾಕೆಟ್ ದಾಳಿ ನಡೆಸಿದರು. ಇದಾದ ಕೆಲವೇ ಕ್ಷಣಗಳಲ್ಲಿ ನಗರದಲ್ಲಿ ತಕ್ಷಣವೇ ಸೈರನ್‌ಗಳು ಮೊಳಗಿದವು. ಆದರೆ, ಯಾವುದೇ ಪ್ರಾಣಹಾನಿಯಾದ ಬಗ್ಗೆ ವರದಿಯಾಗಿಲ್ಲ. ಗಾಜಾದಲ್ಲಿ ಕದನ ವಿರಾಮ ಮರು ಸ್ಥಾಪಿಸುವ ಉದ್ದೇಶದಿಂದ ಅಮೆರಿಕ ರಕ್ಷಣಾ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಟೆಲ್ ಅವೀವ್‌ಗೆ ಭೇಟಿ ನೀಡುವ ಕೆಲವೇ ಗಂಟೆಗಳ ಮುನ್ನ ಈ ದಾಳಿಗಳು ನಡೆದಿವೆ.

ಲೆಬನಾನ್ ಭಾಗದಿಂದ ಐದು ರಾಕೆಟ್‌ಗಳ ದಾಳಿ ನಡೆದಿದೆ. 'ಕ್ಷಿಪಣಿ ತಡೆ ವ್ಯವಸ್ಥೆ'ಯು ಬಹುಪಾಲು ರಾಕೆಟ್‌ಗಳನ್ನು ಆಕಾಶಮಾರ್ಗದಲ್ಲಿಯೇ ಹೊಡೆದುರುಳಿಸಿತು. ಒಂದು ರಾಕೆಟ್ ಖಾಲಿ ಪ್ರದೇಶದಲ್ಲಿ ಬಂದು ಬಿದ್ದಿತು ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಹಿಜ್ಬುಲ್ಲಾ ಸಂಘಟನೆಗೆ ಆರ್ಥಿಕ ನೆರವು ಒದಗಿಸುತ್ತಿದ್ದ ಆರೋಪದ ಮೇಲೆ 'ಅಲ್–ಖರ್ದ್–ಅಲ್ ಹಸನ್'ನ ಬ್ಯಾಂಕ್ ಶಾಖೆಗಳ ಮೇಲೆ ಇಸ್ರೇಲ್ ಭಾನುವಾರ ರಾತ್ರಿ ವಾಯುದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಹಿಜ್ಬುಲ್ಲಾ ಸಂಘಟನೆಗಳು ಈ ದಾಳಿ ನಡೆಸಿವೆ ಎಂದು ವಿಶ್ಲೇಷಿಸಲಾಗಿದೆ. ಹಮಾಸ್ ನಾಯಕ ಯಾಹ್ಯಾ ಸಿನ್ವಾರ್ ಹತ್ಯೆ ಬೆನ್ನಲ್ಲೇ, ಗಾಜಾದಲ್ಲಿ ಕದನ ವಿರಾಮ ಮರು ಸ್ಥಾಪಿಸುವ ಉದ್ದೇಶದಿಂದ ಅಮೆರಿಕವು ಮಾತುಕತೆಗೆ ಮತ್ತೆ ಚಾಲನೆ ನೀಡಿದೆ.

ಮತ್ತೆ ದಾಳಿ: 'ಹಿಜ್ಬುಲ್ಲಾಗಳಿಗೆ ಸೌಲಭ್ಯ'ಗಳನ್ನು ಒದಗಿಸಲಾಗುತ್ತಿದೆ ಎಂದು ಆರೋಪಿಸಿ, ದಕ್ಷಿಣ ಬೈರೂತ್‌ನ ಎರಡು ಕಟ್ಟಡಗಳನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ಸೇನೆಯು ಮಂಗಳವಾರವು ವಾಯುದಾಳಿ ನಡೆಸಿತು.

ಲೆಬನಾನ್‌ನ ದಕ್ಷಿಣ ಬೈರೂತ್ ಕಟ್ಟಡವೊಂದರ ಮೇಲೆ ಸೋಮವಾರ ರಾತ್ರಿ ಇಸ್ರೇಲ್ ವಾಯುದಾಳಿ ನಡೆಸಿದ ಬಳಿಕ ಆಳಿದುಳಿದ ವಸ್ತುಗಳಿಗೆ ಹುಡುಕಾಡಿದ ನಿವಾಸಿಗಳು – ಎಪಿ/ಪಿಟಿಐ ಚಿತ್ರ

ಅತ್ಯಂತ ಹೆಚ್ಚು ವಾಹನದಟ್ಟಣೆ ಹೊಂದಿರುವ ಪ್ರದೇಶದಲ್ಲೇ ಈ ಕಟ್ಟಡವಿತ್ತು. ಯುದ್ಧದಿಂದ ನಿರಾಶ್ರಿತರಾದ ಸಾಕಷ್ಟು ಮಂದಿ ಇಲ್ಲಿ ನೆಲೆಸಿದ್ದರು. ದಾಳಿಯಿಂದ ಮೃತಪಟ್ಟವರ ವಿವರ ಗೊತ್ತಾಗಿಲ್ಲ.

ದಾಳಿಯ ಹೊಣೆ ಹೊತ್ತ ಹಿಜ್ಬುಲ್ಲಾ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಿವಾಸದ ಮೇಲೆ ನಡೆದ ಡ್ರೋನ್ ದಾಳಿಯನ್ನು ನಮ್ಮ ಸಂಘಟನೆಯೇ ನಡೆಸಿದೆ ಎಂದು ಹಿಜ್ಬುಲ್ಲಾ ಸಂಘಟನೆಯ ವಕ್ತಾರ ಮೊಹಮ್ಮದ್ ಅಫೀಫ್ ತಿಳಿಸಿದ್ದಾರೆ.

ಸಾವಿನ ಸಂಖ್ಯೆ 13ಕ್ಕೆ ಏರಿಕೆ

ಲೆಬನಾನ್‌ನ ರಾಜಧಾನಿ ಬೈರೂತ್‌ನ ಪ್ರಮುಖ ಆಸ್ಪತ್ರೆ ಸನಿಹ ಇಸ್ರೇಲ್ ನಡೆಸಿದ ವಾಯುದಾಳಿಯಿಂದ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ಡಜನ್‌ಗೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಸೋಮವಾರ ತಡರಾತ್ರಿ ವೇಳೆ ಸರ್ಕಾರಿ ಆಸ್ಪತ್ರೆ ಮುಂಭಾಗದಲ್ಲಿದ್ದ ಕಟ್ಟಡವನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ವಾಯು ದಾಳಿ ನಡೆಸಿತ್ತು. ಇದರಿಂದ 57 ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್ ತಿಳಿಸಿತ್ತು. ಆಸ್ಪತ್ರೆಯ ಮುಖ್ಯದ್ವಾರದ ಸನಿಹದಲ್ಲೇ ಈ ದಾಳಿ ನಡೆದಿರುವ ದೃಶ್ಯವೂ ಸಾಮಾಜಿಕ ಜಾಲತಾಣಗಳಲ್ಲಿಯೂ ಹರಿದಾಡಿದೆ.

'ನಾವು ಭಯೋತ್ಪಾದಕರನ್ನು ಗುರಿಯಾಗಿರಿಸಿಕೊಂಡು ಮಾತ್ರ ದಾಳಿ ನಡೆಸಿದ್ದು, ನಾಗರಿಕರಿಗೆ ಹಾನಿಯಾಗುವುದನ್ನು ತಪ್ಪಿಸಲು ಯತ್ನಿಸುತ್ತಿದ್ದೇವೆ' ಎಂದು ಇಸ್ರೇಲ್ ಸೇನೆಯು ತಿಳಿಸಿದೆ.

ಐ.ಎಸ್ ಕಮಾಂಡರ್, 8 ಅಧಿಕಾರಿಗಳ ಹತ್ಯೆ

ಬಾಗ್ದಾದ್ (ಎ.ಪಿ): ಇರಾಕ್ ಪಡೆಗಳು ಮಂಗಳವಾರ ನಡೆಸಿದ ಕಾರ್ಯಾಚರಣೆಯಲ್ಲಿ ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿಗಳ ಸಂಘಟನೆಯ ಕಮಾಂಡರ್ ಮತ್ತು ಇತರೆ ಎಂಟು ಅಧಿಕಾರಿಗಳನ್ನು ಹತ್ಯೆ ಮಾಡಿವೆ ಎಂದು ಪ್ರಧಾನಿ ಇಲ್ಲಿ ಪ್ರಕಟಿಸಿದರು.

ದೇಶದ ಹಮ್ರಿನ್ ಶಿಖರ ಪ್ರಾಂತ್ಯದಲ್ಲಿ ನಡೆದ ಚಕಮಕಿಯಲ್ಲಿ ಜಾಸ್ಸಿಂ ಅಲ್ ಮಜ್ರೂಯಿ ಅಬು ಅಬ್ದುಲ್ ಖಾದೆರ್ ಹತನಾದ ಎಂದು ಪ್ರಧಾನಿ ಶಿಯಾ ಅಲ್ ಸುದಾನಿ ತಿಳಿಸಿದರು.

'ಇರಾಕ್‌ನಲ್ಲಿ ಉಗ್ರಗಾಮಿಗಳಿಗೆ ಅವಕಾಶವಿಲ್ಲ. ಅವರ ಅಡಗುತಾಣಗಳಿಗೇ ನುಗ್ಗಿ, ನಿರ್ಮೂಲನೆ ಮಾಡುತ್ತೇವೆ' ಎಂದು ಸುದಾನಿ ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ. ಗುಪ್ತದಳದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಲಾಯಿತು ಎಂದು ತಿಳಿಸಿದರು.

ಇಸ್ರೇಲ್‌ಗೆ ಬ್ಲಿಂಕನ್ ಭೇಟಿ

ಟೆಲ್ ಅವೀವ್ (ಎಪಿ): ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಮಂಗಳವಾರ ಇಸ್ರೇಲ್‌ಗೆ ಭೇಟಿ ನೀಡಿದರು.

ಹಮಾಸ್–ಇಸ್ರೇಲ್ ಸಂಘರ್ಷ ಆರಂಭವಾದ ನಂತರ ಬ್ಲಿಂಕೆನ್ ಅವರ 11ನೇ ಭೇಟಿ ಇದಾಗಿದೆ.

ಹಿಜ್ಬುಲ್ಲಾ ಉಗ್ರ ಸಂಘಟನೆಯು ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಿದ ಕೆಲವೇ ಗಂಟೆಗಳ ನಂತರ ಬ್ಲಿಂಕೆನ್ ಉಕ್ರೇನ್‌ಗೆ ಭೇಟಿ ನೀಡಿದ್ದಾರೆ.

ಬ್ಲಿಂಕನ್ ಅವರು ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಇತರ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡುವ ನಿರೀಕ್ಷೆ ಇದೆ. ನಂತರ ಜೋರ್ಡನ್, ಸೌದಿ ಅರೇಬಿಯಾ, ಕತಾರ್, ಯುಎಇಗೆ ಭೇಟಿ ನೀಡಲಿದ್ದಾರೆ.

ಒತ್ತೆಯಾಳುಗಳ ಬಿಡುಗಡೆ ಬಗ್ಗೆ ಬ್ಲಿಂಕನ್ ಚರ್ಚೆ ನಡೆಸಲಿದ್ದಾರೆ.

ಆರ್‌ಟಿಸಿಗೆ ದಾಖಲಾಗದ ಮರಗಳ ವಿವರ • ಕಚೇರಿಗಳಿಗೆ ರೈತರ ಅಲೆದಾಟ

'ಬೆಳೆ ದರ್ಶಕ್': ಮರಗಳ ನಮೂದಿಗೆ ಜಾಗವಿಲ್ಲ!

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಸಾಗುವಾನಿ, ಬೀಟೆ, ಹುಣಸೆ ಮೊದಲಾದ ಮರಗಳ ವಿವರವನ್ನು ಪಹಣಿಯಲ್ಲಿ (ಆರ್‌ಟಿಸಿ) ನಮೂದಿಸಲು ಸಾಧ್ಯವಾಗದೆ ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಕಚೇರಿಗಳಿಗೆ ಅಲೆಯುವಂತಾಗಿದೆ.

1999– 2000ನೇ ಸಾಲಿನಿಂದಲೇ ಕೈಬರಹದ ಪಹಣಿಗೆ ತಿಲಾಂಜಲಿ ಹೇಳಿ, ಡಿಜಿಟಲ್ ವ್ಯವಸ್ಥೆ ಅಳವಡಿಸಿಕೊಂಡು ಎರಡೂವರೆ ದಶಕ ಕಳೆದರೂ, ಜಮೀನುಗಳಲ್ಲಿನ ಮರಗಳ ವಿವರ, ಸಂಖ್ಯೆ ನಮೂದಿಸುವಲ್ಲಿ ಹಲವು ತೊಡಕುಗಳನ್ನು ರೈತರು ಎದುರಿಸುತ್ತಿದ್ದಾರೆ. ರೈತರಿಗೆ ಆಗುತ್ತಿರುವ ಸಮಸ್ಯೆ ನಿವಾರಿಸಲು ಕಂದಾಯ ಇಲಾಖೆ ಅಗತ್ಯ ಕ್ರಮಗಳನ್ನೇ ಕೈಗೊಂಡಿಲ್ಲ ಎನ್ನುವುದು ರೈತರ ದೂರು.

ಕೃಷಿ ಹಾಗೂ ತೋಟಗಾರಿಕಾ ಬೆಳೆಗಳನ್ನು ಪಹಣಿಯಲ್ಲಿ ನಮೂದಿಸಲು 2021 ರಿಂದ 'ಬೆಳೆ ದರ್ಶಕ್' ಆ್ಯಪ್ ಬಳಸಲಾಗುತ್ತಿದೆ. ಆಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್ ಬಳಸಿ ರೈತರೇ ಆ್ಯಪ್ ಮೂಲಕ ಬೆಳೆ ನಮೂದಿಸಬಹುದು. ಈಗ ಶೇ 80ರಷ್ಟು ರೈತರೇ ಬೆಳೆ ನಮೂದು ಮಾಡುತ್ತಿದ್ದಾರೆ. ಕೃಷಿ ಬೆಳೆಯ ಜತೆಗೆ, ಅಡಿಕೆ, ತೆಂಗು ಮೊದಲಾದ ತೋಟಗಾರಿಕಾ ಬೆಳೆಗಳ ನಮೂದಿಗೂ ಸಮಸ್ಯೆ ಇಲ್ಲ. ಆದರೆ, ಅದೇ ಜಮೀನಿನ ಬದುಗಳಲ್ಲಿ, ಹಳ್ಳಕೊಳ್ಳದ ಸಮೀಪ ಬಿಡಿಯಾಗಿ ಬೆಳೆದ ಮರಗಳ ವಿವರಗಳನ್ನು ಕಾಲಂ 7ರಲ್ಲಿ ನಮೂದಿಸಲು 'ಬೆಳೆ ದರ್ಶಕ್' ಆ್ಯಪ್‌ನಲ್ಲಿ ಅವಕಾಶವೇ ಇಲ್ಲ.

ಗ್ರಾಮೀಣ ಪ್ರದೇಶದ ಜಮೀನುಗಳಲ್ಲಿನ ಮರಗಳ ಮಾಹಿತಿಯನ್ನು ಆರ್‌ಟಿಸಿ ದಾಖಲೆಗಳಿಗೆ ನಮೂದಿಸುವ ಅಧಿಕಾರವನ್ನು ತಹಶೀಲ್ದಾರ್‌ಗಳಿಗೆ, ಪಟ್ಟಣ, ನಗರ ಪ್ರದೇಶ ಒಳಗೊಂಡ ಕಸಬಾ ಹೋಬಳಿ ವ್ಯಾಪ್ತಿಯ ಜಮೀನುಗಳಲ್ಲಿ ಬೆಳೆದ ಮರಗಳ ಮಾಹಿತಿ ನಮೂದಿಸುವ ಅಧಿಕಾರವನ್ನು ಆಯಾ ಭಾಗದ ಉಪ ವಿಭಾಗಾಧಿಕಾರಿಗಳಿಗೆ ನೀಡಲಾಗಿದೆ.

ಮೊದಲು ಗ್ರಾಮ ಆಡಳಿತಾಧಿಕಾರಿಗೆ (ವಿಎ) ಅರ್ಜಿ ಸಲ್ಲಿಸಬೇಕು. ಸ್ಥಳ ಸಮೀಕ್ಷೆ ನಡೆಸಿದ ನಂತರ ಕಡತವನ್ನು ಕಂದಾಯ ನಿರೀಕ್ಷಕರಿಗೆ (ಆರ್‌ಐ) ಸಲ್ಲಿಸುತ್ತಾರೆ. ಅಲ್ಲಿಂದ ತಹಶೀಲ್ದಾರ್ ಕಚೇರಿಗೆ ಹೋಗುತ್ತದೆ. ನಂತರ ಉಪ ವಿಭಾಗಾಧಿಕಾರಿ ಪರಿಶೀಲಿಸಿ, ಅರ್ಜಿ ಸಲ್ಲಿಸಿದ ರೈತರ ಜಮೀನಿನಲ್ಲಿ ಯಾವ ಜಾತಿಯ ಎಷ್ಟು ಮರಗಳಿವೆ ಎನ್ನುವುದನ್ನು ಪಹಣಿಯ ಕಾಲಂ 7ರಲ್ಲಿ ನಮೂದಿಸುತ್ತಾರೆ.

ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಲು ಕನಿಷ್ಠ 6 ರಿಂದ 8 ತಿಂಗಳ ಸಮಯ ತೆಗೆದುಕೊಳ್ಳಲಾಗುತ್ತಿದೆ. ಕಳೆದ ನಾಲ್ಕು ತಿಂಗಳಿನಿಂದ ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಲಾಗಿನ್‌ನಲ್ಲೂ ತಾಂತ್ರಿಕ ದೋಷಗಳು ಕಾಣಿಸಿಕೊಂಡಿದ್ದು, ಮರಗಳ ವಿವರ, ಸಂಖ್ಯೆ ನಮೂದಾಗುತ್ತಿಲ್ಲ.

'ಜಮೀನಿನಲ್ಲಿ 30 ವರ್ಷಗಳ ಹಿಂದೆ ಹಾಕಿದ್ದ 40 ಸಾಗುವಾನಿ ಮರಗಳಿವೆ. ಈಗಲೂ ಆರ್‌ಟಿಸಿಯಲ್ಲಿ ನಮೂದಾಗಿಲ್ಲ. ಅರ್ಜಿ ಸಲ್ಲಿಸಿ ಎಲ್ಲ ಪ್ರಕ್ರಿಯೆ ಪೂರ್ಣಗೊಂಡರೂ ತಾಂತ್ರಿಕ ತೊಂದರೆಯ ಕಾರಣ ನೀಡಿ ಉಪ ವಿಭಾಗಾಧಿಕಾರಿ ಕಚೇರಿಯಲ್ಲೇ ಕಡತ ಉಳಿದಿದೆ' ಎನ್ನುತ್ತಾರೆ ರೈತ ರಮೇಶ್.

ಮರ ಕಟಾವು ಅನುಮತಿಗೂ ಹರಸಾಹಸ

ರೈತರು ಆರ್‌ಟಿಸಿ ದಾಖಲೆಗಳಲ್ಲಿ ಮರಗಳ ವಿವರ ನಮೂದಿಸಲು ಅಲೆದಾಡುವುದಕ್ಕಿಂತಲೂ ಮರಗಳ ಕಟಾವಿಗೆ ಅನುಸರಿಸುವ ಪ್ರಕ್ರಿಯೆ ಸುದೀರ್ಘವಾಗಿದ್ದು, ಸಾಕಷ್ಟು ಸಮಯ ವ್ಯರ್ಥವಾಗುತ್ತಿದೆ.

ಮರಗಳ ಕಟಾವಿಗೆ ತಹಶೀಲ್ದಾರ್‌ಗೆ ಸಲ್ಲಿಸಿದ ಅರ್ಜಿ ಸರ್ವೆ ವಿಭಾಗಕ್ಕೆ ಕಳುಹಿಸಲಾಗುತ್ತದೆ. ಸರ್ವೆಯ ನಂತರ ರೈತರು ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ ಕಚೇರಿಗೆ ಅಲೆಯಬೇಕು. ನಂತರ ಕಡತ ಅರಣ್ಯಾಧಿಕಾರಿಗೆ ಹೋಗುತ್ತದೆ. ಅಲ್ಲಿಂದ ಅನುಮತಿ ಪಡೆದು, ನಿರ್ದಿಷ್ಟ ಶುಲ್ಕ ಪಾವತಿಸಿದ ನಂತರ ಮರ ಕಟಾವು ಪ್ರಕ್ರಿಯೆ ಆರಂಭಿಸಬೇಕು.

'ಜಮೀನು ಬದುಗಳಲ್ಲಿ ಬೆಳೆದ ಸಾಗುವಾನಿ ಮರಗಳ ಮಾಹಿತಿಯನ್ನು ಪಹಣಿಯಲ್ಲಿ ನಮೂದಿಸುವುದು, ಕಟಾವಿಗೆ ಅನುಮತಿ ಪಡೆಯುವುದು ದೊಡ್ಡ ತಲೆನೋವು. ಹಾಗಾಗಿ, ಕಟಾವು ಮಾಡಬೇಕಾದ ಮರಗಳನ್ನು ಸಮೀಪದ ಟಿಂಬರ್ ಮರ್ಚೆಂಟ್‌ಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ' ಎನ್ನುತ್ತಾರೆ ಶ್ರೀನಿವಾಸಪುರದ ರೈತ ಬಿ.ಪಿ. ಪ್ರಸನ್ನ.

ಜಮೀನು ತೊರೆದರೂ ಪಹಣಿ ಬಿಡದ 'ನೀಲಗಿರಿ'

'ತಂದೆಯ ಅವಧಿಯಲ್ಲಿ ಹೊಲದಲ್ಲಿ ಒಂದಷ್ಟು ನೀಲಗಿರಿ ನೆಟ್ಟಿದ್ದರು. ಆಗ ಪಹಣಿಯಲ್ಲಿ ನೀಲಗಿರಿ ಎಂದೇ ನಮೂದಾಗಿತ್ತು. ನಾನು ಬೇಸಾಯ ಆರಂಭಿಸಿದ ಮೇಲೆ ನೀಲಗಿರಿಯನ್ನು ಸಂಪೂರ್ಣ ತೆಗೆದುಹಾಕಿ, ಹತ್ತು ವರ್ಷಗಳಿಂದ ರಾಗಿ ಬೆಳೆಯುತ್ತಿದ್ದೇವೆ. ಆದರೆ, ಎಷ್ಟು ಬಾರಿ ಅರ್ಜಿಕೊಟ್ಟರೂ ಪಹಣಿಯಲ್ಲಿ ಮಾತ್ರ ನೀಲಗಿರಿ ಬದಲಾಗಲೇ ಇಲ್ಲ' ಎನ್ನುವುದು ಮಾಗಡಿ ತಾಲ್ಲೂಕಿನ ಮೈಲನಹಳ್ಳಿಯ ರೈತ ಎಂ.ಸಿ. ಮಧುಕುಮಾರ ಅವರ ದೂರು.

4 ಮದುವೆಗೆ ಮುಸ್ಲಿಮರಿಗೆ ಅವಕಾಶ

ಒಂದನೇ ಪುಟದಿಂದ...

ಇದು ಪುರುಷನ ಮೂರನೆಯ ಮದುವೆ ಆಗಿದ್ದ ಕಾರಣಕ್ಕೆ ವಿವಾಹ ನೋಂದಣಿ ಅರ್ಜಿಯನ್ನು ತಿರಸ್ಕರಿಸಲಾಗಿದೆ. ವಿವಾಹ ಪ್ರಮಾಣಪತ್ರವನ್ನು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಈ ದಂಪತಿ ನ್ಯಾಯಾಲಯವನ್ನು ಕೋರಿದ್ದರು.

ಮಹಾರಾಷ್ಟ್ರ ವೈವಾಹಿಕ ಸಂಸ್ಥೆಗಳ ನಿಯಂತ್ರಣ ಹಾಗೂ ವಿವಾಹ ನೋಂದಣಿ ಕಾಯ್ದೆಯ ಪ್ರಕಾರ ಮದುವೆ ಅಂದರೆ ಒಂದು ಬಾರಿ ಮಾತ್ರ ಆಗುವಂಥದ್ದು, ಹಲವು ಬಾರಿ ಆಗುವಂಥದ್ದಲ್ಲ ಎಂದು ಹೇಳಿದ್ದ ಅಧಿಕಾರಿಗಳು, ಈ ದಂಪತಿಯ ವಿವಾಹ ನೋಂದಣಿಗೆ ನಿರಾಕರಿಸಿದ್ದರು.

'ಮುಸ್ಲಿಮರ ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ಒಂದೇ ಬಾರಿಗೆ ನಾಲ್ಕು ಪತ್ನಿಯರನ್ನು ಹೊಂದಲು ಪುರುಷರಿಗೆ ಅವಕಾಶ ಇದೆ' ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಗುರ್ಮೀತ್ ವಿಚಾರಣೆಗೆ ಸರ್ಕಾರ ಅಸ್ತು

ಚಂಡೀಗಢ (ಪಿಟಿಐ): ಡೇರಾ ಸಚ್ಚಾ ಸೌದಾ ಪಂಥದ ಮುಖ್ಯಸ್ಥ, ಅತ್ಯಾಚಾರ ಅಪರಾಧಿ ಗುರ್ಮೀತ್ ರಾಮ್ ರಹೀಮ್ ಸಿಂಗ್ ವಿರುದ್ಧ ದಾಖಲಾಗಿರುವ ಧರ್ಮಗ್ರಂಥಕ್ಕೆ ಅಪಚಾರ ಎಸಗಿದ ಪ್ರಕರಣದ ವಿಚಾರಣೆ ನಡೆಸಲು ಪಂಜಾಬ್ ಸರ್ಕಾರ ಅನುಮತಿ ನೀಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಸೋಮವಾರ ಸಂಜೆ ವಿಚಾರಣೆಗೆ ಅನುಮತಿ ನೀಡಿದರು ಎಂದು ತಿಳಿಸಿವೆ.

2015ರಲ್ಲಿ ಗುರ್ಮೀತ್ ರಾಮ್ ರಹೀಮ್ ಸಿಂಗ್ ಹಾಗೂ ಬೆಂಬಲಿಗರು ಸಿಖ್ ಸಮುದಾಯದ ಪವಿತ್ರ ಧರ್ಮಗ್ರಂಥ 'ಗುರುಗ್ರಂಥ ಸಾಹಿಬ್'ಗೆ ಅಪಚಾರ ಎಸಗಿದ್ದರು. ಘಟನೆ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿ ಹಿಂಸಾಚಾರ ಭುಗಿಲೆದ್ದಿತ್ತು. ನಂತರ ನಡೆದ ಬೆಳವಣಿಗೆಯಲ್ಲಿ ಇಬ್ಬರು ಮೃತಪಟ್ಟಿದ್ದರು.

ಈ ಸಂಬಂಧ ಮೂರು ಪ್ರಕರಣಗಳು ದಾಖಲಾಗಿದ್ದವು. ನಂತರ ಈ ಪ್ರಕರಣಗಳ ತನಿಖೆಯ ಜವಾಬ್ದಾರಿಯನ್ನು ಸಿಬಿಐಗೆ ವರ್ಗಾಯಿಸಲಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,781
ಇಂದಿನ ಅಂತ್ಯ	24,472
▼	309
ದಿನದ ಕನಿಷ್ಠ	24,445

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹13500-13500
ಕೆ.ಆರ್.ಪೇಟೆ	₹12000-12000
ತಿಪಟೂರು	₹13000-13800
ತುರುವೇಕೆರೆ	₹12500-12500

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ಸಂಸ್ಕರಿತ)	₹1500 (1490)
ಸೋಯಾ (ಸಂಸ್ಕರಿತ)	₹1250 (1250)
ಸೂರ್ಯಕಾಂತಿ (ಸಂಸ್ಕರಿತ)	₹1290 (1290)
ಪಾಮೋಲಿನ್	₹1265 (1260)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE
Smt. Sujatha Nagendra
On 13th October 2024
Gowri
love you
Forever
M Nagendra
Darshan, Harshitha, Suman, Dhaksha, Aanvi, Sriyaan, Avira, Nyra, Munihanumappa & Family.
K.N. Suresh Family

ಭಾರತ ಸಂಚಾರ ನಿಗಮ ಲಿಮಿಟೆಡ್ ಹೇಳಿಕೆ: ಹೊಸ ಸೇವೆಗೆ ಚಾಲನೆ

‘ಮೊಬೈಲ್ ಸೇವಾ ಶುಲ್ಕ ಏರಿಸಲ್ಲ’

ನವದೆಹಲಿ (ಪಿಟಿಐ): ‘ಮೊಬೈಲ್ ಸೇವಾ ಶುಲ್ಕವನ್ನು ಏರಿಕೆ ಮಾಡುವುದಿಲ್ಲ’ ಎಂದು ಸರ್ಕಾರಿ ಸ್ವಾಮ್ಯದ ಭಾರತ ಸಂಚಾರ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್) ಸ್ಪಷ್ಟಪಡಿಸಿದೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಎಸ್‌ಎನ್‌ಎಲ್ ಅಧ್ಯಕ್ಷ ಮತ್ತು ಸಿಎಂಡಿ ರಾಬರ್ಟ್ ರವಿ, ‘ನಮ್ಮ ಗ್ರಾಹಕರು ಸಂತೋಷವಾಗಿರುವುದನ್ನು ನೋಡುವುದೇ ನಮ್ಮ ಉದ್ದೇಶ. ಅವರ ವಿಶ್ವಾಸ ಗಳಿಸುವುದೇ ನಮ್ಮ ಪ್ರಧಾನ ಆದ್ಯತೆಯಾಗಿದೆ. ಹಾಗಾಗಿ, ಶುಲ್ಕ ಏರಿಕೆಗೆ ಕ್ರಮ ಕೈಗೊಳ್ಳುವುದಿಲ್ಲ. ಸದ್ಯ ಅಂತಹ ಅಗತ್ಯವೂ ಇಲ್ಲ’ ಎಂದು ಹೇಳಿದರು.

‘ಈಗಾಗಲೇ, ಬಿಎಸ್‌ಎನ್‌ಎಲ್‌ನ 4ಜಿ ಸೇವೆಯ ಪ್ರಾಯೋಗಿಕ ಪರೀಕ್ಷೆ ಆರಂಭಿಸಲಾಗಿದೆ. ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುವುದೇ ನಮ್ಮ ಮೊದಲ ಗುರಿ. ಇದೇ ವರ್ಷದಲ್ಲಿ ದೇಶದಾದ್ಯಂತ 4ಜಿ ವಾಣಿಜ್ಯ ಸೇವೆ ಆರಂಭಕ್ಕೆ ಚಾಲನೆ ದೊರೆಯಲಿದೆ’ ಎಂದು ವಿವರಿಸಿದರು.

ಈಗಾಗಲೇ, ಖಾಸಗಿ ವಲಯದ ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್, ವೊಡಾಫೋನ್ ಐಡಿಯಾ ಕಂಪನಿಗಳು ಮೊಬೈಲ್ ಸೇವಾ ಶುಲ್ಕವನ್ನು ಏರಿಕೆ ಮಾಡಿವೆ.

ಹೊಸ ಸೇವೆಗೆ ಚಾಲನೆ: ಬಿಎಸ್‌ಎನ್‌ಎಲ್‌ನಿಂದ ಸ್ಪ್ಯಾಮ್ ಬ್ಲಾಕಿಂಗ್ ಸೊಲ್ಯೂಷನ್ ಸೇವೆಗೆ ಚಾಲನೆ ನೀಡಲಾಗಿದೆ. ಇದು ಗ್ರಾಹಕರಿಗೆ ಕಿರಿಕಿರಿ ಉಂಟು ಮಾಡುವ ಎಸ್‌ಎಂಎಸ್‌ಗಳನ್ನು ಸ್ವಯಂ-ಚಾಲಿತವಾಗಿ ಶೋಧಿಸಲಿದೆ.

ವೈ-ಫೈ ರೋಮಿಂಗ್ ಸೇವೆ ಆರಂಭಿಸಿದ್ದು, ಪ್ರಯಾಣದ ವೇಳೆಯಲ್ಲಿ ಗ್ರಾಹಕರು ಬಿಎಸ್‌ಎನ್‌ಎಲ್ ಎಫ್‌ಟಿಟಿಎಚ್ ವೈ-ಫೈ ನೆಟ್‌ವರ್ಕ್ ಸೇವೆ ಪಡೆಯಲು ಸಹಕಾರಿಯಾಗಲಿದೆ. ದೇಶದ ಮೊದಲ ಡೈರೆಕ್ಟ್ ಟು ಡಿವೈಸ್ (ಡಿ2ಡಿ) ಸೇವೆಗೆ ಚಾಲನೆ ನೀಡಿದೆ. ಈ ಸೇವೆಯು ತುರ್ತುಸ್ಥಿತಿ ಮತ್ತು ದುರ್ಗಮ ಪ್ರದೇಶದಲ್ಲಿ ಯುಪಿಐ ಪಾವತಿಗೆ ಅನುಕೂಲ ಕಲ್ಪಿಸಲಿದೆ.

ಲೋಗೊ ಬದಲಾವಣೆ

ಕೇಂದ್ರ ಸರ್ಕಾರವು ಭಾರತ ಸಂಚಾರ ನಿಗಮದ ಲೋಗೊವನ್ನು ಬದಲಾವಣೆ ಮಾಡಿದೆ. ಲೋಗೊದ ಥೀಮ್‌ಗೆ ಕೇಸರಿ ಬಣ್ಣ ಅಳವಡಿಸಲಾಗಿದೆ. ಇದು ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ದಾರಿ ಮಾಡಿಕೊಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಲೋಗೊದಲ್ಲಿ ದೇಶದ ಏಕತೆ ಸಾರುವ ಭಾರತದ ತ್ರಿವರ್ಣ ಧ್ವಜದ ಮೂರು ಬಣ್ಣಗಳಿವೆ. ಈ ಮೊದಲ ಲೋಗೊ ಕೆಳಗೆ ‘ಕನೆಕ್ಟಿಂಗ್ ಇಂಡಿಯಾ’ ಎಂದು ಅಡಿಬರಹವಿತ್ತು. ಇದನ್ನು ‘ಕನೆಕ್ಟಿಂಗ್ ಭಾರತ’ ಎಂದು ಬದಲಾವಣೆ ಮಾಡಲಾಗಿದೆ. ಹೊಸ ಲೋಗೊ ‘ಸುರಕ್ಷಿತ, ವಿಶ್ವಾಸಾರ್ಹ, ಕೈಗೆಟುಕುವ’ ಘೋಷವಾಕ್ಯ ಒಳಗೊಂಡಿದೆ. ಇದು ಉತ್ತಮ ಸಂಪರ್ಕ ಸೇವೆ ಒದಗಿಸುವ ಬದ್ಧತೆಯ ಸಂಕೇತವಾಗಿದೆ’ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹122-458
ದ್ವಿತಳಿ (ಬಿ.ವಿ)	₹206-662

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹178
ಆರ್‌ಎಸ್‌ಎಸ್-5	₹173
ಗುಡ್ ಲಾಟ್	₹170

(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಕರ ನಾರಾಯಣ ರಾವ್, ಉಡುಪಿ

- **ಪ್ರಶ್ನೆ: ನನ್ನ ಪುತ್ರಿ ಕಳೆದ ಐದಾರು ವರ್ಷದಿಂದ ಗಂಡ ಹಾಗೂ ಮಕ್ಕಳೊಂದಿಗೆ ವಿದೇಶದಲ್ಲಿದ್ದು, ಉದ್ಯೋಗ ಮಾಡುತ್ತಿದ್ದಾಳೆ. ಮುಂದಿನ ಮೂರ್ನಾಲ್ಕು ವರ್ಷದ ಬಳಿಕ ಅವರು, ಕಾಯಂ ಆಗಿ ನಮ್ಮ ಜೊತೆ ಇರಲಿದ್ದಾರೆ. ಪ್ರಸ್ತುತ ನಮ್ಮ ಖರ್ಚಿಗೆ ವಿದೇಶದಿಂದ ಹಣ ಕಳಿಸುತ್ತಿದ್ದಾಳೆ.**

ಈ ಅವಧಿಯಲ್ಲಿ ನನ್ನ ಕೆಲವು ಆರ್ಥಿಕ ಹೂಡಿಕೆಗಳನ್ನು ಆಕೆಯ ಹೆಸರಿಗೆ ವರ್ಗಾಯಿಸಿ ಯಾವುದೇ ಆತಂಕ ಇಲ್ಲದೆ ಇರುವ ಬಗ್ಗೆ ಯೋಚಿಸಿದ್ದೇನೆ. ನನ್ನ ವಯಸ್ಸು 75. ಪತ್ನಿ ವಯಸ್ಸು 68. ನಾನು ಹದಿನೈದು ವರ್ಷ ಹಿಂದೆ ಬ್ಯಾಂಕ್‌ನಿಂದ ನಿವೃತ್ತಿಯಾದಾಗ ಬಂದ ₹30 ಲಕ್ಷ ಮೊತ್ತದಲ್ಲಿ ₹10 ಲಕ್ಷವನ್ನು ಅಂಚೆ ಇಲಾಖೆಯಲ್ಲಿ ಠೇವಣಿ ಇಟ್ಟಿದ್ದೆ. ಉಳಿದ ಮೊತ್ತವನ್ನು ಇನ್ಫೊಸಿಸ್, ಟಾಟಾ ಮೋಟರ್ಸ್, ಕೋಲ್ ಇಂಡಿಯಾ, ಐಟಿಸಿ, ಗೋದ್ರೇಜ್, ಏಷ್ಯನ್ ಪೇಂಟ್ಸ್, ಎಚ್‌ಯುಎಲ್, ಎಸ್‌ಬಿಐ ಹಾಗೂ ರಿಲಯನ್ಸ್ ಕಂಪನಿಗಳಲ್ಲಿ ₹2 ಲಕ್ಷದಂತೆ ನನ್ನ ಹೂಡಿಕೆ ಮಾಡಿದ್ದೆ. ಇವುಗಳ ಮೇಲೆ ಚೆನ್ನಾಗಿ ಡಿವಿಡೆಂಡ್ ಸಿಕ್ಕಿದೆ. ಅದೃಷ್ಟಕ್ಕೆ ಕೆಲವು ಷೇರುಗಳು ಈ 15 ವರ್ಷದಲ್ಲಿ ಹತ್ತು ಪಟ್ಟು ಹೆಚ್ಚು ಬೆಳೆದಿವೆ.

ಈ ಎಲ್ಲಾ ಷೇರುಗಳನ್ನು ಮುಂದಿನ ದಿನಗಳಲ್ಲಿ ನನ್ನಿಂದ ನಿರ್ವಹಿಸುವುದು ಕಷ್ಟ. ಹೀಗಾಗಿ, ಮುಂದಿನ ರಜೆಯಲ್ಲಿ ಮಗಳು ಬಂದಾಗ ಆಕೆಯ ಹೆಸರಿಗೆ ವರ್ಗಾಯಿಸೋಣ ಎಂದುಕೊಂಡಿದ್ದೇನೆ. ಈ ವಿಚಾರಕ್ಕೆ ಸಂಬಂಧಿಸಿ ಎಷ್ಟು ತೆರಿಗೆ ಕಟ್ಟಬೇಕು ಹಾಗೂ ವರ್ಗಾವಣೆ ಬಗ್ಗೆ ಮಾಹಿತಿ ನೀಡಿ.

ಉತ್ತರ: ನಿಮ್ಮ ಹೂಡಿಕೆ ಬಗೆಗಿನ ಅರಿವು ಸಾಮಾನ್ಯವೆಂದು ನೀವು ಹೇಳಿದರೂ ಅದರ ಹಿಂದಿರುವ ಲಕ್ಷ್ಯವನ್ನು ಮೆಚ್ಚಲೇಬೇಕು. ಇದು ಎಲ್ಲ ದೀರ್ಘಾವಧಿ ಹೂಡಿಕೆದಾರರಿಗೆ ಮಾರ್ಗದರ್ಶಿ ಸೂತ್ರದಂತಿದೆ. ನಿಮ್ಮ ಪ್ರಶ್ನೆಗೆ ಸಂಬಂಧಿಸಿ ಹೇಳುವುದಾದರೆ ನಿಮ್ಮ ಷೇರುಗಳ ಮೌಲ್ಯ ಎಷ್ಟೇ ಇದ್ದರೂ ನಿಮ್ಮ ಮಗಳ ಹೆಸರಲ್ಲಿ ಅವುಗಳನ್ನು ಉಡುಗೊರೆ ರೂಪದಲ್ಲಿ ಕೊಟ್ಟಾಗ ತೆರಿಗೆ ಇರುವುದಿಲ್ಲ. ತಂದೆ, ಮಕ್ಕಳ ನಡುವಿನ ಇಂತಹ ವರ್ಗಾವಣೆಗೆ ತೆರಿಗೆ ವಿನಾಯಿತಿ ಇದೆ. ಹೆಚ್ಚುವರಿ ದಾಖಲೆಗಾಗಿ ಅಗತ್ಯ ಬಿದ್ದರೆ ವಕೀಲರನ್ನು ಸಂಪರ್ಕಿಸಿ ಗಿಫ್ಟ್ ಡೀಡ್ ಮಾಡಿಸಿ ವರ್ಗಾಯಿಸಿ. ಆದರೆ, ಈ ವರ್ಗಾವಣೆಗೆ ಸಂಬಂಧಿಸಿ ಮಾರುಕಟ್ಟೆ ದರದ ಅನ್ವಯ ಸ್ಟ್ಯಾಂಪ್ ಮೌಲ್ಯವನ್ನು ಪಾವತಿಸಬೇಕಾಗಬಹುದು. ಈ ಬಗ್ಗೆಯೂ ವಿಚಾರಿಸಿ.

ನಂತರ ನಿಮ್ಮ ಬ್ರೋಕರ್ ಅನ್ನು ಸಂಪರ್ಕಿಸಿ ವರ್ಗಾವಣೆಗೆ ಸಂಬಂಧಿಸಿದ ಡೆಲಿವರಿ ಇನ್‌ಸ್ಟ್ರಕ್ಷನ್ ಸ್ಲಿಪ್ ಇತ್ಯಾದಿ ರವಾನಿಸಿ. ಇದು ಚೆಕ್ ಮೂಲಕ ಹಣ ವರ್ಗಾಯಿಸುವಂತೆಯೇ ಕಾರ್ಯ ನಿರ್ವಹಿಸುತ್ತದೆ.

ನಿಮ್ಮ ಅಧಿಕೃತ ಬ್ಯಾಂಕಿಗೂ ಈ ಬಗ್ಗೆ ಮಾಹಿತಿ ನೀಡಿ. ಒಂದು ವಿಚಾರ ಹೆಚ್ಚುವರಿಯಾಗಿ ಗಮನಿಸಿ. ಮುಂದೆ ಈ ಷೇರುಗಳನ್ನು ನಿಮ್ಮ ಮಗಳು ಮಾರಾಟ ಮಾಡುವಾಗ ಹಾಗೂ ಬರುವ ಡಿವಿಡೆಂಡ್ ಇತ್ಯಾದಿ ಲಾಭಕ್ಕೆ ಅವರೇ ತೆರಿಗೆ ಪಾವತಿಸಬೇಕು. ಅದಕ್ಕೆ ಸಂಬಂಧಿತ ಆದಾಯ ತೆರಿಗೆ ರಿಟರ್ನ್ಸ್ ಕೂಡ ಅವರೇ ಸಲ್ಲಿಸಬೇಕು.

ನಾಗೇಶ್ ಪ್ರಸಾದ್, ಬೆಂಗಳೂರು.

- **ಪ್ರಶ್ನೆ:** ನಾನು ಇತ್ತೀಚೆಗೆ ಬ್ಯುಸಿನೆಸ್‌ಗೆ ಸಂಬಂಧಪಟ್ಟ ಪತ್ರಿಕೆ ಓದುತ್ತಿದ್ದಾಗ ಟ್ಯಾಕ್ಸ್ ಹಾರ್ವೆಸ್ಟಿಂಗ್ ಬಗ್ಗೆ ಕೇಳಿದ್ದೇನೆ. ಇದು ತೆರಿಗೆ ಉಳಿಸುವಲ್ಲಿ ನೆರವಾಗುತ್ತದೆ ಎಂದು ಆ ಮೂಲಕ ತಿಳಿದುಕೊಂಡೆ. ನಾನು ಕೆಲವು ಹೂಡಿಕೆ ಮಾಡಿದ್ದೇನೆ. ನಾನು ಈ ರೀತಿಯ ಯೋಜನೆ ಮಾಡಿದರೆ ಅನುಕೂಲಕರವೇ? ಇತ್ತೀಚಿನ ಬದಲಾದ ತೆರಿಗೆ ದರದ ಪರಿಸ್ಥಿತಿಯಲ್ಲಿ ನಮಗೆ ಇದಕ್ಕೆ ಅವಕಾಶ ಇದೆಯೇ?

ಉತ್ತರ: ಟ್ಯಾಕ್ಸ್ ಹಾರ್ವೆಸ್ಟಿಂಗ್ ಎಂಬುದು ಸಾಮಾನ್ಯವಾಗಿ ಹೂಡಿಕೆ ಕ್ಷೇತ್ರದಲ್ಲಿ ನಷ್ಟ ಅನುಭವಿಸುತ್ತಿರುವವರು ಈಗಾಗಲೇ ಬಂದ ಲಾಭದ ಮೇಲಿನ ತೆರಿಗೆಯನ್ನು ಉಳಿಸಲು ಬಳಸುವ ಒಂದು ತಂತ್ರಗಾರಿಕೆಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದೀರ್ಘಾವಧಿಯಲ್ಲಿ ಲಾಭ ಮಾಡಲು ಹೊರಟಾಗ ತಾತ್ಕಾಲಿಕವಾಗಿ ಹೂಡಿಕೆ ಮೇಲೆ ನಷ್ಟವೂ ಗೋಚರಿಸಬಹುದು. ಇದನ್ನು ನಮ್ಮ ತೆರಿಗೆ ನಿರ್ವಹಣೆಯ ಉದ್ದೇಶಕ್ಕಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಇಲ್ಲಿನ ಉದ್ದೇಶವಾಗಿರುತ್ತದೆ.

ನಿಮ್ಮ ಡಿಮ್ಯಾಟ್ ಖಾತೆ ಅಥವಾ ಮ್ಯೂಚುವಲ್ ಫಂಡ್ ಖಾತೆಯಲ್ಲಿರುವ ಹೂಡಿಕೆಗಳನ್ನು ತಾತ್ಕಾಲಿಕವಾಗಿ ಮಾರಾಟ ಮಾಡಿ ಅದೇ ಷೇರು ಅಥವಾ ಮ್ಯೂಚುವಲ್ ಫಂಡ್‌ಗಳನ್ನು ಮತ್ತೆ ಮುಂದುವರಿಸಿಕೊಂಡು ಹೋಗುವುದು ಇದರ ಭಾಗವಾಗಿದೆ. ಇದರಿಂದ ಒಂದಷ್ಟು ಬ್ರೋಕರೇಜ್ ಅಥವಾ ಶುಲ್ಕ ವೆಚ್ಚವಾಗಬಹುದು. ಆದರೆ, ಆಯಾ ವರ್ಷದಲ್ಲಿ ನಷ್ಟ ದಾಖಲಿಸಿ ಈಗಾಗಲೇ ಬಂದ ಲಾಭಕ್ಕೆ ಸರಿದೂಗಿಸುವುದು ಹಾಗೂ ತೆರಿಗೆ ಉಳಿಸುವುದು ಇದರ ಕಾರ್ಯವಿಧಾನವಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬದಲಾದ ತೆರಿಗೆ ನಿಯಮಗಳ ಪ್ರಕಾರ ₹1.25 ಲಕ್ಷಕ್ಕಿಂತ ಅಧಿಕ ದೀರ್ಘಾವಧಿ ಲಾಭ ಗಳಿಸಿದ್ದರೆ ಅದಕ್ಕಿಂತ ಅಧಿಕ ಮೊತ್ತದ ಲಾಭದ ಮೇಲೆ ಶೇ 12.5ರ ದರದಲ್ಲಿ ತೆರಿಗೆ ಕಟ್ಟಬೇಕು. ಇಂತಹ ಸಂದರ್ಭದಲ್ಲಿ ಅದೇ ದೀರ್ಘಾವಧಿ ಹೂಡಿಕೆಯಲ್ಲಿ ಹೆಚ್ಚುವರಿ ಲಾಭದ ಪ್ರಮಾಣಕ್ಕೆ ಸಮನಾಗಿ ನಷ್ಟವಾಗುವಂತೆ ಯಾವುದಾದರೂ ಹೂಡಿಕೆ ಇದ್ದರೆ ಅದನ್ನು ಮಾರಾಟ ಮಾಡಿ ನಷ್ಟ ದಾಖಲಿಸಬೇಕು. ಒಟ್ಟಾರೆ ಇದರ ಪರಿಣಾಮ ನಿಮ್ಮ ಲಾಭವು ₹1.25 ಲಕ್ಷಕ್ಕಿಂತ ಒಳಗೆ ಇರುವಂತೆ ನೋಡಿಕೊಂಡು ತೆರಿಗೆ ಸಂಪೂರ್ಣ ಉಳಿಸುವುದು ಒಂದು ಯೋಜನೆ.

ಇನ್ನೊಂದು ಉದಾಹರಣೆ ಹೇಳುವುದಾದರೆ ಅಲ್ಪಾವಧಿ ಹೂಡಿಕೆಯಲ್ಲಿ ಈಗಾಗಲೇ ₹2 ಲಕ್ಷ ಲಾಭ ಹೊಂದಿದ್ದೀರಿ ಎಂದಿಟ್ಟುಕೊಳ್ಳಿ. ಪ್ರಸ್ತುತ ಇದರ ಮೇಲೆ ಶೇ 20ರ ದರದಲ್ಲಿ ತೆರಿಗೆ ಕಟ್ಟಬೇಕಾಗುತ್ತದೆ. ನಿಮ್ಮ ಅದೇ ವರ್ಗದ ಅಲ್ಪಾವಧಿ ಹೂಡಿಕೆ ಆಕಸ್ಮಿಕವಾಗಿ ನಷ್ಟದಲ್ಲಿದ್ದರೆ ಸರಿಯಾದ ಸಂದರ್ಭ ನೋಡಿ ಸಾಧ್ಯವಾದಷ್ಟು ಅಲ್ಪಾವಧಿ ನಷ್ಟ ದಾಖಲಿಸಿ ಈ ಮೊತ್ತದ ಮೇಲೆ ಕಟ್ಟಬೇಕಾಗುವ ತೆರಿಗೆ ತಗ್ಗಿಸಬಹುದು. ತದನಂತರ ಅದೇ ಷೇರುಗಳನ್ನು ಖರೀದಿಸಬಹುದು.

ಈ ಯಾವುದೇ ತಂತ್ರಗಾರಿಕೆಯನ್ನು ನಿಮ್ಮ ಲಾಭದ ಉದ್ದೇಶಕ್ಕೆ ಪ್ರಯೋಗಿಸುವ ಮೊದಲು ನಿಮಗೆ ಅನ್ವಯವಾಗುವ ತೆರಿಗೆ ದರ, ಲಾಭ-ನಷ್ಟ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುವ ಆದಾಯ ತೆರಿಗೆ ಸೆಕ್ಷನ್ 70 ಹಾಗೂ ಸೆಕ್ಷನ್ 74ರ ಷರತ್ತುಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಿ ಅಥವಾ ನಿಮ್ಮ ಪೋರ್ಟ್ ಫೋಲಿಯೊಗೆ ಸಂಬಂಧಿಸಿ, ಅಗತ್ಯ ತೆರಿಗೆ ಸಲಹೆಯನ್ನು ಪಡೆದುಕೊಳ್ಳಿ.

ಒಂದು ವಿಚಾರ ನೆನಪಿರಲಿ. ಟ್ಯಾಕ್ಸ್ ಹಾರ್ವೆಸ್ಟಿಂಗ್ ಎಂಬುದು ಆಕಸ್ಮಿಕವಾಗಿ ನಮ್ಮ ಊಹೆಗೂ ಮೀರಿದ ಸಂದರ್ಭಗಳಲ್ಲಿ ಉಂಟಾದ ನಷ್ಟವನ್ನು ನಮ್ಮ ತೆರಿಗೆ ಪಾವತಿಯ ಪರಿಸ್ಥಿತಿಗೆ ಹೊಂದಿಕೊಂಡು ವ್ಯವಹರಿಸುವ ವಿಷಯವೇ ಹೊರತು, ಮೂಲತಃ ಎಲ್ಲ ಹೂಡಿಕೆದಾರರೂ ಗಳಿಸಬೇಕಾಗುವ ಲಾಭದ ವಿಚಾರದಲ್ಲಿ ಮಾಡಿಕೊಳ್ಳುವ ರಾಜಿಯಲ್ಲ. ಹೀಗಾಗಿ, ಅದರ ಮೇಲೆ ಯಾವತ್ತೂ ತೆರಿಗೆ ಇದ್ದೇ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಅದಾನಿ ತೆಕ್ಕೆಗೆ ಓರಿಯೆಂಟ್ ಸಿಮೆಂಟ್ ಕಂಪನಿ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಅಂಬುಜಾ ಸಿಮೆಂಟ್ ಕಂಪನಿಯು ಸಿ.ಕೆ. ಬಿರ್ಲಾ ಸಮೂಹದ ಓರಿಯೆಂಟ್ ಸಿಮೆಂಟ್ ಕಂಪನಿಯನ್ನು ₹8,100 ಕೋಟಿಗೆ ಸ್ವಾಧೀನಪಡಿಸಿಕೊಳ್ಳಲಿದ್ದು, ಈ ಕುರಿತ ಒಪ್ಪಂದಕ್ಕೆ ಎರಡೂ ಕಂಪನಿಗಳು ಸಹಿ ಹಾಕಿವೆ.

ಅಂಬುಜಾ ಸಿಮೆಂಟ್ ದೇಶದ ಎರಡನೇ ಅತಿದೊಡ್ಡ ಸಿಮೆಂಟ್ ತಯಾರಿಕಾ ಕಂಪನಿಯಾಗಿದೆ. ಈ ವರ್ಷದಲ್ಲಿ ಇದು ಕಂಪನಿಯ ಎರಡನೇ ಸ್ವಾಧೀನವಾಗಿದೆ.

ಓರಿಯೆಂಟ್‌ನ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 85 ಲಕ್ಷ ಟನ್ ಆಗಿದೆ. ಈ ಸ್ವಾಧೀನದಿಂದ ಅದಾನಿ ಸಮೂಹದ ಸಿಮೆಂಟ್ ಉತ್ಪಾದನಾ ಸಾಮರ್ಥ್ಯವು 9.74 ಕೋಟಿ ಟನ್‌ಗೆ ಹೆಚ್ಚಲಿದೆ. 2028ರ ವೇಳೆಗೆ 14 ಕೋಟಿ ಟನ್‌ಗೆ ಹೆಚ್ಚಿಸುವ ಗುರಿ ಹೊಂದಿದೆ.

ಜೂನ್‌ನಲ್ಲಿ ಅದಾನಿ ಸಮೂಹವು ಹೈದರಾಬಾದ್ ಮೂಲದ ಪೆನ್ನಾ ಸಿಮೆಂಟ್ ಅನ್ನು ₹10,422 ಕೋಟಿಗೆ ಸ್ವಾಧೀನಪಡಿಸಿಕೊಂಡಿತ್ತು.

ಷೇರು ಸೂಚ್ಯಂಕ ಶೇ 1ರಷ್ಟು ಕುಸಿತ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳದಿಂದಾಗಿ ಸತತ ಎರಡನೇ ದಿನವಾದ ಮಂಗಳವಾರವೂ ಷೇರು ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ. ಹೂಡಿಕೆದಾರರ ಸಂಪತ್ತು ₹9.19 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 930 ಅಂಶ ಕುಸಿತ (ಶೇ 1.15 ರಷ್ಟು) ಕಂಡು 80,220 ಅಂಶಗಳಲ್ಲಿ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 309 ಅಂಶ ಇಳಿಕೆಯಾಗಿ (ಶೇ 1.25ರಷ್ಟು) 24,472 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್ ಗ್ರಿಡ್, ಟಾಟಾ ಸ್ಟೀಲ್, ಇಂಡಸ್ ಇಂಡ್ ಬ್ಯಾಂಕ್, ಟಾಟಾ ಮೋಟರ್ಸ್, ಎಲ್ ಆ್ಯಂಡ್ ಟಿ, ಬಜಾಜ್ ಫೈನಾನ್ಸ್, ರಿಲಯನ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಐಸಿಐಸಿಐ ಬ್ಯಾಂಕ್, ನೆಸ್ಲೆ ಇಂಡಿಯಾ ಮತ್ತು ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ವಿಮಾನಗಳಿಗೆ ಬಾಂಬ್ ಬೆದರಿಕೆ 9 ದಿನದಲ್ಲಿ ₹600 ಕೋಟಿ ನಷ್ಟ

ನವದೆಹಲಿ (ಪಿಟಿಐ): ವಿಮಾನಗಳಿಗೆ ಬಾಂಬ್ ಬೆದರಿಕೆ ಸಂದೇಶಗಳು ಬರುತ್ತಿರುವುದು ಮುಂದುವರಿದಿದ್ದು, ಮಂಗಳವಾರ ಮತ್ತೆ 50 ವಿಮಾನಗಳಿಗೆ ಬೆದರಿಕೆಗಳು ಬಂದಿವೆ.

ಕಳೆದ 9 ದಿನಗಳಲ್ಲಿ 170 ವಿಮಾನಗಳಿಗೆ ಬಂದಿರುವ ಬೆದರಿಕೆಯಿಂದ ವಿಮಾನಯಾನ ಸಂಸ್ಥೆಗಳಿಗೆ ಅಂದಾಜು ₹600 ಕೋಟಿ ನಷ್ಟ ಆಗಿದೆ ಎಂದು ದೇಶೀಯ ವಿಮಾನಯಾನ ಸಂಸ್ಥೆಯ ಹಣಕಾಸು ವಿಭಾಗದಲ್ಲಿ ಕೆಲಸ ಮಾಡಿದ್ದ ಇಬ್ಬರು ಅಧಿಕಾರಿಗಳು ‘ಪಿಟಿಐ’ಗೆ ತಿಳಿಸಿದ್ದಾರೆ.

ದೇಶೀಯ ವಿಮಾನಯಾನದಲ್ಲಿ ಒಂದು ವಿಮಾನಕ್ಕೆ ಸುಮಾರು ₹ 1.5 ಕೋಟಿ ಮತ್ತು ಅಂತರರಾಷ್ಟ್ರೀಯ ವಿಮಾನಯಾನದಲ್ಲಿ ಒಂದು ವಿಮಾನಕ್ಕೆ ಸುಮಾರು ₹5 ಕೋಟಿಯಿಂದ ₹5.50 ಕೋಟಿ ವೆಚ್ಚವಾಗುತ್ತದೆ. ಈ ಲೆಕ್ಕಾಚಾರದ ಪ್ರಕಾರ ಸುಮಾರು ₹600 ಕೋಟಿ ನಷ್ಟವನ್ನು ಅವರು ಅಂದಾಜಿಸಿದ್ದಾರೆ.

ಇಂಧನ ಮತ್ತು ವಿಮಾನ ನಿಲ್ದಾಣದ ಪಾರ್ಕಿಂಗ್ ಶುಲ್ಕಗಳಂತಹ ನೇರ ವೆಚ್ಚಗಳ ಹೊರತಾಗಿ, ಇಂತಹ ಅಡೆತಡೆಗಳಿಂದಾಗಿ ಫ್ಲೈಟ್ ನೆಟ್‌ವರ್ಕ್‌ನ ಮೇಲೆ ಒಟ್ಟಾರೆ ಪರಿಣಾಮ ಬೀರುವಂತಹ ಪರೋಕ್ಷ ವೆಚ್ಚಗಳೂ ಇವೆ. ಹಾಗಾಗಿ, ನಷ್ಟದ ಅಂದಾಜು ಇನ್ನೂ ಹೆಚ್ಚಿರಬಹುದು ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.

ಸೋಮವಾರ ರಾತ್ರಿಯಿಂದ ಬಂದಿರುವ ಬೆದರಿಕೆ ಸಂದೇಶಗಳ ಸಂಖ್ಯೆ 24 ತಾಸುಗಳಲ್ಲಿ 80ಕ್ಕೆ ತಲುಪಿದೆ. ಏರ್ ಇಂಡಿಯಾ ಮತ್ತು ಇಂಡಿಗೊದ ತಲಾ 13 ವಿಮಾನಗಳು, ಆಕಾಸಾ ಏರ್‌ನ 12ಕ್ಕೂ ಹೆಚ್ಚು ವಿಮಾನಗಳು ಹಾಗೂ ವಿಸ್ತಾರಾದ 11 ವಿಮಾನಗಳಿಗೆ ಮಂಗಳವಾರ ಬಾಂಬ್ ಬೆದರಿಕೆಯ ಸಂದೇಶಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಇಂಡಿಗೊ ಸಂಸ್ಥೆಯ 13 ವಿಮಾನಗಳಿಗೆ ಮಂಗಳವಾರ ಬೆದರಿಕೆ ಸಂದೇಶ ಬಂದಿದ್ದು, ಇದರಲ್ಲಿ ಬೆಂಗಳೂರು-ಲಖನೌ, ಕೋಲ್ಕತ್ತ-ಬೆಂಗಳೂರು ನಡುವೆ ಸಂಚರಿಸಬೇಕಿದ್ದ ವಿಮಾನಗಳು ಸೇರಿವೆ ಎಂದು ಇಂಡಿಗೊ ವಕ್ತಾರರು ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಮಂಗಳವಾರ ಕೆಲವು ವಿಮಾನಗಳಿಗೆ ಭದ್ರತಾ ಎಚ್ಚರಿಕೆಗಳು ಬಂದಿವೆ. ಸ್ಥಳೀಯ ಅಧಿಕಾರಿಗಳ ಸಮನ್ವಯದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಸಂಸ್ಥೆಯು ತೆಗೆದುಕೊಂಡಿದೆ’ ಎಂದು ಆಕಾಸಾ ಏರ್ ವಕ್ತಾರರು ತಿಳಿಸಿದ್ದಾರೆ.

ಸೋಮವಾರ ರಾತ್ರಿ ಏರ್ ಇಂಡಿಯಾ, ಇಂಡಿಗೊ ಮತ್ತು ವಿಸ್ತಾರಾದ ತಲಾ 10 ವಿಮಾನಗಳಿಗೆ ಬೆದರಿಕೆ ಸಂದೇಶಗಳು ಬಂದಿದ್ದವು. ಜಿದ್ದಾಕ್ಕೆ ಹೋಗುವ ಇಂಡಿಗೊದ ಮೂರು ವಿಮಾನಗಳನ್ನು ಸೌದಿ ಅರೇಬಿಯಾದ ರಿಯಾದ್ ಮತ್ತು ಕತಾರ್‌ನ ದೋಹಾ ವಿಮಾನ ನಿಲ್ದಾಣಗಳತ್ತ ತಿರುಗಿಸಲಾಯಿತು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-27000
ಹಳತು	40000-49000
ಚಿತ್ರದುರ್ಗ	
ಅಪಿ	47829-48279
ಬೆಟ್ಟೆ	32619-33099
ಕೆಂಪುಗೋಟು	27449-27810
ರಾಶಿ	47339-47769
ಕಾರ್ಕಳ	
ಹಳತು	30000-49000
ಪುತ್ತೂರು	
ಹೊಸತು	26000-31000
ಹಳತು	32000-48500
ಸಾಗರ	
ಬಿಳಿಗೋಟು	11010-24259
ಚಾಲಿ	17214-32099
ಕೋಕ	7119-7119
ಕೆಂಪುಗೋಟು	28129-28709
ರಾಶಿ	29129-46809
ಸಿಪ್ಪೆಗೋಟು	14700-16165
ಶಿವಮೊಗ್ಗ	
ಬೆಟ್ಟೆ	38069-55699
ಗೊರಬಲು	17009-36109
ಹೊಸತು	34869-49709
ರಾಶಿ	31669-50909
ಸರಕು	50100-77899
ಸಿದ್ದಾಪುರ	
ಬಿಳಿಗೋಟು	24009-27099
ಚಾಲಿ	31099-34509
ಕೋಕ	20299-27699
ಕೆಂಪುಗೋಟು	19609-21609
ರಾಶಿ	41009-46399
ತಟ್ಟಿಬೆಟ್ಟೆ	23709-26709
ಶಿರಸಿ	
ಬೆಟ್ಟೆ	30699-36649
ಬಿಳಿಗೋಟು	22469-29198
ಚಾಲಿ	32208-35408
ಕೆಂಪುಗೋಟು	14599-19509
ರಾಶಿ	40099-44899
ಯಲ್ಲಾಪುರ	
ಅಪಿ	56179-61479
ಬಿಳಿಗೋಟು	16012-28169
ಚಾಲಿ	28695-35299
ಕೋಕ	4899-13609
ಕೆಂಪುಗೋಟು	15066-22989
ರಾಶಿ	40199-53915
ತಟ್ಟಿಬೆಟ್ಟೆ	24619-33699

‘ರಾಯಚೂರು ವಿಮಾನ ನಿಲ್ದಾಣಕ್ಕೆ ಕೇಂದ್ರ ಸರ್ಕಾರ ಹಸಿರು ನಿಶಾನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಯಚೂರು ವಿಮಾನ ನಿಲ್ದಾಣಕ್ಕೆ ಕೇಂದ್ರ ಸರ್ಕಾರದಿಂದ ಕೊನೆಗೂ ಹಸಿರು ನಿಶಾನೆ ಸಿಕ್ಕಿದೆ’ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

‘ಕೇಂದ್ರ ವಿಮಾನಯಾನ ಸಚಿವರಾದ ರಾಮ್ ಮೋಹನ್ ಅವರನ್ನು ರಾಯಚೂರು ಸಂಸದ ಜಿ. ಕುಮಾರ ನಾಯ್ಕ್ ನೇತೃತ್ವದ ನಿಯೋಗ ಇತ್ತೀಚೆಗೆ ಭೇಟಿ ಮಾಡಿ ಮನವಿ ಸಲ್ಲಿಸಿತ್ತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಅವರು ಅನುಮತಿ ನೀಡಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ’ ಎಂದು ಬೋಸರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ರಾಜ್ಯ ಸರ್ಕಾರ ರಾಯಚೂರಿನಲ್ಲಿ ನೂತನ ವಿಮಾನ ನಿಲ್ದಾಣ ಮಾಡಲು ಬಹಳ ಪ್ರಯತ್ನ ಮಾಡಿತ್ತು. ಬಜೆಟ್‌ನಲ್ಲೂ ಈ ವಿಷಯ ಪ್ರಸ್ತಾಪಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಕಾಳಜಿ ವಹಿಸಿ ಕೇಂದ್ರ ಸರ್ಕಾರದ ಜೊತೆ ಸಮನ್ವಯ ಮಾಡಿದ್ದರು. ಅಗತ್ಯವಿರುವ ಎಲ್ಲ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದರು. ಅದರ ಬೆನ್ನಲ್ಲೇ, ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಅಗತ್ಯ ಪ್ರಸ್ತಾವವನ್ನು ಸಲ್ಲಿಸಿತ್ತು’ ಎಂದೂ ಹೇಳಿದ್ದಾರೆ.

ದೀಪಾವಳಿಗೂ ಮೊದಲೇ ಚಿನ್ನದ ಬೆಲೆ ಏರಿಕೆ

ಧನ್‌ತೇರಸ್: ಮಂದಗತಿ ಮಾರಾಟ ನಿರೀಕ್ಷೆ

ಮುಂಬೈ (ಪಿಟಿಐ): ದೀಪಾವಳಿ ಹಬ್ಬಕ್ಕೂ ಮೊದಲೇ ಚಿನ್ನದ ಬೆಲೆಯಲ್ಲಿ ಏರಿಕೆಯಾಗಿದೆ. ಹಾಗಾಗಿ, ಈ ಬಾರಿಯ ಧನ್‌ತೇರಸ್‌ನಲ್ಲಿ ಚಿನ್ನಾಭರಣಗಳ ಮಾರಾಟ ಕಡಿಮೆಯಾಗಲಿದೆ ಎಂದು ಚಿನ್ನಾಭರಣ ವರ್ತಕರು ಹೇಳಿದ್ದಾರೆ.

ಪ್ರಸ್ತುತ ದೆಹಲಿಯಲ್ಲಿ 10 ಗ್ರಾಂ ಚಿನ್ನದ ಬೆಲೆಯು ₹80 ಸಾವಿರ ದಾಟಿದ್ದರೆ, ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1 ಲಕ್ಷ ದಾಟಿದೆ.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಿತ್ತು. ಇದರಿಂದ ಚಿನ್ನಾಭರಣಗಳ ಬೆಲೆ ಇಳಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅಂದಾಜಿಗೂ ಮೀರಿ ಏರಿಕೆಯಾಗಿದೆ ಎಂಬುದು ಉದ್ಯಮ ವಲಯದ ತಜ್ಞರ ಅಭಿಪ್ರಾಯ.

‘ಕಳೆದ ಬಾರಿ ಧನ್‌ತೇರಸ್‌ನಲ್ಲಿ ಚಿನ್ನಾಭರಣ ವಹಿವಾಟು ಶೇ 10ರಿಂದ ಶೇ 12ರಷ್ಟು ಏರಿಕೆಯಾಗಿತ್ತು. ಸದ್ಯ ಬೆಲೆ ಏರುಗತಿಯಲ್ಲಿದೆ. ಈ ಬಾರಿ ಶೇ 12ರಿಂದ ಶೇ 15ರಷ್ಟು ವಹಿವಾಟು ನಡೆಯುವ ಸಾಧ್ಯತೆಯಿದೆ’ ಎಂದು ಸೆನ್ಕೊ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುವಂಕರ್ ಸೇನ್ ತಿಳಿಸಿದ್ದಾರೆ.

ಚಿನ್ನಾಭರಣಗಳ ಖರೀದಿಗೆ ಶುಭ ದಿನ ಎಂದು ಪರಿಗಣಿತವಾಗಿರುವ ಧನ್‌ತೇರಸ್ ಅನ್ನು ಈ ಬಾರಿ ಅ. 29 ರಂದು ಆಚರಿಸಲಾಗುತ್ತದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು ಸೇರಿ ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಅನಿಶ್ಚಿತತೆಯಿಂದಾಗಿ ಹಳದಿ ಲೋಹದ ಬೆಲೆಯು ಏರಿಕೆಯಾಗಿದೆ. ದೇಶೀಯ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

‘ಸದ್ಯ ಚಿನ್ನಾಭರಣ ವಲಯದ ಸ್ಥಿತಿಗತಿ ಅವಲೋಕಿಸಿದರೆ ಕಳೆದ ಬಾರಿಯ ಧನ್‌ತೇರಸ್‌ನಲ್ಲಿ ನಡೆದಷ್ಟೇ ವಹಿವಾಟು ನಡೆಯುವ ಸಾಧ್ಯತೆಯಿದೆ’ ಎಂದು ಪಿ.ಎನ್. ಗಾಡ್ಗಿಲ್‌ನ ವ್ಯವಸ್ಥಾಪಕ ನಿರ್ದೇಶಕ ಸೌರಭ್ ಗಾಡ್ಗಿಲ್ ಹೇಳಿದ್ದಾರೆ. ‘ಧನ್‌ತೇರಸ್ ಅವಧಿಯಲ್ಲಿ ದೇಶದಾದ್ಯಂತ 40 ಲಕ್ಷಕ್ಕೂ ಹೆಚ್ಚು ಮದುವೆಗಳು ನಡೆಯುತ್ತವೆ. ಈ ವೇಳೆ ಚಿನ್ನಾಭರಣ ಖರೀದಿ ಹೆಚ್ಚಿರುತ್ತದೆ. ದರ ಏರಿಕೆ ನಡುವೆಯೂ ಧನ್‌ತೇರಸ್ ದಿನದಂದು 20ರಿಂದ 22 ಟನ್ ಚಿನ್ನದ ಮಾರಾಟ ನಡೆಯುವ ಸಾಧ್ಯತೆಯಿದೆ’ ಎಂದು ಅಖಿಲ ಭಾರತ ಹರಳು ಮತ್ತು ಆಭರಣ ಮಂಡಳಿ (ಜಿಜೆಸಿ) ಅಧ್ಯಕ್ಷ ಸಾಯಂ ಮೆಹ್ರಾ ಹೇಳಿದ್ದಾರೆ.

‘ಒಂದು ರಾಷ್ಟ್ರ ಒಂದೇ ದರ ಅನುಷ್ಠಾನ’



ನವದೆಹಲಿ (ಪಿಟಿಐ): ದೇಶೀಯವಾಗಿ ಚಿನ್ನದ ಏಕರೂಪ ದರ ನಿಗದಿಗೆ ಮಂಡಳಿಯು ನಿರ್ಧರಿಸಿದೆ. ಹಾಗಾಗಿ, ‘ಒಂದು ರಾಷ್ಟ್ರ; ಒಂದೇ ಚಿನ್ನದ ದರ’ ಅನುಷ್ಠಾನಕ್ಕೆ ಕಾರ್ಯತತ್ಪರವಾಗಿದೆ ಎಂದು ಅಖಿಲ ಭಾರತ ಹರಳು ಮತ್ತು ಆಭರಣ ಮಂಡಳಿಯ (ಜಿಜೆಸಿ) ಕಾರ್ಯದರ್ಶಿ ಮಿತೇಶ್ ಧೋರ್ಡಾ ತಿಳಿಸಿದ್ದಾರೆ.

ಡಿಸೆಂಬರ್ 9ರ ವರೆಗೆ ನಡೆಯಲಿರುವ ವಾರ್ಷಿಕ ಚಿನ್ನದ ಹಬ್ಬವಾದ ‘ಲಕ್ಕಿ ಲಕ್ಷ್ಮೀ’ಗೆ ಮಂಗಳವಾರ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

‘ನಾವು ಒಂದೇ ದರದಲ್ಲಿ ಚಿನ್ನ ಆಮದು ಮಾಡಿಕೊಳ್ಳುತ್ತೇವೆ. ಆದರೆ, ದೇಶದಲ್ಲಿ ನಗರದಿಂದ ನಗರಕ್ಕೆ ಬೆಲೆಯಲ್ಲಿ ವ್ಯತ್ಯಾಸ ಇರುತ್ತದೆ. ಏಕರೂಪ ದರ ಕಾಯ್ದುಕೊಳ್ಳುವ ಗುರಿ ಹೊಂದಿದ್ದೇವೆ’ ಎಂದರು.

ಈಗಾಗಲೇ, ಮಂಡಳಿಯು ಸದಸ್ಯರೊಟ್ಟಿಗೆ ಈ ಸಂಬಂಧ 50 ಸಭೆ ನಡೆಸಿದೆ. 8 ಸಾವಿರ ಆಭರಣ ವ್ಯಾಪಾರಿಗಳನ್ನು ಒಂದೇ ವೇದಿಕೆಗೆ ತರಲಾಗಿದೆ. 4ರಿಂದ 5 ಲಕ್ಷ ಆಭರಣ ವ್ಯಾಪಾರಿಗಳನ್ನು ಹಂತ ಹಂತವಾಗಿ ಈ ವೇದಿಕೆಯಡಿ ತರುವ ಕಾರ್ಯ ನಡೆದಿದೆ. ಆದರೆ, ಗುಜರಾತ್‌ನಲ್ಲಿ ಇದರ ಅನುಷ್ಠಾನ ಸವಾಲಿನಿಂದ ಕೂಡಿದೆ ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
TATA
TATA MOTORS Connecting Aspirations
ದೀಪಾವಳಿ ಹಬ್ಬದ ಧಮಾಕ ಕೊಡುಗೆಗಳು
ಕಡಿಮೆ ಬಡ್ಡಿದರ 2.99%**
ACE CHOTA HAATHI
INTRA PICKUP
ಕಡಿಮೆ ಬಡ್ಡಿದರ 4.99%**
INTRA V50
ವಾರ್ಷಿಕ ನಿರ್ವಹಣಾ ಪ್ಯಾಕೇಜ್ 2* ವರ್ಷದವರೆಗೆ ₹50 000/-* INTRA V50 ಗೆ ಮಾತ್ರ ಅನ್ವಯ.
North Karnataka M : 91645 52700
South Karnataka M : 99039 34442
*Terms & Conditions apply.
** For Low IRR Discounts will not be applicable.

ಪ್ರವಾಸ
Travel
04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ಬೇಕಾಗಿದ್ದಾರೆ: ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ಸೇರಿದ ಮಂಡ್ಯ ಜಿಲ್ಲೆ ಕೆ.ಆರ್.ಎಸ್ ಹೊಸ ಕನ್ನಂಬಾಡಿ ಗ್ರಾಮದ ಹತ್ತಿರವಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಭದ್ರತೆಗಾಗಿ ನಿವೃತ್ತ ARMY/ BSF/ CRPF/ CISF (ವಯಸ್ಸು 45 ವರ್ಷದೊಳಗಿನ) ಅಭ್ಯರ್ಥಿಗಳು ಬೇಕಾಗಿದ್ದು, ಕಂಪನಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುವುದು ವಸತಿ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9035348522/ 9035348529.

HEALTH SPECIAL
ಶ್ರೀ ಶಕ್ತಿ ಹೆಲ್ತ್ ಕೇರ್ (ರಿ)
ಬೆಂಗಳೂರು ಇವರ ವತಿಯಿಂದ
ಶ್ರೀ ಶಕ್ತಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಸೆಂಟರ್ ಸೇವೆ
ಉಚಿತ ಸಮಾಲೋಚನೆ ಬೆಂಗಳೂರಿನಲ್ಲಿ
ದಿನಾಂಕ : 24-10-2024 ರಿಂದ ಪ್ರಾರಂಭ
ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 02.00 ಗಂಟೆಯವರೆಗೆ ಮಾತ್ರ
ಸೂಚನೆ : ಎಲ್ಲಾ ದಿನಗಳು ಉಚಿತ ಸಮಾಲೋಚನೆ ನೀಡಲಾಗುವುದು . ಪ್ರತಿ ಸೋಮವಾರದಿಂದ ಭಾನುವಾರದವರೆಗೆ ತೆರೆದಿರುತ್ತದೆ
ವಿಳಾಸ : ಸ್ವಸ್ತಿಕ್ ಕಾಂಪ್ಲೆಕ್ಸ್, ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು-20
9019626612
ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯ ಗಂಟುನೋವು, ರೂಮೆಟೆಡ್ ಆರ್ಥೈಟಿಸ್, ವೆರಿಕೋಸ್ ವೇಯಿನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಿಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷಧಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A C U ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.
ವಿಶೇಷ ಸೂಚನೆ: ಚಿಕಿತ್ಸೆ ಪಡೆದ ನಂತರ 30 ನಿಮಿಷ ಕಾಫಿ, ಟೀ ನೀರು ಮತ್ತು ಆಹಾರವನ್ನು ಸೇವಿಸಬಾರದು.
ಪಾಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ
ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381
ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಭವಿಷ್ಯ
Astrology
ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.
★॥ಇಷ್ಟಪಟ್ಟವರು॥★ ನಿಮ್ಮ ಒತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
*Conditions apply
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036
9731810277
9901641752
9845114560
080- 45557163/164

2026ರ ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡೆ: ಹಾಕಿ, ಶೂಟಿಂಗ್, ಬ್ಯಾಡ್ಮಿಂಟನ್‌ಗೆ ಕೊಕ್

ಭಾರತದ ಪದಕ ಜಯದ ಗುರಿಗೆ ಅಡ್ಡಿ

ಲಂಡನ್ (ಪಿಟಿಐ): ಭಾರತಕ್ಕೆ ಹೆಚ್ಚಿನ ಪದಕ ತಂದುಕೊಡುವಂಥ ಹಾಕಿ, ಬ್ಯಾಡ್ಮಿಂಟನ್, ಕುಸ್ತಿ, ಕ್ರಿಕೆಟ್ ಮತ್ತು ಶೂಟಿಂಗ್ ಸ್ಪರ್ಧೆಗಳನ್ನು 2026ರ ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡೆಗಳಿಂದ ಕೈಬಿಡಲಾಗಿದೆ. ಕ್ರೀಡೆಗಳನ್ನು 'ಬಜೆಟ್ ಸ್ನೇಹಿ' (ವೆಚ್ಚ ಕಡಿಮೆ) ಮಾಡುವ ಉದ್ದೇಶದಿಂದ 10 ವಿವಿಧ ಆಟಗಳಿಗೆ ಸೀಮಿತಗೊಳಿಸಲಾಗಿದೆ.

ಟೇಬಲ್ ಟೆನಿಸ್, ಸ್ಕ್ವಾಶ್ ಮತ್ತು ಟ್ರಯಥ್ಲಾನ್‌ಗೂ 2026ರ ಕ್ರೀಡೆಗಳಿಂದ ಕೊಕ್ ನೀಡಲಾಗಿದೆ. ವೆಚ್ಚ ಮತ್ತು ಪ್ರಯಾಣದ ಸಮಯ ಉಳಿಸಲು ಕೇವಲ ನಾಲ್ಕು ತಾಣಗಳಲ್ಲಿ ಮಾತ್ರ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ.

2022ರ ಬರ್ಮಿಂಗ್‌ಹ್ಯಾಮ್ ಕೂಟದಲ್ಲಿ ಇದ್ದ ಸ್ಪರ್ಧೆಗಳಿಗೆ ಹೋಲಿಸಿದರಲ್ಲಿ, ಗ್ಲಾಸ್ಗೊ ಕ್ರೀಡೆಗಳಲ್ಲಿ 9 ಕ್ರೀಡೆಗಳು ಕಡಿಮೆಯಾಗಲಿವೆ. ಸ್ಕಾಟ್ಲೆಂಡ್ ದೇಶದ ಗ್ಲಾಸ್ಗೊ ನಗರದಲ್ಲಿ ಕಾಮನ್‌ವೆಲ್ತ್ ಕ್ರೀಡೆಗಳು 2026ರ ಜುಲೈ 23 ರಿಂದ ಆಗಸ್ಟ್ 2 ರವರೆಗೆ ನಡೆಯಲಿವೆ. 12 ವರ್ಷಗಳ ನಂತರ ಆತಿಥ್ಯ ಗ್ಲಾಸ್ಗೊ ನಗರಕ್ಕೆ ಮರಳಿದೆ.

'ಗ್ಲಾಸ್ಗೊ ಕೂಟದಲ್ಲಿ 10 ಕ್ರೀಡೆಗಳು ಇರಲಿವೆ. ಆಟಕ್ಕೆ ಬಹು ಕ್ರೀಡೆಗಳ ಸ್ಪರ್ಶ ಇರುವಂತೆ ಖಚಿತಪಡಿಸುವುದು, ಹಣಕಾಸು ನಿರ್ವಹಣೆ ಇವೆರಡರ ನಡುವೆ ಸಮತೋಲನ ಕಾಪಾಡಲಾಗುತ್ತಿದೆ' ಎಂದು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ ಹೇಳಿಕೆಯಲ್ಲಿ ತಿಳಿಸಿದೆ.

'ಮುಂದಿನ ಕ್ರೀಡೆಗಳಲ್ಲಿ ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್ (ಟ್ರ್ಯಾಕ್ ಅಂಡ್ ಫೀಲ್ಡ್), ಈಜು ಮತ್ತು ಪ್ಯಾರಾ ಈಜು, ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್, ಟ್ರ್ಯಾಕ್ ಸೈಕ್ಲಿಂಗ್ ಮತ್ತು ಪ್ಯಾರಾ ಟ್ರ್ಯಾಕ್ ಸೈಕ್ಲಿಂಗ್, ನೆಟ್‌ಬಾಲ್, ವೇಟ್‌ಲಿಫ್ಟಿಂಗ್ ಮತ್ತು ಪ್ಯಾರಾ ಪವರ್‌ಲಿಫ್ಟಿಂಗ್, ಬಾಕ್ಸಿಂಗ್, ಜೂಡೊ, ಬೌಲ್ಸ್ ಮತ್ತು ಪ್ಯಾರಾ ಬೌಲ್ಸ್, 3x3 ಬ್ಯಾಸ್ಕೆಟ್‌ಬಾಲ್ ಮತ್ತು 3x3 ವೀಲ್‌ಚೇರ್ ಬ್ಯಾಸ್ಕೆಟ್‌ಬಾಲ್ ಇರಲಿದೆ' ಎಂದು ಹೇಳಿಕೆ ತಿಳಿಸಿದೆ.

ಅಥ್ಲೀಟುಗಳು ಮತ್ತು ನೆರವು ಸಿಬ್ಬಂದಿಗೆ ಹೋಟೆಲ್‌ನಲ್ಲಿ ವಾಸ್ತವ್ಯ ಕಲ್ಪಿಸಲು ನಿರ್ಧರಿಸಲಾಗಿದೆ.

ಭಾರತದ ಪದಕ ಸಾಧ್ಯತೆಗೆ ಹಿನ್ನಡೆ: ಭಾರತ ಪ್ರಬಲವಾಗಿರುವ ಕ್ರೀಡೆಗಳಿಗೆ ಅರ್ಧಚಂದ್ರ ನೀಡಿರುವ ಕಾರಣ ದೇಶ ಪಡೆಯಬಹುದಾದ ಪದಕಗಳ ಸಂಖ್ಯೆ ಕಡಿಮೆಯಾಗಲಿದೆ. ನಾಲ್ಕು ವರ್ಷ ಹಿಂದೆ ಬರ್ಮಿಂಗ್‌ಹ್ಯಾಮ್ ಕ್ರೀಡೆಗಳಲ್ಲೇ ಶೂಟಿಂಗ್ ತೆಗೆದುಹಾಕಲಾಗಿತ್ತು. ಸಾಗಣೆ ವೆಚ್ಚ, ಸಮಸ್ಯೆಗಳ ಕಾರಣ ನೀಡಲಾಗಿದ್ದು, ಮುಂದೆ ಸೇರ್ಪಡೆಯಾಗುವ ಸಾಧ್ಯತೆಯೂ ಇರಲಿಲ್ಲ.

ಶೂಟಿಂಗ್ ಜೊತೆಗೆ ಆರ್ಚರಿಯ ನಿರ್ಲಕ್ಷ್ಯ ಮುಂದುವರಿದಿದೆ. 2010ರ ದೆಹಲಿ ಕ್ರೀಡೆಗಳಲ್ಲಿ ಕೊನೆಯ ಬಾರಿ ಆರ್ಚರಿ ಸ್ಪರ್ಧೆ ನಡೆದಿತ್ತು.

ಈ ಹಿಂದೆ, 2014ರ ಗ್ಲಾಸ್ಗೊ ಕ್ರೀಡೆಗಳಲ್ಲಿ, ಶೂಟಿಂಗ್ ಸ್ಪರ್ಧೆ ದಂಡೀ ಪಟ್ಟಣದ ಬ್ಯಾರಿ ಬಡ್ಡಾನ್ ಸೆಂಟರ್‌ನಲ್ಲಿ ನಡೆದಿತ್ತು. ಅದು ಗ್ಲಾಸ್ಗೊದಿಂದ 100 ಕಿ.ಮೀ. ದೂರದಲ್ಲಿದೆ.

ಭಾರತದ 2022ರ ಬರ್ಮಿಂಗ್‌ಹ್ಯಾಮ್ ಕ್ರೀಡೆಗಳಿಗೆ 210 ಮಂದಿಯ ತಂಡ ಕಳುಹಿಸಿತ್ತು. ಆ ಕ್ರೀಡೆಗಳಲ್ಲಿ ಭಾರತ 61 ಪದಕಗಗಳನ್ನು ಗೆದ್ದುಕೊಂಡಿತ್ತು. ಈ ಪದಕಗಳಲ್ಲಿ 30 ಪದಕಗಳು, ಮುಂದಿನ ಕ್ರೀಡೆಗಳಲ್ಲಿ ಕೈಬಿಟ್ಟಿರುವ ಸ್ಪರ್ಧೆಗಳಿಂದ ಬಂದಿದ್ದವು.

ಹಾಕಿ ವಿಶ್ವಕಪ್ ಹತ್ತಿರದಲ್ಲಿರುವಾಗಲೇ, ಕಾಮನ್‌ವೆಲ್ತ್ ಕ್ರೀಡೆ ನಡೆಯುತ್ತಿರುವುದು ಸಹ ಈ ಆಟವನ್ನು ಹೊರಗಿಡಲು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಹಾಕಿ ವಿಶ್ವಕಪ್ ನೆದರ್ಲೆಂಡ್ಸ್‌ನ ಆಮ್‌ಸ್ಟೆಲ್ವೀನ್ ಮತ್ತು ಬೆಲ್ಜಿಯಂನ ವಾವ್ರೆಯಲ್ಲಿ ಆಗಸ್ಟ್ 15 ರಿಂದ 30ರವರೆಗೆ ನಡೆಯಲಿದೆ.

2026ರ ಕ್ರೀಡೆಗಳು ಆಸ್ಟ್ರೇಲಿಯಾದ ವಿಕ್ಟೋರಿಯಾದಲ್ಲಿ ನಡೆಯಬೇಕಿತ್ತು. ಆದರೆ ಏರುತ್ತಿರುವ ವೆಚ್ಚದ ಕಾರಣ ಮುಂದಿಟ್ಟು ಅದು ಆತಿಥ್ಯದಿಂದ ಹಿಂದೆಸರಿದಿತ್ತು.

2018ರ ಕಾಮನ್‌ವೆಲ್ತ್ ಗೇಮ್ಸ್ ಮಹಿಳೆಯರ ಬ್ಯಾಡ್ಮಿಂಟನ್‌ನಲ್ಲಿ ಪದಕ ಗಳಿಸಿದ್ದ ಭಾರತದ ಸೈನಾ ನೆಹ್ವಾಲ್ ಮತ್ತು ಪಿ.ವಿ. ಸಿಂಧು ಪಿಟಿಐ ಸಂಗ್ರಹ ಚಿತ್ರ

ಭಾರತ ಪಡೆದ ಪದಕಗಳು

ಕ್ರೀಡೆ	ಪದಕಗಳು
ಹಾಕಿ (ಪುರುಷರ ತಂಡ)	6 (3 ಬೆಳ್ಳಿ, 3 ಕಂಚು)
ಹಾಕಿ (ಮಹಿಳಾ ತಂಡ)	3 (1 ಚಿನ್ನ, 1 ಬೆಳ್ಳಿ, 1 ಕಂಚು)
ಬ್ಯಾಡ್ಮಿಂಟನ್	31 ಪದಕ (10 ಚಿನ್ನ, 8 ಬೆಳ್ಳಿ, 13 ಕಂಚು)
ಶೂಟಿಂಗ್	135 ಪದಕ (63 ಚಿನ್ನ, 44 ಬೆಳ್ಳಿ, 28 ಕಂಚು)
ಕುಸ್ತಿ	114 ಪದಕ (49 ಚಿನ್ನ, 39 ಬೆಳ್ಳಿ, 26 ಕಂಚು)

ತಂಡ ಕಳಿಸಬಾರದು: ಗೋಪಿಚಂದ್, ವಿಮಲ್ ಕುಮಾರ್ ಆಕ್ರೋಶ

ನವದೆಹಲಿ (ಪಿಟಿಐ): ಗ್ಲಾಸ್ಗೊದಲ್ಲಿ 2026ರಲ್ಲಿ ನಿಗದಿಯಾಗಿರುವ 23ನೇ ಕಾಮನ್‌ವೆಲ್ತ್ ಕ್ರೀಡೆಗಳಿಂದ ಬ್ಯಾಡ್ಮಿಂಟನ್ ಆಟ ಕೈಬಿಟ್ಟಿರುವುದಕ್ಕೆ ಭಾರತದ ದಿಗ್ಗಜರಾದ ಪುಲ್ಲೇಲ ಗೋಪಿಚಂದ್, ವಿಮಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶದ ಕ್ರೀಡಾ ಬೆಳವಣಿಗೆ ಕುಂಠಿತಗೊಳಿಸುವ ಉದ್ದೇಶ ಹೊಂದಿರುವ ಈ ಕೂಟಕ್ಕೆ ಭಾರತವು ಯಾವುದೇ ತಂಡ ಕಳಿಸಬಾರದು ಎಂದು ಒತ್ತಾಯಿಸಿದ್ದಾರೆ.

'ಕಾಮನ್‌ವೆಲ್ತ್ ಕೀಡೆಗಳ (ಸಿಡಬ್ಲ್ಯುಜಿ) ಅಗತ್ಯವೇ ಇಲ್ಲ. ನನ್ನ ಪ್ರಕಾರ ಇದನ್ನು ನಿಲ್ಲಿಸುವುದು ಒಳಿತು. ಸಿಡಬ್ಲ್ಯುಜಿ ತನ್ನ ವರ್ಚಸ್ಸು ಕಳೆದುಕೊಂಡಿದೆ. ಅದರ ಅಗತ್ಯವೇ ಇಲ್ಲ' ಎಂದು ಮಾಜಿ ಕೋಚ್ ವಿಮಲ್ ಕುಮಾರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಈ ನಿರ್ಧಾರ ನಿರಾಸೆ ಮೂಡಿಸಿದೆ. ಭಾರತದಂಥ ದೇಶಗಳ ಪ್ರಗತಿಗೆ ಅಡ್ಡಿ ಉಂಟು ಮಾಡುವ ನಿರ್ಧಾರ ಇದು' ಎಂದು ಮಾಜಿ ಆಲ್ ಇಂಗ್ಲೆಂಡ್ ಚಾಂಪಿಯನ್ ಗೋಪಿಚಂದ್ ಅಭಿಪ್ರಾಯ ಪಟ್ಟಿದ್ದಾರೆ.

'ಈ ನಿರ್ಧಾರವನ್ನು ಭಾರತ ಬಲವಾಗಿ ಆಕ್ಷೇಪಿಸಬೇಕು. ಸಂಬಂಧಪಟ್ಟವರ ಜೊತೆ ಈ ಬಗ್ಗೆ ಮಾತನಾಡಿ ನಮ್ಮ ಧ್ವನಿ ಎತ್ತಬೇಕು' ಎಂದಿದ್ದಾರೆ.

ಸ್ಕ್ವಾಷ್ ಕೈಬಿಟ್ಟಿರುವ ಕಾರಣ ಒಂದು ಹೆಜ್ಜೆ ಹಿಂದೆ ಇಟ್ಟಂತಾಗಿದೆ ಎಂದು ಭಾರತದ ಶ್ರೇಷ್ಠ ಆಟಗಾರ ಸೌರವ್ ಘೋಷಾಲ್ ಅಭಿಪ್ರಾಯ ಪಟ್ಟಿದ್ದಾರೆ. 2028ರ ಒಲಿಂಪಿಕ್ಸ್‌ಗೆ ಈ ಕ್ರೀಡೆ ಸೇರ್ಪಡೆಗೊಂಡಿದೆ.

ಭಾರತಕ್ಕೆ ಸೇಡು ತೀರಿಸುವ ತವಕ

ಜರ್ಮನಿ ವಿರುದ್ಧ ಹಾಕಿ ಟೆಸ್ಟ್ ಸರಣಿ ಇಂದಿನಿಂದ

ನವದೆಹಲಿ (ಪಿಟಿಐ): ಸುಮಾರು 10 ವರ್ಷಗಳ ನಂತರ ದೆಹಲಿಯಲ್ಲಿ ಅಂತರ ರಾಷ್ಟ್ರೀಯ ಹಾಕಿ ಪಂದ್ಯವೊಂದು ನಡೆಯುತ್ತಿದೆ. ಒಲಿಂಪಿಕ್ಸ್ ಹಾಕಿ ಕಂಚಿನ ಪದಕ ವಿಜೇತ ಭಾರತ ತಂಡವು ಬುಧವಾರ ಇಲ್ಲಿ ನಡೆಯುವ ಎರಡು ಟೆಸ್ಟ್‌ಗಳ ದ್ವಿಪಕ್ಷೀಯ ಸರಣಿಯ ಮೊದಲ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು ಎದುರಿಸಲಿದೆ.

ಒಂದು ಕಾಲದಲ್ಲಿ ಹಾಕಿಯ 'ಆಧ್ಯಾತ್ಮಿಕ ತವರು' ಎನಿಸಿಕೊಂಡಿದ್ದ ಇಲ್ಲಿಯ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ 10 ವರ್ಷಗಳಿಂದ ಒಂದೂ ಅಂತರ ರಾಷ್ಟ್ರೀಯ ಪಂದ್ಯ ನಡೆದಿಲ್ಲ. 2014ರಲ್ಲಿ ಹೀರೊ ವಿಶ್ವ ಲೀಗ್ ಫೈನಲ್ ಇಲ್ಲಿ ನಡೆದ ಕೊನೆಯ ಪ್ರಮುಖ ಪಂದ್ಯ.

ಈಗ ವಿಶ್ವದ ಎರಡನೇ ಕ್ರಮಾಂಕದ ಹಾಗೂ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ತಂಡದ ವಿರುದ್ಧ ಪಂದ್ಯವು ಈ ಕ್ರೀಡಾಂಗಣದಲ್ಲಿ ಅಂತರ ರಾಷ್ಟ್ರೀಯ ಹಾಕಿ ಪುನರಾಗಮನಕ್ಕೆ ಪರಿಪೂರ್ಣ ವೇದಿಕೆಯಾಗಿದೆ. ಸರಣಿಯ ಎರಡನೇ ಪಂದ್ಯವು ಗುರುವಾರ ನಡೆಯಲಿದೆ.

ಆತಿಥೇಯ ತಂಡದಲ್ಲಿ ಕೆಲವು ಹೊಸ ಮುಖಗಳಿವೆ. ಅವರ ಸತ್ವಪರೀಕ್ಷೆಯ ಜೊತೆಗೆ ಜರ್ಮನಿ ವಿರುದ್ಧ ಆಗಸ್ಟ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಸೆಮಿಫೈನಲ್‌ನಲ್ಲಿ ಅನುಭವಿಸಿದ ಸೋಲಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿ ಭಾರತ ತಂಡವಿದೆ. ತೀವ್ರ ಹೋರಾಟ ಕಂಡ ಒಲಿಂಪಿಕ್ಸ್ ಸೆಮಿಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗ 2-3 ರಿಂದ ಜರ್ಮನಿಗೆ ಸೋತಿತ್ತು.

ಭಾರತಕ್ಕೆ ಸೇಡು ತೀರಿಸಲು ಇದು ಅವಕಾಶವಾದರೂ, ಜರ್ಮನಿ ತಂಡವನ್ನು ಮಣಿಸುವುದು ಸುಲಭದ ಕೆಲಸವೇನಲ್ಲ. ಒಲಿಂಪಿಕ್ಸ್ ಸ್ವರ್ಣ ಪದಕದ ಪಂದ್ಯದಲ್ಲಿ ಅದು ಹಾಲೆಂಡ್ ಎದುರು ಶೂಟ್‌ಔಟ್‌ನಲ್ಲಷ್ಟೇ ಮಣಿದಿತ್ತು. ರ‍್ಯಾಂಕಿಂಗ್ ಪ್ರಕಾರ ಜರ್ಮನಿ ಪಂದ್ಯ ಗೆಲ್ಲುವ ನೆಚ್ಚಿನ ತಂಡ. ಭಾರತ ಕ್ರಮಾಂಕ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ಆದರೆ ಇವೆರಡು ತಂಡಗಳ ನಡುವಣ ಕೊನೆಯ ಐದು ಮುಖಾಮುಖಿಗಳಲ್ಲಿ ಭಾರತದ ಸಾಧನೆ ಉತ್ತಮವಾಗಿದ್ದು ಮೂರು ಗೆದ್ದು, ಎರಡು ಸೋತಿದೆ.

ಉತ್ತಮ ಲಯದಲ್ಲಿರುವ ಹರ್ಮನ್‌ಪ್ರೀತ್ ತಂಡದ ಸಾರಥ್ಯ ವಹಿಸಿದ್ದು, ಮಿಡ್‌ಫೀಲ್ಡರ್ ವಿವೇಕ್ ಸಾಗರ್ ಪ್ರಸಾದ್ ಉಪನಾಯಕರಾಗಿ ದ್ದಾರೆ. ಒಲಿಂಪಿಕ್ಸ್ ವೇಳೆ ಗಾಯಾಳಾಗಿದ್ದ ಹಾರ್ದಿಕ್ ಸಿಂಗ್ ಇನ್ನೂ ಚೇತರಿಸಿಕೊಂಡಿಲ್ಲ.

ಮಿಡ್‌ಫೀಲ್ಡರ್ ರಾಜಿಂದರ್ ಸಿಂಗ್ ಮತ್ತು ಮುಂಚೂಣಿ ಆಟಗಾರ ಆದಿತ್ಯ ಅರ್ಜುನ್ ಲಾಲಗೆ ಅವರು ಅಂತರರಾಷ್ಟ್ರೀಯ ಹಾಕಿಗೆ ಪದಾರ್ಪಣೆ ಮಾಡುತ್ತಿದ್ದಾರೆ. ಕ್ರಿಶನ್ ಬಹಾದ್ದೂರ್ ಪಾಠಕ್ ಮತ್ತು ಸೂರಜ್ ಕರ್ಕೇರಾ ಅವರು ಗೋಲ್ ಕೀಪರ್‌ಗಳಾಗಿದ್ದಾರೆ.

ಭಾರತ ಹಾಕಿ ತಂಡದ ಆಟಗಾರರು ಭಾನುವಾರ ಸಂಜೆ ದೆಹಲಿಗೆ ಬಂದಿಳಿದರು

ಭಾರತ ತಂಡಕ್ಕೆ ವರುಣ್ ವಾಪಸ್

ನವದೆಹಲಿ (ಪಿಟಿಐ): ಪೋಕ್ಸೊ ಪ್ರಕರಣದಲ್ಲಿ ಖುಲಾಸೆಗೊಂಡ ಹಾಕಿ ಆಟಗಾರ ವರುಣ್ ಕುಮಾರ್ ಮತ್ತೆ ಭಾರತ ಹಾಕಿ ತಂಡಕ್ಕೆ ವಾಪಸಾಗಿದ್ದಾರೆ. ಇದೇ 23 ಮತ್ತು 24ರಂದು ಜರ್ಮನಿ ವಿರುದ್ಧ ನಡೆಯುವ ಹಾಕಿ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ.

ಲೈಂಗಿಕ ದೌರ್ಜನ್ಯದ ಆರೋಪಕ್ಕೆ ತುತ್ತಾಗಿ ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹೊರಗುಳಿದಿದ್ದ ಡಿಫೆಂಡರ್ ವರುಣ್ ಅವರನ್ನು ಮತ್ತೆ ತಂಡಕ್ಕೆ ಸೇರಿಸಲಾಗಿದೆ.

ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವ ವಹಿಸಲಿರುವ ತಂಡದಲ್ಲಿ ಕರ್ನಾಟಕದ ಮೊಹಮದ್ ರಾಹೀಲ್ ಕೂಡಾ ಸ್ಥಾನ ಪಡೆದಿದ್ದಾರೆ.

ರಾಹುಲ್ ಪರ ರಿಯಾನ್ ಬ್ಯಾಟಿಂಗ್

ಪುಣೆಯಲ್ಲಿ 2ನೇ ಟೆಸ್ಟ್: ರಿಷಭ್, ಗಿಲ್ ಫಿಟ್ ಆಗುವ ನಿರೀಕ್ಷೆ

ಪುಣೆ (ಪಿಟಿಐ): ಬ್ಯಾಟರ್ ಕೆ.ಎಲ್. ರಾಹುಲ್ ಅವರ ಮೇಲೆ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ ಅಪಾರ ವಿಶ್ವಾಸವಿದೆ. ರಾಹುಲ್ ಅವರಿಗೆ ಇನ್ನೂ ಹೆಚ್ಚು ಅವಕಾಶಗಳನ್ನು ನೀಡುವ ಮನಸ್ಸು ಅವರಿಗೆ ಇದೆ. ಕೌಶಲದ ದೃಷ್ಟಿಯಿಂದ ನೋಡಿದರೆ ಅವರು ಉತ್ತಮವಾಗಿಯೇ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂದು ಭಾರತ ತಂಡದ ಸಹಾಯಕ ಕೋಚ್ ರಿಯಾನ್ ಟೆನ್ ಡಾಶೆ ಹೇಳಿದರು.

ಇದೇ 24ರಿಂದ ಪುಣೆಯಲ್ಲಿ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಸರಣಿಯ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೆ ಕಣಕ್ಕಿಳಿಯುವ 11 ಮಂದಿಯ ಆಯ್ಕೆಯ ಕುರಿತು ಈಗ ಕುತೂಹಲ ಗರಿಗೆದರಿದೆ. ಏಕೆಂದರೆ ಬೆಂಗಳೂರಿನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ 8 ವಿಕೆಟ್‌ಗಳಿಂದ ಸೋತಿತ್ತು. ಅದರಲ್ಲಿ ಸರ್ಫರಾಜ್ ಖಾನ್ ಅವರು ಎರಡನೇ ಇನಿಂಗ್ಸ್‌ನಲ್ಲಿ ಶತಕ ದಾಖಲಿಸಿದ್ದರು. ಆದರೆ ರಾಹುಲ್ ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು.

ಈ ಕುರಿತು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ರಿಯಾನ್ ಟೆನ್, 'ಪ್ರಸ್ತುತ ಬಹಳ ತುರುಸಿನ ಸ್ಪರ್ಧಾತ್ಮಕವಾದ ವಾತಾವರಣ ಇದೆ. ಸರ್ಫರಾಜ್ ಕಳೆದ ಟೆಸ್ಟ್‌ನಲ್ಲಿ 150 ಮತ್ತು ಇರಾನಿ ಟ್ರೋಫಿಯಲ್ಲಿ (ಅಜೇಯ 222) ದ್ವಿಶತಕ ಗಳಿಸಿದ್ದರು. ರಾಹುಲ್ ಬಗ್ಗೆ ಯಾವುದೇ ತಕರಾರು ಇಲ್ಲ. ಅವರು ಮಾನಸಿಕವಾಗಿ ಬಹಳ ಸಬಲರಾಗಿದ್ದಾರೆ. ಬ್ಯಾಟಿಂಗ್ ಕೂಡ ಉತ್ತಮವಾಗಿ ಮಾಡುತ್ತಿದ್ದಾರೆ. ಆದರೆ ನಾವು ಏಳು ಮಂದಿಯನ್ನು ಆರು ಸ್ಥಾನಗಳಲ್ಲಿ ಹೊಂದಿಸುವ ಸವಾಲು ಇದೆ' ಎಂದು ಹೇಳಿದರು.

'ಗೌತಮ್ ಅವರು ಕಳೆದ ಮೂರು ತಿಂಗಳುಗಳಿಂದ ತಂಡದಲ್ಲಿದ್ದಾರೆ. ಎಲ್ಲವನ್ನೂ ಸೂಕ್ಷ್ಮವಾಗಿ ಅರಿತುಕೊಂಡಿದ್ದಾರೆ. ತಂಡದ ಹಿತದೃಷ್ಟಿಯಿಂದ ನಿರ್ಧಾರ ತೆಗೆದುಕೊಳ್ಳುತ್ತೇವೆ. ಆದರೆ ನಮ್ಮ ಎಲ್ಲ ಆಟಗಾರರನ್ನೂ ಬೆಂಬಲಿಸುತ್ತೇವೆ' ಎಂದರು.

ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಮೊಣಕಾಲಿಗೆ ಚೆಂಡು ಬಡಿದು ಗಾಯಗೊಂಡಿದ್ದ ರಿಷಭ್ ಪಂತ್ ವಿಕೆಟ್‌ಕೀಪಿಂಗ್ ಮಾಡಿರಲಿಲ್ಲ. ಶುಭಮನ್ ಗಿಲ್ ಅವರು ಕತ್ತು ನೋವಿನ ಕಾರಣ ಪಂದ್ಯದಲ್ಲಿ ಆಡಿರಲಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಅವರು, 'ರಿಷಭ್ ಚೆನ್ನಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ಕುರಿತು ರೋಹಿತ್ (ಶರ್ಮಾ) ಈಚೆಗೆ ಹೇಳಿದ್ದಾರೆ. ಮೊಣಕಾಲಿನ ಚಲನೆಯಲ್ಲಿ ಸ್ವಲ್ಪ ಮಟ್ಟಿಗೆ ಅವರು ನೋವು ಅನುಭವಿಸುತ್ತಿದ್ದರು. ಅವರ ಚೇತರಿಕೆಗಾಗಿ ಹಾರೈಸುತ್ತಿದ್ದೇವೆ. ಗಿಲ್ ಕೂಡ ಫಿಟ್ ಆಗಿದ್ದಾರೆ. ಅವರು ಟೆಸ್ಟ್ ಪಂದ್ಯದ ಆಯ್ಕೆಗೆ ಲಭ್ಯರಾಗಲಿದ್ದಾರೆ' ಎಂದು ಹೇಳಿದರು.

ಬ್ಯಾಟರ್ ಕೆ.ಎಲ್.ರಾಹುಲ್ ಮತ್ತು ನೆರವು ಸಿಬ್ಬಂದಿ ಮಾತುಕತೆ ಪ್ರಜಾವಾಣಿ ಚಿತ್ರ

ಪುಣೆ ಟೆಸ್ಟ್‌ಗಿಲ್ಲ ಕೇನ್ ವಿಲಿಯಮ್ಸನ್

ನ್ಯೂಜಿಲೆಂಡ್ ತಂಡದ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರು ಭಾರತ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿಯೂ ಆಡುವುದಿಲ್ಲ.

ಅವರು ಕಳೆದ ಕೆಲವು ದಿನಗಳಿಂದ ತೊಡೆಯ ಸ್ನಾಯುವಿನ ಸೆಳೆತದಿಂದ ಬಳಲುತ್ತಿದ್ದಾರೆ. ಆದ್ದರಿಂದ ಸರಣಿಯ ಮೊದಲ ಪಂದ್ಯದಲ್ಲಿಯೂ ಅವರು ಆಡಿರಲಿಲ್ಲ. 'ಕೇನ್ ಅವರ ಆರೋಗ್ಯದ ಮೇಲೆ ನಿಗಾ ವಹಿಸಿದ್ದೇವೆ. ಅವರು ಶೇ 100ರಷ್ಟು ಫಿಟ್ ಆದರೆ ಮಾತ್ರ ಆಡಲಿದ್ದಾರೆ' ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮೂಲಗಳು ತಿಳಿಸಿವೆ.

ರಣಜಿ ಕ್ರಿಕೆಟ್ ಪೃಥ್ವಿ ಶಾಗೆ ಕೊಕ್

ಮುಂಬೈ(ಪಿಟಿಐ): ಆರಂಭಿಕ ಬ್ಯಾಟರ್ ಪೃಥ್ವಿ ಶಾ ಅವರನ್ನು ಮುಂಬೈ ತಂಡದಿಂದ ಕೈಬಿಡಲಾಗಿದೆ. ಫಿಟ್‌ನೆಸ್ ಕೊರತೆ ಮತ್ತು ಅಶಿಸ್ತಿನ ಕಾರಣ ಗಳಿಗಾಗಿ ಅವರಿಗೆ ಕೊಕ್ ಕೊಡಲಾಗಿದೆ.

ಇದೇ 26 ರಿಂದ 29ರವರೆಗೆ ಅಗರ್ತಲಾದಲ್ಲಿ ಮುಂಬೈ ಮತ್ತು ತ್ರಿಪುರ ಪಂದ್ಯವು ನಡೆಯಲಿದೆ.

24 ವರ್ಷದ ಪೃಥ್ವಿ ಅವರು ತಂಡದ ತರಬೇತಿ ಅವಧಿಗಳಿಗೆ ಆಗಾಗ ಗೈರಾಗುತ್ತಾರೆ. ಅವರ 'ದೇಹತೂಕ ಹೆಚ್ಚಾಗಿದೆ' ಎಂದು ಹೇಳಲಾಗಿದೆ.

'ಕ್ರೀಡಾಂಗಣದಲ್ಲಿ ಅವರ ಫಿಟ್‌ನೆಸ್ ಮತ್ತು ಓಟವನ್ನು ಗಮನಿಸಬೇಕು. ಎಂಸಿಎ (ಮುಂಬೈ ಕ್ರಿಕೆಟ್ ಸಂಸ್ಥೆ)ಗೆ ಬಹಳ ಶ್ರೀಮಂತ ಪರಂಪರೆ ಇದೆ. ಆದ್ದರಿಂದ ಎಲ್ಲ ಆಟಗಾರರಿಗೂ ಒಂದೇ ರೀತಿಯ ನಿಯಮ ಅನ್ವಯವಾಗುತ್ತದೆ' ಎಂದು ಪದಾಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ರಣಜಿ ಟ್ರೋಫಿ ಟೂರ್ನಿಯ ಕಳೆದ ಎರಡು ಪಂದ್ಯಗಳಲ್ಲಿ ಪೃಥ್ವಿ (7,12, 1 ಮತ್ತು ಔಟಾಗದೆ 39) ಅವರು ಫಾರ್ಮ್ ಕಂಡುಕೊಂಡಿರಲಿಲ್ಲ. ಅವರನ್ನು ತಂಡದಿಂದ ಕೈಬಿಡುವ ನಿರ್ಧಾರವನ್ನು ಮುಂಬೈ ಸೀನಿಯರ್ ತಂಡದ ಆಯ್ಕೆ ಸಮಿತಿ ತೆಗೆದುಕೊಂಡಿದೆ.

ಪೃಥ್ವಿ ಅವರ ಸ್ಥಾನಕ್ಕೆ 29 ವರ್ಷದ ಎಡಗೈ ಬ್ಯಾಟರ್ ಅಖಿಲ್ ಹೆರವಾಡ್ಕರ್ ಅವರನ್ನು ಆಯ್ಕೆ ಮಾಡಲಾಗಿದೆ. ಸೂರ್ಯಕುಮಾರ್ ಯಾದವ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಪೃಥ್ವಿ ಐದು ಟೆಸ್ಟ್, ಆರು ಏಕದಿನ ಮತ್ತು ಒಂದು ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

ಸಾಕ್ಷಿ ಹೇಳಿಕೆ ವೈಯಕ್ತಿಕ ಅಭಿಪ್ರಾಯ: ವಿನೇಶ್

ನವದೆಹಲಿ (ಪಿಟಿಐ): ಸಾಕ್ಷಿ ಮಲೀಕ್ ಅವರು ನೀಡಿರುವ ಹೇಳಿಕೆಯನ್ನು ಒಪ್ಪುವುದಿಲ್ಲ. ಅದು ಸಾಕ್ಷಿಯವರ ವೈಯಕ್ತಿಕ ಅಭಿಪ್ರಾಯ ಎಂದು ಒಲಿಂಪಿಯನ್ ಕುಸ್ತಿಪಟು ಮತ್ತು ಕಾಂಗ್ರೆಸ್ ಶಾಸಕಿ ವಿನೇಶ್ ಫೋಗಟ್ ಹೇಳಿದ್ದಾರೆ.

ಹೋದ ವರ್ಷ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಿಂದ ರಿಯಾಯಿತಿ ತೆಗೆದುಕೊಳ್ಳಲು ವಿನೇಶ್ ಮತ್ತು ಬಜರಂಗ್ ಪೂನಿಯಾ ಅವರು ಒಪ್ಪಿದ್ದರಿಂದ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಹೋರಾಟ ಕಳೆಗುಂದಿತು ಎಂದು ಸಾಕ್ಷಿ ತಮ್ಮ ಕೃತಿ 'ವಿಟ್ನೆಸ್'ನಲ್ಲಿ ಬರೆದಿದ್ದಾರೆ. ಈ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿರುವ ವಿನೇಶ್, 'ಇದು ಅವರ ವೈಯಕ್ತಿಕ ಅಭಿಪ್ರಾಯ. ಆದರೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಎಲ್ಲಿಯವರೆಗೂ ಸಾಕ್ಷಿ, ವಿನೇಶ್ ಮತ್ತು ಬಜರಂಗ್ ಅವರು ಇರುತ್ತಾರೋ ಅಲ್ಲಿಯವರೆಗೆ ಹೋರಾಟವು ದುರ್ಬಲವಾಗುವುದಿಲ್ಲ' ಎಂದು ಹೇಳಿದ್ದಾರೆ.

ವಿನೇಶ್ ಫೋಗಟ್

ಚಂಡಮಾರುತ ಭೀತಿ: ಅಥ್ಲೆಟಿಕ್ಸ್ ಮುಂದಕ್ಕೆ

ಭುವನೇಶ್ವರ (ಪಿಟಿಐ): ಇದೇ 25ರಿಂದ ಇಲ್ಲಿ ನಡೆಯಬೇಕಿದ್ದ 39ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಕೂಟವವನ್ನು ಒಡಿಶಾದಲ್ಲಿ ಚಂಡಮಾರುತ ಭೀತಿಯ ಕಾರಣ ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಫೆಡರೇಷನ್ ಮಂಗಳವಾರ ತಿಳಿಸಿದೆ. ಕಳಿಂಗ ಕ್ರೀಡಾಂಗಣದಲ್ಲಿ ಐದು ದಿನಗಳ ಈ ಕೂಟ ನಡೆಯಬೇಕಾಗಿತ್ತು.

ದೇಶ್ವಾಲ್ ಮಿಂಚು; ಜೈಪುರಕ್ಕೆ ಗೆಲುವು

ಪ್ರೊ ಕಬಡ್ಡಿ ಲೀಗ್: ಯು.ಪಿ ಯೋಧಾಸ್‌ಗೆ ಶರಣಾದ ಬೆಂಗಳೂರು ಬುಲ್ಸ್

ಹೈದರಾಬಾದ್: ನಾಯಕ ಅರ್ಜುನ್ ದೇಶ್ವಾಲ್ ಅವರ ಅಮೋಘ ರೇಡಿಂಗ್ ಪ್ರದರ್ಶನದ ನೆರವಿನಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ತನ್ನ ಎರಡನೇ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವನ್ನು 30 ಪಾಯಿಂಟ್‌ಗಳ ಅಂತರದಿಂದ ಸುಲಭವಾಗಿ ಸೋಲಿಸಿತು.

ಇದು ಜೈಪುರ ತಂಡಕ್ಕೆ ಎರಡನೇ ಜಯ. ಟೈಟನ್ಸ್ ತಂಡಕ್ಕೆ ಆಡಿರುವ ಮೂರು ಪಂದ್ಯಗಳಲ್ಲಿ ಇದು ಸತತ ಎರಡನೇ ಸೋಲು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ದಿನದ ಮೊದಲ ಹಣಾಹಣಿಯಲ್ಲಿ ತೆಲುಗು ಟೈಟನ್ಸ್ ತಂಡವನ್ನು ನಾಲ್ಕು ಬಾರಿ ಆಲೌಟ್ ಮಾಡಿದ ಜೈಪುರ ತಂಡ 52-22 ಅಂಕಗಳಿಂದ ಭರ್ಜರಿ ಜಯ ಗಳಿಸಿತು. ಹಾಲಿ ಟೂರ್ನಿಯಲ್ಲಿ ತಂಡವೊಂದು ದಾಖಲಿಸಿದ ಅತಿ ದೊಡ್ಡ ಅಂತರದ ಗೆಲುವು ಇದಾಗಿದೆ. ವಿರಾಮದ ವೇಳೆ ವಿಜೇತ ತಂಡ 18-13ರಲ್ಲಿ ಮುಂದಿತ್ತು.

ಆತಿಥೇಯ ತಂಡದ ಸ್ಟಾರ್ ರೈಡರ್ ಪವನ್ ಕುಮಾರ್ (7 ಅಂಕ) ಅವರನ್ನು ಪದೇ ಪದೇ ರಕ್ಷಣಾ ಕೋಟೆಯಲ್ಲಿ ಬಂಧಿಸಿ ಟೈಟನ್ಸ್ ತಂಡದ ಆತ್ಮವಿಶ್ವಾಸ ಕುಗ್ಗಿಸಿದ ಪ್ಯಾಂಥರ್ಸ್ ಆಟಗಾರರು, ದ್ವಿತೀಯಾರ್ಧದಲ್ಲಿ ಮೂರು ಬಾರಿ ಟೈಟನ್ಸ್ ತಂಡವನ್ನು ಆಲೌಟ್ ಮಾಡಿದರು.

ದೇಶ್ವಾಲ್ (19 ಅಂಕ) ಜತೆಗೆ ಅಭಿಜೀತ್ ಮಲಿಕ್ (8 ಅಂಕ) ಮತ್ತು ಸುರ್ಜೀತ್ (4 ಅಂಕ) ತಂಡದ ಗೆಲುವಿಗೆ ಕೊಡುಗೆ ನೀಡಿದರು.

ಆರಂಭದಲ್ಲಿ ನಾಯಕ ಪವನ್ ಕುಮಾರ್ ಸೆಹ್ರಾವತ್ ಅವರ ಚಾಕಚಕ್ಯತೆಯ ರೇಡಿಂಗ್‌ನಿಂದ ಟೈಟನ್ಸ್ ತಂಡ ಮೊದಲ ಹತ್ತು ನಿಮಿಷಗಳ ಆಟದಲ್ಲಿ8-6 ಅಂಕಗಳಿಂದ ಮುನ್ನಡೆ ಸಾಧಿಸಿತು. ಜೈಪುರ ತಂಡದ ಪರ ಅರ್ಜುನ್ ಆರಂಭದಲ್ಲಿ ಏಕಾಂಗಿ ಹೋರಾಟ ನಡೆಸಿದರು. ಆದರೆ ಪವನ್ ಕುಮಾರ್ ಅವರನ್ನು ಟ್ಯಾಕಲ್ ಮಾಡಿ ಎದುರಾಳಿ ತಂಡದ ಮೇಲೆ ಒತ್ತಡ ಹೇರಿದ ಜೈಪುರ ನಂತರ ಮೇಲುಗೈ ಸಾಧಿಸುತ್ತ ಹೋಯಿತು.

ಯೋಧಾಸ್‌ಗೆ ಜಯ: ದಿನದ ಎರಡನೇ ಪಂದ್ಯದಲ್ಲಿ ಯುಪಿ ಯೋಧಾಸ್ ತಂಡ 57-36 ಪಾಯಿಂಟ್‌ಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು. ಯೋಧಾಸ್ ಪರ ಸುರೇಂದರ್ ಗಿಲ್ (17 ಪಾಯಿಂಟ್), ಭರತ್ (14) ರೈಡಿಂಗ್‌ನಲ್ಲಿ ಮಿಂಚಿದರು. ಇದು ಬೆಂಗಳೂರಿನ ತಂಡಕ್ಕೆ ಮೂರನೇ ಸೋಲು. ಬುಲ್ಸ್ ಪರ ನಾಯಕ ಪ್ರದೀಪ್ ನರ್ವಾಲ್ (16) ಗಮನಸೆಳೆದರೆ, ಜತಿನ್ (9) ಬೆಂಬಲ ನೀಡಿದರು.

ಇಂದಿನ ಪಂದ್ಯಗಳು:
ತಮಿಳ್ ತಲೈವಾಸ್– ಪುಣೇರಿ ಪಲ್ಟನ್ (ರಾತ್ರಿ 8.00). ಗುಜರಾತ್ ಜಯಂಟ್ಸ್– ಯು ಮುಂಬಾ (9 ಗಂಟೆಗೆ)

ತೆಲುಗು ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ಪಿಂಕ್ ಪ್ಯಾಂಥರ್ಸ್ ನಾಯಕ ಅರ್ಜುನ್ ದೇಶ್ವಾಲ್ ಅವರ ರೇಡಿಂಗ್ ವೈಖರಿ

ಅಕ್ಷಯ್ ಕಾಮತ್ ದ್ವಿಶತಕ

ಬೆಂಗಳೂರು: ಅಕ್ಷಯ್ ಕಾಮತ್ ಮಿಂಚಿನ ದ್ವಿಶತಕ (204; 139 ಎಸೆತ, 4X35, 6X1) ಹಾಗೂ ಸುಬ್ಬು ಯಾದವಪ್ರಸಾದ್ (183; 76ಎ, 4X26, 6X7) ಶತಕದ ಬಲದಿಂದ ಮರ್ಚಂಟ್ಸ್ ಕ್ರಿಕೆಟ್ ಕ್ಲಬ್ ತಂಡವು ಐಎಂಸಿಎ ವಿರುದ್ಧ ಗೆದ್ದಿತು.

ಇಲ್ಲಿ ನಡೆಯುತ್ತಿರುವ ಕೆಎಸ್‌ಸಿಎ ವೈ.ಎಸ್. ರಾಮಸ್ವಾಮಿ ಸ್ಮಾರಕ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮರ್ಚಂಟ್ಸ್ ತಂಡವು 446 ರನ್‌ಗಳ ಬೃಹತ್ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮರ್ಚಂಟ್ಸ್ (1) ಕ್ರಿಕೆಟ್ ಕ್ಲಬ್: 50 ಓವರ್‌ಗಳಲ್ಲಿ 4ಕ್ಕೆ566 (ರಾಘವೇಂದ್ರ 87, ಅಕ್ಷಯ್ ಕಾಮತ್ 204, ವಿನೋದ್ ಕುಮಾರ್ 59, ಸುಬ್ಬು ಯಾದವ ಪ್ರಸಾದ್ 183) **ಐಎಂಸಿಎ ಸಿಸಿ:** 36.4 ಓವರ್‌ಗಳಲ್ಲಿ 120 (ಅಷ್ಫಾಕ್ 24, ವಿಶ್ವ 43ಕ್ಕೆ4, ಕುಲದೀಪ್ 18ಕ್ಕೆ2) **ಫಲಿತಾಂಶ:** ಮರ್ಚಂಟ್ಸ್ ತಂಡಕ್ಕೆ 446 ರನ್‌ಗಳ ಜಯ.

ಆರ್ಯ ಕೈಚಳಕ

ಬೆಂಗಳೂರು: ಪಾರಸ್ ಗುರುಭಕ್ಷ್ ಆರ್ಯ (112ಕ್ಕೆ6) ಅವರ ಅಮೋಘ ಬೌಲಿಂಗ್‌ನಿಂದಾಗಿ ಕರ್ನಾಟಕ ತಂಡ ಅಗರ್ತಲಾದಲ್ಲಿ ನಡೆದ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತ್ರಿಪುರ ಎದುರು 131 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 5ಕ್ಕೆ580 ಡಿಕ್ಲೇರ್ಡ್. ತ್ರಿಪುರ: 104. ಎರಡನೇ ಇನಿಂಗ್ಸ್: ತ್ರಿಪುರ: 100.5 ಓವರ್‌ಗಳಲ್ಲಿ 345 (ಋತುರಾಜ್ ಘೋಷ್ ರಾಯ್ 95, ಪಾರಸ್ ಗುರುಭಕ್ಷ್ ಆರ್ಯ 112ಕ್ಕೆ6) ಇನಿಂಗ್ಸ್ ಮತ್ತು 131 ರನ್ ಜಯ.

ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪದವಿ ಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡ ಬೆಂಗಳೂರು ಉತ್ತರ ತಂಡದ ಆಟಗಾರರು ಪ್ರಜಾವಾಣಿ ಚಿತ್ರ

ರಾಜ್ಯಮಟ್ಟದ ಪಿ.ಯು ಬ್ಯಾಸ್ಕೆಟ್‌ಬಾಲ್ ಟೂರ್ನಿ

ಬೆಂಗಳೂರು ಉತ್ತರ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೆಂಗಳೂರು ಉತ್ತರ ಬಾಲಕ-ಬಾಲಕಿಯರ ತಂಡಗಳು ಮಂಗಳವಾರ ಮುಕ್ತಾಯಗೊಂಡ ಪದವಿಪೂರ್ವ ಕಾಲೇಜುಗಳ ಬಾಲಕ-ಬಾಲಕಿಯರ ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಇಲ್ಲಿನ ಚಂದ್ರಶೇಖರ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರು ಉತ್ತರ ತಂಡವು, ಮೈಸೂರು ತಂಡವನ್ನು 61-39ರಿಂದ ಸೋಲಿಸಿತು. ಮೈಸೂರು ತಂಡವು ರನ್ನರ್ ಅಪ್ ಆಯಿತು.

ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕಿಳಿದ ಬೆಂಗಳೂರು ಉತ್ತರ ತಂಡವು, ಮೈಸೂರು ತಂಡದ ವಿರುದ್ಧ ಕೊನೆಯವರೆಗೂ ಮುನ್ನಡೆ ಉಳಿಸಿಕೊಂಡಿತು.

ಬೆಂಗಳೂರು ಉತ್ತರ ತಂಡದ ಸಮರ್ಥ 11 ಹಾಗೂ ರೋಹಿತ್ 9 ಪಾಯಿಂಟ್ ಗಳಿಸುವ ಮೂಲಕ ಗೆಲುವಿನ ರೂವಾರಿಯಾದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರು ಉತ್ತರ ತಂಡವು, ಬೆಂಗಳೂರು ದಕ್ಷಿಣ ತಂಡವನ್ನು 43-25ರಿಂದ ಪರಾಭವಗೊಳಿಸುವ ಮೂಲಕ ಪ್ರಶಸ್ತಿ ಎತ್ತಿ ಹಿಡಿಯಿತು.

ಟೂರ್ನಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ಬೆಂಗಳೂರು ಉತ್ತರ ತಂಡಗಳು, ರಾಷ್ಟ್ರಮಟ್ಟದ ಟೂರ್ನಿಗೆ ಆಯ್ಕೆಯಾದವು.

ಸಂಕ್ಷಿಪ್ತ ಸುದ್ದಿ

ಜೊಹೊರ್ ಕಪ್ ಹಾಕಿ: ಭಾರತ ಅಜೇಯ ಓಟ

ಜೊಹೊರ್ ಬಾರು,ಮಲೇಷ್ಯಾ (ಪಿಟಿಐ): ಭಾರತ ತಂಡವು ಸುಲ್ತಾನ್ ಆಫ್ ಜೊಹೊರ್ ಕಪ್ ಜೂನಿಯರ್ ಪುರುಷರ ಹಾಕಿ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿತು.

3 ಬಾರಿಯ ಚಾಂಪಿಯನ್ ಭಾರತ ತಂಡವು ಮಂಗಳವಾರ ನಡೆದ ಪಂದ್ಯದಲ್ಲಿ 4-2ರಿಂದ ಆತಿಥೇಯ ಮಲೇಷ್ಯಾ ವಿರುದ್ಧ ಗೆದ್ದಿತು. ಈ ಜಯದೊಂದಿಗೆ ಭಾರತ ತಂಡವು 9 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿದೆ.

5 ಅಂಕ ಪಡೆದಿರುವ ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ (4) ಮೂರನೇ ಸ್ಥಾನದಲ್ಲಿದೆ.

ಮಲೇಷ್ಯಾ ಎದುರಿನ ಪಂದ್ಯದಲ್ಲಿ ಭಾರತದ ಶ್ರದ್ಧಾನಂದ ತಿವಾರಿ (11ನೇ ನಿಮಿಷ), ಅರ್ಷದೀಪ್ ಸಿಂಗ್ (13ನಿ), ತಲೆಂ ಪ್ರಿಯೊಬ್ರತ್ (39ನಿ) ಮತ್ತು ರೋಹಿತ್ (40ನಿ) ತಲಾ ಒಂದು ಗೋಲು ಹೊಡೆದರು.

ಮಲೇಷ್ಯಾದ ಮೊಹಮ್ಮದ್ ದಾನೀಶ್ ಐಮನ್ (8ನಿ) ಮತ್ತು ಹ್ಯಾರಿಸ್ ಒಸ್ಮಾನ್ (9ನೇ ನಿ) ಅವರೂ ತಲಾ ಒಂದು ಗೋಲು ಹೊಡೆದರು.

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪಣಜಿ (ಪಿಟಿಐ): ಕರ್ನಾಟಕ ತಂಡ, ಮಂಗಳವಾರ ಇಲ್ಲಿ ಮುಕ್ತಾಯಗೊಂಡ 24ನೇ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನಲ್ಲಿ 392 ಪಾಯಿಂಟ್‌ಗಳೊಂದಿಗೆ ಸಮಗ್ರ ಪ್ರಶಸ್ರಿ ಗೆದ್ದುಕೊಂಡಿತು.

ಮಹಾರಾಷ್ಟ್ರ 378 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಪಡೆದರೆ, ರಾಜಸ್ಥಾನ (248) ಮೂರನೇ ಸ್ಥಾನ ಗಳಿಸಿತು. 28 ರಾಜ್ಯಗಳ 518 ಸ್ಪರ್ಧಿಗಳು ಭಾಗವಹಿಸಿದ್ದರು. 231 ಮಂದಿ ಮೊದಲ ಬಾರಿ ಭಾಗವಹಿಸಿದ್ದರು.

ಕರ್ನಾಟಕದ ಶರಣ್ಯಾ, ಮಹಿಳೆಯರ ವಿಭಾಗದ ವೈಯಕ್ತಿಕ ಪ್ರಶಸ್ತಿ ಗೆದ್ದುಕೊಂಡರು. ಕೇರಳದ ಮೊಹಮ್ಮದ್ ಆಸಿಮ್ ಪುರುಷರ ವಿಭಾಗದ ವೈಯಕ್ತಿಕ ಚಾಂಪಿಯನ್ ಎನಿಸಿದರು.

ಸೋಲು ತಪ್ಪಿಸಲು ಬಾಂಗ್ಲಾ ಹೋರಾಟ

ಮೀರಪುರ್ (ಬಾಂಗ್ಲಾದೇಶ), (ಎಎಫ್‌ಪಿ): ಬಾಂಗ್ಲಾದೇಶ ತಂಡವು, ಮೊದಲ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋಲು ತಪ್ಪಿಸುವ ಸವಾಲು ಎದುರಿಸುತ್ತಿದೆ. ಎರಡನೇ ದಿನವಾದ ಮಂಗಳವಾರ ಆಟ ಮುಗಿದಾಗ ಆತಿಥೇಯರು 3 ವಿಕೆಟ್‌ಗೆ 101 ರನ್ ಗಳಿಸಿದ್ದು, ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 101 ರನ್ ಗಳಿಸಬೇಕಾಗಿದೆ.

ಮುಷ್ಫಿಕುರ್ ರಹೀಂ (31) ಅವರು ಅಜೇಯರಾಗಿ ಉಳಿದಿದ್ದು, ಟೆಸ್ಟ್ ಕ್ರಿಕೆಟ್‌ನಲ್ಲಿ 6000 ರನ್ ಪೂರೈಸಿದ ಬಾಂಗ್ಲಾದೇಶದ ಮೊದಲ ಕ್ರಿಕೆಟರ್ ಎನಿಸಿದರು.

ಮಯೂರ ಕೊಂಡು ಓದಿ, ಓದಿಸಿ
ನವೆಂಬರ್ 2024
ಮಯೂರ ವಿಶೇಷ
'ಮಹಾಮಾರ್ಗಿ ಕಲಬುರ್ಗಿ' –ಗಾಯತ್ರಿ ನಾವಡ
'ಬಟಾಬಯಲಲ್ಲಿ ಕನ್ನಡದ ಮಕ್ಕಳ ಕತ್ತು ಹಿಸುಕಲಾಗುತ್ತಿದೆ' ಕೃಷ್ಣಮೂರ್ತಿ ಬಿಳಿಗೆರೆ ಸಂದರ್ಶನ
ಅಂಕಣಗಳು
ಆರಿಫ್ ರಾಜಾ ಅವರ ಕಾವ್ಯಸಂಕದಲ್ಲಿ ಯೊಹಾನಾ ಕರ್ವಹಾರ್
ಕಾಡಿಗೆ ಕಣ್ಣು ಕಲೀಮ್ ಉಲ್ಲಾ ಕಿಯೋರಾಡಿಯೊ ಎಂಬ ಮರುಭೂಮಿಯಲ್ಲಿ
ಪರಾಗ ಕುತೂಹಲ ಎಂ.ಎಸ್. ಶ್ರೀರಾಮ್ ಸರ್ಕಾರಗಳ ಅಸಹನೆ ಮತ್ತು ದಿಗ್ಬಂಧನ
ಕಾವ್ಯಮಾಲೆ
● ಜಯಂತ ಕಾಯ್ಕಿಣಿ
● ಸಿದ್ಧಲಿಂಗ ಪಟ್ಟಣಶೆಟ್ಟಿ
● ಪಿ. ನಂದಕುಮಾರ್
● ಗೀತಾ ವಸಂತ
ಮಕ್ಕಳ ದಿನದ ವಿಶೇಷ ಬರಹಗಳು
ಪ್ರಬಂಧಗಳು
ಮಳೆ ಹೊಂಡ್ತು ಶ್ರೀನಿವಾಸ ಜಾಲವಾದಿ
ಕನ್ನಡ ಎಂದರೆ ಸುಮ್ಮನೇ ಅಲ್ಲ ಈರಪ್ಪ ಎಂ. ಕಂಬಳಿ
ಕಥಾಕಾಲ
● ಡಾ. ನಾಗರಾಜು ಜಿ.ಬಿ. ಬೈರೇನಹಳ್ಳಿ
● ಪ್ರಸಾದ ಶೆಣೈ ಆರ್.ಕೆ.
● ಪ್ರೇಮಕುಮಾರ್ ಹರಿಯಬ್ಬೆ
● ಆನಂದ ಗೊಬ್ಬಿ
● ಮಲ್ಲಿಕಾರ್ಜುನ ಶೆಲ್ಲಿಕೇರಿ
ಕಥೆ
ನೀರು ಹಂಚುವ ನೀಲಿಮನುಷ್ಯ
ಮೂಲ: ಲೂಯಿಸ ವ್ಯಾಲೆಂಜುಯೇಲಾ ಕನ್ನಡಕ್ಕೆ: ಜ.ನಾ. ತೇಜಶ್ರೀ
ಲಲಿತ ಮಂಟಪ
ನೃತ್ಯಕ್ಕೆ ಸಾಹಿತ್ಯವೇ ಅಂತರ್ಜಲ
ವಿಲಾಸಿನಿ ನಾಟ್ಯ ಕಲಾವಿದೆ ಅನುಪಮಾ ದೇವಿ ಕೈಲಾಶ್ ಸಂದರ್ಶನ
₹25 editormy@mayura.co.in mayuraezine.com /mayuramonthly 080-45557333/264

iPhone 16

Built for Apple Intelligence.

Apple Intelligence starting in US English in late 2024.[1]

Go to IndiaiStore.com to find Apple Authorised stores near you.

₹5000* Instant cashback on credit cards of ICICI Bank | kotak Mahindra Bank | SBI card + Exchange bonus up to **₹6000***

	iPhone 16	iPhone 16 Plus
MRP (incl. of all taxes) (128 GB, 1N)	₹79900.00	₹89900.00
Instant Cashback*	₹5000.00	₹5000.00
Exchange value of your old smartphone*	₹20000.00	₹20000.00
Exchange bonus*	₹6000.00	₹6000.00
Exchange Effective Price*	**₹48900.00**	**₹58900.00**

INDIA iSTORE

INGRAM MICRO | Redington

EMI starting at **₹3329/month*** | No cost EMI up to 24 months. Available with select leading Banks and NBFCs

[1]Apple Intelligence will be available in beta on all iPhone 16 models, iPhone 15 Pro and iPhone 15 Pro Max, with Siri and device language set to US English, as an iOS 18 update in late 2024. Some features and support for additional languages, including Indian English, French, Japanese and Spanish, will be coming over the course of the next year.

*The limited period offer price is computed on the MRP ₹79900.00 (incl. of all taxes) of iPhone 16, 128 GB, (15.54 cm, 1 N) and on the MRP ₹89900.00 (incl. of all taxes) of iPhone 16 Plus, 128 GB, (17.00 cm, 1 N) The illustrative Exchange Effective price calculated above on MRP is reduced by ₹5000.00 Instant Cashback available on ICICI Bank Credit Card, Kotak Mahindra Bank Credit Card and SBI Credit Card (Non-EMI and EMI) & on ICICI Bank Debit Card (EMI only) and further reduced by exchange value of ₹20000.00 of iPhone 13, 128 GB (15.40 cm, 1 N) in a good working condition along with ₹6000.00 Exchange Bonus. The Instant Cashback offer of ₹5000.00 is valid exclusively on ICICI Bank Credit Card, Kotak Mahindra Bank Credit Card and SBI Credit Card (Non-EMI and EMI) & on ICICI Bank Debit Card (EMI Only). The applicable Instant Cashback offer is valid for transactions made using Brand EMI option on Pine Labs and Paytm terminals and applicable on select online merchants via Pine Labs Payment Gateway. No Cost EMI is applicable on ICICI Bank Credit Card, Kotak Mahindra Bank Credit Card, SBI Credit Card & ICICI Bank Debit Card EMI transactions on 6 months tenure only. Low-Cost EMI is also available on tenures greater than 6 months. Processing fee and GST on interest component applicable as per Bank's terms and conditions. The illustrative EMI of ₹3329.00 p.m. shown above is computed on No Cost EMI of up to 24 months consumer loan scheme available from Bajaj Finance Ltd, HDFC Bank, HDB Financial Services, ICICI Bank, IDFC First Bank and TVS Credit and is calculated on the MRP 79900.00 (inclusive of all taxes) for iPhone 16 (15.54 cm, 1N) 128 GB. EMIs illustrated above are rounded off to the nearest rupee for ease of reference. The consumer loan approval from the financier is at their sole discretion. The scheme is provided as No Cost EMI i.e. the benefit of No Cost EMI as a total applicable interest to be charged by financer on consumer loan for original tenure will be borne by Apple Authorised Distributors. Processing fee is applicable and will be charged to customer. Goods and Services Tax will be applicable on processing fee, and foreclosure charges, as applicable. Customer may be required to enter into separate agreements or arrangements (by whatever name called) with the financier to avail or use the EMI facility. Customers are advised to read the offer/agreement terms and conditions carefully. *The Exchange Bonus of up to ₹6000.00 is exclusively provided by the Apple Authorised Trade-in Providers Cashify and Servify at select participating stores in association with participating resellers at their sole discretion. Exchange Bonus is valid only for transactions involving Trade-in of customer's eligible old devices valued at least ₹3000.00 or above. Customer's eligible old devices valued between ₹3000.00 and ₹10000.00 will receive an Exchange Bonus of ₹3000.00 and customer's eligible devices valued between ₹10000.00 and ₹15000.00 will receive an Exchange Bonus of ₹4000.00 and customer's eligible devices valued above ₹15000.00 will receive an Exchange Bonus of ₹6000.00. The Exchange Bonus and Trade-in value will be passed on as a credit or discount in the customer's invoice. Exchange Bonus offer can be clubbed with Cards Instant Cashback or Consumer Loans Offer. Customer's eligible old device trade-in value as diagnosed and assessed by Apple Authorised Trade-in Providers will be the final offer. Any other T&Cs as specified by Apple Authorised Trade-in Providers will apply. The offers may be revised or withdrawn without any prior notice. Offer available till stocks last. Available at select participating Apple Authorised Reseller stores. For store details log on to IndiaiStore.com. All trademarks, logos and brand names are the property of their respective owners. Product features vary by model. TM and © 2024 Apple Inc. All rights reserved.